# ಸಂವಾದ

ಡಿಸೆಂಬರ್ ೨೦೦೪ ರೂ. ೧೦

ಕಿಶನ್ ಚಿಂತನೆ :

## ಸಮಾಜವಾದದ ಮುಂದಿನ ದಾರಿಗಳು

ಹಿಂದೂ ಧರ್ಮದೊಳಗೊಂದು ಬಂಡಾಯ

# ಶಿವಧರ್ಮ

ಸಂವಾದ
ಮಾಸ ಪತ್ರಿಕೆ

ಸಂಪುಟ ೩   ಸಂಚಿಕೆ ೨
ಡಿಸೆಂಬರ್ ೨೦೦೪

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮ
ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು - ೫೬೦ ೦೯೧
✆ ೨೩೨೮೭೯೪೩ / ೯೪೪೮೦ ೪೮೩೦೬
ಇ-ಮೇಲ್ ವಿಳಾಸ : samvaada@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e- mail : samvaada@yahoo.co.in

EDITOR :
INDUDHARA HONNAPURA

# ಒಳಪುಟಗಳಲ್ಲಿ...

❑ ಪತ್ರಗಳು ೩
❑ ಝುನ್ ಝುಲಕ್ ೪
○ ಕೆ.ವಿ. ಸುಬ್ಬಣ್ಣ
❑ ಅಂತರಂಗ ೫
❑ ಕೂಡಲಸಂಗಮದಲ್ಲೂ
ಪುರೋಹಿತರ ಕೊಳೆ - ಕಸ ! ೬
○ ವಿಶ್ವಾರಾಧ್ಯ ಸತ್ಯಂಪೇಟೆ
❑ ಆತಿಕ್ರಮಣ ಸಂಗೀತದ ಹಾದಿ ೮
○ ಪದ್ಮಾಲಯಾ ನಾಗರಾಜ್

❑ ಶಿವಧರ್ಮ :
ಹಿಂದೂಧರ್ಮದೊಳಗೊಂದು ಬಂಡಾಯ ೧೦
○ ಪಿ.ಎಂ.ಎಸ್. ಮೂರ್ತಿ
❑ ಸಮಾಜವಾದದ ಮುಂದಿನ ದಾರಿಗಳು
ಕಿಶನ್ ಪಟ್ನಾಯಕ್‌ರ ಒಂದು ಚಿಂತನೆ ೧೩
○ ಅನು : ಜಿ.ಎನ್. ಮಲ್ಲಿಕಾರ್ಜುನ
❑ ಕವಿ, ಕಷ್ಟಜೀವಿ ಮತ್ತು ಬಂಡಾಯ ೧೭
○ ವೈ. ಗ. ಜಗದೀಶ
❑ ದಲಿತ್ ಡೈರಿ :
ಪಾಲು ಎಂದರೆ ವ್ಯಾಪಾರ ೨೦
○ ಚಂದ್ರಭಾನ್ ಪ್ರಸಾದ್
❑ ದಲಿತ ಚಳವಳಿ ಮತ್ತು ಗಾಂಧಿ ವಿಚಾರಗಳು ೨೮
○ ಬಿ.ಯು. ಸುಮಾ
❑ ಸಿ ಇ ಟಿ ಎಂಬ ಮಾಯಾಜಾಲ ೩೧
○ ನಾ. ದಿವಾಕರ
❑ ವಚನಕಾರರೇಕೆ ದೇವಾಲಯ ವಿರೋಧಿಗಳು? ೩೪
○ ಡಾ॥ ಬಿ. ಶರಣಪ್ಪ ಸತ್ಯಂಪೇಟೆ
❑ ಹೊಸ ಪುಸ್ತಕ ೩೭
❑ ವಿವೇಕಾನಂದರ ವಿಚಾರಗಳು ೪೨
○ ಜ.ಹೊ. ನಾರಾಯಣಸ್ವಾಮಿ

೨೨ ಚರ್ಚೆ
ಪರ್ಯಾಯ ರಾಜಕಾರಣ
1. ಪ್ರೊ॥ ರವಿವರ್ಮ ಕುಮಾರ್
2. ಡಾ॥ ಪುರುಷೋತ್ತಮ ಬಿಳಿಮಲೆ
3. ಪ್ರೊ॥ ಮಲ್ಲೇಪುರಂ ಜಿ.ವೆಂಕಟೇಶ್
4. ಶ್ರೀ ಟಿ.ಎಸ್. ವಿವೇಕಾನಂದ

ಕವನಗಳು :- ❑ ಮಾಯದ ಇರುಳು - ೯ ❑ ಮಂಟೇದನ ಜೋಳಿಗೆ ಬೇಕಿದೆ - ೧೬
❑ ಹೆಬ್ಬೆರಳು - ೧೯ ❑ ಹೆಣ್ಣು - ಧರ್ಮ - ದಾರಿ - ೩೬
❑ ಸುಡುತೇನೆ ನಾನು - ೩೯

*ಮುಖಪುಟ ಕಲೆ: ಇಕ್ಬಾಲ್ ಅಹಮದ್ ವಿನ್ಯಾಸ: ಪದ್ಮನಾಭ*
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

# ಕತ್ತಲಲ್ಲಿ ಅಲೆಯುತ್ತಾ ಆರಿಹೋದ ಸಮಾಜವಾದಿ ಹಣತೆ

ಪ್ರೀತಿಯ ಸಂಪಾದಕರಿಗೆ,

ಒಂದು ಸಮಾಜವಾದಿ ಹಣತೆಯು ಸಮಾನತೆ ಎಂಬ ಬೆಳಕನ್ನು ಈ ದೇಶದ ಉದ್ದಗಲಕ್ಕೂ ಬೆಳಗಿಸಲು ಕತ್ತಲೆಯಲ್ಲಿ ಅಲೆಯುತ್ತಾ ಅಲೆಯುತ್ತಾ ಈಗ ಆರಿ ಹೋಗಿದೆ. ಹಸಿದ ಹೊಟ್ಟೆಯಲ್ಲಿದ್ದ ಒರಿಸ್ಸಾದ ಕಾಲಹಂಡಿಯ ಜನ ಕತ್ತಲೆಯನ್ನು ಹೋಗ ಲಾಡಿಸಲು ಕಿಶನ್‌ರನ್ನು ರೂಪಿಸಿದರು. ಕಿಶನ್‌ಜೀ ಸಂಸತ್ತಿನಲ್ಲಿ ಹಸಿವಿನ ಬಗ್ಗೆ ಎತ್ತಿದ ಪ್ರಶ್ನೆಗೆ ಎಷ್ಟು ಜನರ ಹೊಟ್ಟೆ ತಣ್ಣಗಾಗಿದೆಯೊ ಅವರೆಲ್ಲಾ ಅನ್ನದ ಅಗುಳಿನಲ್ಲಿ ಕಿಶನ್‌ರನ್ನು ಸದಾ ಕಾಲ ನೆನೆಯುತ್ತಾರೆ.

ಆರಿಹೋದ ಕಿಶನ್ ಪಟ್ನಾಯಕ್‌ರ ಮಿಣುಕು ಈ ಕನ್ನಡ ನೆಲದಲ್ಲಿ ದಮನಿತರ ರಕ್ಷಣೆಗೆ ನಿಂತವರ ಎದೆಯೊಳಗೆ ಜ್ಯೋತಿಯಾಗಿ ಉರಿಯುತ್ತಿದ್ದು.., ಹಾಗೆ ಅವರ ಒಡನಾಟದಲ್ಲಿದ್ದವರ ದೊಡ್ಡ ಪಡೆಯೆ ಇಲ್ಲಿದೆ. ಅನ್ಯಾಯದ ವಿರುದ್ಧದ ಹೋರಾಟಕ್ಕೆ ನೀವು ಸಮಾಜವಾದಿ ಯುವ ಜನ ಸಭಾ ಎನ್ನಿ, ಸಮತಾ ಸಂಘಟನೆ ಎನ್ನಿ ರೈತ-ದಲಿತ ಹೋರಾಟವೆನ್ನಿ ಕಿಶನ್ ಇಲ್ಲಿ ಬಿತ್ತಿದ ಬೀಜವೂ ಫಲವತ್ತಾಗ್ಗೆ ಬೆಳೆಯಿತು. ಈ ಫಲವತ್ತತೆ ಕಿಶನ್‌ರ ಅನುಪಸ್ಥಿತಿಯಲ್ಲಿ ತನ್ನ ನೈಜತೆಯನ್ನು ಉಳಿಸಿಕೊಳ್ಳುತ್ತದೆಯೆ ಎಂಬ ಅನುಮಾನ ಕಾಡುತ್ತಿದೆ.

ಕಿಶನ್‌ರಲ್ಲಿ ಬುದ್ಧನ ಕರುಣೆ ಮತ್ತು ತಾಯ್ತನದ ಗುಣಗಳು ಹೆಚ್ಚಿತ್ತು. ಅವರ ಭಾಷಣದಲ್ಲಿ ಅವರ ನಡೆಯಲ್ಲಿ ಒಂದು ಬಗೆಯ ಸೌಮ್ಯವಾದ ಗುಣ ಎದ್ದು ಕಾಣುತ್ತಿತ್ತು. ಅವರ ಹೊಸಬಗೆಯ ನಡೆ ಹಾಗೂ ಆಧ್ಯಾತ್ಮಿಕ ಅರಿವು ಸಮಾಜವಾದಿ ಚಳವಳಿಗೆ ಹೊಸ ರೂಪ ಕೊಟ್ಟಂತೆ ಕಾಣಿಸು ತ್ತಿತ್ತು. ಅವರು ಇಂತಹ ಅರಿವನ್ನು ನಮಗೆ ನೀಡುತ್ತಾ ಅದನ್ನು ಕಸಿದುಕೊಂಡವರಂತೆ ನಮ್ಮನ್ನೆಲ್ಲಾ ಅಗಲಿ ದೂರವಾಗಿದ್ದಾರೆ.

ಕಿಶನ್‌ರ ದೇಹ ಈಗ ಭೂಮಿಗೆ ಅರ್ಪಿಸಲಾಗಿದೆ. ಅವರ ನಂಬಿಕೆಗೆ ಜೀವ ಕೊಟ್ಟಾಗಲೇ ಮತ್ತೆ ಕಿಶನ್‌ರನ್ನು ಮತ್ತು ಸಮಾನತೆಯನ್ನು ನಮ್ಮ ಕಣ್ಣೆದುರಿಗೆ ತಂದುಕೊಳ್ಳಬಹುದು ಎಂದೆನಿಸುತ್ತದೆ.

ಅಪೂರ್ವ ಡಿಸಿಲ್ವ, ಚಾಮರಾಜನಗರ

## ಪತ್ರಾಗಾರ

### ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

| | ೧ ವರ್ಷಕ್ಕೆ | ೩ ವರ್ಷಕ್ಕೆ | ೫ ವರ್ಷಕ್ಕೆ |
|---|---|---|---|
| ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ | ರೂ. ೧೦೦/- | ರೂ. ೩೦೦/- | ರೂ. ೫೦೦/- |
| ನೌಕರರು ಮತ್ತು ವೃತ್ತಿಪರರಿಗೆ | ರೂ. ೨೦೦/- | ರೂ. ೫೦೦/- | ರೂ. ೮೦೦/- |
| ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ | ರೂ. ೨೪೦/- | ರೂ. ೬೦೦/- | ರೂ. ೧೦೦೦/- |
| ವಿಶೇಷ ಹಿತೈಷಿ ಚಂದಾದಾರರಿಗೆ | ರೂ.೫೦೦/- | ರೂ.೧೫೦೦/- | ರೂ.೨೫೦೦/- |

ಅಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ. /ಡಿ.ಡಿ. ಮಾತ್ರ ಕಳುಹಿಸಬೇಕು.

## ಲೇಖನಗಳು ಅರ್ಥಪೂರ್ಣ

ಪ್ರೀತಿಯ ಸಂಪಾದಕರೇ,

ನಿಮ್ಮ 'ಸಂವಾದ' ನವೆಂಬರ್ - ೨೦೦೪ರ ಸಂಚಿಕೆ ಆಕಸ್ಮಿಕವಾಗಿ ನನ್ನ ಕೈಗೆ ಸಿಕ್ಕಿತು. ಹಾಗೂ ಇದರಲ್ಲಿಯ ಲೇಖನಗಳು ತುಂಬಾ ಅರ್ಥಪೂರ್ಣವಾಗಿ ಮೂಡಿ ಬಂದಿವೆ.

ಪತ್ರಿಕೆಗೆ ಚಂದಾದಾರನಾಗಿ ಇನ್ನು ಮುಂದೆ ನಿಮ್ಮ ಪತ್ರಿಕೆಯನ್ನು ಅಕ್ಕರೆಯಿಂದ ನಿರೀಕ್ಷಿಸಿ ಓರೆ ಕೋರೆಗಳನ್ನು ತಿದ್ದುವಲ್ಲಿ, ಅನಿಸಿಕೆಗಳನ್ನು ಬರೆಯುವಲ್ಲಿ ಸಕ್ರಿಯ ನಾಗುತ್ತೇನೆ.

ವಂದನೆಗಳೊಂದಿಗೆ,

ಎನ್. ರಂಗನಾಥ,
ತುಮಕೂರು

## ಪ್ರಜ್ಞಾವಂತರ ಚರ್ಚೆಗೆ ಗ್ರಾಸ

ಪ್ರಿಯ ಇಂದೂಧರ ಅವರಿಗೆ,

ಹಸಿವು, ಅಸ್ಪೃಶ್ಯತೆ ಮತ್ತು ಅವಮಾನ ಎಂಬ ಈ ಪೆಡಂಭೂತಗಳು ಇಂದಿಗೂ ಅನೇಕರನ್ನು ಪೀಡಿಸುತ್ತಿರುವುದು ಅಮಾನ ವೀಯವಾಗಿದೆ. ಇಂತಹ ನೋವುಗಳ ಕಥಾನಕಗಳನ್ನು 'ಸಂವಾದ'ದ ವಾರ್ಷಿಕ ವಿಶೇಷಾಂಕಕ್ಕೆ ಆಹ್ವಾನಿಸುತ್ತಿರುವುದು ಸ್ವಾಗತಕರವಾಗಿದೆ.

ಮಾನ್ಯರೆ 'ಸಂವಾದ' ಮಾಸ ಪತ್ರಿಕೆ ನಾಡಿನ ಎಲ್ಲಾ ಪ್ರಜ್ಞಾವಂತರನ್ನು ಚರ್ಚೆಯ ಗ್ರಾಸಕ್ಕೆ ಒಳಪಡಿಸಿರುವುದಕ್ಕೆ ತಾವು ನಿಜವಾಗಿ ಅಭಿನಂದನಾರ್ಹರು.

ವಿ. ಬಾಲಕೃಷ್ಣ, ಮಾಲೂರು




## ಕಾವೇರಿ ವಿವಾದಕ್ಕೆ ಪ್ರಗತಿಪರ ನೋಟ ಸಿಗುವಂತಾಗಲಿ

ಸಂಪಾದಕರಿಗೆ ನಮಸ್ಕಾರಗಳು,

ಅಕ್ಟೋಬರ್ ತಿಂಗಳ 'ಸಂವಾದ' ಚೆನ್ನಾಗಿ ಮೂಡಿ ಬಂದಿದೆ. ಪರ್ಯಾಯ ರಾಜಕಾರಣದ ಸಂದರ್ಶನಗಳು ಉತ್ತಮ ವಾಗಿವೆ. ಕನಕರಾಜು ಅವರ ಭಾಷೆ ಕುರಿತಾದ ಲೇಖನ ಸೊಗಸಾಗಿತ್ತು. ಕಾವೇರಿ ಹೋರಾಟವನ್ನು ದುಡಿಯುವ ಜನರ ದೃಷ್ಟಿಕೋನದಲ್ಲಿ ನೋಡಿದ ಈ ಲೇಖನ ಪ್ರಸ್ತುತ ಸಂದರ್ಭಕ್ಕೆ ಕನ್ನಡಿ ಹಿಡಿಯುವಂತಿದೆ.

ಒಟ್ಟಿನಲ್ಲಿ ಕಾವೇರಿ ವಿವಾದಕ್ಕೆ ಪ್ರಗತಿಪರ ನೋಟ ಸಿಗುವಂತಾಗಿ ಬೇಗ ಪರಿಹಾರವಾಗಲಿ

ವಂದನೆಗಳೊಡನೆ,

ರಂಗೇಗೌಡ,
ಬೆಂಗಳೂರು

## ಸಾಮಾಜಿಕ ಕಳಕಳಿಯ 'ಸಂವಾದ'

ಹೊನ್ನಾಪುರ ಅವರಿಗೆ ನಮಸ್ಕಾರ,

ಕಳೆದ ಆರು ತಿಂಗಳಿಂದ 'ಸಂವಾದ' ಮಾಸ ಪತ್ರಿಕೆಯನ್ನು ಕುತೂಹಲದಿಂದ ಗಮನಿಸುತ್ತಾ ಬಂದಿದ್ದೇನೆ. ಪತ್ರಿಕೆಯನ್ನು ಹೊರತರುವಲ್ಲಿ Seriousness ಕಾಣಬರುತ್ತಿದೆ. ಕೇವಲ ಮಾಹಿತಿಯ ಪತ್ರಿಕೆಯಾಗಿರದೆ ಸಾಮಾಜಿಕ ಕಳಕಳಿಯಿಂದ ಬಂದ ಲೇಖನಗಳನ್ನು ಪ್ರಕಟಿಸುತ್ತಿರುವುದು ಅಭಿನಂದನೀಯ.

'ದಲಿತ್ ಡೈರಿ'ಯ ಬರವಣಿಗೆಗಳಲ್ಲಿ ದಲಿತ ಸಮಸ್ಯೆಗೆ ವೈಜ್ಞಾನಿಕ ಪರಿಹಾರಗಳನ್ನು ಹುಡುಕುತ್ತಿರುವುದು ಸ್ವಾಗತಾರ್ಹವಾದುದು. ಪರ್ಯಾಯ ರಾಜಕಾರಣದ ಚರ್ಚೆಯನ್ನು ನೋಡಿದರೆ ಕರ್ನಾಟಕದ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆಯ ಮುನ್ಸೂಚನೆ ಕಂಡುಬರುತ್ತಿದೆ. ಸಾಮಾಜಿಕ ಸಮಾನತೆಗಾಗಿ ಹೋರಾಡುವ ಪತ್ರಿಕೆಯಾಗಿ ಸದಾಕಾಲಕ್ಕೂ 'ಸಂವಾದ' ನಿಲ್ಲಲೆಂದು ಆಶಿಸುತ್ತೇನೆ.

ಡಾ|| ವಸು. ಎಂ.ವಿ., ತುಮಕೂರು

## ವೈಚಾರಿಕ ಸಂಸ್ಕೃತಿಯ ಜಾಗೃತಿ

ಪ್ರಿಯ ಇಂದೂಧರ ಅವರಿಗೆ ನಮಸ್ಕಾರ,

'ಸಂವಾದ' ನವೆಂಬರ್ -೦೪ ತಲುಪಿತು.

ವೈಚಾರಿಕ ಸಂಸ್ಕೃತಿಯ ಜಾಗೃತಿಯಲ್ಲಿ 'ಸಂವಾದ' ತನ್ನದೇ ಪಾತ್ರ ವಹಿಸುತ್ತಿರುವುದು, ಇಲ್ಲಿಯೂ ನಿಮ್ಮ ಜನಮುಖೀ ಬದ್ಧತೆ ಪ್ರಖರವಾಗಿಯೇ ಉಳಿದಿರುವುದು ಸಂತಸ ತಂದಿದೆ.

ಸ. ರಘುನಾಥ, ಕೋಲಾರ

## ಮೂಲ ಬೇರುಗಳನ್ನು ಹಿಡಿದು ಹೊರಡುವ ಬರಹಗಳು

ಆತ್ಮೀಯರಾದ ಇಂದೂಧರರವರೇ,

ಹರಿಹರದಿಂದ ಶರೀಫಾ ಮಾಡುವ ಸಲಾಂಗಳು.

ಎರಡು ವರ್ಷಗಳಲ್ಲೇ 'ಸಂವಾದ' ಗಳಿಸಿದ ಪ್ರೀತಿ ಅಪಾರ. ತಳಮಟ್ಟದ, ಮೂಲ ಬೇರುಗಳನ್ನೇ ಹಿಡಿದು ಪೊರಡುವ 'ಸಂವಾದ'ದ ಬರಹಗಳು ನಮಗೆ ಬೇರೆ ಪತ್ರಿಕೆಗಳಲ್ಲಿ ಕಾಣಸಿಗುವುದೇ ಇಲ್ಲ. 'ಹೊಸತು'ವಿನ ನಂತರ, 'ಅಚಲ' ನಂತರ ನಾನು ಮೆಚ್ಚಿಕೊಂಡ ಪತ್ರಿಕೆ 'ಸಂವಾದ'. ಇಂದೂಧರರವರೆ ಇದನ್ನು ಪ್ರೀತಿಯಿಂದ ಬೆಳೆಸುವ ಜವಾಬ್ದಾರಿಯನ್ನು ಕರ್ನಾಟಕದ ಪ್ರಗತಿಪರರು, ದಲಿತರು ಮತ್ತು ಅಲ್ಪಸಂಖ್ಯಾತರು ವಹಿಸಬೇಕಿದೆ.

ವಂದನೆಗಳು,

ಕೆ. ಶರೀಫಾ, ಹರಿಹರ

# ಝೆನ್

ಅವಲೋಕನ
ಕಥೆ ಪ್ರಸಂಗ
ಸಂವಾದ
ಒಗಟು
ಮುಂಡಿಗೆಗಳು

○ಕೆ.ವಿ. ಸುಬ್ಬಣ್ಣ



## ಎತ್ತರ ಗಿಡ್ಡವಾದ ಕಾರಣ

ಬೋಧಿಧರ್ಮ, ಭಾರತವನ್ನು ಬಿಟ್ಟು ಚೀನಾಕ್ಕೆ ಏತಕ್ಕಾಗಿ ಬಂದ? ಝೆನ್ ಅಭ್ಯಾಸಿಗಳು ಆಗಾಗ ಕೇಳುತ್ತಿದ್ದ ಪ್ರಶ್ನೆ ಇದು. ಈ ಪ್ರಶ್ನೆ ಕೇಳುವುದೆಂದರೆ, ಬೌದ್ಧಧರ್ಮದ ಮೂಲತತ್ವವೇನು-ಎಂಬ ಪ್ರಶ್ನೆ ಕೇಳಿದಂತೆ. ಇವೆರಡೂ ಒಂದೇ ಪ್ರಶ್ನೆ ಪಾಠ ಮಾತ್ರ ಬೇರೆಬೇರೆ ಎಂದು ಭಾವಿಸಲಾಗುತ್ತಿತ್ತು.



ಸೆಯಿಹೆಯಿ ಎಂಬ ಜಿಜ್ಞಾಸುವೊಬ್ಬ ಗುರು ಸುಯಿಬಿಯ ಹತ್ತಿರ ಬಂದು ಈ ಪ್ರಶ್ನೆ ಕೇಳಿದ- 'ಹೇಳಿ ಗುರುವೇ, ಬೋಧಿಧರ್ಮ ಭಾರತವನ್ನು ಬಿಟ್ಟು ಚೀನಾಕ್ಕೆ ಬಂದದ್ದೇಕೆ?'

ಸುಯಿಬಿ ಹೀಗಂದ- 'ಸ್ವಲ್ಪ ತಾಳು. ನಾವಿಬ್ಬರೇ ಇರಬೇಕು, ಸುತ್ತ ಇನ್ನಾರೂ ಇರಬಾರದು. ಆಗ ಹೇಳುತ್ತೇನೆ.'

ಆ ದಿನ, ಎಷ್ಟೋ ಸಲ, ಅವರಿಬ್ಬರೇ ಇದ್ದ ವೇಳೆಯಿತ್ತು. ಅಂಥ ಸಮಯದಲ್ಲೆಲ್ಲ ಸೆಯಿಹೆಯಿ ಮತ್ತೆ ತನ್ನ ಪ್ರಶ್ನೆಯನ್ನು ಕೇಳಲು ತವಕಿಸುತ್ತಿದ್ದ. ಆದರೆ ಅಷ್ಟರಲ್ಲಿ ಸುಯಿಬಿ ತುಟಿಯ ಮೇಲೆ ಬೆಟ್ಟಿಟ್ಟು ಸುಮ್ಮನಾಗಿಸುತ್ತಿದ್ದ. ಕಡೆಗೊಮ್ಮೆ ಈತನಿಗೆ ತಡೆದುಕೊಳ್ಳಲಿಕ್ಕೇ ಆಗಲಿಲ್ಲ, ಉತ್ತರಕ್ಕಾಗಿ ಪೀಡಿಸತೊಡಗಿದ. ಸುಯಿಬಿ ಆತನನ್ನು ಹೊರಕ್ಕೆ ಕರೆದುಕೊಂಡು ಹೋದ.

'ಈಗ ಯಾರೂ ಇಲ್ಲ, ನಾವಿಬ್ಬರೇ ಇದ್ದೇವೆ, ಹೇಳಿ' ಎಂದ, ಸೆಯಿಹೆಯಿ.

ಅಲ್ಲಿ ಕಾಣುತ್ತಿದ್ದ ಬಿದಿರು ಮೆಳೆಗಳನ್ನು ತೋರಿಸಿ, ಸುಯಿಬಿ ಹೇಳಿದ- 'ಇಗೋ ಇಲ್ಲಿದ್ದಾವಲ್ಲ, ಈ ಬಿದಿರುಗಳು ಎತ್ತರವಾಗಿವೆ. ಆಗೋ ಅಲ್ಲಿದ್ದಾವಲ್ಲ ಅವು ಗಿಡ್ಡದಾಗಿವೆ. ಹೌದಾ? ಅದಕ್ಕಾಗಿಯೇ ಬೋಧಿಧರ್ಮ ಭಾರತದಿಂದ ಚೀನಾಕ್ಕೆ ಬಂದದ್ದು.'

## ಗಾಳಿ - ಧ್ವಜ - ಚಿತ್ತ

ಗಾಳಿ ಬಲವಾಗಿ ಬೀಸುತ್ತಿತ್ತು. ಎದುರಿನಲ್ಲಿ ತೂಗಿಬಿಟ್ಟಿದ್ದ ಧ್ವಜ ಗಾಳಿಗೆ ಪಟಪಟಿಸುತ್ತಿತ್ತು. ಅಲ್ಲಿ ಇಬ್ಬರು ಭಿಕ್ಷುಕರು ನಿಂತಿದ್ದರು. ಅವರಲ್ಲಿ ಒಬ್ಬ ಹೀಗೆ ಹೇಳಿದ - 'ಚಲಿಸುತ್ತಿರುವುದು ಗಾಳಿಯಲ್ಲ' ಅದನ್ನು ವಿರೋಧಿಸಿ, ಇನ್ನೊಬ್ಬ ಹೀಗಂದ - 'ಅಲ್ಲ, ಗಾಳಿಯೇ ಚಲಿಸುತ್ತಿರುವುದು, ಧ್ವಜವಲ್ಲ' ಅಷ್ಟರಲ್ಲಿ ಅಲ್ಲಿ ಹಾದು ಹೋಗುತ್ತಿದ್ದ ಮೂರನೆಯ ಭಿಕ್ಷು ಇವರಿಬ್ಬರ ಮಾತುಗಳನ್ನು ಕೇಳಿಸಿಕೊಂಡು ತಾನು ಹೀಗೆ ತೀರ್ಮಾನ ಹೇಳಿದ- 'ಗಾಳಿ ಚಲಿಸುತ್ತಿಲ್ಲ, ಧ್ವಜ ಚಲಿಸುತ್ತಿಲ್ಲ, ಚಲಿಸುತ್ತಿರುವುದು ನಿಮ್ಮ ಚಿತ್ತ.'

## ಕ್ಷಮಿಸುವ ಸಂಗತಿ

ಗುರು ಕೊಕುಶಿ, ಒಮ್ಮೆ ಇದ್ದಕ್ಕಿದ್ದಂತೆ ತನ್ನ ಸೇವಕನನ್ನು ಹೆಸರು ಹಿಡಿದು ಕೂಗಿದ, 'ಓಶಿನ್!' ಅಂತ.

ಓಶಿನ್ ಬಂದ. 'ಬಂದೆ' ಎಂದ.

ಕೊಕುಶಿ ಮತ್ತೆ 'ಓಶಿನ್!' ಎಂದು ಕೂಗಿದ.

ಓಶಿನ್ ಮತ್ತೆ 'ಬಂದಿದ್ದೇನೆ' ಎಂದ.

ಕೊಕುಶಿ ಹೇಳಿದ - 'ಹೀಗೆ ಸುಮ್ಮನೆ ನಿನ್ನ ಹೆಸರು ಹಿಡಿದು ಕೂಗಿದ್ದಕ್ಕೆ ನಿನ್ನ ಕ್ಷಮೆ ಕೇಳಿಕೊಳ್ಳುತ್ತೇನೆ. ಆದರೆ, ನಿಜವಾಗಿ ಹೇಳುತ್ತೇನೆ ಕೇಳು, ನೀನೇ ನನ್ನ ಕ್ಷಮೆ ಕೇಳಿಕೊಳ್ಳಬೇಕು.'

## ಮೊಗ್ಗೆಗಳು ಮತ್ತು ಹಕ್ಕಿಗಳು

ಗುರು ಫುಕೆತ್ಸುನ ಬೋಧೆ ಕೇಳಿ ಮನಸ್ಸು ಗೊಂದಲಗೊಂಡ ಒಬ್ಬ ಭಿಕ್ಷು, ಪುನಃ ಆತನ ಬಳಿ ಹೋಗಿ ಕೇಳಿದ - 'ಸತ್ಯ ಹೇಳಬೇಕೆಂದರೆ ಮಾತಿಲ್ಲದೆ ಹೇಳಬೇಕು ಎಂದಿರಿ; ಮೌನವಿಲ್ಲದೆ ಹೇಳಬೇಕು ಎಂದಿರಿ. ಅದು ಹೇಗೆ ಸಾಧ್ಯ?'

ಫುಕೆತ್ಸು ಅದಕ್ಕೆ ಕೊಟ್ಟ ಉತ್ತರ ಇದು - 'ದಕ್ಷಿಣ ಚೀನಾದಲ್ಲಿ ವಸಂತಕಾಲ ಪ್ರಾಪ್ತವಾದಾಗ, ಆಗಿನ್ನೂ ನಾನು ಚಿಕ್ಕ ಹುಡುಗ, ನನೆಮೊಗ್ಗೆಗಳಲ್ಲಿ ಅಡಗಿ ಕೂತ ಹಕ್ಕಿಗಳು ಎಷ್ಟು ಚಂದ ಹಾಡುತ್ತಿದ್ದವು.'



ಸಂಪಾದಕೀಯ



ಅಂತರಂಗ

# ಜೈಲಿನಲ್ಲಿ ಹಿಂದೂ ಧರ್ಮ !

ಬ್ರಾಹ್ಮಣರ ಪರಮೋಚ್ಚ ಗುರು ಕಂಚಿಯ ಶಂಕರಾಚಾರ್ಯ ಸ್ವಾಮೀಜಿ ಕೊಲೆ ಆರೋಪದ ಮೇಲೆ ಜೈಲು ಸೇರಿದ್ದಾರೆ. ಅವರ ಜತೆಯಲ್ಲೇ ಹಿಂದೂ ಧರ್ಮ ಕೂಡ ಜೈಲು ಸೇರಿದೆ! ಅಸಮಾನತೆಯನ್ನೇ ತನ್ನ ಅಂತಃಸತ್ವ ಮಾಡಿಕೊಂಡಿದ್ದ ಹಿಂದೂಧರ್ಮ ಪುರೋಹಿತರ ಬಂಧೀಖಾನೆ ಸೇರಿ ಸಾವಿರಾರು ವರ್ಷಗಳೇ ಕಳೆದುಹೋಗಿದ್ದವು. ಈ ಪುರೋಹಿತರ ಪರಮೋಚ್ಚ ಪುರೋಹಿತ ಕಂಚಿ ಶಂಕರಾಚಾರ್ಯ ಈಗ ಕಾನೂನಿನ ಪ್ರಕಾರ ಸರ್ಕಾರದ ಜೈಲು ಸೇರುವ ಮೂಲಕ ಹಿಂದೂಧರ್ಮ ಕೂಡ ಕಾನೂನಿನ ಮೂಲಕ ಜೈಲು ಸೇರಿದಂತಾಗಿದೆ!

ಈ ದೇಶದ ವಿಪರ್ಯಾಸ ನೋಡಿ. ಇಡೀ ಜಗತ್ತಿನ ಅತ್ಯದ್ಭುತ ಪ್ರಜಾಸತ್ತೆ ನಮ್ಮದು. ಇಲ್ಲಿ ಎಲ್ಲರೂ ಸಮ. ಪ್ರಧಾನಿಯಿಂದ ಹಿಡಿದು ಸಾಮಾನ್ಯ ಮನುಷ್ಯನವರೆಗೆ. ಅಂಬಾನಿಯಂಥ ಶ್ರೀಮಂತನಿಂದ ಹಿಡಿದು, ಬೀದಿಯ ಕಸ ಎತ್ತುವ ಬಿಕಾರಿವರೆಗೆ. ಕಾನೂನು ಎಲ್ಲರಿಗೂ ಒಂದೇ. ಎಲ್ಲರಿಗೂ ಒಂದೇ ಓಟು. ಆದರೆ ಈ ಎಲ್ಲದಕ್ಕೂ ವಿರೋಧವಾಗಿ ಸಂವಿಧಾನೇತರವಾಗಿ ಆಲೋಚಿಸುವ-ನಡೆದುಕೊಳ್ಳುವ ಜನವರ್ಗವೊಂದಿದೆ. ಆ ಜನವರ್ಗ ರಾಜ್ಯಾಂಗದ ಬದಲು ಪಂಚಾಂಗ ಹಿಡಿದು ಅಧಿಕಾರ ನಡೆಸುವ ಹುನ್ನಾರ ನಡೆಸಿದೆ. ಈ ಹುನ್ನಾರದ ವಾರಸುದಾರರು ಈ ಕಂಚಿಯ ಶಂಕರಾಚಾರ್ಯ, ಉಡುಪಿಯ ಪೇಜಾವರ ಇತ್ಯಾದಿಗಳು!

ಕಂಚಿಯ ಘಟನೆಯನ್ನೊಮ್ಮೆ ಪರಿಶೀಲಿಸಿ. ಕಂಚಿಯ ಶಂಕರಾಚಾರ್ಯ ಜಯೇಂದ್ರ ಸರಸ್ವತಿ ಸ್ವಾಮೀಜಿಗೂ ಅವರ ಶಿಷ್ಯ ಶಂಕರರಾಮನ್‌ಗೂ ಬಹುಕಾಲದ ದ್ವೇಷ. ಜಯೇಂದ್ರ ಸರಸ್ವತಿ ಸ್ವಾಮಿಯ ಅವ್ಯವಹಾರಗಳನ್ನೆಲ್ಲ ಶಂಕರರಾಮನ್ ವಿರೋಧಿಸುತ್ತಿದ್ದುದು ಇದಕ್ಕೆ ಕಾರಣ. ಇದರ ಫಲವಾಗಿಯೇ ಶಂಕರ ರಾಮನ್ ಅವರನ್ನು ಮಠದಿಂದ ಹೊರಗೆ ಕಳುಹಿಸಲಾಗಿತ್ತು. ಪ್ರಾಮಾಣಿಕ ಶಂಕರರಾಮನ್ ಜಯೇಂದ್ರ ಸರಸ್ವತಿ ಸ್ವಾಮಿಯ ಅನ್ಯಾಯಗಳ ವಿರುದ್ಧ ಹೊರಗಿನಿಂದಲೂ ಹೋರಾಟ ಆರಂಭಿಸಿದರು. ಪರಿಣಾಮ ಸೆಪ್ಟೆಂಬರ್ ೩ ರಂದು ಶಂಕರರಾಮನ್ ಬರ್ಬರವಾಗಿ ಕೊಲೆಗೀಡಾದರು. ಶಂಕರರಾಮನ್ ಸಾವಿನೊಂದಿಗೆ ತಾನು ಮುಕ್ತನಾದೆನೆಂಬ ಭ್ರಮೆಯಲ್ಲಿದ್ದ ಸ್ವಾಮಿಗೆ, ಶಂಕರರಾಮನ್ ಕೊಲೆ ತನಿಖೆ ಆರಂಭಿಸಿದ ಪೊಲೀಸರು ಸೀದಾ ಕಂಚಿ ಪೀಠಾಧಿಪತಿ ಬಳಿ ಬಂದು ನಿಂತಾಗ ತಾನು ನಂಬಿದ ದೇವರ ಬಗ್ಗೆಯೇ ಅನುಮಾನ ಬಂದಿರಬೇಕು!

ವಿಚಿತ್ರ ಸತ್ಯವೇ ಆಯಿತು. ಜಯೇಂದ್ರ ಸರಸ್ವತಿ ಸ್ವಾಮಿ ಮತ್ತವರ ಪರಿವಾರ, ನಿರಂತರವಾಗಿ ಸಂವಿಧಾನ ಕಾನೂನುಗಳ ಹೊರತಾಗೇ ಚಿಂತಿಸಿದವರು ಮತ್ತು ಜೀವಿಸಿದವರು. ದೇಶದ ಯಾವುದೇ ಕಾನೂನುಗಳೂ ಈವರೆಗೆ ಅವರನ್ನು ಮುಟ್ಟಿರಲಿಲ್ಲ. ಕಾನೂನು ಪಾಲಕರೇ ಅವರ ಕಾಲು ಬಳಿ ಬಿದ್ದಿರುವಾಗ ಯಾವ ಕಾನೂನು ತಾನೇ ಏನು ಮಾಡೀತು? ಆದರೆ ಪಾಪ ಸ್ವಾಮೀಜಿ ನಂಬಿದ್ದ ದೇವರು ಕಡೆಗೂ ಕೈ ಕೊಟ್ಟಿದ್ದ. ಎರಡೂವರೆ ಸಾವಿರ ವರ್ಷಗಳ ದೀರ್ಘ ಇತಿಹಾಸದ ಕಂಚಿ ಕಾಮಕೋಟಿ ಮಠದ ಹಿರಿಯ ಸ್ವಾಮೀಜಿ, ಸಾಕ್ಷಾತ್ ದೇವರ ಪ್ರತಿರೂಪಿ ಆದಿ ಶಂಕರಾಚಾರ್ಯರ ಅವತಾರ ನೆಲ್ಲೂರು ಕಾರಾಗೃಹದ ಕಂಬಿಗಳನ್ನೂ ಎಣಿಸತೊಡಗಿದರು!

ಭಾರತ ಎಂತಹ ಅದ್ಭುತ ದೇಶ ನೋಡಿ. ಅಸಮಾನತೆ, ಮೂಢ ನಂಬಿಕೆ, ಮೋಸ, ವಂಚನೆಗಳ ನಡುವೆ ಕೂಡ ಭಾರತದ ಅಂತರ್ ಪ್ರವಾಹ ಜನಪರ ಆಶಯಗಳ ಪರವಾಗಿಯೇ ಪ್ರವಹಿಸುತ್ತದೆ ಅನ್ನುವುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ? ಬೌದ್ಧ ಧರ್ಮದ ಭದ್ರಕೋಟೆಯಂತಿದ್ದ ನಾಗಾರ್ಜುನ ಕೊಂಡವನ್ನು ನಾಶ ಮಾಡುವ ಮೂಲಕ ಧಾರ್ಮಿಕ ಗೂಂಡಾಗಿರಿ ಆರಂಭಿಸಿದ್ದ ಆದಿಶಂಕರಾಚಾರ್ಯರ ವಾರಸುದಾರ ಜಯೇಂದ್ರ ಸರಸ್ವತಿ ಸ್ವಾಮೀಜಿಯನ್ನು ಜೈಲಿಗೆ ತಳ್ಳುವ ಮೂಲಕ ಈಗ ಭಾರತೀಯ ಧರ್ಮ, ಸಮಾನತೆಯ ತನ್ನ ಮೂಲ ತತ್ವವನ್ನು ಎತ್ತಿ ಹಿಡಿದಿದೆ!

ಜಯೇಂದ್ರ ಸರಸ್ವತಿ ಸ್ವಾಮಿ ಕೊಲೆ ಮಾಡಿಸಿದ್ದಾರೋ ಇಲ್ಲವೋ ಅದು ತೀರ್ಮಾನವಾಗಬೇಕಾದ್ದು ನ್ಯಾಯಾಲಯದಲ್ಲಿ. ಆದರೆ ಕೊಲೆ ಮಾಡಿಸಿರಬಹುದೆಂದು ನಂಬಲು ಪೊಲೀಸರಿಗೆ ಅನುಮಾನಕ್ಕೆ ಆಸ್ಪದವಿಲ್ಲದಷ್ಟು ಸಾಕ್ಷ್ಯಗಳು ದೊರತಿರುವುದಂತೂ ಸತ್ಯ. ಇಲ್ಲದಿದ್ದರೆ ರಾಷ್ಟ್ರಪತಿಗಳು, ಪ್ರಧಾನಿಗಳು, ದೊಡ್ಡ ದೊಡ್ಡ ಬಂಡವಾಳಶಾಹಿಗಳೇ ಬೆಂಗಾವಲಿಗಿರುವ ಸ್ವಾಮೀಜಿಯನ್ನು ಪೊಲೀಸರು ಮುಟ್ಟಲಾದೀತೆ? ಸ್ವತಃ ಜಯೇಂದ್ರರ ಭಕ್ತೆಯಾದ ಜಯಲಲಿತಾ ಮುಖ್ಯಮಂತ್ರಿಯಾಗಿರುವಾಗಲೇ ಇಂಥ ಘಟನೆ ನಡೆಯಬೇಕಾದರೆ ಆತ ಎಂಥ ಘೋರ ಪ್ರಮಾದ ಮಾಡಿರಬೇಕು? ಅದೇನೆ ಇದ್ದರೂ ತನ್ನ ಗುರುವನ್ನು ಬಂಧಿಸುವಷ್ಟು ಪ್ರಾಮಾಣಿಕತೆ ತೋರಿದ್ದಕ್ಕೆ ಜಯಲಲಿತಾರನ್ನು ಅಭಿನಂದಿಸಲೇಬೇಕು!

ಆದರೆ ಈ ಸ್ವಾಮಿಯ ಬಂಧನ ಕುರಿತಂತೆ ಸಂಘ ಪರಿವಾರ ಎಬ್ಬಿಸುತ್ತಿರುವ ಹುಯಿಲು ಮಾತ್ರ ನಾಚಿಕೆಗೇಡಿನದಾಗಿದೆ! ಬ್ರಾಹ್ಮಣರಲ್ಲಿ ಒಂದು ಗುಂಪಿನ ಸ್ವಾಮೀಜಿಯಾದ ಕಂಚಿ ಜಗದ್ಗುರುವಿನ ಬಂಧನದಿಂದ ೮೦ ಕೋಟಿ ಹಿಂದೂಗಳಿಗೆ ನೋವಾಗಿದೆಯಂತೆ! ಯಾರು ಈ ೮೦ ಕೋಟಿ ಹಿಂದೂಗಳು? ಆರ್‌ಎಸ್‌ಎಸ್, ವಿಹೆಚ್‌ಪಿ, ಭಜರಂಗದಳದ ಪುರೋಹಿತರೆ? ಅಥವಾ ಅವರ ಇನ್ನೊಂದು ಮುಖವಾದ ವಾಜಪೇಯಿ, ಅಡ್ವಾಣಿಯವರೆ? ಎಂಥಾ ಬೂಟಾಟಿಕೆ, ಆತ್ಮವಂಚನೆ! ದೇಶದ ಬೆರಳೆಣಿಕೆಯ ಪುರೋಹಿತರು ಮಾತ್ರ ಹಿಂದೂಗಳಾದರೆ ಉಳಿದವರೆಲ್ಲ ಏನು? ಬ್ರಾಹ್ಮಣ ಸ್ವಾಮಿಯೊಬ್ಬನ ಮೇಲಿನ ಕಾನೂನಿನ ಕ್ರಮಕ್ಕೆ ಇಷ್ಟೆಲ್ಲ ಅರಚಾಡುವ ಸಂಘ ಪರಿವಾರ, ಇಂಥ ಎಷ್ಟೋ ಮಂದಿ ಬ್ರಾಹ್ಮಣೇತರ ಸ್ವಾಮಿಗಳು ಕಾನೂನಿನ ಕ್ರಮಕ್ಕೆ ಒಳಗಾದಾಗ ಯಾಕೆ ಮಾತಾಡಲಿಲ್ಲ? ಅವರ್‍ಯಾರೂ ಹಿಂದೂ ಸ್ವಾಮಿಗಳಲ್ಲವೆ? ಬ್ರಾಹ್ಮಣರು ಮಾತ್ರ ಹಿಂದೂಗಳು ಉಳಿದವರು ಅಲ್ಲ ಎಂಬುದನ್ನು ಪರೋಕ್ಷವಾಗಿ ಅವರು ಪ್ರತಿಪಾದಿಸುತ್ತಿರುವರೆ?

ಸಂವಿಧಾನದ ಹೆಸರಿನಲ್ಲಿ ಈ ದೇಶದ ಪ್ರಧಾನಿಯಾದವರು, ಉಪಪ್ರಧಾನಿಯಾದವರು, ಕಾನೂನು ಸಚಿವರಾದವರು, ಈ ದೇಶದ ಕಾನೂನಿಗಿಂತ ವ್ಯಕ್ತಿಯೊಬ್ಬ ದೊಡ್ಡವನು ಎಂದು ಹೇಳಲು ಹೊರಟಿರುವುದಂತೂ ನಮ್ಮ ನಡುವಿನ ದೊಡ್ಡ ದುರಂತ. ರಾಜ್ಯಾಂಗಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ಇಂಥ ದೇಶದ್ರೋಹಿಗಳು ನಮ್ಮ ನಡುವೆ ಇನ್ನೂ ತಲೆ ಎತ್ತಿ ತಿರುಗುತ್ತಿರುವುದಕ್ಕೆ ನಾವೆಲ್ಲ ನಾಚಿಕೆ ಪಟ್ಟುಕೊಳ್ಳಬೇಕಾಗಿದೆ.

ಒಂದಂತೂ ಸತ್ಯ. ಶಂಕರಾಚಾರ್ಯರ ಬಂಧನದ ಹಿಂದೆ ಜಯಲಲಿತಾ ಸರ್ಕಾರದ ಪಿತೂರಿ ಏನಾದರೂ ಇದ್ದರೆ ಅದು ತಲೆದಂಡ ತೆರಬೇಕಾಗುತ್ತದೆ. ಕೊಲೆಯಲ್ಲಿ ನಿಜವಾಗಿಯೂ ಸ್ವಾಮೀಜಿ ಕೈವಾಡ ಇದ್ದರೆ ಆತ ಜೈಲಿನಲ್ಲಿ ಕೊಳೆಯಬೇಕಾಗುತ್ತದೆ. ವಿವೇಕಿಗಳು ನ್ಯಾಯಾಲಯದ ತೀರ್ಪಿಗಷ್ಟೇ ಕಾಯಬೇಕು.

○ ಇಂದೂಧರ ಹೊನ್ನಾಪುರ

## ಅತಿಕ್ರಮಣ

**ಬಸವಣ್ಣನವರ ವ್ಯಕ್ತಿತ್ವಕ್ಕೆ ವಿಶೇಷ ಮೆರಗು ನೀಡಿದ, ಅವರನ್ನು ಸಾಮಾಜಿಕ ಚಿಂತನೆಗೆ ತೊಡಗಿಸಿದ ಕೂಡಲಸಂಗಮವು ಪ್ರಸಿದ್ಧ ಐತಿಹಾಸಿಕ ಕ್ಷೇತ್ರ. ಆದರೆ ಇಲ್ಲಿ ಬಸವಣ್ಣನವರ ಆಶಯಗಳಿಗೆ ತೀರಾ ತದ್ವಿರುದ್ಧವಾದ ಕರ್ಮಠ ಆಚರಣೆಗಳು ಮತ್ತೆ ತಲೆ ಎತ್ತಿ ನಿಂತಿವೆ. ಎಲ್ಲೆಡೆಯಂತೆ ಇಲ್ಲಿಯೂ ಪುರೋಹಿತರು ತಮ್ಮ ಎಂದಿನ ಕೊಳೆ ಕಸ ಸುರುವುತ್ತಿದ್ದಾರೆ. ಯಾವ ಕ್ಷೇತ್ರ ನಮ್ಮೆಲ್ಲರ ಪ್ರಜ್ಞೆಗೆ - ಚಿಂತನೆಗೆ ಕಾರಣವಾಗ ಬೇಕಿತ್ತೋ ಅದು ಇಂದು ಮತ್ತೆ ಪುರೋಹಿತಶಾಹಿ ಜನಗಳ ಕಪಿಮುಷ್ಠಿಯಲ್ಲಿ ಸಿಕ್ಕು ನಲುಗಿಹೋಗುತ್ತಿದೆ. ತಮ್ಮ ಜೀವಿತಾವಧಿಯಲ್ಲಿ ಯಾವುದರ ವಿರುದ್ಧ ಬಸವಣ್ಣನವರು ಬಂಡೆದ್ದು ಹೋರಾಡಿದರೋ ಅವರ ಕ್ಷೇತ್ರ ಇಂದು ಮತ್ತದೇ ಶಕ್ತಿಗಳ ಕೈಯ್ಯಲ್ಲಿ ಸಿಕ್ಕು ಒದ್ದಾಡುತ್ತಿದೆ. ಈ ಬಗೆಗಿನ ಒಂದು ನೋಟ ಇಲ್ಲಿದೆ.**

○ ವಿಶ್ವಾರಾಧ್ಯ ಸತ್ಯಂಪೇಟೆ



# ಕೂಡಲಸಂಗಮದಲ್ಲೂ ಪುರೋಹಿತರ ಕೊಳೆ - ಕಸ !

ಬಸವಣ್ಣನವರ ಲಿಂಗೈಕ್ಯ ಕ್ಷೇತ್ರವೆಂಬ ಕಾರಣಕ್ಕಾಗಿಯೇ ಪ್ರಖ್ಯಾತವಾಗಿರುವ ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮ ಕರ್ನಾಟಕದ ಕೆಲವೇ ಐತಿಹಾಸಿಕ ಹಾಗೂ ಪ್ರವಾಸಿ ಸ್ಥಳಗಳಲ್ಲಿ ಒಂದು. ಕೋಟ್ಯಂತರ ರೂಪಾಯಿಗಳ ನೆರವಿನೊಂದಿಗೆ ಕೂಡಲ ಸಂಗಮ ಪ್ರಾಧಿಕಾರದ ಅಡಿಯಲ್ಲಿ ನಿರ್ಮಿಸಲಾಗಿರುವ ಭವ್ಯವಾದ ಕಟ್ಟಡಗಳು, ಬಸವ ವೇದಿಕೆ, ಬಸವ ಅಂತರಾಷ್ಟ್ರೀಯ ಗ್ರಂಥಾಲಯ, ದಾಸೋಹ ನಿಲಯ, ಯಾತ್ರಿನಿವಾಸ ಸಂಗಮೇಶ್ವರ ದೇವಾಲಯ ಹಾಗೂ ಐಕ್ಯಮಂಟಪಗಳೇ ಮುಂತಾದ ಕಟ್ಟಡಗಳು ಅಲ್ಲಿಯ ಐತಿಹಾಸಿಕತೆಗೆ ಮತ್ತಷ್ಟು ಮೆರಗನ್ನು ನೀಡುವ ಪ್ರವಾಸಿಗರಿಗೆ ಬೆರಗನ್ನು ಉಂಟು ಮಾಡುವ ಭವ್ಯ ಹಾಗೂ ದಿವ್ಯ ತಾಣಗಳಾಗಿವೆ. ಹೀಗಾಗಿ ಇಲ್ಲಿ ನಿತ್ಯ ಸಹಸ್ರಾರು ಸಂಖ್ಯೆಯ ಜನ ಸಾಮಾನ್ಯರು ಪರಿವೀಕ್ಷಣೆಗೆಂದು ಬರುತ್ತಿದ್ದಾರೆ.

ಬಸವಣ್ಣನವರ ಜೀವನಕ್ಕೆ ಮಹತ್ವದ ತಿರುವನ್ನು ತಂದುಕೊಟ್ಟ ಹಾಗೂ ಬಸವಣ್ಣತನವನ್ನು ಬಡಿದೆಬ್ಬಿಸಿದ ಅವರ ಸ್ಫೂರ್ತಿಯ ಕ್ಷೇತ್ರ ಇದೆಂಬ ಕಾರಣಕ್ಕೂ ಈ ಕ್ಷೇತ್ರವನ್ನು ನೋಡಲು ವಿಚಾರವಾದಿಗಳು, ಕವಿ ಸಾಹಿತಿಗಳು, ಸಮಾಜ ಚಿಂತಕರು ಮುಂತಾದವರು ಬರುತ್ತಾರೆ. ಭಾವುಕ ಜನಕ್ಕೆ ಈ ಕ್ಷೇತ್ರ ಹೇಗೆ ಆಕರ್ಷಣಿಯವೋ ಹಾಗೆ ವಿಚಾರವಾದಿಗಳಿಗೂ ಚಿಂತಕರಿಗೂ ಈ ಕೂಡಲಸಂಗಮ ಈಗ ಸ್ಫೂರ್ತಿಯ ಸೆಲೆ, ನೆಲೆಯಾಗಿದೆ. ಈಗಾಗಲೇ ಇಲ್ಲಿ ಅನೇಕ ವಿಚಾರ ಸಂಕಿರಣಗಳು ಜರುಗಿ ಕರ್ನಾಟಕದ ಸಮಸ್ತ ಜನತೆಯ ಗಮನ ಸೆಳೆದಿದೆ.

ಶ್ರೀ ಶಿವಾನಂದ ಜಾಮದಾರ ಎಂಬ ಪ್ರಾಮಾಣಿಕ ಅಧಿಕಾರಿಯ ಕಾಳಜಿ ಹಾಗೂ ಹೃತ್ಪೂರ್ವಕ ಪ್ರೀತಿಯನ್ನು ನಾವು ಅವರ ಇಲ್ಲಿಯ ಪ್ರತಿಯೊಂದು ಕೆಲಸಗಳಲ್ಲೂ ನೋಡಬಹುದು. ಹಾಗೆಯೇ ಈ ಕ್ಷೇತ್ರದ ಘನತೆಯನ್ನು ಅರ್ಥಮಾಡಿಕೊಂಡಿದ್ದ ಅಂದಿನ ಸರಕಾರದ ಮುಖ್ಯಮಂತ್ರಿಗಳಾಗಿದ್ದ ಸಮಾಜವಾದಿ ಚಿಂತಕ ಲಿಂ.ಶ್ರೀ ಜೆ.ಎಚ್.ಪಟೇಲರ ಔದಾರ್ಯ ಹಾಗೂ ಚಾರಿತ್ರಿಕ ಪ್ರಜ್ಞೆಗೆ ಸಾಕ್ಷಿಯೆಂಬಂತೆ ಕೂಡಲಸಂಗಮ ಕಂಗೊಳಿಸುವುದನ್ನು ಕಾಣಬಹುದು.

ಆಲಮಟ್ಟಿಯ ಜಲಾಶಯದ ಎತ್ತರವನ್ನು ಎತ್ತರಿಸಬೇಕಾದ ಪ್ರಸಂಗ ಬಂದಾಗ ಕೂಡಲಸಂಗಮದಲ್ಲಿಯ ಬಸವಣ್ಣನವರ ಐಕ್ಯ ಮಂಟಪ ಮುಳುಗಡೆಯಾಗುವುದಿತ್ತು. ಆದರೆ ನಾಡಿನ ಬಹುತೇಕ ಜನರು ಆ ಐತಿಹಾಸಿಕ ಸ್ಮಾರಕವನ್ನು ಹಾಗೆಯೇ ಉಳಿಸಿಕೊಳ್ಳಬಯಸಿದ್ದರಿಂದ ಅದಕ್ಕೆ ವಿಶೇಷ ವಿನ್ಯಾಸದೊಂದಿಗೆ ಮೂಲ ಸ್ಥಳದಲ್ಲಿಯೇ ರಕ್ಷಣೆ ಮಾಡಲಾಯಿತು. ೧೨೫ ಅಡಿ ಆಳದಲ್ಲಿ ತುಂಬಿ ಹರಿಯುವ ನದಿಯಲ್ಲಿರುವ ಐಕ್ಯಮಂಟಪವನ್ನು ನೋಡುವುದೇ ಒಂದು ಸೊಬಗು ಎನ್ನುವಂತೆ ಅದು ಮೂಡಿನಿಂತಿದೆ. ಒಟ್ಟಿನಲ್ಲಿ ಸಿದ್ದಯ್ಯ ಪುರಾಣಿಕರ ಪ್ರಕೃತಿಯೇ ಗುರು ಗಗನಲಿಮಗವು ಜಗವಿದೆಲ್ಲವು ಜಂಗಮ ಎಂಬ ಕಾವ್ಯದ ಸಾಲುಗಳನ್ನು ನೆನಪಿಗೆ ತರುವ ಸಂಪೂರ್ಣ ಪ್ರಾಕೃತಿಕ ಸೊಬಗಿನಿಂದ ವಿಜೃಂಭಿಸುತ್ತ ತುಂಬಿ ಹರಿಯುತ್ತಿರುವ ಮಲಪ್ರಭೆ, ಕೃಷ್ಣೆ ಹಾಗೂ ಭದ್ರೆಯರು ಇಲ್ಲಿ ಸಮಾಗಮವಾಗುವ ಹಿನ್ನೀರಿನ ದೃಶ್ಯವೇ ಒಂದು ನಯನ ಮನೋಹರವಾದರೆ ಪ್ರಾಧಿಕಾರ ನಿರ್ಮಿಸಿದ ಒಂದೊಂದು ಸೌಧದ ಅಂದವೇ ಅದ್ವಿತೀಯವಾಗಿದೆ.

ಬಸವಣ್ಣನವರು ಕಂಡರಿಸಿದ ಜಗದಗಲ ಮುಗಿಲಗಲ ಎಂಬ ದೈವೀ ತುಣುಕು ಬಹುಶಃ ಇದೇ ಆಗಿರಬಹುದು. ಈ ಸಂಗಮದ ನದಿ ತಟಾಕದಲ್ಲಿ ಕುಳಿತು ಬಸವನ ಬದುಕಿನ ಒಂದೊಂದೇ ಪುಟಗಳನ್ನು ಇಣುಕಿ ನೋಡುತ್ತ ಹೊರಟಿರುವಂತೆ ಅಲ್ಲಿ ಕಾಣಿಸಿದ್ದೇನು ? ಸ್ವಲ್ಪ ದೂರದಲ್ಲಿಯೇ ಕೊರೆಯುವ ಚಳಿಯನ್ನೂ ಲೆಕ್ಕಿಸದೆ ನೂರಾರು ಜನ ಮುಳುಗು ಹಾಕುತ್ತಿದ್ದಾರೆ. ಧನ್ಯತೆಯನ್ನು ಅನುಭವಿಸುತ್ತಿದ್ದಾರೆ!

**ನೀರ ಕಂಡಲ್ಲಿ ಮುಳುಗುವರಯ್ಯ**
**ಮರನ ಕಂಡಲ್ಲಿ ಸುತ್ತುವರಯ್ಯ**
**ಬತ್ತುವ ಜಲವ ಒಣಗುವ ಮರವ**
**ನೆಚ್ಚಿದವರು ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ ?**

ಎಂಬ ಬಸವಣ್ಣನವರ ಮೂಲ ಮಾತುಗಳನ್ನೇ ಮರೆತುಬಿಟ್ಟಿದ್ದಾರೆ. ಅವರೆಲ್ಲ ಆ ನದಿಯಲ್ಲಿ ಮಿಂದು ಪವಿತ್ರತೆಯನ್ನು ಅನುಭವಿಸಿದವರಂತೆ

ಪುಳಕಗೊಳ್ಳುತ್ತಿರುವ ದೃಶ್ಯ ಕಂಡು ಕಸಿವಿಸಿ ಉಂಟಾಗುತ್ತದೆ. ನದಿಯಲ್ಲಿ ಮಿಂದ ಮಾತ್ರಕ್ಕೆ ತಮ್ಮೆಲ್ಲ ಸಹಸ್ರಾರು ಪಾಪಗಳು ಪರಿಹಾರವಾದವು ಎಂದು ಸಂಭ್ರಮಿಸುವುದು ಯಾವಾಗ ನಿಂತೀತು ? ಎಂದು ಬೇಸರವಾಗುತ್ತದೆ. ಸಾಲದ್ದಕ್ಕೆ ಸಂಗಮೇಶ್ವರ ಗುಡಿಯ ಬಲಭಾಗದಲ್ಲಿ ಬ್ರಾಹ್ಮಣ ವಟುಗಳು ಇಂದಿಗೂ ತಮ್ಮನ್ನಗಲಿದ ಪಿತೃಗಳಿಗೆ – ಬಂಧುಗಳಿಗೆ ಪಿಂಡ ಅರ್ಪಿಸುವ ದೃಶ್ಯವೂ ಯಾವ ಎಗ್ಗಿಲ್ಲದೆ ಸಾಗಿದೆ. ಅಲ್ಲಿಂದ ಮುಂದೆ ಬಂದರೆ ಸಂಗಮೇಶ್ವರ ದೇವಸ್ಥಾನ.

ಈ ದೇವಸ್ಥಾನ ಬಸವಣ್ಣನವರಿಗೆ ಸ್ಫೂರ್ತಿಯನ್ನು ತಂದುಕೊಟ್ಟ ಅವರ ವ್ಯಕ್ತಿತ್ವ ವಿಕಸನಕ್ಕೆ ಅನುವುಮಾಡಿಕೊಟ್ಟ ಒಂದು ಐತಿಹಾಸಿಕ ದೇವಾಲಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈ ದೇವಸ್ಥಾನದಲ್ಲಿ ಕಂಡು ಬರುವ ದೃಶ್ಯವೂ ಯಥಾ ಪ್ರಕಾರ ಬಸವಣ್ಣನವರ ಮೂಲ ಆಶಯಗಳಿಗೆ ಕೊಡಲಿ ಏಟು ಹಾಕುವಂಥವುಗಳೇ ಎಂದರೆ ತಪ್ಪೇನಿಲ್ಲ. 'ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡಲಿ ಬಡವನಯ್ಯ!' ಎಂದು ಬಸವಣ್ಣನವರು ಗುಡಿ ಸಂಸ್ಕೃತಿಯನ್ನು ವಿರೋಧಿಸಿದ್ದೇಕೆಂದರೆ ಅವು ಅಂದು ಶೋಷಣೆಯ ಕೇಂದ್ರಗಳಾಗಿದ್ದವು. ಪೂಜಾರಿ ಪುರೋಹಿತರು ದೇವರ ಹೆಸರಿನಲ್ಲಿ ಸುಲಿಗೆ ಮಾಡುತ್ತಿದ್ದರು.

ವಿಪರ್ಯಾಸವೇನೆಂದರೆ ಇಂದಿಗೂ ಅವರು ಬಾಳಿ ಬದುಕಿದ ಕ್ಷೇತ್ರದಲ್ಲಿ ಕೂಡ ಯಾವುದೇ ಬದಲಾವಣೆ ಕಾಲಿಕ್ಕಿಲ್ಲ. ದೀಪದ ಕೆಳಗೆ ಕತ್ತಲೆ ಎಂಬಂತೆ ಅವರ ಕ್ಷೇತ್ರವೂ. ಇದೀಗ ಅಲ್ಲೊಬ್ಬ ಸ್ವಾಮಿ ಭರ್ತಿ ಕಾವಿಧರಿಸಿಕೊಂಡು ಐಕ್ಯಮಂಟಪದ ತಳಪಾಯದ ಮೇಲೆ ಅಂದರೆ ಲಿಂಗದ ಮಗ್ಗುಲಿಗೆ ಕಾಲು ಚಾಚಿಕೊಂಡು ಕುರ್ಚಿಯ ಮೇಲೆ ಆಸೀನನಾಗಿದ್ದಾನೆ. ಮತ್ತದೇ ಪುರೋಹಿತರ ಕಪಿಮುಷ್ಠಿಯಲ್ಲಿ ನರಳುತ್ತಿದೆ. ಐತಿಹಾಸಿಕ ವ್ಯಂಗ್ಯಕ್ಕೆ, ನಮ್ಮೆಲ್ಲರ ದುರಂತಕ್ಕೆ ಸಾಕ್ಷಿಯಾಗಿದೆ. ಸಂಗಮೇಶ್ವರ ದೇವರ ಪೂಜೆಯ ರೇಟುಗಳ ಲಿಸ್ಟ್‌ನೋಡಿ ಬೆದರಿ ಹೋಗುವುದೊಂದೇ ಬಾಕಿ ! ಇದನ್ನು ದಾಟಿ ಮುಂದೆ ಸಾಗುತ್ತಿರುವಂತೆ ಎದುರಾಗುವ ಬಸವಣ್ಣನವರ ಐಕ್ಯಮಂಟಪ. ಆದರೆ ಅಲ್ಲಿಯೂ ಪುರೋಹಿತ ಶಾಹಿಯ ಅಟ್ಟಹಾಸ! ಬಸವಣ್ಣನವರ ಹೆಸರನ್ನು ಹೇಳಿಕೊಂಡು ಮುಗ್ಧ ಜನತೆಯನ್ನು ಪ್ರಸಾದದ ಹೆಸರಿನಲ್ಲಿ, ಅರ್ಚನೆಯ ನೆಪದಲ್ಲಿ ಶೋಷಿಸುತ್ತಿರುವುದನ್ನು ಕಂಡಾಗ ಯಾರಿಗಾದರೂ ಅಸಹ್ಯವೆನಿಸುತ್ತದೆ.

**'ಬಂಡೆ ತುಂಬ ಪತ್ರೆಯ ತಂದು**
**ಕಂಡ ಕಂಡಲ್ಲಿ ಮಜ್ಜನಕ್ಕೆರೆವಿರಿ**
**ತಾಪತ್ರಯವ ಕಳೆದು ಪೂಜಿಸಿ**
**ತಾಪತ್ರಯವ ಲಿಂಗನೊಲ್ಲ**
**ಕೂಡಲ ಸಂಗಮದೇವಾ ಬರಿಯುದಕದಲಿ ನೆನೆವನೆ ?'**

**'ತನ್ನಾಶ್ರಯದ ರತಿ ಸುಖವನ್ನು**
**ತಾನುಂಬ ಊಟವನ್ನು ತಾ ಮಾಡಬೇಕಲ್ಲದೆ**
**ಅನ್ಯರ ಕೈಯ್ಯಲಿ ಮಾಡಿಸಬಹುದೆ ?'**

ಎಂಬ ವಚನ ನೆನಪಾದಾಗಲಂತೂ ಮೈ ಅದುರುತ್ತದೆ. ಬಹುಶಃ ಇಂಥ ಸ್ಥಳದಲ್ಲಿ ಬಸವ ಇರಲಾರನೇನೋ ಎಂಬ ನೋವು ಕೂಡ ಸಣ್ಣಗೆ ನಮ್ಮನ್ನು ಆವರಿಸುತ್ತದೆ. ಪೂಜಾರಿಗಳ ಅರ್ಚನಾ ಶುಲ್ಕ, ಲಾಡುಗಳ ಮಾರಾಟ ಇವನ್ನೆಲ್ಲ ಕಂಡು ಅಕ್ಷರಶಃ ಇದೊಂದು ಮಾರುಕಟ್ಟೆ ಎಂದು ಬೇಸರಗೊಂಡು ಕಾಲೆಳೆಯುತ್ತಾ ಹೊರಬರುತ್ತಲೆ ಎಡಗಡೆ ಗಣೇಶ ದೇವರ ಗುಡಿಯೊಂದಿದೆ. ಈ ಗುಡಿಯಲ್ಲಿ ಕಾಯಿ ಒಡೆಯುವ ಭರಾಟೆ ಬಹುಶಃ ಇನ್ನೆಲ್ಲಿಯೂ ಇರಲಾರದೇನೋ !



ಐಕ್ಯ ಮಂಟಪದಲ್ಲಿ ಪುರೋಹಿತರು

**ಯಾವ ದೇವಾಲಯಗಳು ಏನಾದರಾಗಲಿ, ಕೊನೆಯ ಪಕ್ಷ ಬಸವಣ್ಣನವರ ಪರಿಸರಕ್ಕೊಳಪಟ್ಟ ಸಂಗಮೇಶ್ವರ ದೇವಾಲಯ ಪರಿಸರವಾದರೂ ಭಿನ್ನ ಮಾದರಿಯದಾಗ ಬಾರದೆ ? ಯಾವುದನ್ನು ಬಸವಣ್ಣನವರು ತಮ್ಮ ಜೀವಿತಾವಧಿಯವರೆಗೆ ನಖಶಿಖಾಂತವಾಗಿ ವಿರೋಧಿಸಿದರೋ, ಅವರ ಪರಿಸರದಲ್ಲಿಯೇ ಮತ್ತೆ ಅದೇ ವೈದಿಕ ಕೊಳೆಕಸ ವಿಜೃಂಭಿಸುತ್ತಿದೆಯೆಂದರೆ ಏನರ್ಥ?**

ಅಲ್ಲಿಂದ ಸರಿದು ಬಂದರೆ ಅಲ್ಲೊಂದು ಮದುವೆ ದಿಬ್ಬಣ. ಮದುಮಕ್ಕಳ ಸಂಭ್ರಮವನ್ನಾದರೂ ನೋಡಿ ಸಂತೋಷ ಪಡೋಣವೆಂದರೆ ಅಲ್ಲಿಯೂ ಒಬ್ಬ ಪುರೋಹಿತ ಕೈಯ್ಯಲ್ಲಿ ವಾಚೊಂದನ್ನು ಹಿಡಿದುಕೊಂಡು ನಿಂತಿದ್ದ. ಮದುಮಕ್ಕಳು ಹೊಸ ಉಡುಗೆಯುಟ್ಟು ಹಸೆಮಣೆಯ ಮೇಲೆ ಕುಳಿತಾಗಿದೆ. ತಲೆಗೆ ಬಾಸಿಂಗ, ಹೂದಂಡೆ ಎಲ್ಲವನ್ನೂ ಸಿಂಗರಿಸಿಯಾಗಿದೆ. ವಧುವಿನ ಕೊರಳಿಗೆ ಕಟ್ಟಲು ವರ ಮಹಾಶಯ ಕೈಯ್ಯಲ್ಲಿ ತಾಳಿಕರಿಮಣಿ ಸರವನ್ನು ಹಿಡಿದುಕೊಂಡು ಕಾಯುತ್ತಿದ್ದಾನೆ. ಆದರೆ ಪುರೋಹಿತ 'ಇನ್ನೂ ಹತ್ತು ನಿಮಿಷ ಇದೆ. ಯಾಕೆ ಅವಸರ ಮಾಡುತ್ತಿ ? ಸರಿಯಾಗಿ ೯ ಗಂಟೆ ೫ ನಿಮಿಷ ೬ ಸೆಕೆಂಡು ಆಗಬೇಕು. ಆಗ ಮಾತ್ರ ಶುಭ ಮುಹೂರ್ತ ! ಆ ಶುಭ ಮುಹೂರ್ತ ಬಂದ ಕೂಡಲೇ ನಾನು ನಿನಗೆ ಸೂಚನೆ ಕೊಡುತ್ತೇನೆ. ಅಲ್ಲಿಯ ತನಕ ಸ್ವಲ್ಪ ತಾಳು !' ಎಂದು ಗದರಿಸುತ್ತಾನೆ. ಉಳಿದವರೂ ಅವನನ್ನೇ ಅನುಸರಿಸುತ್ತಾರೆ.

**'ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ**
**ರಾಶಿಕೂಟ ಋಣ ಸಂಬಂಧ ಉಂಟೆಂದು ಹೇಳಿರಯ್ಯ**
**ನಾಳಿನ ದಿನಕ್ಕಿಂದಿನ ದಿನವೇ ಲೇಸೆಂದು ಹೇಳಿರಯ್ಯ'**

ಎಂದು ಹೇಳಿದ ಆ ಬಸವಣ್ಣನವರೆಲ್ಲಿ ? ಅವರ ಸ್ಥಳದಲ್ಲಿಯೇ ಅವರಿಗೇ ಅಣಕವಾಗುವಂತೆ ೯ ಗಂಟೆ ೫ ನಿಮಿಷ ೬ ಸೆಕೆಂಡಿಗೆ ಮಾತ್ರ ಶುಭಮುಹೂರ್ತವಿದೆ ಎಂದು ಅರಚುವ ಈ ಪುರೋಹಿತನೆಲ್ಲಿ ?

'ತಾಳಿ ಕರಿಮಣಿ ಸರವನ್ನು ಕೈಯ್ಯಲ್ಲಿ ಹಿಡಕೊಂಡು ಕುರಿಯ ಹಾಗೆ ತಲೆಬಗ್ಗಿಸಿಕೊಂಡು ಯಾಕೆ ಕುಳಿತುಕೊಂಡಿರುವೆಯೋ ಮಾರಾಯಾ! ಕಟ್ಟು ತಾಳಿಯ.' ಎಂದು ನನಗರಿಯದೆ ನಾನೇ ನುಡಿದುಬಿಟ್ಟೆ. ಪುರೋಹಿತನಿಂದ ಹಿಡಿದು ಎಲ್ಲರೂ ನನ್ನನ್ನು ಕೆಕ್ಕರುಗಣ್ಣಿಂದ ನೋಡಿದರು. ವರ ಮಹಾಶಯ ಕೂಡ ನನ್ನನ್ನು ದುರುದುರು ನೋಡಿದನೇ ಹೊರತು ತಾಳಿ ಕಟ್ಟಲು ಮುಂದಾಗಲಿಲ್ಲ. 'ಕುರಿ ಕಟುಕನನ್ನೇ ನಂಬುತ್ತದೆ' ಎಂಬ ಗಾದೆಯ ಮಾತು ನೆನಪಿಗೆ ಬಂದು ಮುಂದೆ ಹೆಜ್ಜೆ ಹಾಕಿದೆ.

ಎದುರುಗಡೆ ಉದ್ದಕ್ಕೂ ಮಳಿಗೆಗಳು. ಆ ಮಳಿಗೆಯಲ್ಲಿ ಬಸವಣ್ಣನವರಿಗೆ ಸಂಬಂಧಿಸಿದ ಫೋಟೋಗಳಾಗಲಿ, ಸಣ್ಣ ಸಣ್ಣ ಪುಸ್ತಕಗಳಾಗಲೀ ಇರಬಹುದೆಂದರೆ, ಅವೆಲ್ಲ ಕಾಯಿ ಕರ್ಪೂರ, ಊದುಬತ್ತಿ ಹಾರ, ಕುಂಕುಮ ಬುಕಿಪ್ಟುಗಳ ಮಾರಾಟದ ಅಡ್ಡೆಗಳು. ಬಸವಣ್ಣನವರನ್ನು ಬುಡಕ್ಕೆ ಹಾಕಿಕೊಂಡು ಅವೆಲ್ಲ ಮಕಾಡೆ ಮಲಗಿ ಬಿಟ್ಟಿವೆ ಎನ್ನಿಸಿತು.

ಕೊನೆಯದಾಗಿ ಮಾತೆ ಮಹಾದೇವಿ ನಿಲ್ಲಿಸಿದ ಶರಣರ ಗೊಂಬೆಗಳತ್ತ ಬಂದರೆ ಅದು ಮತ್ತೊಂದು ಸುಲಿಗೆಯ ಕೇಂದ್ರ. ಲಿಂಗಾನಂದರ ಸಮಾಧಿಗೆ ಸುತ್ತುವರಿಯುವವರು ಹೋಗಲಿ, ಅದರ ಮತ್ತೊಂದು ಮಗ್ಗುಲಿಗೆ ಮಾತೆ ಮಹಾದೇವಿಯವರು ತಾವಿನ್ನೂ ಜೀವಂತವಿರುವಾಗಲೇ ತಮಗಾಗಿ ನಿರ್ಮಿಸಿಕೊಂಡ ಖಾಲಿ ಸಮಾಧಿಗೂ ಜನ ಸುತ್ತುವರಿಯೋದನ್ನು ಕಂಡು ಹಣೆ ಹಣೆ ಬಡಿದುಕೊಂಡೆ. ಅವರು ಪ್ರತಿಷ್ಠಾಪಿಸಿದ ಗಣಲಿಂಗ ಹಾಗೂ ಅದರ ಸುತ್ತು ಹಬ್ಬಿರುವ ಗಿಮಿಕ್‌ಗಳನ್ನು ಬರೆಯುತ್ತ ಹೋದರೆ ಅವೇ ಮತ್ತೊಂದು ಲೇಖನವಾಗಬಹುದು.

ಬಸವಣ್ಣನವರ ವಚನಾಂಕಿತವನ್ನು ಬದಲಾಯಿಸಿದ ಕ್ಯಾಸೆಟ್ಟುಗಳ ಪುಸ್ತಕಗಳ ಮಾರಾಟವನ್ನು ಸರಕಾರ ನಿಷೇಧಿಸಿ ಆಜ್ಞೆಮಾಡಿದ್ದಾಗ್ಯೂ, ಅದನ್ನು ಕುಂಡೆ ಬುಡಕ್ಕೆ ಹಾಕಿಕೊಂಡು ಕುಳಿತಿರುವ ಮಾತೆ ಮಹಾದೇವಿಯವರ ಕಾರ್ಯಕರ್ತೆಯರು ಅವನ್ನು ಯಾವ ಹೆದರಿಕೆಯಿಲ್ಲದೆ, ಢಾಣಾ ಡಂಗುರವಾಗಿ ಮಾರಾಟ ಮಾಡುತ್ತಿದ್ದಾರೆ. ಸರಕಾರಕ್ಕೆ ಕಿವಿಗಳಿರುವುದಿಲ್ಲ ಎಂದರೆ, ಕಣ್ಣುಗಳೂ ಇಲ್ಲವೇನು? ಯಾರಾದರೊಬ್ಬ ಪೊಲೀಸ್ ಪೇದೆಯನ್ನು ಅವರ ಮಾರಾಟ ಮಳಿಗೆ ಹತ್ತಿರ ನಿಲ್ಲಿಸಿ ಕಟ್ಟು ನಿಟ್ಟಾದ ಕಾವಲು ಮಾಡುವಂತೆ ಆದೇಶಿಸಿದರೆ ಸಾಕು !

ಎಲ್ಲ ದೇವಾಲಯಗಳಲ್ಲೂ ಹಾಕುವಂತೆ ಇಷ್ಟು ದಿನ ಸಂಗಮೇಶ್ವರ ದೇವಾಲಯದಲ್ಲೂ ಪೂಜಾರಿ ಪುರೋಹಿತರು ತಮ್ಮ ಎಂದಿನ ವೈದಿಕತೆಯ ಕೊಳೆ ಕಸವನ್ನು ಹಾಕುತ್ತಿದ್ದರು ನಿಜ! ಪ್ರಾಧಿಕಾರದವರು ಅದನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡ ಮೇಲೆ ಬಹುಶಃ ಈ ಕಸ ಇಲ್ಲವಾಗಬಹುದು ಎಂದೆಣಿಸಲಾಗಿತ್ತು. ಆದರೆ ಮೊದಲು ತುಂಬಾ ಜೀರ್ಣ ಶೀರ್ಣ ಗೊಂಡಿದ್ದ ದೇವಾಲಯ ಹಾಗೂ ದಿಕ್ಕೇಡಿಯಾಗಿದ್ದ ಅಲ್ಲಿನ ಪ್ರಾಂಗಣ ಪ್ರಾಧಿಕಾರ ಬಂದ ಮೇಲೆ ಭವ್ಯವೂ ದಿವ್ಯವೂ ಆಗಿದೆ. ಆ ಮಾತು ಬೇರೆ. ಆದರೆ ಅದರಿಂದಾಗಿ ಅಲ್ಲಿನ ಪುರೋಹಿತವರ್ಗದವರಿಗೆ ಹೊಸ ಹುಲ್ಲುಗಾವಲು ದೊರಕಿದಂತಾಗಿದೆ.

ಯಾವ ದೇವಾಲಯಗಳು ಏನಾದರಾಗಲಿ, ಕೊನೆಯ ಪಕ್ಷ ಬಸವಣ್ಣನವರ ಪರಿಸರಕ್ಕೊಳಪಟ್ಟ ಸಂಗಮೇಶ್ವರ ದೇವಾಲಯ ಪರಿಸರವಾದರೂ ಭಿನ್ನ ಮಾದರಿಯದಾಗ ಬಾರದೆ? ಯಾವುದನ್ನು ಬಸವಣ್ಣನವರು ತಮ್ಮ ಜೀವಿತಾವಧಿಯವರೆಗೆ ನಖಶಿಖಾಂತವಾಗಿ ವಿರೋಧಿಸಿದರೋ, ಅವರ ಪರಿಸರದಲ್ಲಿಯೇ ಮತ್ತೆ ಅದೇ ವೈದಿಕ ಕೊಳೆಕಸ ವಿಜೃಂಭಿಸುತ್ತಿದೆಯೆಂದರೆ ಏನರ್ಥ? ಬಸವಣ್ಣನವರ ಪೇಟೆಂಟ್ ಪಡೆದ ಬೃಹನ್ಮಠದೊಡೆಯರಾದರೂ ಇತ್ತ ಗಮನ ಹರಿಸಬಾರದೆ?

ಇದು ಬಸವಪ್ರಜ್ಞೆ ಇರುವ ಯಾರಿಗಾದರೂ ಕಾಡುವ ಪ್ರಶ್ನೆ. □

## ವಾಸ್ತವ

ಈ ವಿಶ್ವದಲ್ಲಿ ಯಾವುದೇ ವಿಜ್ಞಾನ ಮತ್ತು ಕಲೆ ಒಮ್ಮೆಲೇ ಒಬ್ಬೇ ವ್ಯಕ್ತಿಯಿಂದ ತನ್‌ತಾನಾಗಿ ಹುಟ್ಟಿಕೊಳ್ಳಲಾರದೆಂಬ ಯತಾರ್ಥ ಚಿಂತನೆಯಿಂದ ಅವಲೋಕಿಸಿದಾಗ ಎಲ್ಲವೂ ವ್ಯಕ್ತಿಯಿಂದ ವ್ಯಕ್ತಿಗೆ ವಿಕಾಸವಾಗುತ್ತ ಗಟ್ಟಿಗೊಳ್ಳುತ್ತವೆಂಬುದು ಸತ್ಯ ! ಹಾಗಾದರೆ ಭಾರತೀಯ ಕಲೆಗಳು ಒಬ್ಬೊಬ್ಬೇ ಬ್ರಾಹ್ಮಣ ವ್ಯಕ್ತಿಗಳಿಗೆ ಮೀಸಲಾದದ್ದು ಏಕೆ ? 'ಪುರಾಣ ಅಥವಾ ಕಾವ್ಯಗಳು ಮೊದಲಿಗೆ 'ಸೂತ ಮುನಿ'ಯಿಂದ ರಚಿಸಲ್ಪಟ್ಟವು. ಸೂತ ಎಂದರೆ ಹೀನಕುಲದವ ಎಂದರ್ಥ. ಅವುಗಳನ್ನು ಬ್ರಾಹ್ಮಣರು ಅವರಿಂದ ಬಲಾತ್ಕಾರವಾಗಿ ಕಿತ್ತುಕೊಂಡು ಓಡಿಸಿ ಕ್ರಿ.ಶ. ೧೦೦ ರಿಂದ ಈಚೆ ೧೮ ಪುರಾಣಗಳನ್ನು ಸಂಸ್ಕೃತಕ್ಕೆ ತರ್ಜುಮೆ ಮಾಡಿ ಬ್ರಾಹ್ಮಣ್ಯ ಮತ್ತು ದೈವತ್ವವನ್ನು ತುರುಕಿದರು'.

ಪದ್ಮಾಲಯಾ ನಾಗರಾಜ್

# ಅತಿಕ್ರಮಣ ಸಂಗೀತದ ಹಾದಿ

ಸಂಗೀತ, ಸಾಹಿತ್ಯ, ಶಿಲ್ಪಕಲೆ, ನಾಟ್ಯ, ಚಿತ್ರಕಲೆ ಇವು ಆಯಾ ದೇಶದ ಸಂಸ್ಕೃತಿ ಪರಂಪರೆಗಳನ್ನು ಬಿಂಬಿಸುವ ಮಹತ್ಪೂರ್ಣ ಮಾಧ್ಯಮಗಳು.

ಭಾರತದ ಮಟ್ಟಿಗೆ ಸಂಗೀತ ಕ್ಷೇತ್ರಕ್ಕೆ ನಾರದ ಆದಿಯಾಗಿ ತ್ಯಾಗರಾಜ (೧೭೬೭-೧೮೪೭) ಸ್ವಾಮಿಗಳು ಜನಕ, ಸಾಹಿತ್ಯಕ್ಕೆ ಬಾದರಾಯಣ, ವ್ಯಾಸರು ಪಿತಾಮಹ, ಶಿಲ್ಪಕಲೆಗೆ ವಿಶ್ವಬ್ರಹ್ಮನಾದಿಯಾಗಿ ಜಕಣಾ, ನಾಟ್ಯಕ್ಕೆ ಭರತ ಮಹಾಮುನಿ, ವೈದ್ಯ ಶಾಸ್ತ್ರಕ್ಕೆ ಧನ್ವಂತರಿ, ಯೋಗಶಾಸ್ತ್ರಕ್ಕೆ ಪತಂಜಲಿ ಋಷಿ ತಂದೆ ಎಂದು ಗುರುತಿಸಲಾಗುತ್ತದೆ ! ವಿಜ್ಞಾನ ಮತ್ತು ಕಲೆಯನ್ನು ತೀವ್ರವಾದ ಅತಿಕ್ರಮಣಕಾರಿಯಿಂದ ಹಿಂದೂ ಧರ್ಮವು ತನ್ನ ವ್ಯಾಪ್ತಿಗೆ ಸೇರಿಸಿಕೊಂಡಿದೆ ಎಂಬುದನ್ನು ಇಲ್ಲಿ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬಹುದು. ಇದು ಈ ದೇಶದ ದೊಡ್ಡ ದುರಂತವೂ ಹೌದು. ಇದು ಇತಿಹಾಸ ಮತ್ತು ಚರಿತ್ರೆಯನ್ನು ಸಂಪೂರ್ಣವಾಗಿ ತಿರುಚಿದ, ನಾಶಪಡಿಸಿದ ಸಂಸ್ಕೃತ ಸಾಹಿತ್ಯದ ಉದ್ದೇಶಪೂರ್ವಕ ದಬ್ಬಾಳಿಕೆ.

ಈ ವಿಶ್ವದಲ್ಲಿ ಯಾವುದೇ ವಿಜ್ಞಾನ ಮತ್ತು ಕಲೆ ಒಮ್ಮೆಲೇ ಒಬ್ಬೇ ವ್ಯಕ್ತಿಯಿಂದ ತನ್‌ತಾನಾಗಿ ಹುಟ್ಟಿಕೊಳ್ಳಲಾರದೆಂಬ ಯತಾರ್ಥ ಚಿಂತನೆಯಿಂದ ಅವಲೋಕಿಸಿದಾಗ ಎಲ್ಲವೂ ವ್ಯಕ್ತಿಯಿಂದ ವ್ಯಕ್ತಿಗೆ ವಿಕಾಸವಾಗುತ್ತ ಗಟ್ಟಿಗೊಳ್ಳುತ್ತವೆಂಬುದು ಸತ್ಯ ! ಹಾಗಾದರೆ ಭಾರತೀಯ ಕಲೆಗಳು ಒಬ್ಬೊಬ್ಬೇ ಬ್ರಾಹ್ಮಣ ವ್ಯಕ್ತಿಗಳಿಗೆ ಮೀಸಲಾದದ್ದು ಏಕೆ ?

ಸಂಗೀತವನ್ನೇ ತೆಗೆದು ಕೊಳ್ಳಿ, ನಮ್ಮ ಪುರಾಣಗಳು (ಕ್ರಿ.ಶ. ೧೦೦ ರಿಂದ ಈಚಿನವು) ನಾರದರನ್ನು ಸಂಗೀತದ ಆದಿ ಪುರುಷ ಎಂದು ಗುರ್ತಿಸುತ್ತವೆ. ಚತುರ್ಮುಖ ಬ್ರಹ್ಮನು ಅತಿ ಶೂದ್ರ ಜಾತಿಯ ಅಗಸ (ದೋಬಿ) ಕನ್ಯೆಯೊಂದಿಗೆ ಕೂಡಿಕೊಂಡಾಗ ಉಂಟಾದ ಸಂತಾನವೇ ನಾರದ. ಇದರಿಂದ ಸಂಗೀತವು ಇಲ್ಲಿನ ಮೂಲ ನಿವಾಸಿಗಳ, ಬುಡಕಟ್ಟು ಜನಾಂಗದ ಸ್ವತ್ತೆಂದು ಊಹಿಸಬಹುದಾದರೂ ನಾರದರನ್ನು ದೈವೀಕರಿಸಿ ತ್ರಿಲೋಕ ಸಂಚಾರಿ ಎಂದು ಹೇಳಿ ದಕ್ಷಿಣ ಭಾರತಕ್ಕೆ ತ್ಯಾಗರಾಜರನ್ನು ಶಿಷ್ಟ ಸಂಗೀತ ಸಾಮ್ರಾಜ್ಯದ ಅಭಿನೇತ್ರನನ್ನಾಗಿಸಲಾಯಿತು.

ಸಂಗೀತ ಸಂಬಂಧಿ ಪ್ರಾಚೀನ ಗ್ರಂಥಗಳು ಸಂಗೀತವು ಶಬ್ದದಿಂದ; ಆ ಶಬ್ದದಿಂದ ನಾದವು (ನಿಯಮಿತ ತರಂಗಗಳುಳ್ಳ ಧ್ವನಿ) ಹುಟ್ಟಿತೆಂದು ಆ ನಾದವು ಪ್ರಕೃತಿಯಿಂದ ಹುಟ್ಟಿತೆಂದು ತಿಳಿಸುತ್ತವೆ. ಈ ವ್ಯಾಖ್ಯೆಯನ್ನೇ ಮೂಲವಾಗಿಸಿಕೊಂಡು ಚರ್ಚಿಸಿದಾಗ, ಬೇಟೆಯೇ ಜೀವನೋಪಾಯ ಮಾರ್ಗವಾಗಿಸಿಕೊಂಡ ಆದಿ ಮಾನವ ಬೇಟೆ ಸಿಗದೆ ಹತಾಶನಾದ ಸಂದರ್ಭದಲ್ಲಿ ಅಕಸ್ಮಾತ್ ಪ್ರಾಣಿ ಸಿಕ್ಕಾಗ ಭಾವೋದ್ರೇಕಗೊಂಡು ಕೂಗಾಡಿದ ಶಬ್ದಗಳೇ ಸಂಗೀತದ ಮೂಲವೆಂದು ನಿರ್ಧರಿಸಬಹುದು. ನಾಗರಿಕತೆ ಮತ್ತು ಭಾಷೆ ಬೆಳೆದಂತೆ ಹರಿಯುವ ನದಿಯ ಝುಳು ಝುಳು ನಾದ, ಬೀಸುವ ತಂಗಾಳಿ, ಹಕ್ಕಿಗಳ ಕಲರವ ಅವನ ಮನಸ್ಸನ್ನು ಮೂಕವಿಸ್ಮಿತನನ್ನಾಗಿಸಿ ಅವುಗಳೊಂದಿಗೆ ಅವನು ಧ್ವನಿಗೂಡಿಸಿರಬೇಕು.

ಕಾಲಗರ್ಭದಲ್ಲಿ ಆ ದನಿಯೇ ನಿಖರ ರೂಪದ ರಾಗವನ್ನು ಪಡೆದು ಜನಪದ ಸಂಗೀತವಾಗಿ ರೂಪುಗೊಂಡಿತು. ಸಂಗೀತಕ್ಕೆ ಆದಿ ಪುರುಷ ಜನಪದ !!!. ಈ ಜನಪದಕ್ಕೆ ಯಾವ ಲಿಖಿತ ಆಧಾರ ಅಥವಾ ವಿವೇಚನೆ ಇಲ್ಲ. ಅದು ನೈಸರ್ಗಿಕ ಧರ್ಮಕ್ಕೆ ತುಂಬಾ ಹತ್ತಿರ. ಅದು ಪ್ರತಿಭೆಯ ಮೂಲದಿಂದ ಜನಿಸಿದ್ದು. ಭಾವ ನಿರ್ಭರತೆ ಇದರ ಮುಖ್ಯ ಲಕ್ಷಣ. ಈ ಸಂಗೀತವು ಸಂಗೀತ ಮತ್ತು ನೃತ್ಯಗಳನ್ನು ತನ್ನೊಂದಿಗೆ ಬಳಸಿಕೊಳ್ಳುತ್ತದೆ. ನಮ್ಯತೆ, ತೀವ್ರವಾದ ಆತ್ಮನಿಷ್ಠೆ ಮತ್ತು ಭಾವ ತೀವ್ರತೆ ಇದರ ಮುಖ್ಯ ಗುಣ. ವೀರರ ಕಥೆಗಳು, ಪತಿವ್ರತೆ, ಸಾಧು, ಪಿತೃಗಳು, ಬಲಿಯಾದವರು, ಆತ್ಮಹತ್ಯೆ ಮಾಡಿಕೊಂಡವರು ಇವರೆಲ್ಲರ ಚರಿತ್ರೆಗಳನ್ನು ಗಾನ ರೂಪಕ್ಕೆ ತಂದಿದ್ದು ಜನಪದ ಸಂಗೀತ. ಉದಾ : ಸಾರಂಗಧರ, ಬಾಲನಾಗಮ್ಮ, ಕರಿಬಂಟ ಈ ರೂಪಕಗಳು ಕಷ್ಟವಿಲ್ಲದೇ ಸಹಜ, ಸರಳ ಸುಂದರವಾಗಿ ಸಾರ್ಥಕವಾಗಿ ಇಂಪಾಗಿ ಮೂಡಿಬಂದಿವೆ. ಇದರ ಕಾಲ ೮ ನೇ ಶತಮಾನ. ಇದರ ಮೂಲ ಕರ್ತೃಗಳು ಕಂಸಾಳೆಯವರು, ಚೌಡಿಕೆಯವರು, ಗೊರವ, ಗೊಂದಲಿ ಕರಪಾಲ, ಕಿನ್ನರಿ, ತಂಬೂರಿದಾಸ, ಸಿನ್ನ ಮಾದಿಗ (ಸಿಂದು ಮಾದಿಗ?) ಇವರೆಲ್ಲಾ ದಲಿತರಾಗಿದ್ದರಿಂದಲೋ ಏನೋ ಶಿಷ್ಟ ಸಂಗೀತಕಾರರು ಸಂಗೀತದ

ಮೂಲ ಸಾಮಗ್ರಿಯನ್ನು ಜನಪದದಿಂದ ಅಪಹರಿಸಿದ್ದರೂ ಜನಪದರನ್ನು ಲೇವಡಿ ಮಾಡಿದ ಪ್ರಸಂಗಗಳನ್ನು ಇತಿಹಾಸದಲ್ಲಿ ಕಾಣಬಹುದು.

ಈ ಕಾಲದ ನಂತರ ಸು. ೧೫ನೇ ಶತಮಾನದಲ್ಲಿ ಬಂದಿದ್ದು ಯಕ್ಷಗಾನ ಅಥವಾ ಭಾಗವತ. ಜನಪದದಿಂದ ಪ್ರೇರಣೆ ಪಡೆದು ವಿಕಾಸಗೊಂಡ ಒಂದು ಪ್ರಾಕಾರ. ಇದರ ಕರ್ತೃಗಳು ಹೀನಕುಲದ ನಟುವಾಂಗ, ಸಿನ್ನ ಮಾದಿಗ ಮತ್ತು ವೃತ್ತಿಪರಗಾಯಕ ತಿರುಕರು. ಇವರು ದರವು, ಯಾಲಪದ, ಕಂದ, ಸೀಸಪದ್ಯಗಳನ್ನಾಗಿ ವಿಸ್ತರಿಸಿದರು. ಶಾಸ್ತ್ರೀಯ ಪದ್ಧತಿ ಹುಟ್ಟಿಕೊಂಡಿದ್ದು ಇಲ್ಲೇ ! ಇದಕ್ಕೆ ಎಷ್ಟು ಶಕ್ತಿ ಇದೆ ಎಂದರೆ ಜಡಗೊಂಡ ಭಾವನೆಗಳು ಎದ್ದು ಕುಣಿಯುವಂತೆ ಮಾಡುತ್ತವೆ. ಅಂತರಾಳವನ್ನು ಭಾವಪರವಶಗೊಳಿಸುತ್ತವೆ. ಇಲ್ಲಿ ಭಾವವೇ ಪ್ರಧಾನ. ಇಲ್ಲಿ ರಾಗಕ್ಕೆ ಮಿತಿಯೇ ಇಲ್ಲ, ಅದು ಅಪಾರ. ತೊಗಲುಗೊಂಬೆ ಆಟ, ಸೂತ್ರಬೊಂಬೆ, ಇದರ ಮೂಲಕ ಶ್ರೀ ಕೃಷ್ಣ ಪಾರಿಜಾತ, ಪ್ರಹ್ಲಾದ ಚರಿತ್ರೆಗಳು ಹುಟ್ಟಿದ್ದು ಇಲ್ಲೇ.

ಸಂಸ್ಕೃತ ಸಾಹಿತ್ಯ ರೂಢಿಗೆ ಬರುವುದಕ್ಕಿಂತಲೂ ಮುಂಚೆ ರಾಮಾಯಣ, ಮಹಾಭಾರತವು ಮೌಲ್ಯಾಧಾರಿತ ವ್ಯಕ್ತಿಗಳ ಕಥೆಯ ರೂಪದಲ್ಲಿದ್ದ ಜನಪದ ಗೀತೆಗಳಾಗಿದ್ದವು ಎಂಬುದಕ್ಕೆ ಇತಿಹಾಸದಲ್ಲಿ ಪುರಾವೆಗಳಿವೆ. ಅಷ್ಟೇಕೆ ? ಗದ್ದೆಯಲ್ಲಿ ಪೈರು ನಾಟಿ ಮಾಡುವಾಗ ಮಹಾಕಾವ್ಯಗಳನ್ನು ಅವಿದ್ಯಾವಂತ ಹೆಣ್ಣು ಮಕ್ಕಳು ನೀರು ಕುಡಿದಂತೆ ಹಾಡುತ್ತಿದ್ದದ್ದನ್ನು ನಾವು ಕೇಳಿಲ್ಲವೇ ?...

'ಪುರಾಣ ಅಥವಾ ಕಾವ್ಯಗಳು ಮೊದಲಿಗೆ 'ಸೂತ ಮುನಿ'ಯಿಂದ ರಚಿಸಲ್ಪಟ್ಟವು. ಸೂತ ಎಂದರೆ ಹೀನಕುಲದವ ಎಂದರ್ಥ. ಅವುಗಳನ್ನು ಬ್ರಾಹ್ಮಣರು ಅವರಿಂದ ಬಲಾತ್ಕಾರವಾಗಿ ಕಿತ್ತುಕೊಂಡು ಓಡಿಸಿ ಕ್ರಿ.ಶ. ೧೦೦ ರಿಂದ ಈಚೆ ೧೮



ಯಕ್ಷಗಾನ ಅಥವಾ ಭಾಗವತ ಜನಪದದಿಂದ ಪ್ರೇರಣೆ ಪಡೆದು ವಿಕಾಸಗೊಂಡ ಒಂದು ಪ್ರಾಕಾರ. ಇದರ ಕರ್ತೃಗಳು ಹೀನಕುಲದ ನಟುವಾಂಗ, ಸಿನ್ನ ಮಾದಿಗ ಮತ್ತು ವೃತ್ತಿಪರಗಾಯಕ ತಿರುಕರು. ಇವರು ದರವು, ಯಾಲಪದ, ಕಂದ, ಸೀಸಪದ್ಯಗಳನ್ನಾಗಿ ವಿಸ್ತರಿಸಿದರು. ಶಾಸ್ತ್ರೀಯ ಪದ್ಧತಿ ಹುಟ್ಟಿಕೊಂಡಿದ್ದು ಇಲ್ಲೇ ! ಇದಕ್ಕೆ ಎಷ್ಟು ಶಕ್ತಿ ಇದೆ ಎಂದರೆ ಜಡಗೊಂಡ ಭಾವನೆಗಳು ಎದ್ದು ಕುಣಿಯುವಂತೆ ಮಾಡುತ್ತವೆ. ಅಂತರಾಳವನ್ನು ಭಾವಪರವಶಗೊಳಿಸುತ್ತವೆ. ಇಲ್ಲಿ ಭಾವವೇ ಪ್ರಧಾನ. ಇಲ್ಲಿ ರಾಗಕ್ಕೆ ಮಿತಿಯೇ ಇಲ್ಲ.

**ಸಂಗೀತದ ಮೂಲ ಪರಿಕರಗಳು ಶಿಷ್ಟಕ್ಕೆ ಜಾರಿದ್ದು ಹೀಗೆ...**

| ಜನಪದ | ಶಿಷ್ಟ ಸಂಪ್ರದಾಯ |
|---|---|
| ಏಕನಾದ (ತಂಬೂರಿ) | ಓಂಕಾರನಾದ (ಶ್ರುತಿ ತಂಬೂರಿ) |
| ಕಿನ್ನರಿ | ರುದ್ರವೀಣ (ವೀಣೆ) |
| ಮದ್ದಳೆ | ಮೃದಂಗ |
| ಕಂಗಿಳೆ | ತಾಳ |

ಇನ್ನೂ ಹೇಳಬಹುದು

ಪುರಾಣಗಳನ್ನು ಸಂಸ್ಕೃತಕ್ಕೆ ತರ್ಜುಮೆ ಮಾಡಿದರು. ಬ್ರಾಹ್ಮಣ್ಯ ಮತ್ತು ದೈವತ್ವವನ್ನು ಅದರಲ್ಲಿ ತುರುಕಿದರು'. ...ಇಷ್ಟೊಂದು ಅದ್ಭುತ ಐತಿಹ್ಯವುಳ್ಳ ಭಾಗವತದ ಸಮಕಾಲೀನದಲ್ಲಿಯೇ ದಾಸ ಸಾಹಿತ್ಯ ಹುಟ್ಟಿತು. ಚರಿತ್ರೆ ಮರೆತ ಅದೆಷ್ಟೋ ದಾಸವರೇಣ್ಯರು ಪುರಂದರ ಕನಕ ಸಮೇತರಾಗಿ ಭಾಗವತದಲ್ಲಿದ್ದ ಧರವು-ಮೋಹನ ರಾಗವಾಗಿ, ಸೀಸವು - ಕೇದರಗೌಳ ರಾಗವನ್ನಾಗಿ ಪರಿಷ್ಕರಿಸಿದರು. ಕರ್ನಾಟಕ ಸಂಗೀತಕ್ಕೆ ಸರಳ ಜಂಟಿ ವರಸೆ, ಅಲಂಕಾರ ಬಾಲಪಾಠಗಳು ಈ ಮಹನೀಯರಿಂದ ಹುಟ್ಟಿಕೊಂಡಿತು.

ಮನಸ್ಸಿನಲ್ಲಿ ಎಷ್ಟು ಭಾವನೆಗಳಿವೆಯೋ... ದುಃಖ, ನಿರಾಸೆ, ಕೋಪ, ಆನಂದ, ಕನಿಕರ, ಸಂತಸ, ಹಠ... ಆಯಾ ಭಾವನೆಗಳನ್ನು ಪುಳಕಿತಗೊಳಿಸುವ, ಆ ಭಾವನೆಗಳನ್ನು ಗುರ್ತಿಸುವ, ಉದ್ರೇಕಿಸುವ ರಾಗಾಲಾಪನೆಗಳನ್ನು ಕಂಡು ಹಿಡಿದರು ದಾಸರು. (ದಾಸ ಎಂದರೆ ಸೇವಕ ಅಥವಾ ಗುಲಾಮ). ಇದರ ನಂತರ ಇತ್ತೀಚೆಗೆ ಬಂದದ್ದು ಶಿಷ್ಟ ಶಾಸ್ತ್ರೀಯ ಸಂಗೀತ ಪ್ರಕಾರ. ಇಲ್ಲಿ ಸ್ವರ ಶಡ್ಜ ಋಷಭ, ಗಾಂಧಾರಿ, ಪಂಚಮಗಳು, ತಾಳ ಮೇಳಗಳು, ರಾಗಗಳು ಅನಂತ.... ಭಾವ... ರಾಗ... ಇವೆಲ್ಲವುಗಳಿಗಿಂತ ಇಲ್ಲಿ ವರ್ಣವೇ ಪ್ರಧಾನವಾಯಿತು. ಇದು ಇಲ್ಲಿನ ದುರಾದೃಷ್ಟವೆನ್ನಲು ಅಡ್ಡಿ ಇಲ್ಲ. ಏಕೆಂದರೆ ವರ್ಣ ಎಂದರೆ ಜಾತಿ.. ಜಾತಿ ಎಂದರೆ ನಿರ್ಬಂಧ ! ನಿರ್ಬಂಧ ಎಂದರೆ ಅಸಮಾನತೆ. ರಾಗಗಳಲ್ಲಿಯೂ ಸಮಾನತೆ ಇಲ್ಲ !!! ಇದು ನಿಯಮ !

'ವರ್ಣವೇ ಜಾತಿಯ ಮೂಲ (-ಅಂಬೇಡ್ಕರ್)' ಅದಕ್ಕೆ ಮಾನವೀಯ ಪ್ರಜ್ಞೆ ಅಂಬೇಡ್ಕರ್ ಹೇಳುತ್ತಾರೆ.. 'ಓ ಹಿಂದೂ ಧರ್ಮವೇ ನಿನ್ನ ಮತ್ತೊಂದು ಹೆಸರೇ ಜಾತಿ ಮತ್ತು ಅಸಮಾನತೆ. □

# ಮಾಯದ ಇರುಳು

ಮಾಯದ ಇರುಳು
ಯಾಕಿಷ್ಟು ಮಾಯಿಸುತ್ತಿದೆ
ದೊಡ್ಡ ಇರುಳನ್ನು ಸವೆಸಲು
ಖಾಲಿ ವೈನ್ ಬಾಟಲನ್ನು
ಹಿಂಡಿ ಅಮಲಿಗಾಗಿ
ಹಪ ಹಪಿಸುವಾಗ

ಬೆತ್ತಲ ಆಕಾಶ
ನೆನಪಾಗುತ್ತದೆ.

ತನ್ನ ಬೆತ್ತಲನ್ನು ಮುಚ್ಚಿಕೊಳ್ಳಲು
ನಕ್ಷತ್ರಗಳನ್ನು ಪೋಣಿಸಿಟ್ಟರೂ
ಅಲ್ಲೂ ಬೆತ್ತಲಿಗಾಗಿ
ಜೊಲ್ಲು ಸುರಿಸುವ ಕಿಲಾಡಿತನ !

ಇರುಳಿನಲ್ಲಿ ನಗುವಿನ ಬಣ್ಣ
ಬಯಲಾಗುವುದಿಲ್ಲ
ಎಂಬ ಸಣ್ಣ ಸಮಾಧಾನ !



ಆದರೂ...
ಮಾಯದ ಇರುಳು
ಯಾಕಿಷ್ಟು ಮಾಯಿಸುತ್ತದೆ.

ಬೆನ್ನಿಗಂಟಿರುವ ಗಾಳಿಯ
ಭಾರ ನಿಜಕ್ಕೂ
ಹೊರಲಾಗುತ್ತಿಲ್ಲ.

ಉಮರ್ ಕಯ್ಯಾಂನ ರೂಬಾಯಿಗಳು
ಬೋದಿಲೇಯರ್‌ನ ಉತ್ಕಟ ಕಾವ್ಯ
ಖಾಲಿ ವೈನ್ ಬಾಟಲ್‌ನ
ಅಮಲಿನಂತೆ ಕಾಣುತ್ತಿದೆ.

ಹಾಗಾಗಿ ಮಾಯದ ಇರುಳು
ಮಾಯುವ ಮುನ್ನ
ನಿನ್ನೆಗಳ ಕೇಳುವುದು ಒಂದೇ-
ನಾಳೆಯ ಸೂರ್ಯ ಬೆಳಗಾಗುವುದೆಂದು !

○ ಉಗಮ ಶ್ರೀನಿವಾಸ್

## ವಿಶ್ಲೇಷಣೆ

ಹಿಂದು ಧರ್ಮಕ್ಕೆ ಬುನಾದಿಯಾಗಿರುವ ವೇದ, ವೇದಾಂತ ಹಾಗೆಯೇ ಇತರ ಸನಾತನ ಗ್ರಂಥಗಳು ಬ್ರಾಹ್ಮಣರಿಂದ ರಚಿಸಲ್ಪಟ್ಟವುಗಳು. ಅವುಗಳಲ್ಲಿಯ ಬ್ರಾಹ್ಮಣತ್ವವೇ ಅದರ ಚಾಲನೆಗೆ ದಾರಿ ದೀಪವಾಗಿ ನಿಂತಿವೆ. ಇದರಿಂದಾಗಿ ತಮ್ಮ ಜನಾಂಗದ ಸ್ವಂತಿಕೆ ಎಂಬುದೇ ಇಲ್ಲದಾಗಿದೆ. ಮದುವೆ ಮುಂಜಿ, ಪೂಜೆ ಪುನಸ್ಕಾರಗಳಿಗೆ ಅವರನ್ನೇ ಪುರೋಹಿತರಾಗಿ ಕರೆಯಬೇಕಾಗಿದೆ. ಇದರಿಂದಾಗಿ ತಮ್ಮ ಜಾತಿಗೆ ಮೊದಲು ಒಳಪಟ್ಟಿದ್ದ ಸಂಸ್ಕೃತಿ, ಹಾಗೆಯೇ ಪರಂಪರೆಯಾಗಿ ಬಂದ ಪದ್ಧತಿ ಅಂತೆಯೇ ಇನ್ನಿತರ ಸಂಸ್ಕಾರಗಳು ಈಗ ಮೂಲೆ ಗುಂಪಾಗುತ್ತಾ ಬಂದಿವೆ. ಆದುದರಿಂದ ಅನೇಕ ಶತಮಾನಗಳ ತನಕ ಪಾರಂಪರಿಕವಾಗಿ ನಡೆದು ಬಂದ ತಮ್ಮ ಸ್ವಧರ್ಮವನ್ನು ಪುನಶ್ಚೇತನಗೊಳಿಸುವುದು ಅಗತ್ಯ ಎಂಬುದೇ ಈ ಹೊಸದಾಗಿ ಸ್ಥಾಪಿಸಲ್ಪಟ್ಟ ಶಿವಧರ್ಮದ ಉದ್ದೇಶ.

○ ಪಿ.ಎಂ.ಎನ್.ಮೂರ್ತಿ

# ಶಿವ ಧರ್ಮ

## ಹಿಂದೂ ಧರ್ಮದೊಳಗೊಂದು ಬಂಡಾಯ

ಮಹಾರಾಷ್ಟ್ರದಲ್ಲಿ ಶಿವ ಧರ್ಮ ಎಂಬ ಹೊಸ ಪಂಥವು ಈಗಾಗಲೇ ತಲೆ ಎತ್ತಿ ನಿಂತಿದೆ. ಅದರ ಉದ್ದೇಶ ಮತ್ತು ಈ ಉದ್ದೇಶಗಳ ಸಾಧನೆಗಳಿಗೆ ಅದರ ಮುಖಂಡರು ನಿರ್ಧರಿಸಿರುವ ಕ್ರಮಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅದೊಂದು ಹೊಸ ಮತ ಎಂದು ಹೇಳುವುದರ ಬದಲು ಅದು ಹಿಂದು ಧರ್ಮದ ಒಂದು ಉಪಧರ್ಮವಾಗಿದೆ ಎಂಬ ಭಾವನೆಯು ಒಡಮೂಡುತ್ತದೆ. ಶಿವಾಜಿ ಮಹಾರಾಜರ ತಾಯಿ ಜೀಜಾಬಾಯಿ ಮಹಾರಾಷ್ಟ್ರದ ಮರಾಠಿ ಪಂಗಡಕ್ಕೆ ಸೇರಿದವರು. ಅವರು ಜನ್ಮ ತಾಳಿದ್ದು ಇಂದಿನ ಮಹಾರಾಷ್ಟ್ರದ ಉಸ್ಮಿನಾಬಾದಿನಲ್ಲಿ. ಅವರ ಈ ಜನ್ಮ ಸ್ಥಳದಲ್ಲೇ ಈ ಮತ ಮೊದಲಿಗೆ ಪ್ರಾರಂಭವಾಯಿತು. ಈ ಮತಕ್ಕೆ ಸೇರಿದವರು 'ಜೈಜಾನ್' ಎಂದು ಒಬ್ಬರಿಗೆ ಒಬ್ಬರು ವಂದಿಸಿಕೊಳ್ಳುವುದು ಈಗ ಇವರಲ್ಲಿ ರೂಢಿಯಾಗಿ ಬಂದಿದೆ.

**ಈ ಧರ್ಮದ ಜನನಕ್ಕೆ ಕಾರಣವೇನು ?**

ಈ ಮತಾವಲಂಬಿಗಳ ಪ್ರಕಾರ ಹಿಂದು ಮತವು ಜೀವನದ ಒಂದು ಕ್ರಮ. ಆದರೆ ಈ ಮತಕ್ಕೆ ಬುನಾದಿಯಾಗಿರುವ ವೇದ, ವೇದಾಂತ ಹಾಗೆಯೇ ಇತರ ಸನಾತನ ಗ್ರಂಥಗಳು ಬ್ರಾಹ್ಮಣರಿಂದ ರಚಿಸಲ್ಪಟ್ಟವುಗಳು. ಅವುಗಳಲ್ಲಿಯ ಬ್ರಾಹ್ಮಣತ್ವವೇ ಅದರ ಚಾಲನೆಗೆ ದಾರಿ ದೀಪವಾಗಿ ನಿಂತಿವೆ. ಇದರಿಂದಾಗಿ ತಮ್ಮ ಜನಾಂಗದ ಸ್ವಂತಿಕೆ ಎಂಬುದೇ ಇಲ್ಲದಾಗಿದೆ. ಮದುವೆ ಮುಂಜಿ ಹಾಗೆಯೇ ಇನ್ನಿತರ ಪೂಜೆ ಪುನಸ್ಕಾರಗಳಿಗೆ ಅವರನ್ನೇ ಪುರೋಹಿತರಾಗಿ ಕರೆಯಬೇಕಾಗಿದೆ. ಇದರಿಂದಾಗಿ ತಮ್ಮ ಜಾತಿಗೆ ಮೊದಲು ಒಳಪಟ್ಟಿದ್ದ ಸಂಸ್ಕೃತಿ, ಹಾಗೆಯೇ ಪರಂಪರೆಯಾಗಿ ಬಂದ ಪದ್ಧತಿ ಅಂತೆಯೇ ಇನ್ನಿತರ ಸಂಸ್ಕಾರಗಳು ಈಗ ಮೂಲೆ ಗುಂಪಾಗುತ್ತಾ ಬಂದಿವೆ. ಆದುದರಿಂದ ಅನೇಕ ಶತಮಾನಗಳ ತನಕ ಪಾರಂಪರಿಕವಾಗಿ ನಡೆದು ಬಂದ ತಮ್ಮ ಸ್ವಧರ್ಮವನ್ನು ಪುನಶ್ಚೇತನಗೊಳಿಸುವುದು ಅಗತ್ಯ ಎಂಬುದೇ ಈ ಹೊಸದಾಗಿ ಸ್ಥಾಪಿಸಲ್ಪಟ್ಟ ಶಿವಧರ್ಮದ ಉದ್ದೇಶವೆಂಬುದು ಅದರ ಮುಖಂಡರ ವಾದ.

ಪುರೋಹಿತರ ನೆಲೆಯಲ್ಲಿ ಧರ್ಮ ಕರ್ಮಗಳನ್ನು ಆಚರಣೆ ಮಾಡಲು ಭಾರಿ ಖರ್ಚಾಗುತ್ತದೆ. ಆಡಂಬರದ ಪ್ರದರ್ಶನಗಳಿಂದ ಯಾವುದನ್ನೂ ಸಾಧಿಸುವಂತಾಗುವುದಿಲ್ಲ. ಅನಾವಶ್ಯವಾಗಿ ಖರ್ಚು ಮಾಡುವುದು ತಮ್ಮ ಧರ್ಮದ ಕ್ರಮವಾಗಬಾರದು. ಪುರೋಹಿತರು ಮಂತ್ರಗಳನ್ನು ಸಂಸ್ಕೃತದಲ್ಲಿ ಉಚ್ಚರಿಸುವುದರಿಂದ ಈ ಮಂತ್ರಗಳ ತಾತ್ಪರ್ಯವೇನು ಎಂಬುದು ಕೂಡಾ ತಮ್ಮ ಜನಗಳಿಗೆ ಅರ್ಥವಾಗುವುದಿಲ್ಲ. ಅರ್ಥವಾಗದ ಕಾರ್ಯ ನಿರ್ವಹಣೆ ಬರೇ ವ್ಯರ್ಥದ ಅನುಷ್ಠಾನ. ತಾವು ನಡೆಸುವ ಕರ್ಮಗಳ ವಿಧಿಯೇನು ಎಂದು ಮನವರಿಕೆ ಮಾಡಿಕೊಳ್ಳಲು ತಮ್ಮ ಭಾಷೆಯಲ್ಲೇ ಈ ಮಂತ್ರ ಹಾಗೆಯೇ ಶ್ಲೋಕಗಳನ್ನು ಉಚ್ಚರಿಸುವ ಕ್ರಮವು ಅಸ್ತಿತ್ವಕ್ಕೆ ಬರಬೇಕು ಎಂಬುದೇ ಈ ಹೊಸ ಮತದ ಸ್ಥಾಪನೆಗೆ ಮೂಲಕಾರಣ.

ಅದರ ಉದ್ದೇಶಕ್ಕೆ ಪೂರಕವಾಗಿ ಸಾಮೂಹಿಕ ವಿವಾಹಗಳನ್ನು ಆಚರಣೆಗೆ ತಂದಿದ್ದಾರೆ. ಸಂಸ್ಕೃತದಲ್ಲಿರುವ ಮಂತ್ರಗಳನ್ನು ಮರಾಠಿ ಭಾಷೆಗೆ ಭಾಷಾಂತರ ಮಾಡಲು ವ್ಯವಸ್ಥೆಯನ್ನು ಮಾಡಲಾಗಿದೆ. ಶ್ರೀಪುರ ಎಂಬಲ್ಲಿರುವ ದೇವಸ್ಥಾನವು ಈ ಮರಾಠರ ನೇತೃತ್ವದಲ್ಲಿ ನಡೆಯುವ ಒಂದು ಜೀವಾಳವಾಗಿತ್ತು. ಇತ್ತೀಚೆಗಿನವರೆಗೆ ಅಲ್ಲಿಯ ನಿತ್ಯ ಪೂಜೆಯು ಬ್ರಾಹ್ಮಣ ಪುರೋಹಿತರಿಂದಲೇ ನಡೆಸಲ್ಪಡುತ್ತಿತ್ತು. ಅದರ ಕ್ರಮಗಳು ಈ ಪಂಗಡದ ಜನರಿಗೆ ತೃಪ್ತಿಯಾಗದ ಕಾರಣ ಈ ನಿತ್ಯ ಪೂಜೆ ನಡೆಸುವ ಕಾರ್ಯವನ್ನು ತಾವೇ ವಹಿಸಿಕೊಂಡಿದ್ದಾರೆ. ಹಿಂದಿನ ಪುರೋಹಿತರನ್ನು ಅವರ ಊರಿಗೆ ಕಳುಹಿಸಲಾಗಿದೆ. ಈ ದೇವಸ್ಥಾನದ ಪೂಜಾ ವಿಧಿಗಳನ್ನು ಈ ಜನಾಂಗದ ವ್ಯಕ್ತಿಗಳೇ ನಡೆಸಲು ಶುರು ಮಾಡಿದ ನಂತರ ಅದರಿಂದಾಗಿ ಅನಾಹುತಗಳೇನೂ ಉಂಟಾಗಲಿಲ್ಲ. ಆದುದರಿಂದ ದೇವರಿಗೆ ಕೋಪ ಬಂದಿಲ್ಲ ಎಂಬುದು ಸ್ಪಷ್ಟ ಎಂದುಕೊಂಡು ತಮ್ಮ ಈ ಬದಲಾವಣೆಯ ಕ್ರಮವನ್ನು ಸಮರ್ಥಿಸುತ್ತಾರೆ. ಅಂತಹ ಸಮರ್ಥನೆಯು ಸರಿಯಲ್ಲ ಎಂಬುದಕ್ಕೆ ಯಾವ ಕಾರಣವೂ ಇಲ್ಲ.

**ಈ ಧರ್ಮದ ಸ್ಥಾಪನೆಯ ಆರಂಭ :** ೧೯೮೮ರಲ್ಲಿ ಈ ಅಭಿಪ್ರಾಯಗಳನ್ನು ಮೈಗೂಡಿಸಿಕೊಂಡ ಈ ಮರಾಠಿ ವಿಭಾಗಕ್ಕೆ ಸೇರಿದ ಕೆಲವರು ತುಳುಜಾಪುರದಲ್ಲಿ ಒಂದು ಸಮಾವೇಶವನ್ನು ನಡೆಸಿದರು. ಹಲವಾರು ವಿದ್ಯಾವಂತರು ಕೂಡಾ ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ಚರ್ಚೆ ನಡೆಯಿತು. ಹಿಂದು ಧರ್ಮದ ಗ್ರಂಥಗಳನ್ನು ಪೂರ್ಣವಾಗಿ ನಂಬದ ವೈಚಾರಿಕತೆಗೆ ಹೊಂದುವಂತೆ ಒಂದು ಸಿದ್ಧಾಂತವನ್ನು ಕಲ್ಪಿಸಿ ತಮ್ಮ ಸಮಾಜದ ಏಳಿಗೆಗೆ ಅದನ್ನು ಅಳವಡಿಸಿಕೊಂಡು ಪ್ರಗತಿಯನ್ನು ಸಾಧಿಸಲು ಯತ್ನಿಸಬೇಕು ಎಂಬುದೇ ಈ ಸಮಾವೇಶದಲ್ಲಿ ಕೈಗೊಂಡ ತೀರ್ಮಾನ. ಈ ತೀರ್ಮಾನದ ಫಲಿತಾಂಶವಾಗಿ ೧೯೯೦ರಲ್ಲಿ ಮರಾಠಿ ಸೇವಾ ಸಂಘ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯ ಸ್ಥಾಪನೆಗೆ ಮಹಾರಾಷ್ಟ್ರ ಸರ್ಕಾರದ ಪಿಡಬ್ಲ್ಯೂಡಿ ಇಲಾಖೆಯ ಇಂಜಿನಿಯರ್ ಆಗಿದ್ದು ಆಗ ತಾನೇ ನಿವೃತ್ತಿ ಹೊಂದಿದ ಪುರುಶೋತ್ತಮ ಖಾಡೇಕಾರ ಎಂಬುವವರೆ ಹರಿಕಾರರಾಗಿದ್ದರು.

ಕೆಲವೇ ಸಮಯದಲ್ಲಿ ಈ ಸಂಘಕ್ಕೆ ಬಹಳಷ್ಟು ಮಂದಿ ಸೇರಿದರು. ಮರಾಠಿ ಜನಾಂಗದ ಹೊರಗಿನವರು ಕೂಡಾ ಈ ಸಂಘಕ್ಕೆ ಸೇರಲು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು. ನಮ್ಮ ದೇಶದಲ್ಲಿ ೬೦೦೦ ಮುಖ್ಯ ಜಾತಿಗಳಿವೆ. ಅವುಗಳಲ್ಲಿ ೭೨ ಸಾವಿರ ಉಪಜಾತಿಗಳಿವೆ. ಇವರೆಲ್ಲರೂ ಹಿಂದೂಗಳು ಎಂದು ಲೆಕ್ಕ. ಹಿಂದೂಯಿಸಂ ಎಂಬುದು ವೇದ,

ವೇದಾಂತ ಇತ್ಯಾದಿ ಬ್ರಾಹ್ಮಣರಿಂದ ರಚಿಸಲ್ಪಟ್ಟ ಧರ್ಮ ಗ್ರಂಥಗಳಿಂದ ಆವರಿಸಲ್ಪಟ್ಟ ಒಂದು ಮತ. ಈ ಮತವನ್ನು ಬರೇ ಜೀವನ ದಾರಿ ಎಂದು ಕರೆದರೆ ತಪ್ಪಾಗಲಾರದು. ಜೀವನದ ದಾರಿಗಳು ಒಂದೇ ಆಗಬೇಕೆಂದಿಲ್ಲ. ಕಾಲ ಕಳೆದಂತೆ ಹತ್ತಾರು ದಾರಿಗಳು ಕವಲೊಡೆದಿವೆ.

ಮರಾಠಿ ಪಂಗಡಕ್ಕೆ ಸೇರಿದವರಲ್ಲದೆ ಇತರ ಪಂಗಡಗಳ ಜನರೂ ಈ ಸಂಘಕ್ಕೆ ಸೇರಲು ಇಚ್ಛಿಸುವ ಕಾರಣ ಈ ಸಂಘವನ್ನು ಬದಲಾಯಿಸಿ ಅದನ್ನು ಒಂದು ಧರ್ಮದ ನೆಲೆಯಲ್ಲೇ ನಿಲ್ಲಿಸಲು ಅದರ ಮುಖಂಡರು ತೀರ್ಮಾನಿಸಿದರು. ಈ ಧರ್ಮಕ್ಕೆ ಶಿವಧರ್ಮ ಎಂದು ನಾಮಕರಣ ಮಾಡಲಾಯಿತು. ಬ್ರಾಹ್ಮಣರನ್ನು ಹೊರತುಪಡಿಸಿ ಇತರ ಜಾತಿ ಪಂಗಡಗಳ ವ್ಯಕ್ತಿಗಳಿಗೆ ಈ ಧರ್ಮವನ್ನು ಸೇರಲು ಅವಕಾಶ ನೀಡಲಾಯಿತು. ಅದನ್ನು ಇನ್ನಷ್ಟು ವಿಶಾಲಗೊಳಿಸಲು ಮುಸ್ಲಿಮರಿಗೂ ಈ ಧರ್ಮದ ಬಾಗಿಲು ತೆರದೇ ಇದೆ. ಆದರೆ ಹೀಗೆ ಸೇರುವ ವ್ಯಕ್ತಿಗಳು ಪಂಗಡಗಳು ತಮ್ಮ ಪ್ರತ್ಯೇಕವಾದ ಧರ್ಮದ ನೀತಿ, ಸಂಸ್ಕೃತಿ ಹಾಗೆಯೇ ಕಟ್ಟುಕಟ್ಟಳೆಗಳನ್ನು ಈ ಶಿವ ಧರ್ಮದೊಳಗೆ ತರಕೂಡದು, ಬದಲು ಶಿವಧರ್ಮದ ಸಿದ್ಧಾಂತ ಹಾಗೆಯೇ ಅದರ ನೀತಿ ನಿಯಮಗಳಿಗೆ ಅವರು ಸದಾ ಬದ್ಧರಾಗಿರಬೇಕು.

ನಮ್ಮ ರಾಷ್ಟ್ರದಲ್ಲಿ ಬ್ರಾಹ್ಮಣ ಹಾಗೂ ಕ್ಷತ್ರಿಯರ ಮೇಲ್ಮೆಯು ಇಡೀ ಹಿಂದೂ ಸಮಾಜವನ್ನು ಆಕ್ರಮಿಸಿದ ಕಾಲವೊಂದಿತ್ತು. ನಮ್ಮ ಪುರಾಣಗಳೇ ಇದಕ್ಕೆ ಸಾಕ್ಷಿ. ಆದರೆ ಈಗಾಗಲೇ ಅದರಲ್ಲಿ ಅನೇಕ ಬದಲಾವಣೆಗಳಾಗಿವೆ. ಈ ಬದಲಾವಣೆಗಳಿಗೆ ಮಹಾತ್ಮ ಗಾಂಧಿ, ಡಾ|| ಅಂಬೇಡ್ಕರ್ ಮತ್ತು ವಾಮ ಪಂಥದ ಚಳವಳಿಗಳೇ ಕಾರಣ. ರಾಜಕೀಯ ಬದಲಾವಣೆಗಾಗಿ ಮಹಾತ್ಮಾ ಗಾಂಧೀಜಿಯವರು, ಸಾಮಾಜಿಕ ಬದಲಾವಣೆಗಾಗಿ ಅಂಬೇಡ್ಕರ್‌ರು ಹಾಗೆಯೇ ಆರ್ಥಿಕ ಸ್ಥಿತಿಯ ಬದಲಾವಣೆಗಾಗಿ ಎಡಪಂಥ ವಾದಿಗಳು ಅವರೊಡನೆ ಇತರ ಪುರೋಗಾಮಿ ವ್ಯಕ್ತಿ ಪಕ್ಷ ಪಂಗಡಗಳು ನಡೆಸಿದ ಚಳವಳಿ, ಹೋರಾಟಗಳೇ ಈ ಬದಲಾವಣೆಗೆ ಮುಖ್ಯ ಕಾರಣಗಳು. ನಮ್ಮ ರಾಷ್ಟ್ರದಲ್ಲಿ ಜಾತಿ ಜಾತಿಗಳಲ್ಲಿಯ ವೈಶಮ್ಯವೇ ನಮ್ಮ ದುರ್ಗತಿಗೆ ಕಾರಣ.

ಒಟ್ಟಾರೆಯಾಗಿ ೬೦೦೦ ಮುಖ್ಯ ಜಾತಿಗಳು, ೭೨ ಸಾವಿರ ಉಪಜಾತಿಗಳು ಇವೆಯಂತೆ. ಇನ್ನು ಲೆಕ್ಕ ತಪ್ಪಿದ ಜಾತಿಗಳು ಎಷ್ಟು ಇವೆಯೋ. ಜನಗಣತಿಯ ಆಯೋಗ ದಿಂದ ಕೂಡಾ ಇವುಗಳ ಸಂಖ್ಯೆಯನ್ನು ಖಚಿತವಾಗಿ ನಿರ್ಧರಿಸಲು ಸಾಧ್ಯವಾಗಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಡುಪಿ ಜಿಲ್ಲೆಯೂ ಸೇರಿ ಬ್ರಾಹ್ಮಣರಲ್ಲೇ ೧೩ ಪಂಗಡಗಳು ಇವೆಯಂತೆ.

**ಶಿವಧರ್ಮದ ಕಾರ್ಯಕ್ರಮಗಳು**

ರಾಷ್ಟ್ರದಲ್ಲಿರುವ ಎಲ್ಲಾ ಸಮಾಜಗಳನ್ನು ಸಮಾನತೆಯಿಂದ ಕಾಣಬೇಕು. ಜಾತಿ ಪದ್ಧತಿಯನ್ನು ನಿರ್ಮೂಲನ ಮಾಡಬೇಕು. ಈ ಹೊಸ ಧರ್ಮದ ಅಧೀನತೆಯಲ್ಲಿದ್ದು ಕ್ರಿಯಾಶೀಲವಾಗಿರಬೇಕಾದ ಸ್ವಯಂ ಸೇವಕ ಸಂಘವನ್ನು ಈಗಾಗಲೇ ಅಸ್ತಿತ್ವಕ್ಕೆ ತರಲಾಗಿದೆ. ಪುರುಷರ ಸ್ವಯಂ ಸೇವಕ ಸಂಘಕ್ಕೆ ಸಾಂಬಾಜಿ ಬ್ರಿಗೇಡ್ ಎಂದು ಹೆಸರಿಡಲಾಗಿದೆ. ಮಹಿಳೆಯರ ಸ್ವಯಂ ಸೇವಕ ಸಂಘ ಸಮಾಜದಲ್ಲಿಯ ಕೆಳಮಟ್ಟದಲ್ಲಿಯ ಮಹಿಳೆಯರು ಹಾಗೆಯೇ ಅವರ ಮಕ್ಕಳನ್ನು ವಿದ್ಯಾರ್ಜನೆಯ ಪ್ರಕ್ರಿಯೆಗೆ ಒಳಪಡಿಸುವುದು, ಸಾಧ್ಯವಾದಷ್ಟು ಮಟ್ಟಿಗೆ ಸ್ವಯಂ ಉದ್ಯೋಗಗಳನ್ನು ಒದಗಿಸುವುದು, ಅದಕ್ಕಾಗಿ ಅವರನ್ನು ತರಬೇತಿಗೊಳಿಸುವುದು ಹಾಗೆ



ಜ್ಯೋತಿ ಬಾ ಪುಲೆ

ಮಹಿಳೆಯರಿಗೆ ತಮ್ಮ ಕಾಲುಗಳ ಮೇಲೆಯೇ ನಿಲ್ಲುವ ಸಾಧ್ಯತೆಗಳನ್ನು ಗಳಿಸಿಕೊಡುವುದು, ಈ ಮಹಿಳೆಯ ಪಡೆಯ ಉದ್ದೇಶ. ಇದನ್ನು ಜೀಜಾಬಾಯಿ ಬ್ರಿಗೇಡ್ ಎಂದು ಹೆಸರಿಸಲಾಗಿದೆ.

ಸಾಂಬಾಜಿ ಪಡೆಯು ಸ್ವಯಂ ಸೇವಕರು ತಮ್ಮ ಧರ್ಮದ ಕಾರ್ಯ ವ್ಯವಹಾರಗಳಲ್ಲಿ ಭಾಗಿಯಾಗಿ ಅವುಗಳನ್ನು ಸಾಂಗವಾಗಿ ನಡೆಸುವ ಮುಂಚೂಣಿಗರಾಗಿಬೇಕು. ತಮ್ಮ ಹಬ್ಬ ಹುಣ್ಣಿಮೆಗಳಲ್ಲೂ ಬದಲಾವಣೆಯನ್ನು ಅವರೀಗ ಮಾಡುತ್ತಿದ್ದಾರೆ. ದಸರಾ ಹಬ್ಬವನ್ನು ಪವಿತ್ರಬಾಯಿ ಪೂಲೆ (ಪೂಲೆಯವರ ಧರ್ಮಪತ್ನಿಯವರ ಹೆಸರಿನಲ್ಲಿ) ಹಾಗೆಯೇ ದೀಪಾವಳಿ ದಿನಗಳ ಆಚರಣೆಗಳನ್ನು ಶಿವ ಜಯಂತಿ ಎಂದು ಆಚರಿಸಲಾಗುವುದು.

ಮಹಾರಾಷ್ಟ್ರದಲ್ಲಿ ಸತ್ಯನಾರಾಯಣ ಪೂಜೆಗೆ ಬಹಳಷ್ಟು ಮಹತ್ವ ಕೊಡಲಾಗುತ್ತದೆ. ಈ ಪೂಜೆ ನಿಜವಾಗಿಯೂ ನಾವಿಕರ, ಹಾಗೆ ಅವರ ನಾವೆಯ ರಕ್ಷಣೆಗಾಗಿ ಮಾಡುವ ಒಂದು ವ್ರತ. ಈ ಪೂಜೆಯ ಸಮಯದಲ್ಲಿ ಓದಲಾಗುವ ಪುಸ್ತಕದ ಕಥೆಗಳ ಅಂಶಗಳಿಂದ ಇದು ಸ್ಪಷ್ಟವಾಗುತ್ತದೆ. ಈ ಪೂಜೆ ಆಚರಣೆಗೆ ಬಂದು ಈಗ್ಗೆ ಬರೇ ೫೦೦ ವರ್ಷಗಳಾಗಿರಬಹುದು ಎಂದು ವಿದ್ವಾಂಸ ಡಿ.ಡಿ. ಕೊಸಾಂಬಿಯವರು ಹೇಳಿದ್ದು ಈ ನಿಟ್ಟಿನಲ್ಲಿ ಸರಿಯೆಂದು ತೋರುತ್ತದೆ. ಈ ಪೂಜೆಗೆ ಬ್ರಾಹ್ಮಣರ ಪುರೋಹಿತ ಅಗತ್ಯ. ಆದರೆ ಈ ಶಿವಧರ್ಮದವರು ಈ ಪೂಜೆಯನ್ನು ಕೈಬಿಡಲು ನಿರ್ಧರಿಸಿದ್ದಾರೆ.

ಜೀಜಾಬಾಯಿಯೇ ಈ ಧರ್ಮದ ದೇವತೆಯ ಪ್ರತೀಕ. ಈ ಧರ್ಮಕ್ಕೆ ಒಂದು ಪೀಠವನ್ನು ರೂಪಿಸಲಾಗುವುದು. ಈ ಪೀಠದ ಸ್ಥಾಪನೆ ಹಾಗೂ ಅದರಿಂದಾಗಬೇಕಾದ ಮುಂದಿನ ಕಾರ್ಯಕ್ರಮಗಳಿಗೆ ೧೧ ಸಾವಿರ ಕೋಟಿ ರೂಪಾಯಿಗಳ ಸಂಗ್ರಹಕ್ಕೆ ಈಗಾಗಲೇ ಶುರುವಾಗಿದೆ.

**ಮಹಾತ್ಮಾ ಪೂಲೆಯವರ ಕಡೆಗೆ ಅವರ ಹಿನ್ನೋಟ**

ಹಿಂದು ಧರ್ಮದಲ್ಲಿಯ ವರ್ಣಾಶ್ರಮ ಕ್ರಮವು ಜನ ಸಾಮಾನ್ಯರ ಏಳಿಗೆಗೆ ಅಹಿತವಾಗಿದೆ. ಜನ ಸಾಮಾನ್ಯರ ಸುಧಾರಣೆ ಆದರೆ ಮಾತ್ರ ನಮ್ಮ ರಾಷ್ಟ್ರವು ಬಲಾಢ್ಯವಾಗಿ ಅಭಿವೃದ್ಧಿ ಹೊಂದಲು ಸಾಧ್ಯ. ಈ ನಿಜಾಂಶವನ್ನು ಮೊದಲಿಗೆ ಜನಸಮುದಾಯಕ್ಕೆ ಬೋಧಿಸಿದವರು ಮಹಾತ್ಮ ಪೂಲೆ ಮತ್ತು ಕೊಲ್ಲಾಪುರದ ಚಕ್ರವರ್ತಿ ಸಾಹುಮಹಾರಾಜ. ಅಂದೇ ಅವರು ಮಹಿಳೆಯರ ವಿದ್ಯಾಭ್ಯಾಸಕ್ಕೆ ಬಹಳಷ್ಟು ಮಹತ್ವ ನೀಡಿದ್ದರು. ಚಿಕ್ಕ ಮಕ್ಕಳ ಪೋಷಣೆಯು ಅವರ ತಾಯಿಯನ್ನು ಆದರಿಸುತ್ತದೆ. ವಿದ್ಯೆಯುಳ್ಳ ಮಹಿಳೆಗೆ ಮಕ್ಕಳನ್ನು ಸೂಕ್ತ ಕ್ರಮಗಳಿಂದ ಸರಿಯಾಗಿ ತಿದ್ದಿ ಬೆಳೆಸಲು ಸಾಧ್ಯ ಎಂಬ ಸರಿಯಾದ ನಿಲುವು ಅವರದ್ದು. ಈ ದೃಷ್ಟಿಯಲ್ಲಿ ಅವರು ಸತಿ ಸಹಗಮನವನ್ನು ಕಟುವಾಗಿ ವಿರೋಧಿಸಿದ್ದರು. ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದ್ದರು. ಮೂಢನಂಬಿಕೆಗಳಿಗೆ ಸಮಾಜದಲ್ಲಿ ಎಡೆ ಇರಬಾರದು. ಅತೀ ಹಿಂದುಳಿದ ವಿಭಾಗದ ಜನರಿಗೆ ಮೀಸಲಾತಿ ಕ್ರಮ ಅಗತ್ಯ ಎಂಬುದೇ ಅವರ ತತ್ವದ ಕೆಲವು ಮುಖ್ಯಾಂಶಗಳು.

ಹೀಗೆ ಹಿಂದುಳಿದ ಜನಾಂಗವನ್ನು ಪ್ರೋತ್ಸಾಹಿಸಿ ಅವರ ಅಭಿವೃದ್ಧಿಗೆ ಚಾಲನೆ ನೀಡಲು ನಡೆಸಿದ ಪ್ರಯತ್ನಗಳನ್ನು ಅವುಗಳು ಬ್ರಾಹ್ಮಣ ವಿರೋಧವಾದ ಕ್ರಮಗಳೆಂದು ಕೆಲವರು ಟೀಕಿಸಿದ್ದರು. ತಾವು ಹುಟ್ಟಿನಿಂದ ಹಿಡಿದು ಸಾಯುವ ತನಕ ಈ ಬ್ರಾಹ್ಮಣ್ಯದ ಸಂಪ್ರದಾಯಗಳಿಗೆ ಗುಲಾಮರಾಗಿಯೇ ಇರಬೇಕೇ? ಎಂಬುದು ಈ ಟೀಕೆಗಳಿಗೆ ಅವರ ಸಮಂಜಸವಾದ ಉತ್ತರವಾಗಿತ್ತು. ಈ ವಿಭಾಗದ ಜನರ ಕೊರಗನ್ನು ಅರಿತ ಗಾಂಧೀಜಿಯವರು ಅವರನ್ನು ಹರಿಜನರೆಂದು ಕರೆದರು. ಅವರ ನಿವಾಸಗಳಲ್ಲೇ ಅನೇಕ ಸಾರಿ ವಾಸಿಸಿದರು. ರಾಷ್ಟ್ರಕ್ಕೆ ಸ್ವತಂತ್ರ ಸಿಕ್ಕಿದರೆ ಸಾಲದು ಈ ಸ್ವತಂತ್ರ ಈ ಜನರಿಗೂ ಆಶ್ರಯವಾಗಿ ಬರಬೇಕು ಎಂಬುದು ಅವರ ಅಂತರ್ಯದ ನಿಷ್ಠೆಯಾಗಿತ್ತು.

ಈ ಕುರಿತು ಕೊರಗಿದ ಇನ್ನೊರ್ವ ಮಹಾವ್ಯಕ್ತಿ ಅಂಬೇಡ್ಕರರು. ಅವರು ತನ್ನ ಈ ಉದ್ದೇಶಕ್ಕಾಗಿ ತನ್ನ ಜೀವವನ್ನೇ ಸವೆಸಿದರು. ಆದರೆ ಈ ಮಹಾತ್ಮರ ತ್ಯಾಗ ಪ್ರಯತ್ನಗಳು ಇನ್ನೂ ಕೂಡಾ ಸಂಪೂರ್ಣವಾಗಿ ಫಲಕಾರಿಯಾಗಿರುವುದಿಲ್ಲ

**ಹಿಂದೂಯಿಸಂ ಎಂಬುದು ವೇದ, ವೇದಾಂತ ಇತ್ಯಾದಿ ಬ್ರಾಹ್ಮಣರಿಂದ ರಚಿಸಲ್ಪಟ್ಟ ಧರ್ಮ ಗ್ರಂಥಗಳಿಂದ ಆವರಿಸಲ್ಪಟ್ಟ ಒಂದು ಮತ. ಈ ಮತವನ್ನು ಬರೇ ಜೀವನ ದಾರಿ ಎಂದು ಕರೆದರೆ ತಪ್ಪಾಗಲಾರದು. ಜೀವನದ ದಾರಿಗಳು ಒಂದೇ ಆಗಬೇಕೆಂದಿಲ್ಲ. ಕಾಲ ಕಳೆದಂತೆ ಹತ್ತಾರು ದಾರಿಗಳು ಕವಲೊಡೆದಿವೆ. ಮರಾಠಿ ಪಂಗಡಕ್ಕೆ ಸೇರಿದವರಲ್ಲದೆ ಇತರ ಪಂಗಡಗಳ ಜನರೂ ಸೇರಿ ಶಿವಧರ್ಮ ಎಂಬ ಹೊಸ ಪಂಥವನ್ನು ಸ್ಥಾಪಿಸಿದ್ದಾರೆ. ಬ್ರಾಹ್ಮಣರನ್ನು ಹೊರತುಪಡಿಸಿ ಇತರ ಜಾತಿ ಪಂಗಡಗಳ ವ್ಯಕ್ತಿಗಳಿಗೆ ಈ ಧರ್ಮವನ್ನು ಸೇರಲು ಅವಕಾಶ ನೀಡಲಾಯಿತು. ಅದನ್ನು ಇನ್ನಷ್ಟು ವಿಶಾಲಗೊಳಿಸಲು ಮುಸ್ಲಿಮರಿಗೂ ಈ ಧರ್ಮದ ಬಾಗಿಲು ತೆರದೇ ಇದೆ. ಆದರೆ ಹೀಗೆ ಸೇರುವ ವ್ಯಕ್ತಿಗಳು ಪಂಗಡಗಳು ತಮ್ಮ ಪ್ರತ್ಯೇಕವಾದ ಧರ್ಮದ ನೀತಿ, ಸಂಸ್ಕೃತಿ ಹಾಗೆಯೇ ಕಟ್ಟುಕಟ್ಟಳೆಗಳನ್ನು ಈ ಶಿವ ಧರ್ಮದೊಳಗೆ ತರಕೂಡದು, ಬದಲು ಶಿವಧರ್ಮದ ಸಿದ್ಧಾಂತ ಹಾಗೆಯೇ ಅದರ ನೀತಿ ನಿಯಮಗಳಿಗೆ ಅವರು ಸದಾ ಬದ್ಧರಾಗಿರಬೇಕು.**

ರಾಷ್ಟ್ರದ ಸ್ವಾತಂತ್ರ್ಯದಿಂದ ಇತರ ವಿಭಾಗದ ಹಿಂದುಗಳಿಗೆ ದೊರೆತ ಸ್ವಾತಂತ್ರ್ಯ ದಲಿತರಿಗೆ ಇನ್ನೂ ಸಂಪೂರ್ಣವಾಗಿ ದೊರೆತಿಲ್ಲ ಎಂಬುದು ಎಲ್ಲರೂ ಒಪ್ಪತಕ್ಕ ವಿಷಯ.

ಆದರೆ ಇತ್ತೀಚೆಗೆ ರಾಷ್ಟ್ರದಲ್ಲಿ ಒಂದು ಹೊಸ ರಾಜಕೀಯ ಪದ್ಧತಿ ಬೆಳೆದುಬಂದಿದೆ. ವರ್ಣಾಶ್ರಮ ಪದ್ಧತಿಯನ್ನು ವೈಭವೀಕರಿಸುವ, ಕರ್ಮಸಿದ್ಧಾಂತವನ್ನು ಸಮರ್ಥಿಸುವ (ಇಹಲೋಕದಲ್ಲಿ ಉತ್ತಮನಾಗಿ, ಜೀವನವನ್ನು ಸಾಗಿಸಿದರೆ ಬರುವ ಜನ್ಮದಲ್ಲಿ ಉತ್ತಮ ಜಾತಿಯಲ್ಲಿ ಜನ್ಮ ತಾಳಬಹುದು ಎಂಬ ಹುರುಳಿಲ್ಲದ ಭರವಸೆ) ಪಕ್ಷ ಹಾಗೂ ಅದರ ಪರಿವಾರದ ಸಂಘಟನೆಗಳು ಅಸ್ತಿತ್ವಕ್ಕೆ ಬಂದಿವೆ. ಇದುವೇ ಸಂಘ ಪರಿವಾರ. ಅವರ ಈ ತತ್ವಗಳನ್ನು ಕಲ್ಪಿಸಿದವರು ಆರ್‌ಎಸ್‌ಎಸ್‌ನ ಎರಡನೇಯ ಗುರುಗಳಾದ ಗೋಳ್ವಾಳಕರರು. ಇವರಿಗೆ ದಲಿತರ ಮೇಲೆ ಹಗೆ ಇದೆ. ಪೇಶ್ವೆಯವರನ್ನು ಸೋಲಿಸಲು ಸಹಾಯಕರಾದದ್ದು ಬ್ರಿಟಿಷರು ಸಂಘಟಿಸಿದ ದಲಿತರ ಸೇನಾ ವಿಭಾಗದಿಂದ ಎಂಬುದೇ ಅವರ ಹಗೆತನಕ್ಕೆ ಕಾರಣ.

> **ಶಿವಧರ್ಮಗಳಂತಹ ಹೊಸ ಮತಗಳು ಜನ್ಮ ತಾಳಲು ಸಂಘ ಪರಿವಾರದ ಉದ್ದೇಶ ಹಾಗೂ ಕಾರ್ಯಾಚರಣಗಳೇ ಕಾರಣ. ಇದರಿಂದ ಜಾತಿಗಳ ಹಾಗೆಯೇ ಮತಗಳ ಸಂಖ್ಯೆ ಬೆಳೆಯುತ್ತದೆ ಎಂದಾದರೂ ಇನ್ನೊಂದೆಡೆಯಲ್ಲಿ ಕೋಮುವಾದವನ್ನು ಅಂದರೆ ಬ್ರಾಹ್ಮಣತ್ವದ ವಾದವನ್ನು ಹರಡಲು ಸ್ವಲ್ಪ ತಡೆಯಾಗುವುದು ಸ್ವಾಭಾವಿಕ. ಆದರೆ ಇಂತಹ ಪ್ರತ್ಯೇಕತೆಯಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಜಾತಿಜಾತಿ ಆಧಾರಗಳಲ್ಲಿ ಮತ ಕೂಟ, ಸಂಘ ಸಂಸ್ಥೆಗಳನ್ನು ನಿರ್ಮಿಸಿ ಅವುಗಳ ಮೂಲಕ ತಮ್ಮ ಅಭಿವೃದ್ಧಿಗೆಂದು ಹೋರಾಟ ನಡೆಸುವ ಬದಲು ಎಲ್ಲಾ ಶೋಷಿತ ವಿಭಾಗದವರು ತಾವೇ ಒಂದು ವರ್ಗದವರು ಎಂಬುದನ್ನು ಮನಗಂಡು ಐಕ್ಯತೆಯಿಂದ ಈ ಹೋರಾಟಗಳನ್ನು ನಡೆಸಿದರೆ ಮಾತ್ರ ದುರದೃಷ್ಟತನದಿಂದ ಬಳಲುವ ಕೋಟ್ಯಾನು ಕೋಟಿ ಜನರಿಗೆ ಮುಕ್ತಿ ದೊರೆಯಲು ಸಾಧ್ಯ.**

ಆದ ಕಾರಣವೇ ನಮ್ಮ ಸಂವಿಧಾನದಲ್ಲಿ ದಲಿತರಿಗೆ ಮೀಸಲಾತಿ ನೀಡುವ ಪ್ರಸ್ತಾಪ ಬಂದಾಗ ಅದರ ಸದಸ್ಯರು ಅದನ್ನು ಕಟುವಾಗಿ ವಿರೋಧಿಸಿದ್ದರು. ಖಾಸಗೀ ವಲಯಗಳಲ್ಲಿ ಈ ದಲಿತರಿಗೆ ಸ್ಥಾನಗಳ ಕಾಯ್ದಿರಿಸುವ ಪ್ರಶ್ನೆ ಬಂದಾಗ ಅದನ್ನೂ ಘಂಟಾಘೋಷವಾಗಿ ಅವರು ವಿರೋಧಿಸಿದರು. ಖಾಸಗೀ ರಂಗವೆಂದರೆ ಅದು ಯಾರದೋ ಒಂದು ಸ್ವಂತ ಸೊತ್ತಲ್ಲ. ಅದು ಕೂಡಾ ರಾಷ್ಟ್ರದ ಸಂಪತ್ತು. ಹಾಗೆಯೇ ಸೊತ್ತುಗಳ ಒಂದು ಭಾಗ. ಆದುದರಿಂದ ಈ ಹಿಂದುಳಿದವರ ಒಳಿತಿಗಾಗಿ ಅವರಿಗೂ ಅವಕಾಶ ದೊರೆಯಬೇಕೆಂಬ ಅಪೇಕ್ಷೆಯನ್ನು ಅವರು ಉಪೇಕ್ಷಿಸಿದರು.

ಸಂಘ ಪರಿವಾರದ ಮೂಲ ತತ್ವವೆಂದರೆ ಹಿಂದು ಧರ್ಮದಲ್ಲಿರುವ ಸನಾತತ್ವ ಹಾಗೆಯೇ ಕೆಲವು ವಿಧಿವಿಚಾರಗಳ ಕುರಿತು ಭ್ರಮೆಯನ್ನು ಉಂಟು ಮಾಡಿ ತಮ್ಮ ಅಧಿಕಾರವನ್ನು ಇಡೀ ಜನ ಸಮುದಾಯದ ಮೇಲೆ ಹೊಗಿಸುವುದು. ಇತ್ತೀಚೆಗೆ ಅವರು ಅಧಿಕಾರಕ್ಕೆ ಬಂದೊಡನೆ ಅವರು ಮೊದಲು ಕೈಗೊಂಡ ಕೆಲಸವೆಂದರೆ ನಮ್ಮ ಪ್ರಜಾಪ್ರಭುತ್ವದ ಸಂವಿಧಾನವನ್ನು ಸರ್ವಾಧಿಕಾರದ ಅಧ್ಯಕ್ಷರ ಆಡಳಿತದ ಕ್ರಮಕ್ಕೆ ಬದಲಾಯಿಸಲು ಯತ್ನಿಸಿದ್ದರು. ಇತಿಹಾಸವನ್ನೇ ತಿದ್ದಿ ಬರೆದರು. ಮುಸಲೋನಿ ಹಾಗೂ ಹಿಟ್ಲರರನ್ನು ತಮ್ಮ ಇಷ್ಟ ದೇವರುಗಳಾಗಿ ಸ್ವೀಕರಿಸಿದ್ದರು. ಕೇಂದ್ರೀಯ ಶಾಲೆಯ ಇತಿಹಾಸ ಪುಸ್ತಕದಲ್ಲಿ ಹಿಟ್ಲರರನ್ನು ಮಹಾ ಪರಾಕ್ರಮಿ ಎಂದು ಸಂಭೋದಿಸಿದ್ದು, ಗುಜರಾತಿನ ಹೈಸ್ಕೂಲುಗಳಿಗಾಗಿ ತಯಾರಿಸಿದ ಪಠ್ಯಪುಸ್ತಕದ ಕಡೆಯ ಪುಟದಲ್ಲಿ ರಾಷ್ಟ್ರಕ್ಕಾಗಿ ದುಡಿದ ೧೭ ಮಂದಿಯ ಭಾವ ಚಿತ್ರವನ್ನು ಅಚ್ಚುಹಾಕಿಸಿ, ಅದರಲ್ಲಿ ಗಾಂಧಿ ನೆಹರುರವರ ಭಾವಚಿತ್ರಕ್ಕೆ ಎಡೆ ನೀಡದ್ದು ಅವರ ಪ್ರತಿಗಾಮಿತ್ವದ ಮನಸ್ಸಿನ ಸಂಕೇತವಾಗಿದೆ.

ನಿಜವಾಗಿಯೂ ಬ್ರಾಹ್ಮಣತ್ವಕ್ಕೆ ಅಂಟಿಕೊಂಡಿರುವ ಈ ಪಕ್ಷದ ಮುಖಂಡರು ಸಮಾಜದ ಕೆಳದರ್ಜೆಯ ಜನರ ಅಭಿವೃದ್ಧಿಗೆ ಎಂದಿಗೂ ಪ್ರೋತ್ಸಾಹ ನೀಡರು. ಕಾರಣ ಈ ವಿಭಾಗದ ಜನರ ಸ್ಥಿತಿ ಉತ್ತಮಗೊಂಡರೆ ಮನುಸ್ಮೃತಿಯು ಹೇಳಿದಂತೆ ಈ ಮೇಲ್ವರ್ಗದ ಸೇವೆಗೆ ಜನ ಸಿಗುವುದೇ ಸಾಧ್ಯವಿಲ್ಲ. ಆದುದರಿಂದ ಅವರ ಸ್ಥಿತಿಯನ್ನು ನಿರ್ಗತಿಕತನದಲ್ಲೇ ಸ್ಥಗಿತಗೊಳಿಸುವುದು ಅಗತ್ಯ ಎಂಬುದೇ ಅವರ ಸಿದ್ಧಾಂತ. ಈ ಸಿದ್ಧಾಂತಕ್ಕೆ ಅವರಿಗೆ ಮನುಸ್ಮೃತಿಯ ಸಮರ್ಥನೆ ದೊರಕಿದೆ.

ಸಂಘ ಪರಿವಾರದವರ ಕೋಮುವಾದ ಬರೇ ಮುಸ್ಲಿಮ ಮತ್ತು ಕ್ರೈಸ್ತರಿಗಷ್ಟೇ ಸೀಮಿತವಾಗಿಲ್ಲ ಅದು ಹಿಂದುಗಳಲ್ಲಿ ಹಿಂದುಳಿದ ವರ್ಗದವರಿಗೂ ಅನ್ವಯವಾಗುವ ಒಂದು ಅಭಿಯಾನ. ಹಿಂದು ರಾಷ್ಟ್ರವೆಂದರೆ ಸನಾತನ ಹಿಂದು ಧರ್ಮದ ಮೂಲಗಳ ಆಧಾರಗಳಲ್ಲಿ ನಡೆಸಲ್ಪಡುವ ಒಂದು ರಾಜ್ಯ ವ್ಯವಸ್ಥೆ. ಅವರ ಆರ್ಗನೈಸರ್, ಪಾಂಚಜನ್ಯ, ಪುರಾತನತ್ವ ಎಂಬಿತ್ಯಾದಿ ಪತ್ರಿಕೆಗಳನ್ನು ಓದಿದರೆ ಅದು ಖಚಿತವಾಗುವುದು. ಅವರ ಈ ತತ್ವಗಳಿಗೆ ಫ್ಯಾಸಿಸ್ಟ್ ಮತ್ತು ನಾಝಿ ಸಿದ್ಧಾಂತಗಳೇ ಒಳತಿರುಳು.

**ಜನಸಾಮಾನ್ಯರ ಕರ್ತವ್ಯ**

ಇಂತಹ ಪರಿಸ್ಥಿತಿಯಲ್ಲಿ ನಮ್ಮ ರಾಷ್ಟ್ರವನ್ನು 'ಹಿಂದೂ ರಾಷ್ಟ್ರ' ಪ್ರತಿಪಾದಕರಿಂದ ರಕ್ಷಿಸುವುದು ಜನಸಾಮಾನ್ಯರ ಆದ್ಯ ಕರ್ತವ್ಯವಾಗಿ ಬಂದಿದೆ. ಶಿವಧರ್ಮಗಳಂತಹ ಹೊಸ ಮತಗಳು ಜನ್ಮ ತಾಳಲು ಈ ಸಂಘ ಪರಿವಾರದ ಉದ್ದೇಶ ಹಾಗೂ ಕಾರ್ಯಾಚರಣಗಳೇ ಕಾರಣ. ಇದರಿಂದ ಒಂದು ರೀತಿಯಲ್ಲಿ ಜಾತಿಗಳ ಹಾಗೆಯೇ ಮತಗಳ ಸಂಖ್ಯೆ ಬೆಳೆಯುತ್ತದೆ ಎಂದಾದರೂ ಇನ್ನೊಂದೆಡೆಯಲ್ಲಿ ಈ ಕೋಮುವಾದವನ್ನು ಅಂದರೆ ಬ್ರಾಹ್ಮಣತ್ವದ ವಾದವನ್ನು ಹರಡಲು ಸ್ವಲ್ಪ ತಡೆಯಾಗಿ ಬರುವುದು ಸ್ವಾಭಾವಿಕ.

ಆದರೆ ಇಂತಹ ಪ್ರತ್ಯೇಕತೆಯಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಬದಲು ಜಾತಿಜಾತಿ ಆಧಾರಗಳಲ್ಲಿ ಮತ ಕೂಟ, ಸಂಘ ಸಂಸ್ಥೆಗಳನ್ನು ನಿರ್ಮಿಸಿ ಅವುಗಳ ಮೂಲಕ ತಮ್ಮ ಅಭಿವೃದ್ಧಿಗೆಂದು ಹೋರಾಟ ನಡೆಸುವ ಬದಲು ಎಲ್ಲಾ ಶೋಷಿತ ವಿಭಾಗದವರು ತಾವೇ ಒಂದು ವರ್ಗದವರು ಎಂಬುದನ್ನು ಮನಗಂಡು ಐಕ್ಯತೆಯಿಂದ ಈ ಹೋರಾಟಗಳನ್ನು ನಡೆಸಿದರೆ ಮಾತ್ರ ಅದರಿಂದ ದುರದೃಷ್ಟತನದಿಂದ ಬಳಲುವ ಕೋಟ್ಯಾನುಕೋಟಿ ಜನರಿಗೆ ಮುಕ್ತಿ ದೊರೆಯಲು ಸಾಧ್ಯ. ಇದನ್ನು ಆಚರಣೆಗೆ ತರುವುದೇ ಇಂದಿನ ಮುಖ್ಯ ಧ್ಯೇಯವಾಗಬೇಕು. □


# ಸಂವಾದ

## ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ



ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

# ಸಮಾಜವಾದದ ಮುಂದಿನ ದಾರಿಗಳು

## ಕಿಶನ್ ಪಟ್ನಾಯಕ್‌ರ ಒಂದು ಚಿಂತನೆ

ಸಮಾಜವಾದ ಒಂದು ರಮ್ಯ ಪರಿಕಲ್ಪನಾತ್ಮಕ ಚಿಂತನೆಯಷ್ಟೇ ಅಲ್ಲ, ಕಾರ್ಯಸಾಧ್ಯವಾದ ಸಿದ್ಧಾಂತವೂ ಹೌದು. ಅದೊಂದು ಸುದೀರ್ಘ ಪಯಣ. ಅಲ್ಪ ಕಾಲಾವಧಿಯಲ್ಲಿ ಜಾರಿಗೊಳ್ಳಬಹುದಾದ ತತ್ವ ಅದಲ್ಲ. ಅಂಥ ಆತುರದ ಪ್ರಯತ್ನಗಳು ಸಮಾಜವಾದದ ಆಶಯಗಳನ್ನು ಪೂರೈಸದೇ ಹೋಗಿವೆ. ಈ ಪಯಣದ ದಾರಿಯನ್ನು ಸುಗಮಗೊಳಿಸಿಕೊಳ್ಳಲಾಗದವರು ಅದರ ಗುರಿ ತಲುಪದೆ ಹೋಗಿದ್ದಾರೆ. ಅದರ ಪ್ರಯೋಜನಗಳನ್ನು ಪಡೆಯದೇ, ನೀಡದೇ ಹೋಗಿದ್ದಾರೆ. ೧೯೭೭ ರವರೆಗೆ ಭಾರತದಲ್ಲಿ ಸಮಾಜವಾದೀ ಪಕ್ಷ ಪ್ರಾಯೋಗಿಕವಾಗಿ ಅಸ್ತಿತ್ವದಲ್ಲಿತ್ತು. ಅಧಿಕಾರ ರಾಜಕೀಯ ಪ್ರವೇಶಿಸದೆ, ಪ್ರಭಾವೀ ಒತ್ತಡ ಶಕ್ತಿಯಾಗಿ, ನೈತಿಕ ನೆಲೆಯಲ್ಲಿ ಕಾರ್ಯನಿರ್ವಹಿಸುವುದು ಅದರ ಆಶಯವಾಗಿತ್ತು. ಇದರಿಂದಾಗಿ ಅಧಿಕಾರದಲ್ಲಿರುವವರ ನೈತಿಕ ಮಟ್ಟವನ್ನೂ ಹೆಚ್ಚಿಸಬಹುದೆಂಬುದು ಅದರ ನಂಬಿಕೆಯೂ ಆಗಿತ್ತು.

ಯಾವುದೇ ಸಂದರ್ಭದಲ್ಲಿ, ಯಾವುದೇ ದೇಶದಲ್ಲಿ, ಜನಸಾಮಾನ್ಯರ ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆಗಳ ವೆಚ್ಚ ಹೆಚ್ಚುತ್ತಾ ಹೋದಂತೆ ಜನರು ಸುಮ್ಮನಿರುವುದಿಲ್ಲ, ಪ್ರತಿಭಟನೆಯ ದಾರಿ ತುಳಿಯುತ್ತಾರೆ. ಎಲ್ಲ ಸಂದರ್ಭಗಳಲ್ಲೂ ಅವರು ಮೌನ ವಹಿಸುತ್ತಾರೆ ಎನ್ನುವುದು ತಪ್ಪು. ಶೋಷಣೆಯು ಅತಿಯಾದಂತೆ ಪ್ರತಿಭಟಿಸುವ ಶಕ್ತಿಗಳೂ ಸಂಘಟಿತಗೊಳ್ಳುತ್ತವೆ. ಈ ಸತ್ಯವೇ ಶೋಷಣೆಯ ವಿರುದ್ಧ ಪ್ರತಿಭಟನೆಗೆ ಸಜ್ಜಾಗುವ ಶಕ್ತಿಗಳಿಗೆ ಪ್ರೇರಣೆ ಕೂಡ.

ಇಂಥ ಸಂದರ್ಭಗಳಲ್ಲಿ ಸ್ಥಿತಿವಂತರು ಮತ್ತು ಶಿಕ್ಷಿತರು ಪ್ರತಿಭಟಿಸುವ ಶಕ್ತಿಗಳೊಂದಿಗೆ ಕೈಜೋಡಿಸಬೇಕು. ಇಲ್ಲವಾದರೆ ಅರಾಜಕತೆ ಆವರಿಸುತ್ತದೆ. ವಿನಾಶ ಕಾಲಿರಿಸುತ್ತದೆ. ಅಲ್ಲಿ ಯಾರಿಗೂ ನೆಮ್ಮದಿ ಇರಲು ಸಾಧ್ಯವಿಲ್ಲ. ಇಂಥ ಬೆಂಬಲ ನೀಡುವುದು ನಾಗರಿಕ ಸೌಲಭ್ಯಗಳಿಂದ ವಂಚಿತವಾದ ದೂರದ ಊರಿನ ಜನರಿಗೆ ಸಾಧ್ಯವಾಗದೇ ಹೋಗಬಹುದು. ಚಾಮರಾಜನಗರದಂತಹ ಅಂಚಿನ ಪ್ರದೇಶದ ಯುವಕರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ಸಂತೋಷ. ಬದುಕಿನ ಅನಿವಾರ್ಯತೆಗಳಿಂದಾಗಿ ಅಲ್ಲಿನ ಜನರಿಗೆ ಆರಂಭದಲ್ಲಿ ಅಂಥ ಬೆಂಬಲ ನೀಡುವುದು ಕಷ್ಟವಾಗಬಹುದು. ಆದರೆ ಸುಸ್ಥಿತಿಯಲ್ಲಿರುವವರಿಗೆ ಇದು ಸುಲಭ. ಆದ್ದರಿಂದ ಪ್ರತಿಭಟನೆ ಅಥವಾ ಪ್ರತಿಭಟನೆಗೆ ಬೆಂಬಲಿಸುವ ಧೋರಣೆ ಸುಸ್ಥಿತಿಯ ಯುವಕರಿಂದ, ಜನರಿಂದ ಆರಂಭವಾಗಬೇಕು.

ಅನ್ಯಾಯಕ್ಕೆ ಒಳಗಾದ ಜನ ಪ್ರತಿಭಟಿಸುವಾಗ ಅವರನ್ನು ಬೆಂಬಲಿಸದೆ ಸುಮ್ಮನಿರುವುದು ಶಿಕ್ಷಿತ ಜನರ ಲಕ್ಷಣವಲ್ಲ. ಅಂಥವರ ಶಿಕ್ಷಣ ನಿಷ್ಪ್ರಯೋಜನವೂ ಹೌದು. ಸುಸ್ಥಿತಿಯಲ್ಲಿರುವವರು ಶೋಷಿತರ ಶೋಷಣೆಯನ್ನು ತಪ್ಪಿಸಲು ಏನನ್ನಾದರೂ ಮಾಡಲೇಬೇಕು. ಅಂಥ ಗುಣ ಕೂಡ ಸಹಜವಾಗಿ ಎಲ್ಲರಲ್ಲೂ ಇರುತ್ತದೆ. ಸಮಾಜದಲ್ಲಿರುವ ಎಲ್ಲರೂ ಹೇಡಿಗಳಲ್ಲ, ಶೋಷಣೆಯ ಬೆಂಬಲಿಗರಲ್ಲ. ಅಂಥವರನ್ನು ಸಂಘಟಿಸುವ ಪ್ರಯತ್ನ ಮಾಡಬೇಕು. ಆಗ ಅನ್ಯಾಯದ ವಿರುದ್ಧ ಪ್ರತಿಭಟಿಸುವ ಸಾಮೂಹಿಕ ಶಕ್ತಿಯನ್ನು ಸೃಷ್ಟಿಸಿದಂತಾಗುತ್ತದೆ. ಅನ್ಯಾಯವಾದರೂ ನಿರಂತರವಾದುದು, ಸರ್ವವ್ಯಾಪ್ತಿಯಾದುದು. ಅದು ದೂರದ ಚಾಮರಾಜನಗರದಂಥ ಊರಿನಲ್ಲಾಗಬಹುದು. ಕುದುರೆಮುಖ ಬೆಟ್ಟ ಪ್ರದೇಶದಂತಹ ಕಾಡಿನಲ್ಲಾಗಬಹುದು. ಅನ್ಯಾಯದ ಮೂಲಗಳು ಮತ್ತು ಮಾರ್ಗಗಳು ಲಕ್ಷಾಂತರ. ಇವುಗಳನ್ನು ಗುರುತಿಸುವ ಕೆಲಸವನ್ನು ನಾವು ಮಾಡ ಬೇಕು. ಶೋಷಣೆಯ ಮಾರ್ಗಗಳನ್ನು, ಮೂಲಗಳನ್ನು ಗುರುತಿಸಿ ಪಟ್ಟಿ ಮಾಡಿಕೊಂಡರೆ ಪ್ರತಿಭಟಿಸುವ ಕ್ರಮಗಳನ್ನು ಕೈಗೊಳ್ಳುವುದು ಸುಲಭ. ಶೋಷಣೆ ಕೂಡ ಹೊಸ ಆವಿಷ್ಕಾರಗಳನ್ನು ಹೊಂದುತ್ತಲೇ ಇರುತ್ತದೆ. ಅದಕ್ಕೆ ಪ್ರತಿಯಾಗಿ ನ್ಯಾಯ ಪಡೆಯುವ ಮಾರ್ಗಗಳನ್ನು ನಾವು ಪುನರ್ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ನಮ್ಮ ಸಿದ್ಧಾಂತವನ್ನು ಹೊಸ ಬೆಳಕಿನಲ್ಲಿ ಪರಿಷ್ಕರಿಸಿಕೊಳ್ಳಬೇಕಾಗುತ್ತದೆ. ಬದಲಾದ ಪರಿಸ್ಥಿತಿಗಳಿಗನುಗುಣವಾಗಿ ಇದು ಸತತವಾಗಿ ನಡೆಯಬೇಕು.

ಅನ್ಯಾಯದ ಸಂದರ್ಭಗಳಲ್ಲಿ ನಾವು ಕೈಗೊಳ್ಳಬೇಕಾದ ಕ್ರಮಗಳನ್ನು ಲೋಹಿಯಾರವರು ಸೆಣಸು, ಸೃಷ್ಟಿಸು ಮತ್ತು ರಾಜಕೀಯಗೊಳಿಸು (combat, construct and politicise) ಎನ್ನುವ ಮೂರು ಶಬ್ದಗಳಲ್ಲಿ ಸೂಚಿಸುತ್ತಾರೆ. ಅನ್ಯಾಯದ ವಿರುದ್ಧ ಪ್ರತಿಭಟಿಸಿ ಜೈಲು ಸೇರುವುದು, ಜನ ಸಂಘಟನೆಯ ಮೂಲಕ ಅಭಿವೃದ್ಧಿಯನ್ನು ಸ್ಥಾಪಿಸುವುದು ಮತ್ತು ಜನಮತದ ಮೂಲಕ ರಾಜಕೀಯ ಪ್ರಜ್ಞೆಯನ್ನು ಜಾಗೃತಿಯಲ್ಲಿಡುವ ಅವರ ಈ ಸೂಚನೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲ ಕಾಲಕ್ಕೂ ಒಪ್ಪುವಂಥವುಗಳು. ಪ್ರತಿಭಟಿಸುವ ಶಕ್ತಿಯಾಗಿ ರೂಪುಗೊಂಡವರು ರಾಜಕೀಯದಿಂದ ಓಟ ಕೀಳಬೇಕಾಗಿಲ್ಲ. ಸದ್ಯದ ವ್ಯವಸ್ಥೆಯಲ್ಲಿ ಬದುಕನ್ನು ಕಟ್ಟಲು ಇರುವುದು ಅದೊಂದೇ ಮಾರ್ಗ. ಅದುವೇ ನ್ಯಾಯಯುತ ದಾರಿ.

ಶೋಷಣೆಯ ವಿರುದ್ಧದ ಮೌಲ್ಯಗಳನ್ನು ಕಾನೂನಾಗಿಸಲು ಮತ್ತು ಆ ಮೂಲಕ ಶೋಷಣಾರಹಿತವಾದ ಸಂಬಂಧಗಳನ್ನು ಸೃಷ್ಟಿಸಲು ಪ್ರತಿಯೊಬ್ಬ ಸಮಾಜವಾದಿ ತನ್ನ ಸಿದ್ಧಾಂತವನ್ನು ರಾಜಕೀಯಗೊಳಿಸಲೇಬೇಕು. ಹಾಗಾಗಿ ಅವನು ರಾಜಕೀಯದಲ್ಲಿ ಪಾಲ್ಗೊಳ್ಳುವುದು ಅನಿವಾರ್ಯ. ಆದರೆ ಮಂತ್ರಿಯಾಗಬೇಕೆನ್ನುವ ಆತುರವಿರಬಾರದು. ಈ ಆತುರ ಕಾಂಗ್ರೆಸ್ಸಿಗರಂತೆ ಕಮ್ಯುನಿಷ್ಟರಲ್ಲಿ ಮತ್ತು ಬಿಜೆಪಿಯವರಲ್ಲಿ ಇರಲಿಲ್ಲ.

ರಾಜಕೀಯ ಅಧಿಕಾರ ಒಂದು ಗಂಭೀರ ವಿಷಯ. ಅದು ಕಾಡು ಕುದುರೆಯಿದ್ದಂತೆ. ವಿವೇಚನೆಯಿಲ್ಲದೆ ಅದನ್ನೇರಿ ಕುಳಿತರೆ ಅದು ಅದರಿಚ್ಛೆಯಂತೆ ಎಲ್ಲಿಗೋ ಕೊಂಡೊಯ್ಯುತ್ತದೆ. ಆದ್ದರಿಂದ ಸಮಾಜವಾದಿಗಳು ಅಧಿಕಾರ ನಿರ್ವಹಿಸದೆ ರಾಜಕೀಯಗೊಳ್ಳುವ ಕ್ರಮಗಳಲ್ಲಿ ತೊಡಗಬೇಕು. ಇಂದಿನ ಪರಿಸ್ಥಿತಿಯಲ್ಲಿ ಒಮ್ಮೆ ಅಧಿಕಾರ

### ಚಿಂತನೆ

ಯಾವುದೇ ಸಂದರ್ಭದಲ್ಲಿ, ಯಾವುದೇ ದೇಶದಲ್ಲಿ, ಜನಸಾಮಾನ್ಯರ ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆಗಳ ವೆಚ್ಚ ಹೆಚ್ಚುತ್ತಾ ಹೋದಂತೆ ಜನರು ಸುಮ್ಮನಿರುವುದಿಲ್ಲ. ಪ್ರತಿಭಟನೆಯ ದಾರಿ ತುಳಿಯುತ್ತಾರೆ. ಶೋಷಣೆ ಅತಿಯಾದಂತೆ ಪ್ರತಿಭಟಿಸುವ ಶಕ್ತಿಗಳೂ ಸಂಘಟಿತಗೊಳ್ಳುತ್ತವೆ. ಸುಸ್ಥಿತಿಯಲ್ಲಿರುವವರು ಶೋಷಿತರ ಶೋಷಣೆಯನ್ನು ತಪ್ಪಿಸಲು ಏನನ್ನಾದರೂ ಮಾಡಲೇಬೇಕು. ಅಂಥ ಗುಣ ಕೂಡ ಸಹಜವಾಗಿ ಎಲ್ಲರಲ್ಲೂ ಇರುತ್ತದೆ. ಸಮಾಜದಲ್ಲಿರುವ ಎಲ್ಲರೂ ಹೇಡಿಗಳಲ್ಲ. ಶೋಷಣೆಯ ಬೆಂಬಲಿಗರಲ್ಲ. ಅಂಥವರನ್ನು ಸಂಘಟಿಸುವ ಪ್ರಯತ್ನ ಮಾಡಬೇಕು. ಆಗ ಅನ್ಯಾಯದ ವಿರುದ್ಧ ಪ್ರತಿಭಟಿಸುವ ಸಾಮೂಹಿಕ ಶಕ್ತಿಯನ್ನು ಸೃಷ್ಟಿಸಿದಂತಾಗುತ್ತದೆ.

○ ಅನು : ಜಿ.ಎನ್. ಮಲ್ಲಿಕಾರ್ಜುನ

ಹಿಡಿದರ, ಮಂತ್ರಿಯಾದರ, ಅವನೆಷ್ಟೇ ಜಾಗರೂಕನಾಗಿದ್ದರೂ ಹಾಳಾಗಿಯೇ ತೀರುತ್ತಾನೆ. ಆದ್ದರಿಂದ ರಾಜಕೀಯದಲ್ಲಿದ್ದೂ ಅಧಿಕಾರ ಹೊಂದದೆ, ಮಂತ್ರಿಯಾಗಲು ಹಪಹಪಿಸದೆ ಇರುವುದು ಸಮಾಜವಾದಿ ರಾಜಕಾರಣಿಗಳ ಇಂದಿನ ಅಗತ್ಯವಾಗಿದೆ.

ಇಂದು ಭಾರತವನ್ನು ಒಳಗೊಂಡಂತೆ ಇತರೆ ದೇಶಗಳಲ್ಲಿನ ಶೋಷಣೆಯ ವಿಧಾನಗಳು ನೂರಾರು. ಆದರೆ ಶೋಷಿಸುವ ವರ್ಗ ಯಾವತ್ತೂ ಒಂದೇ ಆಗಿರುವುದರಿಂದ ಅವರ ವಿವಿಧ ಮಾರ್ಗಗಳಲ್ಲಿ ಸಾಮ್ಯತೆ ಇದ್ದೇ ಇರುತ್ತದೆ. ಭಾರತದ ಸಂದರ್ಭದಲ್ಲಿ ಶೋಷಣೆಯ ಈ ಮಾರ್ಗಗಳನ್ನು (instruments of exploitation) ಹೀಗೆಂದು ಗುರುತಿಸಬಹುದು. ೧. ಜಾಗತೀಕರಣ, ೨. ಜಾತಿ ಪದ್ಧತಿ, ೩. ಜನಾಂಗೀಯ ತಾರತಮ್ಯ, ೪. ಸಾಂಸ್ಕೃತಿಕ ಸರ್ವಾಧಿಕಾರ, ೫. ಲಿಂಗ ತಾರತಮ್ಯ, ೬. ಕೇಂದ್ರೀಕರಣ ೭. ಪ್ರಾಕೃತಿಕ ಪರಿಸರ ವಿನಾಶ ೮. ತಂತ್ರಜ್ಞಾನ ೯. ಆಧ್ಯಾತ್ಮಿಕ ಗೊಂದಲ.

ಜಗತ್ತಿನಾದ್ಯಂತ ಇಂದು ವ್ಯಾಪಿಸುತ್ತಿರುವ ಜಾಗತೀಕರಣ ಶೋಷಣೆಯ ಮೂಲದ್ದು ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ವಸಾಹತುಶಾಹಿಯ ಮತ್ತೊಂದು ರೂಪ ಇದು. ಶೋಷಿಸುವ ವರ್ಗಗಳ ಮೂಲದಿಂದಲೇ ಇದು ಆರಂಭವಾಗಿದೆ. ಅಂದರೆ, ಜಗತ್ತನ್ನು ಶೋಷಿಸುತ್ತಾ ಬಂದಿರುವ ರಾಷ್ಟ್ರಗಳೇ ಇದರ ಮುಂಚೂಣಿಯಲ್ಲಿವೆ. ಭಾರತದಂತಹ ದೇಶದಲ್ಲಿ ಈ ಜಾಗತೀಕರಣ ಶೋಷಣೆಯ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಬಲ್ಲದು. ಇದರ ಒಂದು ಕ್ರಮವಾದ ಯಾಂತ್ರೀಕರಣವನ್ನೇ ನೋಡಿ.

ಇದು ಸೃಷ್ಟಿಸುತ್ತಿರುವ ಅವಾಂತರಗಳಿಗೆ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿ ತುಣುಕೊಂದನ್ನು ಇಲ್ಲಿ ಪ್ರಸ್ತಾಪಿಸ ಬಯಸುತ್ತೇನೆ. ತಮಿಳುನಾಡಿನ ಒಂದು ಹಳ್ಳಿ. ಬುಡಕಟ್ಟು ಜನರೇ ಹೆಚ್ಚಾಗಿರುವ ಆ ಹಳ್ಳಿಯ ಪಕ್ಕ ಒಂದು ಕೆರೆ. ಪ್ರತಿವರ್ಷ ಬೇಸಿಗೆಯಲ್ಲಿ ಅದು ಒಣಗಿದಾಗ ಆ ಹಳ್ಳಿಯ ಜನರನ್ನೇ ಕೂಲಿಕಾರರನ್ನಾಗಿ ಬಳಸಿ ಆ ಕೆರೆಯ ಹೂಳೆತ್ತುತ್ತಿದ್ದುದು ನಡೆದು ಬಂದ ಪರಿಪಾಠ. ಇದರಿಂದಾಗಿ ಬೇಸಿಗೆಯಲ್ಲಿ ಅವರಿಗೆ ಒಂದಿಷ್ಟು ಪರ್ಯಾಯ ಉದ್ಯೋಗ ದೊರೆಯುತ್ತಿತ್ತು. ಜೀವನ ಸಾಗುತ್ತಿತ್ತು. ಆದರೆ ಕಳೆದ ವರ್ಷ ಆ ಕೆರೆ ಒಣಗಿದಾಗ ಅದರ ಹೂಳೆತ್ತಲು ಕಂಟ್ರ್ಯಾಕ್ಟರ್ ದಾರರೊಬ್ಬರಿಗೆ ಕಂಟ್ರ್ಯಾಕ್ಟ್ ನೀಡಲಾಯಿತು. ಆತ ಯಂತ್ರವನ್ನು ಬಳಸಿ ಹೂಳೆತ್ತುವ ಕೆಲಸ ಆರಂಭಿಸಿದ. ಹಳ್ಳಿಯ ಜನ ಕೂಲಿ ಕೆಲಸದಿಂದ ವಂಚಿತರಾದರು. ಆ ವರ್ಷ ಬರಗಾಲ ಬೇರೆ. ಇತರೆ ಕೂಲಿ ಕೆಲಸವೂ ಇಲ್ಲವಾಗಿತ್ತು. ಜನರ ಪ್ರತಿಭಟನೆಯೂ ಸೊರಗಿತ್ತು.

ಇದರ ಮಧ್ಯೆ ವೇಲು ಎನ್ನುವ ಯುವಕ ಎದ್ದು ನಿಂತು ಪ್ರತಿಭಟಿಸಿದ. ಊರಿನ ಜನರೆಲ್ಲಾ ಒಟ್ಟಾಗಿ ಬೆಂಬಲಿಸಿದರು. ಒಂದೆರಡು ದಿನ ಕೆಲಸ ಸ್ಥಗಿತಗೊಂಡಿತು. ಮೂರನೇ ದಿನ ಕಂಟ್ರಾಕ್ಟ್‌ದಾರನ ಕಡೆಯವರು ಬಂದು ಪ್ರತಿಭಟನೆಯ ಮೂಲ ವ್ಯಕ್ತಿ ವೇಲುವನ್ನು ಮರಣಾಂತಿಕವಾಗಿ ಬಡಿದರು. ಊರಿನವರೆಲ್ಲಾ ಬೇಡಿಕೊಂಡರೂ, ಯಂತ್ರದಿಂದ ಹೂಳೆತ್ತುವುದನ್ನು ಒಪ್ಪಿಕೊಂಡರೂ ಬಿಡಲಿಲ್ಲ. ವೇಲು ನೆಲಕ್ಕೆ ಬಿದ್ದ. ಜಾಗತೀಕರಣ ಜಾರಿಗೊಳ್ಳುತ್ತಿರುವ ಇಂದಿನ ವಿಧಾನಕ್ಕೆ ಇದೊಂದು ಉದಾಹರಣೆಯಷ್ಟೆ

ಜಗತ್ತು ಇಷ್ಟೊಂದು ಆಧುನೀಕರಣಗೊಳ್ಳುತ್ತಿರುವಾಗ್ಗೆಯೂ ಜಾತಿಪದ್ಧತಿ ಮೂಲಕ ಅಸ್ಪೃಶ್ಯತೆಯ ಅನಿಷ್ಟ ಬೆಂಬಿಡದೆ ಬಾಧಿಸುತ್ತಿದೆ. ಹರಿಯಾಣದ ಹಳ್ಳಿಯೊಂದರಲ್ಲಿ ಸತ್ತದನದ ಮಾಂಸ ಮತ್ತು ಚರ್ಮ ತೆಗೆದುಕೊಂಡದ್ದಕ್ಕೆ ಅದರಲ್ಲಿ ಬಾಗಿಯಾದವರನ್ನು ಅಮಾನುಷವಾಗಿ ಕೊಲ್ಲಲಾಯಿತು. ಭಾರತದ ಮತ್ತೊಂದು ಮೂಲೆಯಿಂದ ವರದಿಯಾಗಿರುವ ಸುದ್ದಿ ಇದು. ಆ ಜನರು ಮಾಡಿದ್ದೇನು ? ಸತ್ತ ದನದ ಮಾಂಸ ತಿನ್ನುವುದು ಮತ್ತು ಅದರ ಚರ್ಮ ಬಿಚ್ಚಿ ಮಾರುವುದು ತಲೆ ತಲಾಂತರದಿಂದ ಅವರು ಮಾಡಿಕೊಂಡು ಬಂದ ವೃತ್ತಿ. ಅದು ಅವರ ಹೊಟ್ಟೆ ಪಾಡು. ಅದನ್ನು ನಿರ್ವಹಿಸಿದ್ದಕ್ಕೆ ಅವರು ಪ್ರಾಣ ತೆರಬೇಕಾಯಿತು. ಅಂಬೇಡ್ಕರ್ ಮತ್ತು ಲೋಹಿಯಾರವರ ನಂತರ ಅಸ್ಪೃಶ್ಯತೆ ಹೊಸ ಜೀವ ಪಡೆದಿರುವುದಕ್ಕೆ ಈ ಘಟನೆ ಒಂದು ಉದಾಹರಣೆ.

ಜಾತಿವಿನಾಶಕ್ಕೆ ಸಂಬಂಧಿಸಿದಂತೆ ಈ ಕಾರ್ಯಕ್ರಮದಲ್ಲಿ ಹಲವಾರು ಗಣ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಮತ್ತು ಚರ್ಚೆಯಾಗಿದೆ. ಇದಕ್ಕೆ ಸಂಬಂಧಿಸಿದಂತೆ ಲೋಹಿಯಾರವರ ಚಿಂತನೆ ಪರಿಹಾರವಾಗಬಲ್ಲದೆನ್ನುವುದು ನನ್ನ ಅಭಿಪ್ರಾಯ. ಈ ನೀತಿ ರಾಜ್ಯನೀತಿಯಾಗಿ ಜಾರಿಗೊಳ್ಳಬೇಕು. ಮೀಸಲಾತಿಯೊಂದರಿಂದಲೇ ಜಾತಿವಿನಾಶ ಸಾಧ್ಯವಿಲ್ಲ. ಇತರೆ ಮಾರ್ಗಗಳು ಬೇಕು. ಭೂ ಹಂಚಿಕೆಯ ಬಗೆಗೂ ಆಲೋಚಿಸಬೇಕು.

ಜನಾಂಗೀಯ ಸಮಸ್ಯೆ ಅಂತಾರಾಷ್ಟ್ರೀಯ ಸಮಸ್ಯೆ. ಬಿಳಿಯರ ಮೇಲುಗಾರಿಕೆ ಇವತ್ತೂ ಅಮೆರಿಕಾದಲ್ಲಿ ಜಾರಿಯಲ್ಲಿದೆ. ಅಮೆರಿಕಾ ಮತ್ತು ಇಂಗ್ಲೆಂಡ್‌ಗಳೆರಡೂ ಬಿಳಿಯರ ಪರವಾಗಿವೆ. ಜಪಾನ್ ದೇಶದ ಪ್ರಾಮುಖ್ಯತೆ ಕಡಿಮೆಯಾಗುತ್ತಿದೆ. ಇರಾಕ್‌ನ ವಿರುದ್ಧ ಸಂಯುಕ್ತ ಪಡೆ ರಚಿಸಿಕೊಂಡು ಕಾರ್ಯಾಚರಣೆಯಲ್ಲಿ ತೊಡಗಿರುವ ರಾಷ್ಟ್ರಗಳೂ ಸಹ ಇವೇ ಎರಡು ಪ್ರಮುಖ ರಾಷ್ಟ್ರಗಳಾಗಿವೆ. ಉಳಿದೆಲ್ಲ ರಾಷ್ಟ್ರಗಳನ್ನು ತಮ್ಮ ವಸಾಹತುಗಳಂತೆ ಕಾಣುತ್ತಿವೆ. ಬಿಳಿಯರಿಗಾಗಿ ಮೀಸಲಿದ್ದ ರೆಸ್ಟೋರೆಂಟ್‌ವೊಂದರಲ್ಲಿ ಲೋಹಿಯಾರವರು ಟೀ ಕುಡಿದಿದ್ದಕ್ಕೆ ಅಮೆರಿಕಾದಲ್ಲಿ ಅವರನ್ನು ಬಂಧಿಸಲಾಗಿತ್ತು. ಇಂಥ ಹಲವಾರು ಉದಾಹರಣೆಗಳು ನಮಗೆ ಇಂದಿಗೂ ಕಾಣಬರುತ್ತವೆ. ಬಿಳಿಯರ ಈ ರಾಷ್ಟ್ರಗಳು ಆರ್ಥಿಕ ಸಂಕಷ್ಟಗಳಿಗೆ ಒಳಗಾದಾಗಲೆಲ್ಲಾ ಯುದ್ಧಗಳಂಥ ತಂತ್ರಗಳ ಮೂಲಕ ಕರಿಯರಿಗೆ ಅವುಗಳನ್ನು ವರ್ಗಾಯಿಸಿರುವುದನ್ನು ಇತಿಹಾಸದಲ್ಲೂ ನೋಡುತ್ತೇವೆ. ಇಂದೂ ನೋಡುತ್ತಿದ್ದೇವೆ.

ಭಾರತದ ಸಂದರ್ಭದಲ್ಲಿ ಶೋಷಣೆಯ ಈ ಮಾರ್ಗಗಳನ್ನು ಹೀಗೆಂದು ಗುರುತಿಸಬಹುದು. ೧. ಜಾಗತೀಕರಣ, ೨. ಜಾತಿ ಪದ್ಧತಿ, ೩. ಜನಾಂಗೀಯ ತಾರತಮ್ಯ, ೪. ಸಂಸ್ಕೃತಿಕ ಸರ್ವಾಧಿಕಾರ, ೫. ಲಿಂಗ ತಾರತಮ್ಯ, ೬. ಕೇಂದ್ರೀಕರಣ ೭. ಪ್ರಾಕೃತಿಕ ಪರಿಸರ ವಿನಾಶ ೮. ತಂತ್ರಜ್ಞಾನ ೯. ಆಧ್ಯಾತ್ಮಿಕ ಗೊಂದಲ. ಜಗತ್ತಿನಾದ್ಯಂತ ಇಂದು ವ್ಯಾಪಿಸುತ್ತಿರುವ ಜಾಗತೀಕರಣ ಶೋಷಣೆಯ ಮೂಲದ್ದು ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ವಸಾಹತುಶಾಹಿಯ ಮತ್ತೊಂದು ರೂಪ ಇದು. ಶೋಷಿಸುವ ವರ್ಗಗಳ ಮೂಲದಿಂದಲೇ ಇದು ಆರಂಭವಾಗಿದೆ. ಅಂದರೆ, ಜಗತ್ತನ್ನು ಶೋಷಿಸುತ್ತಾ ಬಂದಿರುವ ರಾಷ್ಟ್ರಗಳೇ ಇದರ ಮುಂಚೂಣಿಯಲ್ಲಿವೆ. ಭಾರತದಂತಹ ದೇಶದಲ್ಲಿ ಈ ಜಾಗತೀಕರಣ ಶೋಷಣೆಯ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಬಲ್ಲದು.

ಭಾರತದಲ್ಲಿಂದು ಮತೀಯತೆ ಹೆಚ್ಚುತ್ತಿದೆ. ಸಾಂಸ್ಕೃತಿಕ ಸರ್ವಾಧಿಕಾರಿಗಳ ಆರ್ಭಟ ಹೆಚ್ಚುತ್ತಿದೆ. ಪ್ರತಿಯೊಬ್ಬ ಭಾರತೀಯನೂ ರಾಮನಿಗೆ ವಂದಿಸಬೇಕೆಂಬ ಒತ್ತಡ ಸೃಷ್ಟಿಯಾಗುತ್ತಿದೆ. ಸಾಂಸ್ಕೃತಿಕ ವೈವಿಧ್ಯತೆಯಿಂದ ಕೂಡಿದ ದೇಶ ಭಾರತ. ವೈವಿಧ್ಯತೆಯೇ ಅದರ ಸಂಸ್ಕೃತಿ. ಇದರ ನಾಶ ಎಂದರೆ ಭಾರತದ ವಿನಾಶವೇ ಆಗಿದೆ. ಏಕ ಸಂಸ್ಕೃತಿಯ ಕೊನೆ ಕೂಡ ವಿನಾಶವೇ. ಅದು ಎಂಥದ್ದೇ ದೇಶವಾದರೂ ಅದನ್ನು ನಾಶಪಡಿಸುತ್ತದೆ. ಧರ್ಮ ನಿರಪೇಕ್ಷತೆಗೆ, ಸರ್ವಧರ್ಮ ಸಮಾನತೆಗೆ, ರಾಮಕೃಷ್ಣ ಪರಮಹಂಸರು ಸೂಕ್ತ ಉದಾಹರಣೆ. ಅವರು ವೈಷ್ಣವರಂತೆ ಪೂಜೆ ಮಾಡಿದರು. ಮುಸ್ಲಿಮರಂತೆ ನಮಾಜು ಮಾಡಿದರು. ಧೋತಿಯನ್ನು ಮುಸ್ಲಿಮರು ಧರಿಸುವಂತೆ ಧರಿಸಿದರು. ಒಟ್ಟಿನಲ್ಲಿ ಆಧ್ಯಾತ್ಮಿಕತೆಯ, ಏಕತೆಯ ನಿಧಿ ಅವರಾಗಿದ್ದರು. ಧರ್ಮ ನಿರಪೇಕ್ಷತೆಯ ಪ್ರವಾದಿ ಆತ.

ಮನುಷ್ಯ ನಡೆದು ಬಂದ ದಾರಿಯಲ್ಲಿನ ಮೊದಲ ತಾರತಮ್ಯ ಎಂದರೆ ಬಹುಶಃ ಲಿಂಗತಾರತಮ್ಯವೇ ಆಗಿದೆ. ಇದು ಎಲ್ಲ ಕಾಲದಲ್ಲಿ, ಹೆಚ್ಚು ಕಡಿಮೆ ಎಲ್ಲ ರಾಷ್ಟ್ರಗಳಲ್ಲೂ ಇದೆ. ಸ್ತ್ರೀಯರನ್ನು ಎರಡನೇ ದರ್ಜೆಯ ಜನರೆಂದು ಭಾವಿಸಿರುವುದೇ ಅವರ ಶೋಷಣೆಗೆ ಕಾರಣ. ಗೃಹಕೃತ್ಯ ಸೇವೆಗೆ ಮೀಸಲಾದ ಸೇವಕರಂತೆ ಅವರನ್ನು ನಡೆಸಿಕೊಳ್ಳಲಾಗುತ್ತಿದೆ. ಪುರುಷರು ನಿರ್ವಹಿಸುವ ಪ್ರಮುಖ ಕ್ಷೇತ್ರಗಳಲ್ಲಿ ಅವರಿಗೆ ಅವಕಾಶವನ್ನು ನಿರಾಕರಿಸಲಾಗುತ್ತಿದೆ. ಈ ಅವಕಾಶ ನಿರಾಕರಣೆಯಾದರೂ ಪ್ರಜ್ಞಾಪೂರ್ವಕ ನೆಲೆಯಿಂದ ಮೂಡಿದುದಾಗಿದೆ. ಗಂಡು ಹೆಣ್ಣುಗಳ ಮಧ್ಯೆ ಯಾಕಿಷ್ಟು ಅಸಮಾನತೆ? ನಿಸರ್ಗ ಸೃಷ್ಟಿಸಿರುವ ಒಂದೇ ವ್ಯತ್ಯಾಸ ಎಂದರೆ ಪುರುಷರಲ್ಲಿ ಒಂದಕ್ಕಿಂತ ಹೆಚ್ಚು ಪುರುಷಾಣುಗಳು ಉತ್ಪತ್ತಿಯಾದರೆ ಸ್ತ್ರೀಯರಲ್ಲಿ ಒಂದೇ ಒಂದು ಅಂಡಾಣು ಸೃಷ್ಟಿ ಕ್ರಿಯೆಯ ಸಂದರ್ಭದಲ್ಲಿ ಉತ್ಪತ್ತಿಯಾಗುವುದು ಮಾತ್ರ. ಇದೊಂದೇ ಜೈವಿಕ ವ್ಯತ್ಯಾಸ ನಮಗೆ ಗೋಚರಿಸುವುದು. ಸಮಾಜವಾದವಾದರೂ ಇಂಥ ಜೈವಿಕ ವ್ಯತ್ಯಾಸಗಳನ್ನು ಹೊರತುಪಡಿಸಿದ ಮಾನವ ನಿರ್ಮಿತ ತಾರತಮ್ಯ ವಿರೋಧಿಯಾಗಿದೆ.

ಶೋಷಣೆಯ ಇನ್ನೊಂದು ಮೂಲ ಅಧಿಕಾರದ ಕೇಂದ್ರೀಕರಣ. ಇದು ಅಸಮಾನತೆಯ ಮೂಲವೂ ಹೌದು. ಇಂದು ಅಧಿಕಾರದ ಕೇಂದ್ರೀಕರಣದ ಜೊತೆಗೆ ಸಂಪತ್ತಿನ, ಸಂಪನ್ಮೂಲಗಳ ಕೇಂದ್ರೀಕರಣ ಕೂಡ ಆಗುತ್ತಿದೆ. ಈ ಎರಡೂ, ರಾಜಕೀಯ ಕೇಂದ್ರೀಕರಣವನ್ನು ಪೋಷಿಸುತ್ತವೆ. ಸಮಾಜವಾದ ಪೂರ್ಣ ವಿಕೇಂದ್ರೀಕರಣವನ್ನು ಸ್ಥಾಪಿಸ ಬಯಸುತ್ತದೆ. ಇಲ್ಲಿ ಒಂದು ಕೇಂದ್ರ ಬಿಂದುವಿರುವುದಿಲ್ಲ. ಸಂಪೂರ್ಣ ವಿಕೇಂದ್ರೀಕರಣದ ಜಾರಿಗಾಗಿ ಲೋಹಿಯಾರವರು ಚತುಷ್‌ಸ್ತಂಭಿ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಾರೆ. ಇಲ್ಲಿ ಅಧಿಕಾರ ನಾಲ್ಕು ಹಂತಗಳಲ್ಲಿ, ಅಂದರೆ, ರಾಷ್ಟ್ರ, ರಾಜ್ಯ, ಜಿಲ್ಲೆ ಮತ್ತು ಗ್ರಾಮಗಳ ನೆಲೆಯಲ್ಲಿ ಹಂಚಿಕೆಯಾಗುತ್ತದೆ. ಅವುಗಳಿಗೆ ಅವುಗಳದೇ ಆದ ಸ್ವಾಯತ್ತತೆಯಿರುತ್ತದೆ.

ಪ್ರಾದೇಶಿಕ ಅಸಮಾನತೆ ನಿರ್ಮೂಲನೆಗೆ ಇದು ಅತ್ಯಂತ ಪರಿಣಾಮಕಾರಿ.

ಅಸಮಾನತೆಯನ್ನು ಸಹಿಸುವಲ್ಲಿಯೂ ಒಂದು ನಿರ್ದಿಷ್ಟ ಮಿತಿ ಇರುತ್ತದೆ. ನಾವೆಷ್ಟು ಅಸಮಾನತೆ ಸಹಿಸಲು ಸಿದ್ಧವಿದ್ದೇವೆ ? ಮನುಷ್ಯನೊಬ್ಬನಿಗೆ ಬದುಕಲು ಎಷ್ಟು ಆದಾಯ, ಆಸ್ತಿ ಬೇಕು ? ಒಂದು ಕುಟುಂಬಕ್ಕೆಷ್ಟು ಬೇಕು ? ನಮ್ಮ ಸಂವಿಧಾನದ ರಾಜ್ಯ ನಿರ್ದೇಶಿತ ತತ್ವಗಳಲ್ಲಿ ಇದಕ್ಕೆ ಸ್ಪಷ್ಟ ಪರಿಹಾರಗಳಿವೆ. ಆದರೆ ಇವು ಪರಿಣಾಮಕಾರಿಯಾಗಿ ಜಾರಿಯಾಗದಿರುವುದು ದುರಂತ. ಜಾಗತೀಕರಣದ ಭರಾಟೆಯಲ್ಲಿ ಇವು ಇನ್ನಷ್ಟು ನಿಷ್ಕ್ರಿಯವಾಗುತ್ತಿವೆ. ಸಮಾಜವಾದ ಎಲ್ಲರಿಗೂ ಸಭ್ಯ ಬದುಕನ್ನು ಬಯಸುತ್ತದೆ.

ಮಾವೋ ಕಾಲದಲ್ಲಿ ಚೀನಾದಲ್ಲಿ ಅತಿಯಾದ ಅಸಮಾನತೆಯಿತ್ತು. ಅದು ನಂತರ ಅನಾಹುತಗಳಿಗೂ ಕಾರಣವಾಯಿತು. (ಅಶೋಕ್ ಮೆಹ್ತಾರವರು ರೂಪಿಸಿದ ಸಮಾಜವಾದದ ಸಂವಿಧಾನದಲ್ಲಿ ಇಂಥ ಅಸಮಾನತೆಗೆ ಅವಕಾಶವಿಲ್ಲ) ಅಮೆರಿಕಾ ಮತ್ತು ಬ್ರಿಟನ್ ದೇಶಗಳು ತಾವು ಪ್ರಜಾಪ್ರಭುತ್ವ ನೆಲೆಯಲ್ಲಿದ್ದುಕೊಂಡೇ ಇತರೆ ದೇಶಗಳಲ್ಲಿ ಅಸಮಾನತೆಯನ್ನು ಹುಟ್ಟುಹಾಕುತ್ತಿವೆ.

ಬ್ರಿಟನ್ನಿನ ಪ್ರಧಾನಿ ಟೋನಿ ಬ್ಲೇರ್ ರವರ ಆಪ್ತ ಸಲಹೆಗಾರರೊಬ್ಬರು ರಚಿಸಿರುವ ಸಂಶೋಧನಾ ಗ್ರಂಥದ ಹೆಸರೇ 'ಜಗತ್ತು ಇಂದು ಮತ್ತೊಮ್ಮೆ ವಸಾಹತುಶಾಹಿ ವ್ಯವಸ್ಥೆಯನ್ನು ಬಯಸುತ್ತದೆ' ಎನ್ನುವುದನ್ನು ಕುರಿತದ್ದಾಗಿದೆ. ಇಂಥ ಸಲಹೆಗಾರರಿಂದ ಪ್ರಜಾಪ್ರಭುತ್ವದ ಆಶಯಗಳು ಅದೇಗೆ ಸಾಕಾರಗೊಳ್ಳಲು ಸಾಧ್ಯ ? ಅಧಿಕಾರ ಕೇಂದ್ರೀಕರಣವಾಗುವುದರ ಸಂಕೇತಗಳಿವು.

ನಿಸರ್ಗದ ಸಂಪನ್ಮೂಲಗಳ ಮೇಲೆ ಒಡೆತನ ಸ್ಥಾಪಿಸುವುದು, ಅವುಗಳಿಗೆ ಮಾರುಕಟ್ಟೆ ಬೆಲೆ ನಿಗದಿಪಡಿಸುವುದು, ಶ್ರೀಮಂತ ವರ್ಗ ಅವುಗಳನ್ನು ಅತಿಯಾಗಿ ಬಳಸುವುದು ಶೋಷಣೆಯ ಇನ್ನೊಂದು ಮಾರ್ಗ. ನೈಸರ್ಗಿಕ ಸಂಪನ್ಮೂಲಗಳಿಗೆ ತಾವಷ್ಟೇ ಮಾಲೀಕರು ಮತ್ತು ಅನುಭೋಗಿಗಳು ಎನ್ನುವ ಧೋರಣೆ ಶ್ರೀಮಂತ ವರ್ಗದಲ್ಲಿ ಬೆಳೆಯುತ್ತಿದೆ. ನೀರು ಇಂದು ಅಪರಿಮಿತವಾಗಿ ದೊರೆಯುವ ಸಂಪನ್ಮೂಲವಾಗಿ ಉಳಿದಿಲ್ಲ, ಇಂದು ಬಾಟಲಿಗಳಲ್ಲಿ ನೀರನ್ನು ಮಾರುವಂತೆ ನಾಳೆ ಜೀವಾನಿಲವನ್ನು ಚೀಲಗಳಲ್ಲಿ ತುಂಬಿ ಮಾರಬಹುದು. ಈಗಾಗಲೇ ಜನಸಂಖ್ಯೆಯ ಶೇ ೨೫ ರಷ್ಟು ಜನರು ಸುರಕ್ಷಿತ ಕುಡಿಯುವ ನೀರಿನಿಂದ ವಂಚಿತರಾಗಿದ್ದಾರೆ. ಕಡಿಮೆ ಸಂಖ್ಯೆಯ ಶ್ರೀಮಂತರು ಹೆಚ್ಚು ನೈಸರ್ಗಿಕ ಸಂಪನ್ಮೂಲಗಳನ್ನು ಬಳಸುತ್ತಿದ್ದಾರೆ. ಬೇರೆ ದೇಶಗಳ ನೈಸರ್ಗಿಕ ಪರಿಸರವನ್ನು ಈ ಶ್ರೀಮಂತ ರಾಷ್ಟ್ರಗಳು ತಮ್ಮ ಸ್ವಾರ್ಥಕ್ಕಾಗಿ ನಾಶಮಾಡುತ್ತಾ ಬರುತ್ತಿವೆ. ಲೋಹಿಯಾರವರು ಹೇಳುತ್ತಿದ್ದರು.

'ಆಧುನಿಕ ಜಗತ್ತಿನ ಮುಂದೆ ಎರಡು ಆಯ್ಕೆಗಳಿವೆ; ಒಂದು ಅಣುಬಾಂಬ್ ಮತ್ತೊಂದು ಗಾಂಧಿ'. ಅಣ್ವಸ್ತ್ರಗಳು ಮತ್ತು ಅಣುಶಕ್ತಿ ನೈಸರ್ಗಿಕ ಪರಿಸರವನ್ನು ಹಾಳು ಮಾಡುತ್ತಿವೆ. ಶಸ್ತ್ರಾಸ್ತ್ರಗಳನ್ನು ಮಾರುವ ಕಾಳಸಂತೆಕೋರರು ಜಗತ್ತಿನಾದ್ಯಂತ ತಮ್ಮ ಜಾಲವನ್ನು ಸೃಷ್ಟಿಸಿಕೊಂಡಿದ್ದಾರೆ. ಇವರಿಗೆ ಪೂರಕವಾಗಿ ಅಮೆರಿಕಾದ ಬೇಹುಗಾರಿಕೆ ಸಂಸ್ಥೆ ಸಿ.ಐ.ಎ ಕೆಲಸ ಮಾಡುತ್ತಿದೆ. ಮೂರನೇ ಜಗತ್ತಿನ ರಾಷ್ಟ್ರಗಳು ಸತತವಾಗಿ ನಾಗರಿಕ ಯುದ್ಧಗಳಲ್ಲಿ ತೊಡಗಿರಬೇಕೆಂಬುದೇ ಇವರ ಹುನ್ನಾರ. ಆದ್ದರಿಂದ ಇದಕ್ಕೆ ಪ್ರತಿರೋಧವಾಗಿ ಗಾಂಧೀಜಿ ಅಹಿಂಸಾ ತತ್ವವನ್ನು ಪ್ರತಿಪಾದಿಸಿದರು.

**ಶೋಷಣೆಯ ಇನ್ನೊಂದು ಮೂಲ ಅಧಿಕಾರದ ಕೇಂದ್ರೀಕರಣ. ಇದು ಅಸಮಾನತೆಯ ಮೂಲವೂ ಹೌದು. ಇಂದು ಅಧಿಕಾರದ ಕೇಂದ್ರೀಕರಣದ ಜೊತೆಗೆ ಸಂಪತ್ತಿನ, ಸಂಪನ್ಮೂಲಗಳ ಕೇಂದ್ರೀಕರಣ ಕೂಡ ಆಗುತ್ತಿದೆ. ಈ ಎರಡೂ, ರಾಜಕೀಯ ಕೇಂದ್ರೀಕರಣವನ್ನು ಪೋಷಿಸುತ್ತವೆ. ಸಮಾಜವಾದ ಪೂರ್ಣ ವಿಕೇಂದ್ರೀಕರಣವನ್ನು ಸ್ಥಾಪಿಸ ಬಯಸುತ್ತದೆ. ಇಲ್ಲಿ ಒಂದು ಕೇಂದ್ರ ಬಿಂದುವಿರುವುದಿಲ್ಲ.**

ಇವತ್ತು ಜನೋಪಯೋಗಿಯಾಗಬೇಕಾದ ತಂತ್ರಜ್ಞಾನ ಕೂಡ ಶೋಷಣೆಯ ಒಂದು ಅಸ್ತ್ರವಾಗಿ ಮಾರ್ಪಡುತ್ತಿರುವುದು, ಸಂಕುಚಿತವಾಗುತ್ತಿರುವುದು ದುರಂತ. ಈ ಮೇಲೆ ಹೇಳಿದ ತಮಿಳುನಾಡಿನ ವೇಲುವಿನ ಕತೆಯನ್ನು ಇಲ್ಲಿ ಪುನಃ ಜ್ಞಾಪಿಸಿಕೊಳ್ಳಬಹುದು. ವಿವೇಚನಾ ರಹಿತವಾದ ಯಾಂತ್ರೀಕರಣ ನಿರುದ್ಯೋಗವನ್ನು ಸೃಷ್ಟಿಸುತ್ತದೆ. ತಂತ್ರಜ್ಞಾನ ಉಳ್ಳವರ ಸ್ವತ್ತಾಗುತ್ತಿದೆ. ಅದು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗುವಂಥ ರೀತಿಯಲ್ಲಿ ಬೆಳೆಯುತ್ತಿಲ್ಲ. ಕೃಷಿ ಕ್ಷೇತ್ರವು ಅಧಿಕ ಜನರಿಗೆ ಉದ್ಯೋಗ ನೀಡಿರುವ ಕ್ಷೇತ್ರ. ಇದು ಯಾಂತ್ರೀಕರಣಗೊಳ್ಳುತ್ತ ಹೋದಂತೆ ಇದರಲ್ಲಿ ತೊಡಗಿರುವ ಶ್ರಮಿಕರು ಕೃಷಿಯೇತರ ಕ್ಷೇತ್ರಗಳಿಗೆ ವಲಸೆಹೋಗಬೇಕಾಗುತ್ತದೆ. ಅಲ್ಲಿಯೂ ಇದೇ ಸಮಸ್ಯೆ ಸೃಷ್ಟಿಯಾಗುತ್ತದೆ. ಉದಾಹರಣೆಗೆ ಸಾರಿಗೆ ಕ್ಷೇತ್ರ. ಜಗತ್ತಿನ ಮೂಲೆ ಮೂಲೆಗಳನ್ನು ಸಂಪರ್ಕಿಸಲು ನಾಲ್ಕು ನಾಲ್ಕು ಮಾರ್ಗಗಳ ಹೆದ್ದಾರಿಗಳು ಸೃಷ್ಟಿಯಾಗುತ್ತಿವೆ. ಇವು ಮಾನವ ಶ್ರಮವಿಲ್ಲದೆ ಬರೀ ಯಂತ್ರಗಳ ಬಳಕೆಯಿಂದ ನಿರ್ಮಿತವಾಗುತ್ತಿವೆ. ಅದೂ ಸಾಲದ ಹಣದಿಂದ. ಜನರ ಕೆಲಸವನ್ನು ತಿನ್ನುವ ಈ ಯಂತ್ರಗಳನ್ನು ನಾವು ವಿರೋಧಿಸಲೇಬೇಕು. ಇವತ್ತು ಮೂರನೇ ಜಗತ್ತಿನ ರಾಷ್ಟ್ರಗಳಿಗೆ ಉದ್ಯೋಗಗಳನ್ನು ಸೃಷ್ಟಿಸುತ್ತಲೇ ಉತ್ಪಾದನೆ ಮತ್ತು ಉತ್ಪಾದಕತೆಗಳನ್ನು ಹೆಚ್ಚಿಸುವ ಸಮ್ಮಿಶ್ರಿತ ತಂತ್ರಜ್ಞಾನ ಬೇಕಾಗಿದೆ. ಅದು ಸಮಾಜವಾದ ಆಶಿಸುವ ತಂತ್ರಜ್ಞಾನ.

ಆಧ್ಯಾತ್ಮಿಕತೆ ಇವತ್ತು ಮತೀಯತೆಯೊಂದಿಗೆ ತಳುಕು ಹಾಕಿಕೊಂಡಿರುವ ಗೊಂದಲ ಸೃಷ್ಟಿಯಾಗುತ್ತಿದೆ. ಬದುಕಿಗೊಂದು ಆಧ್ಯಾತ್ಮಿಕ ನೆಲೆ ಬೇಕು. ನಮ್ಮ ದುರಾಸೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಮತ್ತು ಮಾನವೀಯ ದೃಷ್ಟಿ ತಳೆಯಲು ಅದು ಬೇಕಾಗಿದೆ. ಆಧ್ಯಾತ್ಮ ಎಂದರೆ ಅಂಧ ನಂಬಿಕೆಯಲ್ಲ ಮತ್ತು ಅದರ ಅನುಕರಣೆಯೂ ಅಲ್ಲ. ಬೌದ್ಧ ಧರ್ಮದ ಆಶಯದಂಥದ್ದು ಅದು. ಮನುಷ್ಯನ ದುರಾಸೆಗಳಿಗೆ ಕಡಿವಾಣ ಹಾಕಲು ಆಧ್ಯಾತ್ಮಿಕ ಮೌಲ್ಯಗಳು ಅವಶ್ಯ ಎನ್ನುವುದನ್ನು ಬಹುಜನ ಒಪ್ಪುತ್ತಾರೆ. ಈ ಎರಡು ದಿನಗಳ ಚರ್ಚೆಯಲ್ಲೂ ಅದು ಪ್ರಸ್ತಾಪಿಸಲ್ಪಟ್ಟಿದೆ. ಆದ್ದರಿಂದ ಅದನ್ನು ಸ್ಪಷ್ಟಪಡಿಸಬಯಸುತ್ತೇನೆ.

ಆಧ್ಯಾತ್ಮ ಎಂದರೆ ಮದರ್ ಥೇರೆಸಾರಂತಹವರ ವ್ಯಕ್ತಿತ್ವ ನಮ್ಮ ಮುಂದೆ ಎದ್ದು ನಿಲ್ಲಬೇಕು. ಕ್ರಿಶ್ಚಿಯಾನಿಟಿಗೇ ಏಕೆ ಇದು ಸಾಧ್ಯವಾಯಿತು ನಾವು ಆಲೋಚಿಸಬೇಕು. ಕ್ರೈಸ್ತ ಧರ್ಮದಲ್ಲಿ ಪ್ರೀತಿಯೇ ಕಾನೂನಾಗಿದೆ. ಆದ್ದರಿಂದ ಚರಂಡಿಯಲ್ಲಿ ಬಿದ್ದ ಮಗುವನ್ನು ಎತ್ತಿಕೊಳ್ಳುವುದು ಕ್ರಿಶ್ಚಿಯನ್ ಸನ್ಯಾಸಿನಿಗೆ ಮಾತ್ರ ಸಾಧ್ಯವಾಯಿತು. ಅದು ಧಾರ್ಮಿಕ ತರಬೇತಿಯಿಂದ ಮಾತ್ರ ಬರಲು ಸಾಧ್ಯ. ಬುದ್ಧನ ಕರುಣೆ ಮತ್ತು ಮೈತ್ರಿ ತತ್ವಗಳೇಕೆ ಇಂಡಿಯಾದಲ್ಲಿ ಪಾರಂಪರಿಕ ಮೌಲ್ಯಗಳಾಗಲಿಲ್ಲ?

ಒಮ್ಮೆ ಸುಂದರವಾದ ನೃತ್ಯಗಾರ್ತಿಯೊಬ್ಬಳು ಉಪಗುಪ್ತನನ್ನು ಆಕರ್ಷಿಸಲು ಪ್ರಯತ್ನಿಸಿದಳು. ಅದಕ್ಕೆ ಅವನು ಈಗ ಸಮಯವಿಲ್ಲೆಂದ. ನಂತರ ಅದೇ ನೃತ್ಯಗಾರ್ತಿ ತೀವ್ರ ಕಾಯಿಲೆಗೆ ಒಳಗಾಗಿ ಜೀವನ್ಮರಣದ ಮಧ್ಯೆ ತೂಗುಯ್ಯಾಲೆಯಾಡುವಾಗ ಅವನೇ ನಿಂತು ಉಪಚರಿಸಿದ. ಅದುವೇ ಬೌದ್ಧ ಕರ್ಮ ಸಿದ್ಧಾಂತ. ಅದುವೇ ಆಧ್ಯಾತ್ಮ. ಅಂಥ ಗುಣ ಗಾಂಧಿಯಲ್ಲೂ ಇತ್ತು. ಆತ ಬಹು ದೊಡ್ಡ ಕಸ ಬಳಿಯುವ ವ್ಯಕ್ತಿಯಾಗಿದ್ದ. ಭಾರತದ ರಾಜಕಾರಣದಲ್ಲಿ ಯಾರೊಬ್ಬರಾದರೂ ಅವರಿಂದ ಪಾಠ ಕಲಿತರೇ? ತನ್ನಂತೆ ತನ್ನ ಹೆಂಡತಿ ಕೂಡ ಶೌಚಾಲಯಗಳನ್ನು ಸ್ವಚ್ಛಗೊಳಿಸಲಿಲ್ಲ ಎನ್ನುವ ಕಾರಣಕ್ಕೆ ಅವಳ ಕೆನ್ನೆಗೆ ಬಾರಿಸಿದ್ದೇ ಆಕೆಯ ಮೇಲೆ ಆತ ನಡೆಸಿದ ಕೊನೆಯ ಹಿಂಸಾ ಕೃತ್ಯ. ಆ ಕೆಲಸವನ್ನು ಆಕೆ ಮುಖ ಗಂಟಿಕ್ಕಿಕೊಂಡು, ಒಲ್ಲದ ಮನಸ್ಸಿನಿಂದ ನಿರ್ವಹಿಸಿದ್ದೇ ಆತನಿಗೆ ಅಪರಾಧವಾಗಿ ಕಂಡಿತ್ತು. ಆತನ ಕೋಪವನ್ನು ಕೆರಳಿಸಿತು.

ಸೇವಾ ಭಾವನೆಗಳು ಇಂದು ನಮ್ಮ ಭೌತಿಕ ಬದುಕಿನಲ್ಲಿ ಕಣ್ಮರೆಯಾಗುತ್ತಿವೆ. ಭೌತಿಕವಾದ ನಮಗೆಂದೂ ಸುಖ ಕೊಡುವುದಿಲ್ಲ. ಗಾಂಧಿಯ ನಂತರ ನಮಗೆ ಸಿಗುವ ಉದಾಹರಣೆ ಎಂದರೆ ಜಯಪ್ರಕಾಶ ನಾರಾಯಣರವರು ನಿನ್ನ ಒಳಿತು ನಿನ್ನಾಚೆಯಿರುವಂತಹುದು, ನಿನ್ನ ಸ್ವಾರ್ಥದಿಂದಾಚೆ ಇರುವಂಥಹುದು. ಮತ್ತೊಂದು ನೈತಿಕ ನೆಲೆಯಲ್ಲಿರುವಂತಹುದು ಎಂದು ನಂಬುವುದೇ ಆಧ್ಯಾತ್ಮ. ಸೇವೆಯೇ ಅದರ ಮುಖ. ಅದರ ನೆಲೆಯಲ್ಲಿ ನಮ್ಮ ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ.

ಕೊನೆಯದಾಗಿ, ಶೋಷಣೆಯ ಹೊಸ ಮಾರ್ಗಗಳು ಸೃಷ್ಟಿಯಾದಂತೆಲ್ಲಾ ಅವುಗಳನ್ನು ವಿರೋಧಿಸುವ ಹೊಸ ಮಾರ್ಗಗಳೂ ಸೃಷ್ಟಿಯಾಗಬೇಕು. ಶೋಷಣೆಗೊಳಗಾದವರ ನೆಲೆಯಿಂದಲೇ ಅವು ಹುಟ್ಟಿ ಬರುತ್ತವೆ. ಚಾಮರಾಜನಗರದಂತಹ ಊರಿನಿಂದ ಬಂದಿರುವ ಯುವಕರೇ ಇದಕ್ಕೆ ಸಾಕ್ಷಿ. ಯುವಕರಲ್ಲಿ ಇಂಥ ಆಸಕ್ತಿ ಇಲ್ಲದಿದ್ದಲ್ಲಿ ಅಷ್ಟೊಂದು ದೂರದಿಂದ ಅವರು ಬರಬೇಕಾಗಿರಲಿಲ್ಲ. ಇಂಥವರನ್ನು ಸಂಘಟಿಸಿ ತರಬೇತಿ ನೀಡಬೇಕು. ಅದಕ್ಕೆಂದೇ ಒಂದು ನಿಯತಕಾಲಿಕ ಆರಂಭವಾಗಬೇಕು. ಆ ಮೂಲಕ ಅವರಿಗೆ ಮಾಹಿತಿ ನೀಡಬೇಕು. ಮತ್ತು ಅವರಿಂದ ಮಾಹಿತಿ ಪಡೆಯಬೇಕು. ಅವರನ್ನು ಅಧ್ಯಯನಕ್ಕೆ, ಹೋರಾಟಕ್ಕೆ ಸಜ್ಜುಗೊಳಿಸಬೇಕು. ಶೋಷಣೆಯ ವಿರುದ್ಧದ ಪ್ರತಿಭಟನೆಯ ಕಿಡಿ ಹುಟ್ಟುವುದೇ ಅಂಥ ನಿರ್ಲಕ್ಷಿತ ಪ್ರದೇಶದಿಂದ ಮತ್ತು ಜನರಿಂದ. ಅದನ್ನು ಸಂಘಟಿತ ಶಕ್ತಿಯಾಗಿ ಬೆಳೆಸುವುದರಿಂದ ಸಮಾಜವಾದದ ನಿಜ ತಂತಾನೇ ತೆರೆದುಕೊಳ್ಳುತ್ತದೆ.

(ಮೈಸೂರಿನ ರಾಮಮನೋಹರ ಲೋಹಿಯಾ ಪ್ರತಿಷ್ಠಾನ ಮತ್ತು ಕುವೆಂಪು ವಿಶ್ವವಿದ್ಯಾನಿಲಯದ ಅಂಬೇಡ್ಕರ್ ಅಧ್ಯಯನ ಪೀಠ ಶಿವಮೊಗ್ಗದಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ (ನವೆಂಬರ್ ೯, ೧೦, ೨೦೦೩) ಕಿಶನ್ ಪಟ್ನಾಯಕ್‌ರವರು ಮಾಡಿದ ಭಾಷಣದ ಸಂಕ್ಷಿಪ್ತ ಭಾವಾನುವಾದ. 'ಬೆಳಗಿನ ಬೆರಗು' ಕೃತಿಯಿಂದ ಆಯ್ದುಕೊಳ್ಳಲಾಗಿದೆ.) □

# ಮಂಟೇದನ ಜೋಳಿಗೆ ಬೇಕಿದೆ

○ ಹುಲಿಕುಂಟೆ ಮೂರ್ತಿ

ನನ್ನ
ಅಜ್ಜಿ ಸತ್ತಾಗ
ವಾಜಪೇಯಿ
ಅಧಿಕಾರ ಸ್ವೀಕರಿಸಿದ ದಿನ..

ಅವಳು
ತಾತನಿಗೆ ಲೈನ್ ಹೊಡೆದು
ಸಂಬಂಧ ಬಿತ್ತಿದ್ದಕ್ಕೆ
ಸಾಕ್ಷಿಯಾಗಿದ್ದ
ಅವಳ ಅಜ್ಜಿಯ ಕಾಲದ
ಆಲದ ಮರವನ್ನು
ಆಗಲೆ
ರಸ್ತೆ ಮಾಡುವವರು
ಕಡಿದದ್ದು.

'ಈ ಜೀವವೇ ಆಜೀವಕೆ ನಡಿ' ಅಂದು
ಜೀವಗಳ ಅರಳಿಸಿದ
ಮಾದೇವಣ್ಣನ ಕೇರಿಯ
ತೂರಮ್ಮನಂಗೇ ಇವಳೂ..
ಆ ಜೀವದಿಂದ ಈ ಜೀವಗಳ
ಬೆಳಗಿಸಿದವಳು

ಇತ್ತೀಚೆಗೆ ಅಜ್ಜಿ
ಕನಸಿಗೆ ಬಂದಿದ್ದಳು

ಚಿಕನ್ ಫ್ರೈ ತಿಂದು
ಪೆಪ್ಸಿ ಕುಡಿದು
ಹೊಟ್ಟೆ ಊದಿಸಿಕೊಂಡಿದ್ದ ನನ್ನ
ಕಿವಿಹಿಂಡಿ
ಎದೆಗೊತ್ತಿಕೊಂಡವಳು

ಊರಗೌಡನ ಮನೆಯ
ದನ ಸತ್ತಾಗ
ತಿಂಗಳ ಕಾಲ ಹೊಟ್ಟೆ ತುಂಬಿಸಿದ್ದ
ಕೊರಬಾಡಿನ
ಕತೆ ಹೇಳತೊಡಗಿದಳು



ಆ ಕತೆ
ನನ್ನ ಕರುಳೊಳಗೆ ಇಳಿದು
ಆದಿಮ ಪ್ರತಿಮೆಗಳನ್ನು
ನಾಟಿ ಮಾಡುತ್ತಿದ್ದಾಗ..

ಇದ್ದಕ್ಕಿದ್ದಂಗೆ
ಕೊರಬಾಡಿನ ಸರಮಲೆ
ನಮ್ಮೂರ ರಾಮನ ಗುಡಿಯ
ಮೇಲಿನ ಚಿತ್ತಾರದ
ಸೀರಿಯಲ್ ಸೆಟ್ಟಾಗಿ,
ಅಲ್ಲೇ
ರಾಮ ಪ್ರತ್ಯಕ್ಷವಾಗಿ
ಸಚಿನ್‌ನಂತೆ
ಪೆಪ್ಸಿ ಹಿಡಿದು
'ಎ ದಿಲ್ ಮಾಂಗೆ ಮೋರ್' ಎಂದ.

ಅಂದವನೇ
ಬಾಟಲಿ ಬಿಚ್ಚಿ
ಅಜ್ಜಿಯ ತಲೆಯ ಮೇಲೆ
ಸುರಿದೇ ಬಿಟ್ಟ.

ಆ ಆಗ
ಅವಳ ಸೊಂಟದ
'ಬಾಳೇಕಾಯಿ ಗಂಟು'
ಸಿಡಿದು
ಸಾವಿರಾರು ಕತೆಗಳು
ಬೀದಿಪಾಲಾಗಿ, ತಾವಿಗಾಗಿ
ಹಪಹಪಿಸುತ್ತಿದ್ದಾಗ
ಕಣ್ಣು ಬಿಟ್ಟೆ
ಎದುರಿಗೆ ಅಜ್ಜಿಯ ಫೋಟೋ
ಕಾಣಿಸಿತು
ಕತೆಗಳಿಗಾಗಿ ತಡಕಾಡಿದೆ
ಸಿಗಲಿಲ್ಲ.

ಅದನ್ನು ಕಂಪ್ಯೂಟರ್‌ನಲ್ಲಿ
ಲ್ಯಾಮಿನೇಟ್ ಮಾಡಲಾಗಿತ್ತು.

ಈ ಈಗ
ಆ ಕತೆಗಳನ್ನು ಹುಡುಕಿ
ಕೂಡಿಟ್ಟು
ಅಜ್ಜಿಯನ್ನು ಬದುಕಿಸಿಕೊಳ್ಳಲು

ಆ ಮಹಾಗುರು
ಮಂಟೇದನ ಜೋಳಿಗೆಗಾಗಿ
ಹುಡುಕುತ್ತಿದ್ದೇನೆ...

ಆ ಮಾಯ್ಕಾರನ
ಅಡ್ರೆಸ್ ಸಿಕ್ಕಿದರೆ
ದಯವಿಟ್ಟು ಕೊಡಿ.

ನಕ್ಸಲೀಯರ ಸಭೆಯೊಂದರಲ್ಲಿ ಹಾಡುತ್ತಿರುವ ಕ್ರಾಂತಿಕವಿ ಗದ್ದರ್

## ಜಿಜ್ಞಾಸೆ

**ಕನ್ನಡದ ಬಂಡಾಯ ಸಾಹಿತ್ಯದತ್ತ ಕಣ್ಣಾಡಿಸಿದರೆ ತೆಲುಗು-ಮರಾಠಿಯಲ್ಲಿ ಬಂಡುಕೋರ ಪರಂಪರೆ ಮುಂದುವರೆದಿರುವಂತೆ ಇಲ್ಲಿ ಮುಂದುವರೆದಿಲ್ಲ. ಬಂಡಾಯವನ್ನು 'ಮಾರ್ಗ'ದಂತೆ ಪರಿಭಾವಿಸಿಕೊಂಡು ಬರೆಯುವ ಯುವ ಬರಹಗಾರರು ಒಬ್ಬರೂ ಸಿಗಲಿಕ್ಕಿಲ್ಲ. ಬಂಡಾಯದ ಮಹತ್ತನ್ನು ನಿರಾಕರಿಸುವ ಈ ಉದ್ದೇಶ ಖಂಡಿತಾ ಈ ಬರಹಕ್ಕಿಲ್ಲ. 'ಖಡ್ಗವಾಗಲಿ ಕಾವ್ಯ' ಎಂಬ ಬಲು ದೊಡ್ಡ ಆಶಯದೊಂದಿಗೆ ಶುರುವಾದ ಬಂಡಾಯ ಚಳವಳಿ ಅದನ್ನೊಂದು ಬಿಡದ ವ್ರತದಂತೆ ಮುಂದುವರೆಸಿಕೊಂಡು ಹೋಗಲಿಲ್ಲವೇಕೆ ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಹುಡುಕಾಟ ನಡೆಸಿದ ಫಲ ಈ ಲೇಖನ.**

○ ವೈ. ಗ. ಜಗದೀಶ

# ಕವಿ, ಕಷ್ಟಜೀವಿ ಮತ್ತು ಬಂಡಾಯ

'ಖಡ್ಗವಾಗಲಿ ಕಾವ್ಯ, ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎಂಬ ಬಂಡಾಯ ಸಾಹಿತ್ಯ ಸಂಘಟನೆಯ ಆಶಯ ಈಗ ಕನ್ನಡ ನೆಲದಲ್ಲಿ ಮೆಲುದನಿಯಲ್ಲೂ ಕೇಳುತ್ತಿಲ್ಲ. ಬಂಡಾಯದ ಮಗು ಅನಾಥವಾಗಿ ಬಡವಾಗಿದೆ.

ಎಂಬತ್ತರ ದಶಕದ ಈ ಘೋಷ ವಾಕ್ಯದಡಿ ಕಥೆ-ಕಾವ್ಯ ಸೃಷ್ಟಿಸಿದ ಹಲವು ಸೃಜನಶೀಲ ಮನಸ್ಸುಗಳು ಕಾರಣಾಂತರಗಳಿಂದ ಇಂದು ವಿಶ್ರಾಂತತೆಗೆ ತಲುಪಿವೆ. ಪರ್ಯಾಯ ಸಮ್ಮೇಳನ, ಪ್ರತಿಭಟನಾ ಸಮ್ಮೇಳನ ನಡೆಸುತ್ತಿದ್ದ ಹಲವು ಬಂಡಾಯ ಸಾಹಿತಿಗಳು ಇಂದು ಆ ಹಣೆಪಟ್ಟಿಯಡಿ ಗುರ್ತಿಸಿಕೊಳ್ಳಲು ಸಹ ಹಿಂದೇಟು ಹಾಕುತ್ತಿದ್ದು, ಕನ್ನಡ ಸಾಹಿತ್ಯ ಪರಿಷತ್‌ನ ಸಮ್ಮೇಳನದಲ್ಲಿ ಯಾವುದೇ ಮುಜುಗರವಿಲ್ಲದೇ ಭಾಷಣಕಾರರಾಗಿ ಪಾಲುಗೊಳ್ಳುತ್ತಿದ್ದಾರೆ. ತನ್ನದೇ 'ಮಾರ್ಗ'ವೊಂದನ್ನು ಹಾಕಿಕೊಡಲು ಹೊರಟಿದ್ದ ಕನ್ನಡ ಸಾಹಿತ್ಯದ ಪ್ರತಿಭಟನಾ ದನಿಯೊಂದು ಕ್ರಮೇಣ 'ಸಾಹಿತ್ಯದ ಮುಖ್ಯವಾಹಿನಿ'ಯಲ್ಲಿ ಲೀನವಾಗುತ್ತಿದೆ.

ಬಂಡಾಯ ಸಾಹಿತ್ಯ ಸಂಘಟನೆಯನ್ನು ಪುನಃಶ್ಚೇತನಗೊಳಿಸುವ ಭರವಸೆಯ ಯತ್ನ ಪದೇ ಪದೇ ನಡೆಯುತ್ತಿದ್ದರೂ ಅದರ ಕ್ರಿಯಾತ್ಮಕ ಸಾಫಲ್ಯ ಅಸಹಜವೇನೋ ಎಂಬಷ್ಟರ ಮಟ್ಟಿಗೆ ಕನ್ನಡ ಸಾಹಿತ್ಯದ 'ರಾಜಕೀಯ' 'ಸಾಮಾಜಿಕ' ಸಂಗತಿಗಳು ಬದಲಾಗುತ್ತಿವೆ. ದಲಿತ ಸಂಘರ್ಷ ಸಮಿತಿ, ರೈತಸಂಘಗಳು ಹೋಳು ಹೋಳುಗಳಾಗಿ ಒಡೆದು ಹೋರಾಟವೆನ್ನುವುದು ತಾತ್ಕಾಲಿಕ ಬೇಡಿಕೆಯೊಂದರ ಪೂರೈಕೆಗೆ ಮಾತ್ರ ಎಂಬಂತಾಗಿದೆ. ಬಹುಶಃ ಕನ್ನಡದ ನೆಲದಲ್ಲಿ ಶ್ರಮಜೀವಿಗಳ ಚಳವಳಿಯೊಂದು ತನ್ನ ಬೇರುಗಳನ್ನು ಆಳ-ಅಗಲಕ್ಕೆ ಹರವಿಕೊಳ್ಳದೇ ಸಂಸದೀಯ ರಾಜಕಾರಣದ ಬಿರುಗಾಳಿಗೆ ಸಿಕ್ಕ ತರಗೆಲೆಯಂತೆ ಆಗಿದ್ದುದೇ ಬಂಡಾಯ ಸಾಹಿತ್ಯ ಚಳವಳಿಯ ಅಕಾಲಿಕ ಅಬಾರ್ಷನ್‌ಗೆ ಕಾರಣವಾಗಿರಲೂಬಹುದು. ಕನ್ನಡದ ನೆಲದಲ್ಲಿ ರೈತಸಂಘ, ದಲಿತ ಸಂಘ ಮತ್ತು ಹಿಂದುಳಿದ ಸಂಘಟನೆಗಳ ಕಾಳಜಿಯುಳ್ಳ ಪ್ರಮುಖರು ಇದೀಗ 'ಪರ್ಯಾಯ ರಾಜಕೀಯ ಶಕ್ತಿ'ಯೊಂದನ್ನು ಹುಟ್ಟುಹಾಕುವಲ್ಲಿ, ಸಕ್ರಿಯಗೊಳಿಸುವಲ್ಲಿ ಅವಿರತ ಶ್ರಮ ಹಾಕುತ್ತಿರುವುದು, ನಿಧನಿಧಾನಕ್ಕೆ ಕ್ರಾಂತಿಕಾರಿ ಚಳವಳಿಯೊಂದು ಬೇರು ಬಿಡುತ್ತಿರುವುದು ಬಂಡಾಯದ ಮರುಹುಟ್ಟಿನ ಆಶೆಗೆ ನೀರೆರೆದಿದೆ. ಈ ಎರಡೂ ಯತ್ನಗಳು ಯಶಸ್ಸಿನ ಕಡೆಗೆ ಏಕಮುಖವಾದರೆ ಮಾತ್ರ ಬಂಡಾಯ ಚಳವಳಿ ಮತ್ತೆ ಜೀವ ಚೈತನ್ಯ ಪಡೆಯಲಿದೆ.

ಸಮಾಜದ ಕೆಳಸ್ತರವಾದ ಆರ್ಥಿಕ ಸಂಬಂಧಗಳಲ್ಲಿ ವರ್ಗ ಸಂಘರ್ಷ ತೀವ್ರವಾಗದೇ, ಮೇಲುಸ್ತರದ ಅಥವಾ ಸಮಾಜದ ಉಪ ಉತ್ಪನ್ನ (ಬಯ್‌ಪ್ರೊಡಕ್ಟ್) ವೆನ್ನಬಹುದಾದ ಸಾಹಿತ್ಯ - ಸಂಸ್ಕೃತಿಯಲ್ಲಿ ಮಾತ್ರ ಸ್ವಕಪೋಲಕಲ್ಪಿತ ವರ್ಗ ಸಂಘರ್ಷವನ್ನು ಸೃಷ್ಟಿಸಲು ಮುಂದಾಗಿದ್ದುದೇ ಬಂಡಾಯದ ಹಿನ್ನಡೆಗೆ ಕಾರಣವಾಗಿರಬಹುದು. ಸಾಹಿತ್ಯ ಸಮಾಜದ ಪ್ರತಿಬಿಂಬ ಮತ್ತು ಗತಿಬಿಂಬ ಎಂಬುದನ್ನು ಈಗಲೂ ಒಪ್ಪುವುದಾದರೆ ಬಂಡಾಯ ಚಳವಳಿಯ ಸಂದರ್ಭದಲ್ಲಿ ಸೃಷ್ಟಿಯಾದ ಸಾಹಿತ್ಯ ಅದರೆಲ್ಲ ಸೃಜನಶೀಲತೆಗಳನ್ನು ಒರೆಗಚ್ಚಿ ನೋಡಿದರೂ ಅದು ಆ ಕಾಲದ ಒತ್ತಡದಲ್ಲಿ ಕುದಿಕುದಿದು ರೂಪುಗೊಂಡದ್ದಲ್ಲ.

ಸಂಘರ್ಷದ ನೆಲೆಗಳನ್ನು ತುಸು ಉತ್ಪ್ರೇಕ್ಷಿಸಿ, ವೈಭವೀಕರಿಸಿ, ಒಂದರ್ಥದಲ್ಲಿ ಪರಭಾಷೆಯಿಂದ ಎರವಲು ಪಡೆದು ಕನ್ನಡದಲ್ಲಿ ಬಂಡಾಯ ಚಿಂತನೆಯ ಕಸಿಮಾಡಲಾಯಿತು. ಅದು ಸಮಾಜದ ಪರಿಪಕ್ವತೆಯ ಕೆನೆಯಿಂದ ರೂಪುಗೊಂಡ ಮೊಸರಾಗದೇ ಕೃತಕ ಹುಳಿ ಬಳಸಿ ಹೆಪ್ಪು ಮಾಡಿದ ಒಡಕು ಮೊಸರಾಗಿತ್ತು. ಹಾಗಾಗಿಯೇ ಅದು ವಚನಕಾರರ ಪರಂಪರೆಯಾಗಿ ಮುಂದುವರೆಯಲಿಲ್ಲ.

ಹಾಗಂತ ಬಂಡಾಯ ಚಳವಳಿಯ ಹೊತ್ತಿನಲ್ಲಿ ಬಂದ ಸಕಲ ಕೃತಿಗಳನ್ನು ಈ ತಕ್ಕಡಿಯಲ್ಲಿ ಹಾಕಿ ತೂಗುವಂತೆಯೂ ಇಲ್ಲ. ಆದರೆ ಈ ರೀತಿಯ ನಿಷ್ಠುರ ವಿಮರ್ಶೆಯ ಹಿಂದಿನ ಗ್ರಹೀತ ಪ್ರಶ್ನೆಯೆಂದರೆ; ಅಂತಹದೊಂದು ಘನ ಮತ್ತು ವಿಶಾಲ ಆಶಯಗಳುಳ್ಳ ಚಳವಳಿ. ಅದಕ್ಕೆ ಪೂರಕವಾಗಿ ಸಂರಚನೆಗೊಂಡ ಸಾಹಿತ್ಯ ಇಂದೇಕೆ ಅದೇ ಸಾಹಿತಿಗಳಿಗೆ ಒಗ್ಗುತ್ತಿಲ್ಲ. ಆಗಿನ ಸಾಹಿತ್ಯ ಸ್ವಯಂಕಲ್ಪಿತ ಸೃಷ್ಟಿಯಾದ್ದರಿಂದ ಈಗದು ಅವರಿಗೆ ಒಗ್ಗುತ್ತಿಲ್ಲವೇ ಎಂಬ ಅನುಮಾನದ ತಕರಾರು ಇಲ್ಲಿಯದು.

ಕನ್ನಡದ ಬಂಡಾಯ ಚಳವಳಿಗೆ ಪ್ರೇರಕ ಹಾಗೂ 'ಮಾರ್ಗ'ದಾಯಕವಾಗಿದ್ದ ತೆಲುಗು ಮತ್ತು ಮರಾಠಿ ಸಾಹಿತ್ಯ ಇಂದು ತಲುಪಿರುವ ಉನ್ನತಿ, ಸಾಧಿಸಿದ ಯಶಸ್ಸನ್ನು ಯಾವುದೇ ಕನ್ನಡಕಗಳಿಲ್ಲದೇ, ಪೂರ್ವಾಗ್ರಹಗಳಿಲ್ಲದೇ ದಿಟ್ಟಿಸಿದರೆ ಈ ಅನುಮಾನಗಳಿಗೆ ಸಾಕಷ್ಟು ಪುರಾವೆಗಳು ಸಿಗುತ್ತವೆ.

೧೯೭೦ರ ಆಜುಬಾಜಿನಲ್ಲಿ ಮರಾಠಿ ನೆಲದಲ್ಲಿ ಶುರುವಾಗಿದ್ದ ದಲಿತ ಫ್ಯಾಂಥರ್ಸ್ ಮತ್ತು ತೆಲುಗು ಸಾಹಿತ್ಯದಲ್ಲಿ ಸ್ಫೋಟಕದಂತಿದ್ದ ಪುರೋಗಾಮಿ ಪಂಥೀಯರು, ದಿಗಂಬರ ಕವಿಗಳು ಕನ್ನಡದ ಬಂಡಾಯ ಚಳವಳಿಗೆ ಪ್ರೇರಕಶಕ್ತಿಯಾಗಿದ್ದರು. ಕನ್ನಡದ ಸಾಹಿತಿಗಳಲ್ಲಿ ಪುಟಿದೇಳುತ್ತಿದ್ದ ಬಂಡಾಯ ಮನೋಭಾವನೆಯು ಬೊಬ್ಬಿರಿಯಲು ಕಾರಣವಾಗಿದ್ದು ಅಕ್ಕಪಕ್ಕದ ನೆಲದಲ್ಲಿ ಓತಪ್ರೋತವಾಗಿ ಸಿಡಿಯುತ್ತಿದ್ದ ಈ ಗುಂಡಿನಂತಹ ಸಾಹಿತ್ಯವೆ.

ಮರಾಠಿಯ ದಲಿತ ಪ್ಯಾಂಥರ್ಸ್ ಚಳವಳಿಯ ಕುದಿವ ಕೆಂಡದಲ್ಲಿ ಬಿಸಿಯುಗುಳುತ್ತಲೇ ಜಾತಿಪದ್ಧತಿಯ ಕಠೋರ ನಿಯಮಗಳ ವಿರುದ್ಧ ಕಿಡಿಕಾರಿದ ಅನೇಕ ಲೇಖಕರು ಇಂದು ಮುಖ್ಯವಾಹಿನಿಗೆ ಸೇರಿಹೋಗಿದ್ದಾರೆ. ಹಾಗಿದ್ದೂ ಹಲವಾರು ದಲಿತ ಲೇಖಕರು ಕತೆ-ಕಾದಂಬರಿಯಂತಹ ಕಾಲ್ಪನಿಕ ಸಾಹಿತ್ಯ ಸೃಷ್ಟಿಗೆ ಪರ್ಯಾಯವಾಗಿ ಆತ್ಮಚರಿತ್ರೆಯಂತಹ ಹಳೆ ಪ್ರಕಾರವನ್ನು ಪ್ರತಿಭಟನಾ ಸಾಹಿತ್ಯಕ್ಕೆ ಮಾದರಿ ಎಂಬಂತೆ ಯಶಸ್ವಿಯಾಗಿ, ಸಮರ್ಥವಾಗಿ ಬಳಸಿದ್ದಾರೆ. ಅಕ್ಕರ ಮಾಶಿ, ಉಚಲ್ಯಾ, ಸಂಬೋಳಿಯಂತಹ ಹಲವಾರು ಕೃತಿಗಳು ಈ ಮಾತನ್ನು ಸಾಕ್ಷೀಕರಿಸುತ್ತವೆ.

ಇದೇ ರೀತಿ ಕನ್ನಡದ ಚಳವಳಿಗೆ ಬೆನ್ನೆಲುಬಾಗಿ ನಿಂತಿದ್ದು ತೆಲುಗಿನ ಕ್ರಾಂತಿಕಾರಿ ಸಾಹಿತ್ಯ. ಸಾಹಿತಿಗಳು ಜನರ ಸಮಸ್ಯೆಯನ್ನು, ಬಡವರ ಬವಣೆಯನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಸಲು ಹಿಂದೆ ಮುಂದೆ ನೋಡುತ್ತಿದ್ದಾಗ, ಸಮಾಜದ ಜಡತೆಯನ್ನು ಬಡಿದೆಬ್ಬಿಸಿ, ನಿಂತ ನೀರಾಗಿದ್ದ ಸಾಹಿತ್ಯಕ್ಕೆ ಪ್ರವಾಹದ ಬಿರುಸನ್ನ-ಚಲನಶೀಲತೆಯನ್ನ ನೀಡಿದವರು ತೆಲುಗಿನ ದಿಗಂಬರ ಕವಿಗಳು. ಜಡ್ಡುಗಟ್ಟಿದ ಸಮಾಜವನ್ನು ಎಚ್ಚರಿಸಲು ಛಾಟಿಯೇಟಿನಂತಹ ಒರಟು ಭಾಷೆಯನ್ನು ಬಳಸಿದರು. ಮಡುಗಟ್ಟಿದ ಮೌನ ಮುರಿಯಲು ಉಗ್ರವಾಗಿ, ಅಶ್ಲೀಲವಾಗಿ ಖಡಕ್ ಆಗಿ ಹೇಳಿದರೆ ಮಾತ್ರ ಸಾಧ್ಯ ಎಂದು ತಮ್ಮನ್ನು ದಿಗಂಬರರೆಂದು ಕರೆದುಕೊಂಡರು.

ಚೆರಬಂಡರಾಜು, ನಗ್ನಮುನಿ, ಅಗ್ನಿ ಶಿಖೆ, ಜ್ವಾಲಾಮುಖಿ, ನಿಖಿಲೇಶ್ವರ್ ಎಂಬ ವಿಭಿನ್ನ ಹೆಸರುಗಳಿಂದ ಗುರ್ತಿಸಿಕೊಂಡ ಈ ದಿಗಂಬರ ಕವಿಗಳು ಸಮಾಜದ ಚಲನೆಯ ಸುತ್ತ ದಟ್ಟವಾಗಿ ಕಟ್ಟಿದ್ದ ಮಂಜಿನ ಗೆಡ್ಡೆಯನ್ನು ತಮ್ಮ ಕಾವ್ಯ ಶಕ್ತಿಯಿಂದ ಛಿದ್ರಛಿದ್ರಗೊಳಿಸಿದರು.

ಈ ಕವಿಗಳ ನಾಯಕರಂತಿದ್ದ ಚೆರಬಂಡರಾಜು ತೀವ್ರ ಕಾಯಿಲೆಯಿಂದ ನರಳುತ್ತಿದ್ದರು. ಜನರಿಗಾಗಿ ಕಾವ್ಯ ಬರೆಯುವುದ ಬಿಡಲಿಲ್ಲ. 'ಕಟಕಟೆ ಹತ್ತಲು ಬಿಡಿ' ಎಂದು ಬರೆದ ಅವರನ್ನ ಸರ್ಕಾರದ ವಿರುದ್ಧ ಪಿತೂರಿಯ ಆರೋಪದ ಮೇಲೆ ಜೈಲಿಗೆ ತಳ್ಳಿದ ಸರ್ಕಾರ ಅವರ ಗಂಭೀರ ಕಾಯಿಲೆಗೆ ಚಿಕಿತ್ಸೆ ನೀಡದೆ ಅವರನ್ನ ಸಾಯಿಸಿತು.

ಜನಹೋರಾಟ, ಸಮಾಜದ ಬದಲಾವಣೆಯ ಮಹೋನ್ನತ ಧ್ಯೇಯದಲ್ಲಿ ಕಾಯಿಲೆಯ ನೋವನ್ನು ನುಂಗಿಕೊಂಡು ಚೆರಬಂಡರಾಜು ಬರೆದರು.

೧ ಪೆನ್ನಿನ ದನಿ ಪ್ರಾಣವೆನಗೆ
ಪ್ರಜೆಗೆ ನಾನು ಅರ್ಪಿತ
ಹೋರಾಟವೆ ಡೈರೆಕ್ಷನ್
ಹಾಡು ನನಗೆ ಆಕ್ಸಿಜನ್
೨ ನೇಣಿಗೆ ನಾ ಹಾಡ ಕಲಿಸಿ
ಪಲ್ಲವಿಯನು ಹಾಡಿಸುವೆ
ಮುಂಗೈಯನು ಕಡಿಯೆ ನಾನು
ಹಿಡಿದ ಕತ್ತಿ ಕೈಯ ಬಿಡೆನು.

ಪ್ರಗತಿಶೀಲ ಪಂಥದಲ್ಲಿ ದೊಡ್ಡ ಹೆಸರು ಮಾಡಿದ್ದ ಕವಿ ಶ್ರೀರಂಗಂ ಶ್ರೀನಿವಾಸರಾವ್ (ಶ್ರೀಶ್ರೀ) ತಮ್ಮ 'ಮಹಾಪ್ರಸ್ಥಾನ್', 'ಮತ್ತೊಂದು ಪ್ರಸ್ಥಾನ್' ದಂತಹ ಕವನಸಂಕಲನಗಳ ಮೂಲಕ ಹೊಸ ಮಳೆಯನ್ನು ತೆಲುಗಿನಲ್ಲಿ ಸುರಿಸಿದರು. ಜನ ಹೋರಾಟದ ಕುಲುಮೆಯಲ್ಲಿ ತಮ್ಮನ್ನು ಒಡ್ಡಿಕೊಂಡು ಕಾವ್ಯಕ್ಕೆ ಬೆವರಿನ ವಾಸನೆ, ಮಣ್ಣಿನ ಕಂಪನ್ನು ತಮ್ಮ ಪದ್ಯದ ಪ್ರತಿಸಾಲಿನಲ್ಲಿ ದುಡಿವವರ ನೋವಿಗೆ - ಭಾವಕ್ಕೆ ಧ್ವನಿಯಾದರು. ಸಾಮಾಜಿಕ ಅಸಮಾನತೆ, ಪ್ರಭುತ್ವದ ದೌರ್ಜನ್ಯಗಳ ವಿರುದ್ಧ ಸಿಡಿಲಿನಂತೆ ಆರ್ಭಟಿಸಿದರು.

ಸಂಸ್ಕೃತ ಪದಪುಂಜಗಳನ್ನು ಬಳಸಿ ವಿದ್ವಜ್ಜನರಿಗೆ ಮಾತ್ರ ಅರ್ಥವಾಗುವಂತೆ ಬರೆಯುವುದೇ ನಿಜವಾದ ಸಾಹಿತ್ಯ ಎಂಬ ಭ್ರಮೆಯಲ್ಲಿ ಬರೆಯುತ್ತಿದ್ದ ಸಾಹಿತಿವರ್ಗವನ್ನು ತರಾಟೆಗೆ ತೆಗೆದುಕೊಂಡ ಶ್ರೀ ಶ್ರೀ 'ಕ್ಲಿಷ್ಟವಾಗಿ, ಜನರಿಗೆ ಅರ್ಥವಾಗುವಂತೆ ಬರೆಯುವಷ್ಟು ಸುಲಭದ ಕೆಲಸ ಮತ್ತೊಂದಿಲ್ಲ. ಹಾಗಾಗಿಯೇ ಅದು ಶ್ರೇಷ್ಠವಲ್ಲ. ಜನರ ಭಾಷೆಯಲ್ಲಿ ಜನರ ಪರವಾಗಿ, ಜನರಿಗೆ ಅರ್ಥವಾಗುವ ಸರಳ ಭಾಷೆಯಲ್ಲಿ ಬರೆಯುವುದೇ ಅತ್ಯಂತ ಕಷ್ಟದ ಕೆಲಸ ಮತ್ತು ಸಾಧಿಸಬೇಕಾದ ಕೆಲಸ' ಎನ್ನುತ್ತಾರೆ.

ಇದೇ ನಿಲುಮೆಯಲ್ಲಿ ಸಾಗಿದ ಶ್ರೀಶ್ರೀ 'ಕವಿ ಎಂದರೆ 'ಕಷ್ಟ ಜೀವಿ' ಯ ಎಡಬಲವಾಗಿ ನಿಲ್ಲಬಲ್ಲವನು. ಅವನ ಸಂಕಟಕ್ಕೆ, ನೋವಿಗೆ, ದಣಿವಿಗೆ ಮಿಡಿಯಬಲ್ಲವನು, ಎಂದು ಹೇಳುತ್ತಾ 'ಕಷ್ಟ ಜೀವಿ' ಎಂಬ ಪದದ ಮೊದಲ ಅಕ್ಷರ 'ಕ' ಹಾಗೂ ಕೊನೆಯ ಅಕ್ಷರ 'ವಿ' ಎಂಬ ಅಕ್ಷರಗಳನ್ನು ಜೋಡಿಸಿದರೆ 'ಕವಿ' ಎಂದಾಗುತ್ತದೆ. 'ಕವಿ' ಎಂಬ ಶಬ್ದ 'ಕಷ್ಟಜೀವಿ'ಗೆ ಎಷ್ಟು ಹೊಂದಿಕೊಳ್ಳುತ್ತದೆ ಎಂಬ ಪದ ಸಾದೃಶ್ಯವನ್ನು ವಿವರಿಸುತ್ತಾ ಕವಿಗೆ ಹೊಸ ವ್ಯಾಖ್ಯೆ ನೀಡುತ್ತಾರೆ.

೧೯೭೦ರ ಆಜುಬಾಜಿನಲ್ಲಿ ಮರಾಠಿ ನೆಲದಲ್ಲಿ ಶುರುವಾಗಿದ್ದ ದಲಿತ ಫ್ಯಾಂಥರ್ಸ್ ಮತ್ತು ತೆಲುಗು ಸಾಹಿತ್ಯದಲ್ಲಿ ಸ್ಫೋಟಕದಂತಿದ್ದ ಪುರೋಗಾಮಿ ಪಂಥೀಯರು, ದಿಗಂಬರ ಕವಿಗಳು ಕನ್ನಡದ ಬಂಡಾಯ ಚಳವಳಿಗೆ ಪ್ರೇರಕಶಕ್ತಿಯಾಗಿದ್ದರು. ಕನ್ನಡದ ಚಳವಳಿಗೆ ಬೆನ್ನೆಲುಬಾಗಿ ನಿಂತಿದ್ದು ತೆಲುಗಿನ ಕ್ರಾಂತಿಕಾರಿ ಸಾಹಿತ್ಯ. ಸಾಹಿತಿಗಳು ಜನರ ಸಮಸ್ಯೆಯನ್ನು, ಬಡವರ ಬವಣೆಯನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಸಲು ಹಿಂದೆ ಮುಂದೆ ನೋಡುತ್ತಿದ್ದಾಗ, ಸಮಾಜದ ಜಡತೆಯನ್ನು ಬಡಿದೆಬ್ಬಿಸಿ, ನಿಂತ ನೀರಾಗಿದ್ದ ಸಾಹಿತ್ಯಕ್ಕೆ ಪ್ರವಾಹದ ಬಿರುಸನ್ನ-ಚಲನಶೀಲತೆಯನ್ನ ನೀಡಿದವರು ತೆಲುಗಿನ ದಿಗಂಬರ ಕವಿಗಳು. ಜಡ್ಡುಗಟ್ಟಿದ ಸಮಾಜವನ್ನು ಎಚ್ಚರಿಸಲು ಛಾಟಿಯೇಟಿನಂತಹ ಒರಟು ಭಾಷೆಯನ್ನು ಬಳಸಿದರು. ಮಡುಗಟ್ಟಿದ ಮೌನ ಮುರಿಯಲು ಉಗ್ರವಾಗಿ, ಅಶ್ಲೀಲವಾಗಿ ಖಡಕ್ ಆಗಿ ಹೇಳಿದರೆ ಮಾತ್ರ ಸಾಧ್ಯ, ಎಂದು ತಮ್ಮನ್ನು ದಿಗಂಬರರೆಂದು ಕರೆದುಕೊಂಡರು.

ಆಗ ಅಧಿಕಾರದಲ್ಲಿದ್ದ ಸರ್ಕಾರ ಜನರ ಮೇಲೆ ಅಮಾನವೀಯ ದೌರ್ಜನ್ಯ ನಡೆಸಿದ್ದನ್ನು ಖಂಡಿಸಿದ ಶ್ರೀಶ್ರೀ ತಮಗೆ ಸರ್ಕಾರ ನೀಡಹೊರಟಿದ್ದ ತೆಲುಗು ಸಾಹಿತ್ಯ ವಿಶಾರದ' ಎಂಬ ಪ್ರಸಿದ್ಧ ಪ್ರಶಸ್ತಿಯನ್ನು ತಿರಸ್ಕರಿಸಿ ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿದ್ದರು. ಜನ ಹೋರಾಟವನ್ನು ಬಗ್ಗು ಬಡಿಯುವ ಕ್ರೂರಿ ಪ್ರಭುತ್ವ ನೀಡುವ ಪ್ರಶಸ್ತಿ ತಿರಸ್ಕರಿಸುವಂತೆ ಆಂಧ್ರದ ವಿದ್ಯಾರ್ಥಿ ಸಂಘಟನೆಗಳು ಶ್ರೀಶ್ರೀ ಅವರಿಗೆ ಮನವಿ ಮಾಡಿ ಭಾರಿ ಹೋರಾಟ ನಡೆಸಿದ್ದವು.

ವಿಪ್ಲವ ರಚಯಿತಲು ಸಂಘ (ವಿರಸಂ) ವನ್ನು ಮುನ್ನಡೆಸಿದ, ಇಂದಿಗೂ ಕ್ರಾಂತಿಕಾರಿ ಚಳವಳಿಯಲ್ಲಿ ಮುಂಚೂಣಿಯಲ್ಲಿರುವ ಕವಿ ವರವರರಾವು ಸಹ ಸಾಹಿತ್ಯ ಮುಖೇನ ಚಳವಳಿಗೆ ಕಷ್ಟಜೀವಿಗಳಿಗೆ ಬೆನ್ನೆಲುಬಾಗಿ ನಿಂತವರು. ಹೋರಾಟವನ್ನೇ ಉಸಿರಾಗಿ, ಬದುಕಿನ ಭಾವವಾಗಿ ಮಾಡಿಕೊಂಡ ವರವರರಾವು ಅದಕ್ಕಾಗಿ ಎರಡು ಮೂರು ಬಾರಿ ಜೈಲುವಾಸ ಅನುಭವಿಸಿದರು.

ಅಪರಾಧವೇ ಅಧಿಕಾರವಾಗಿ
ಜನರನ್ನ ಅಪರಾಧಿಗಳನ್ನಾಗಿಸಿ
ಬೇಟೆಯಾಡುತ್ತಿದ್ದಾಗ
ಬಾಯಿದ್ದೂ ಸುಮ್ಮನೆ ಕೂರುವ
ಪ್ರತಿಯೊಬ್ಬನೂ ಅಪರಾಧಿಯೆ...

ಎಂಬ ಕವಿತ್ವದ ನಿಲುವನ್ನ ಆಚರಣೆಯಲ್ಲೂ ಪಾಲಿಸಿಕೊಂಡು ಬಂದಿದ್ದಾರೆ. ಕನ್ನಡಕ್ಕೆ ಸುಂದರವಾಗಿ ಅನುವಾದಗೊಂಡಿರುವ ಅವರ ನೀಳ್ಗವಿತೆ 'ಸಮುದ್ರ'ದಲ್ಲಿ, 'ಏನಿದೆ ಸಮುದ್ರ ನೀರು ಉಪ್ಪು ಭರತದ ಹೊರತು. ಏನಿದೆ ಜೀವನ ಬೆವರೂ ರಕ್ತ ಹೋರಾಟದ ಹೊರತು' ಎಂದೆನ್ನುವ ವರವರರಾವು ಅವರ ಕಾವ್ಯದಲ್ಲಿ ಮೂಲಸ್ರೋತ್ರವಾಗಿ ಹೋರಾಟ ಮೈದಳೆದಿದೆ.

'ನೋರುನ್ನಮನಿಷಿ' (ಬಾಯುಳ್ಳ ಮನುಷ್ಯ) ಎಂಬ ಕವನದಲ್ಲಿ ಸಮಾಜದಲ್ಲಿ ಕವಿಯ ಪಾತ್ರವನ್ನು ಅವರು ಚಿತ್ರವತ್ತಾಗಿ ಅಭಿವ್ಯಂಜಿಸಿದ್ದಾರೆ. ಕಾಡಿನಲ್ಲಿನ ಪ್ರಾಣಿಗಳ ಬದುಕಿನ ಚಿತ್ರಣವೊಂದರ ಮೂಲಕ ಆರಂಭವಾಗುವ ಈ ಕವಿತೆಯಲ್ಲಿ,

ಮರದ ಮೇಲಿನ ಹಕ್ಕಿಗಳು
ಅಕರಾಳ ವಿಕರಾಳವಾಗಿ ಅರಚುತ್ತಾ
ಹುಲ್ಲು ತಿನ್ನುವ ಪಶುಗಳಿಗೆ
ಹಾಲು ಕುಡಿವ ಕರುಗಳಿಗೆ
ಹುಲಿಯ ಬರವನ್ನು ಎಚ್ಚರಿಸುತ್ತವೆ

ಕಾಲು ಕೈ ಹೊರತಾಗಿ
ಬಾಯಿಲ್ಲದ ಮನುಷ್ಯನಿಗೆ
ಒಳಿತು ಕೆಡುಕುಗಳನ್ನು ಯಾರು ಹೇಳಬೇಕು...

(ನೋರುನ್ನ ಮನಿಷಿ)

ಕಾಡಿನಲ್ಲಿ ತಮ್ಮ ಪಾಡಿಗೆ ತಾವು ಬದುಕುವ ಮೊಲ, ಜಿಂಕೆ, ಕಡವೆಯಂತಹ ಸಾಧು ಪ್ರಾಣಿಗಳು ಹುಲ್ಲು ತಿನ್ನುತ್ತಾ ಮರಿಗಳಿಗೆ ಹಾಲು ನೀಡುತ್ತಾ ಇರುತ್ತವೆ. ಅವುಗಳನ್ನು ತಿನ್ನುವ ಆಸೆಯಿಂದ ಅವಕ್ಕೆ ಗೊತ್ತಾಗದಂತೆ ಆಕ್ರಮಣಕಾರಿಯಾಗಿ ದಾಳಿ ಮಾಡುವ ಹುಲಿ-ಸಿಂಹಗಳಂತಹ ಕ್ರೂರ ಪ್ರಾಣಿಗಳ ಬರವನ್ನು ದೂರದಿಂದಲೇ ಗಮನಿಸಿದ ಮರದ ಮೇಲೆ ಕುಳಿತ ಹಕ್ಕಿಗಳು 'ಅಕರಾಳ-ವಿಕರಾಳವಾಗಿ ಕೂಗುತ್ತಾ ಸಾಧು

ಪ್ರಾಣಿಗಳಿಗೆ ಅಪಾಯದ ಮುನ್ಸೂಚನೆ ಕೊಡುತ್ತವೆ. ಮನುಷ್ಯ ಪ್ರಪಂಚದಲ್ಲಿ ಸಹ ಧ್ಸುಡಿದು ತಿನ್ನುವ ಸಮುದಾಯಕ್ಕೆ ಹೊರಗಿನ ಶತ್ರುಗಳ ಆಕ್ರಮಣ ಗೊತ್ತಾಗದು. ಮೇಲೆ ಕೂತಿರುವ ಕವಿಯೆಂಬ ಹಕ್ಕಿ 'ನೋರುನ್ನ ಮನಿಷಿ'ಯಾಗಿ ಜನರನ್ನ ಎಚ್ಚರಿಸಬೇಕು ಎಂದು ವರವರರಾವು ಅದ್ಭುತವಾಗಿ ಹೇಳಿದ್ದಾರೆ.

ಗದ್ದರ್ ಕೂಡ ತಮ್ಮ ನೂರಾರು ಹಾಡುಗಳಲ್ಲಿ ಈ ರೀತಿಯ ಭಾವವನ್ನೇ ಧ್ವನಿಸಿದ್ದಾರೆ. ತೆಲುಗಿನಲ್ಲಿ ನೂರಾರು ಅಜ್ಞಾತ ಕವಿಗಳು ಈ ಭಾವನೆಯ ಕವಿಗಳನ್ನು ನಿತ್ಯವೂ ಬರೆಯುತ್ತಿದ್ದಾರೆ- ಅಂತೆಯೇ ಬದುಕುತ್ತಿದ್ದಾರೆ.

ಈ ಬೆಳಕಿನಲ್ಲಿ ಪುನಃ ಕನ್ನಡದ ಬಂಡಾಯ ಸಾಹಿತ್ಯದತ್ತ ಕಣ್ಣಾಡಿಸಿದರೆ ತೆಲುಗು-ಮರಾಠಿಯಲ್ಲಿ ಬಂಡುಕೋರ ಪರಂಪರೆ ಮುಂದುವರೆದಿರುವಂತೆ ಇಲ್ಲಿ ಮುಂದುವರೆದಿಲ್ಲ. ಬಂಡಾಯವನ್ನು 'ಮಾರ್ಗ'ದಂತೆ ಪರಿಭಾವಿಸಿಕೊಂಡು ಬರೆಯುವ ಯುವ ಬರಹಗಾರರು ಒಬ್ಬರೂ ಸಿಗಲಿಕ್ಕಿಲ್ಲ. ಬಂಡಾಯದ ಮಹತ್ತನ್ನು ನಿರಾಕರಿಸುವ ಈ ಉದ್ದೇಶ ಖಂಡಿತಾ ಈ ಬರಹಕ್ಕಿಲ್ಲ. 'ಖಡ್ಗವಾಗಲಿ ಕಾವ್ಯ' ಎಂಬ ಬಲು ದೊಡ್ಡ ಆಶಯದೊಂದಿಗೆ ಶುರುವಾದ ಬಂಡಾಯ ಚಳವಳಿ ಅದನ್ನೊಂದು ಬಿಡದ ವ್ರತದಂತೆ ಮುಂದುವರೆಸಿಕೊಂಡು ಹೋಗಲಿಲ್ಲವೇಕೆ ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಹುಡುಕಾಟ ನಡೆಸಿದ ಫಲ ಈ ಲೇಖನ.

> **ಬಂಡಾಯ ಸಾಹಿತಿಗಳಿಗೆ ವಸ್ತುವಾಗಿದ್ದ ಅನೇಕ ಸಂಗತಿಗಳು ಇಂದು ಮೂಲೆ ಸೇರಿವೆ. 'ಅಸ್ಪೃಶ್ಯ' ಭಾವನೆ ಮನೆ ಮಾಡಿದೆ. ತಿಳಿಬಾನು ಗಿರಿಕಾನುಗಳೇ ಮತ್ತೆ ಸ್ಫೂರ್ತಿಯ ಸೆಲೆಯಾಗುತ್ತಿವೆ. ಅದು ತಪ್ಪೆಂಬುದು ಇಲ್ಲಿಯ ಒಕ್ಕಣಿಕೆಯಲ್ಲ. ಬಂಡಾಯ ಚಳವಳಿ ಅಸ್ತಿಭಾರವನ್ನು ಹಾಕಿಕೊಟ್ಟಿದ್ದರೂ ಅದನ್ನು ಪರಂಪರೆಯಾಗಿ ಮುಂದುವರೆಸಿಕೊಂಡು ಹೋಗುವ ದರ್ದು ಇಂದಿನವರಿಗೆ ಏಕಿಲ್ಲ ಎಂಬ ಪ್ರಶ್ನೆಯಷ್ಟೆ ನನ್ನದು.**

ಇಂದು ಬರೆಯುತ್ತಿರುವ ಯುವ ಬರಹಗಾರರು ಬಂಡಾಯವನ್ನು ಮಾರ್ಗ ಎಂದು ಒಪ್ಪಲು ಸಿದ್ಧರಿಲ್ಲ. ಬಂಡಾಯ ಸಾಹಿತಿಗಳಿಗೆ ವಸ್ತುವಾಗಿದ್ದ ಅನೇಕ ಸಂಗತಿಗಳು ಇಂದು ಮೂಲೆ ಸೇರಿವೆ. 'ಅಸ್ಪೃಶ್ಯ' ಭಾವನೆ ಮನೆ ಮಾಡಿದೆ. ತಿಳಿ ಬಾನು ಗಿರಿಕಾನುಗಳೇ ಮತ್ತೆ ಸ್ಫೂರ್ತಿಯ ಸೆಲೆಯಾಗುತ್ತಿವೆ. ಅದು ತಪ್ಪೆಂಬುದು ಇಲ್ಲಿಯ ಒಕ್ಕಣಿಕೆಯಲ್ಲ. ಬಂಡಾಯ ಚಳವಳಿ ಅಸ್ತಿಭಾರವನ್ನು ಹಾಕಿಕೊಟ್ಟಿದ್ದರೂ ಅದನ್ನು ಪರಂಪರೆಯಾಗಿ ಮುಂದುವರೆಸಿಕೊಂಡು ಹೋಗುವ ದರ್ದು ಇಂದಿನವರಿಗೆ ಏಕಿಲ್ಲ ಎಂಬ ಪ್ರಶ್ನೆಯಷ್ಟೆ ನನ್ನದು. ಬಂಡಾಯ ಚಳವಳಿಯನ್ನು ಸಮರ್ಥವಾಗಿ ಮುನ್ನಡೆಸಿದ ಮಂದಿ ಈಗಲಾದರೂ ತಮ್ಮ ನಡೆಯನ್ನು ಹಿಂತಿರುಗಿ ನೋಡುವ ಕೆಲಸ ಮಾಡಬೇಕು. ಹಾಗೆಯೇ 'ಪರ್ಯಾಯ ರಾಜಕೀಯ ಶಕ್ತಿ'ಯನ್ನು ಕಟ್ಟಲು ರಾಜ್ಯದಾದ್ಯಂತ ಓಡಾಡುತ್ತಿರುವ ಪ್ರಮುಖರೂ ಸಹ ಸಾಂಸ್ಕೃತಿಕ ಮತ್ತು ಸಾಹಿತ್ಯಕ ರಾಜಕಾರಣದ ಚಟುವಟಿಕೆಯನ್ನು ಬೆಳೆಸುವಂತಹ ಕೆಲಸಕ್ಕೂ ಕೈಹಾಕಬೇಕು. □



## ಹೆಬ್ಬೆರಳು

ಹೆಬ್ಬೆರಳು ಮುಷ್ಟಿಯೊಳಗಿದ್ದರೆ
ಸೆರೆ ಮಂಚಮ ಸೊನ್ನೆ
ಹೆಬ್ಬೆರಳು ಮುಷ್ಟಿ ಬಳಸಿದ್ದರೆ
ಗೆಳೆ ಪಂಚಮ ಮಾನ್ಯ

ವರ್ಣ ನಾಲ್ಕರ ನಡುವೆ
ಪಂಚಮನ ವಂಚಿಸಿ
ಬಿಗಿ ಹಿಡಿಯಲು ಬಿಕ್ಕಟ್ಟು
ಧರ್ಮ ಫ್ಯಾಸಿಸ್ಟ್

ವರ್ಣ ನಾಲ್ಕರ ಸುತ್ತ
ಪಂಚಮನ ಪ್ರೀತಿ
ಬಂಧನವಿರಲು ಒಗ್ಗಟ್ಟು
ಧರ್ಮ ಕಮ್ಯೂನಿಸ್ಟ್

ಹೆಬ್ಬೆರಳ ವಿನಹ
ಅಕ್ಷರ ವಿನ್ಯಾಸ
ಶಸ್ತ್ರಸನ್ನಾಹ
ವ್ಯರ್ಥ ಸಾಹಸ

ತುಟಿ ಬಿಚ್ಚದೆ ತಂದಿರಿಸಿದ
ಗುರು ದಕ್ಷಿಣೆ
ಏಕಲವ್ಯ ಹೆಬ್ಬೆರಳು
ಯಾರ ಕೊರಳಿಗೆ ಉರುಳು !

○ ಪ್ರೊ॥ ಶಿವರಾಮಯ್ಯ


ಸಂವಾದ





## ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

### ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ದಲಿತ ಸಮಸ್ಯೆಗಳು ಉದ್ಯೋಗಗಳಿಗೆ ಮಾತ್ರ ಸೀಮಿತಗೊಂಡಿಲ್ಲ ಎಂದು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ. ಇವೆಲ್ಲ ಭಾರತದ ಪ್ರಜಾಸತ್ತಾತ್ಮೀಕರಣದ ಬಗ್ಗೆ ಇರುವಂಥದ್ದು. ಇದು ಬಂಡವಾಳ ಮಾರುಕಟ್ಟೆ, ಕೈಗಾರಿಕೆ, ವ್ಯಾಪಾರ, ಸಿನೆಮಾ, ಮಾಧ್ಯಮ, ಜ್ಞಾನ ಮತ್ತು ಭೂಸುಧಾರಣೆಯನ್ನು ಸಹ ಒಳಗೊಳ್ಳುತ್ತದೆ. ಉದ್ಯೋಗ ಮೀಸಲಾತಿಯು ಸಂಪೂರ್ಣ ಚರ್ಚೆಯ ಒಂದು ಭಾಗವಾಗಿದೆ ಅಷ್ಟೇ. ಆರೋಗ್ಯಪೂರ್ಣ ಚರ್ಚೆಯಲ್ಲಿ ಒಂದು ಸತ್ಯವು ಇತರ ನೂರು ಸತ್ಯಗಳನ್ನು ಮಸುಕಾಗಿಸುವ ಶಕ್ತಿಯನ್ನೊಂದಿರುತ್ತದೆ. ಆದಾಗ್ಯೂ ಈ ತಜ್ಞರನಿಸಿ ಕೊಂಡವರು ನೂರು ಸತ್ಯ ವನ್ನು ಮುಚ್ಚಲು ಒಂದು ಸತ್ಯವನ್ನು ಬಳಸಿಕೊಳ್ಳುತ್ತಾರೆ.

○ ಚಂದ್ರಭಾನ್ ಪ್ರಸಾದ್

ಅನು: ಕೆ.ವಿದ್ಯಾ, ಡಿ.ಡೊಮಿನಿಕ್

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

# ಪಾಲು ಎಂದರೆ ವ್ಯಾಪಾರ

ದಲಿತರಿಗೆ ಖಾಸಗಿ ವಲಯದ ಪಾಲಿನ ಬಗ್ಗೆ ಚರ್ಚೆಯಲ್ಲಿ ದಲಿತರ ಹಕ್ಕುಗಳು ಮತ್ತು ಮೀಸಲಾತಿಯ ಬಗ್ಗೆ ಯಾವುದೇ ಜ್ಞಾನವಿಲ್ಲದ ಪರಿಚಯವಿಲ್ಲದ ಹೊಸಮುಖಗಳನ್ನು ತೋರಿಸಲಾಗಿದೆ. ಬ್ರಾಹ್ಮಣರ ಮತ್ತು ಬನಿಯಾರ ಸುಭದ್ರ ಸ್ಥಾನವಾದ ಭಾರತೀಯ ಮಾಧ್ಯಮವು - ಈ ಮುಖಗಳನ್ನು ಪತ್ತೆ ಹಚ್ಚಿದ್ದಾರೆ. ಇವರೆಲ್ಲ ಅಮೆರಿಕನ್ ವ್ಯವಸ್ಥೆಯ ಬಗ್ಗೆ ಎಲ್ಲಾ ತಿಳಿದುಕೊಂಡವರಂತೆ ನಟಿಸುತ್ತಿದ್ದಾರೆ.

ದಲಿತ ಸಮಸ್ಯೆಗಳು ಉದ್ಯೋಗಗಳಿಗೆ ಮಾತ್ರ ಸೀಮಿತಗೊಂಡಿಲ್ಲ ಎಂದು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ. ಇವೆಲ್ಲ ಭಾರತದ ಪ್ರಜಾಸತ್ತಾತ್ಮೀಕರಣದ ಬಗ್ಗೆ ಇರುವಂಥದ್ದು. ಇದು ಬಂಡವಾಳ ಮಾರುಕಟ್ಟೆ ಕೈಗಾರಿಕೆ, ವ್ಯಾಪಾರ, ಸಿನೆಮಾ, ಮಾಧ್ಯಮ, ಜ್ಞಾನ ಮತ್ತು ಭೂಸುಧಾರಣೆಯನ್ನು ಸಹ ಒಳಗೊಳ್ಳುತ್ತದೆ. ಉದ್ಯೋಗ ಮೀಸಲಾತಿಯು ಸಂಪೂರ್ಣ ಚರ್ಚೆಯ ಒಂದು ಭಾಗವಾಗಿದೆ ಅಷ್ಟೇ.

ಆರೋಗ್ಯಪೂರ್ಣ ಚರ್ಚೆಯಲ್ಲಿ ಒಂದು ಸತ್ಯವು ಇತರ ನೂರು ಸತ್ಯಗಳನ್ನು ಮಸುಕಾಗಿಸುವ ಶಕ್ತಿಯನ್ನೊಂದಿರುತ್ತದೆ. ಆದಾಗ್ಯೂ ಈ ತಜ್ಞರೆನಿಸಿಕೊಂಡವರು ನೂರು ಸತ್ಯವನ್ನು ಮುಚ್ಚಲು ಒಂದು ಸತ್ಯವನ್ನು ಬಳಸಿಕೊಳ್ಳುತ್ತಾರೆ. ವಾಸ್ತವವಾಗಿ, ಮಾಧ್ಯಮ ವ್ಯಕ್ತಿಗಳು ತಮ್ಮ ಸಂಕುಚಿತ ಜಾತಿ ಹಿತಾಸಕ್ತಿಗಳನ್ನು ಸಮರ್ಥಿಸಿಕೊಳ್ಳುತ್ತಾರೆ.

ಮಾಧ್ಯಮದ ಹೊಸ ಮುಖಗಳು ವಾದಿಸುವುದೇನೆಂದರೆ 'ಅಮೇರಿಕಾದಲ್ಲಿ ಪಾಲಿನ ಬಗ್ಗೆ ಯಾವುದೇ ವ್ಯವಸ್ಥೆ ಇಲ್ಲ'. ಇದು ಸತ್ಯ.

ತಜ್ಞರು ಇದನ್ನು ಇಲ್ಲಿಗೆ ನಿಲ್ಲಿಸುವುದಿಲ್ಲ. ಭಾರತೀಯ ಕೈಗಾರಿಕೆಯು ಪಾಲನ್ನು ನಿಗದಿ ಪಡಿಸುವುದಕ್ಕೆ ಶಕ್ತವಾಗಿಲ್ಲ ಮತ್ತು ಅಮೇರಿಕನ್ ಮಾದರಿಯ ದಲಿತರ ಉದಾಹರಣೆಯು ಆಧಾರ ರಹಿತ ವಾಗಿದೆ. ಆದಾಗ್ಯೂ ಈ ತಜ್ಞರು ಪಾಲನ್ನು ಬದಲಾಯಿಸುವುದು ಹೇಗೆಂದು ಪರ್ಯಾಲೋಚಿಸುವುದಿಲ್ಲ.

ಭಾರತೀಯ ಮಾಧ್ಯಮವು ಹೇಗೆ ಜಗಳಗಂಟಿಯಾಗಿದೆ ಎಂಬುದನ್ನು ಈ ಸ್ಯಾಮ್ಸನ್ ಕೊಡ್ಯಾಕ್‌ನ ಅನುಭವದಿಂದ ಅತ್ಯುತ್ತಮವಾಗಿ ಉದಾಹರಿಸಬಹುದು.

೩೮೫೮ ಬಿಲಿಯನ್ ಡಾಲರ್‌ನ ಈ ಕಂಪೆನಿಯು ಫೋಟೋಗ್ರಾಫಿ ಸಲಕರಣೆ ಮತ್ತು ಕ್ಯಾಮರಾಗಳಿಗೆ ಜಗತ್ತಿನಲ್ಲೇ ಅದ್ವಿತೀಯವಾದುದು. ೩೦ ದೇಶಗಳಲ್ಲಿ ೭೦,೦೦೦ ಕ್ಕಿಂತ ಹೆಚ್ಚು ಜನರು ಕೆಲಸ ಮಾಡುತ್ತಿದ್ದಾರೆ.

ಆದರೆ, ನಾವು ತಿಳಿಯದಿರುವ ಹಾಗೂ ಭಾರತೀಯ ಮಾಧ್ಯಮವು ನಿಯಂತ್ರಿಸಿದ (ಸೆನ್ಸಾರ್) ಅಂಶವೆಂದರೆ ಈ ಮುಂದಿನವುಗಳು: ಡಿಸೆಂಬರ್ ೨೦೦೩ರಲ್ಲಿ ಕೊಡ್ಯಾಕ್‌ನ ನಿರ್ದೇಶಕ ಮಂಡಲಿಯು ಕಂಪೆನಿಗೆ ಸಾಮಾಜಿಕ ವ್ಯವಸ್ಥೆಯಾಗಿ ಜಯ ಮತ್ತು ಒಳಗೊಳ್ಳುವಿಕೆಯ ಸಂಸ್ಕೃತಿ (Winning and Inclusive Culture) ಸಿದ್ಧಾಂತವನ್ನು ಅನುಸರಿಸುವಂತೆ ಆದೇಶಿಸಿತು.ಈ ಸಿದ್ಧಾಂತವು ೨೦೦೧ರಲ್ಲಿ ರೂಪಿಸಿದ ಕೊಡ್ಯಾಕ್ ವೈವಿಧ್ಯತಾ ಸಲಹಾ ಸಮಿತಿಯ ಶಿಫಾರಸ್ಸುಗಳನ್ನು ಆಧರಿಸಿತ್ತು. 'ಡಿಸೆಂಬರ್ ೨೦೦೬ರ ವೇಳೆಗೆ ಅಮೇರಿಕಾದಲ್ಲಿ ಉದ್ಯೋಗದಲ್ಲಿ ಕಡಿಮೆ ಪ್ರಾತಿನಿಧ್ಯವನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಬೇಕು' ಎಂದು ಕೊಡ್ಯಾಕ್ ನಿರ್ಧರಿಸಿತು.

ಡಬ್ಲ್ಯುಐಸಿಯ ಸಾಮಾಜಿಕ ವ್ಯವಸ್ಥೆಗಳಲ್ಲಿ ಕಂಪನಿಯು ತನ್ನ ಧೋರಣೆಯ ಹೇಳಿಕೆಯನ್ನು ನೀಡಿದೆ. 'ಕೊಡ್ಯಾಕ್ ಸ್ಪರ್ಧಾತ್ಮಕ ಜಾಗತಿಕ ಪರಿಸರದಲ್ಲಿ ವ್ಯವಹಾರ ನಡೆಸುತ್ತದೆ. ಅದರ ಗ್ರಾಹಕರು, ಮಾರುಕಟ್ಟೆ ಮತ್ತು ನೌಕರರು ವಿವಿಧ ಸಂಸ್ಕೃತಿ ಮತ್ತು ಹಿನ್ನೆಲೆಗಳನ್ನು ಒಳಗೊಂಡವರು. ಈ ವಾಸ್ತವತೆಯು ಕೊಡ್ಯಾಕ್‌ನ ನೇಮಕಾತಿ ಮತ್ತು ಧಾರಣ ಪ್ರಯತ್ನಗಳಿಗೆ ಮಾರ್ಗದರ್ಶನ ನೀಡುತ್ತದೆ.'

ಕೊಡ್ಯಾಕ್, ೨೦೦೩ರ ಅದರ ವಾರ್ಷಿಕ ವರದಿಯಲ್ಲಿ ಹೀಗೆ ಹೇಳಿದೆ. 'ಶ್ರಮ ಶಕ್ತಿಯ ಕಡಿತ ಮತ್ತು ಮುಂದುವರಿದ ಜಾಗತಿಕ ಆರ್ಥಿಕ ಅಸ್ಥಿರತೆಯ ಹೊರತಾಗಿಯೂ ಕಂಪನಿಯು ಅಮೇರಿಕಾ ಶ್ರಮಶಕ್ತಿಯ ಜನಗಣತಿಯಲ್ಲಿ ಮಹಿಳೆ ಮತ್ತು ಬಣ್ಣದ ಜನರಿಗಾಗಿ ಪ್ರಾತಿನಿಧ್ಯವನ್ನು ಕಾಯ್ದುಕೊಳ್ಳುತ್ತದೆ'.

ಇಂಥ ಮಾರ್ಗ ಪರಿವರ್ತನಾ ಹೆಜ್ಜೆಯಿಂದಲೇ ಕಂಪನಿಯು ಕೊಡ್ಯಾಕ್ CEO ಭಾಗೀದಾರಿಕೆ ಪ್ರಶಸ್ತಿಯನ್ನು ಸ್ಥಾಪಿಸಿತು. ಅಂದರೆ ಕಂಪನಿಯ ಮುಖ್ಯಸ್ಥನೊಬ್ಬ ವೈವಿಧ್ಯಮಯ ಶ್ರಮಶಕ್ತಿಯ ನೇಮಕಾತಿ ಮತ್ತು ದಕ್ಷ ನಾಯಕತ್ವವನ್ನು ನೀಡಿದಲ್ಲಿ ಆ ಪ್ರಶಸ್ತಿಯನ್ನು ಆ ವ್ಯಕ್ತಿಗೆ ನೀಡಲಾಗುತ್ತಿತ್ತು. ಹೀಗೆ ಬಣ್ಣದ ಅಭ್ಯರ್ಥಿಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಿದ ವ್ಯವಸ್ಥಾಪಕ ವ್ಯಕ್ತಿಗೆ ಬಹುಮಾನ ಘೋಷಿಸಲಾಗಿದೆ.

ಅಮೇರಿಕಾದ ಬಿಳಿ ಜನಾಂಗವು ಕೊಡ್ಯಾಕನ್ನು 'ಕೊಡ್ಯಾಕ್ ಪಾಲು' ಎಂದು ಅಣಕ ಮಾಡುತ್ತಿದೆ. ಕೊಡ್ಯಾಕ್‌ನ ೨೦೦೦ದ ವಾರ್ಷಿಕ ವರದಿಯು, ಒಟ್ಟಾರೆ ತನ್ನ ಶ್ರಮಶಕ್ತಿಯನ್ನು ಕಡಿತಗೊಳಿಸಿದಾಗ್ಯೂ ಜನಾಂಗಿಕ/ಕುಲ ಸಂಬಂಧೀ ಅಲ್ಪಸಂಖ್ಯಾತರು ಅದರ ಒಟ್ಟು ಶ್ರಮಶಕ್ತಿಯಲ್ಲಿ ಶೇ ೨೧ ರಷ್ಟಿದೆ.

೨೦೦೦ದಲ್ಲಿ ನಿರ್ದೇಶಕರ ಮಂಡಲಿಯ ಹಂತದಲ್ಲಿ ಅಲ್ಪಸಂಖ್ಯಾತರು ಶೇ ೮ ರಷ್ಟಿದ್ದು ಇದು ೨೦೦೨ರಲ್ಲಿ ಶೇ ೩೩ಕ್ಕೆ ಏರಿದೆ.

ಹಿರಿಯ ಮ್ಯಾನೇಜರ್ / ನಿರ್ದೇಶಕ / ಮ್ಯಾನೇಜರ್ / ಮೇಲ್ವಿಚಾರಕರ ಹಂತದಲ್ಲಿ ೨೦೦೦ದಲ್ಲಿ ಅಲ್ಪಸಂಖ್ಯಾತರ ಪ್ರಮಾಣವು ಶೇ ೧೨ ಇದ್ದರೆ, ೨೦೦೨ರಲ್ಲಿ ಇದು ಶೇ ೧೪ಕ್ಕೆ ಏರಿದೆ.

ಎಸ್ ಹೆಚ್ ಆರ್ ಎಂ (ಸೊಸೈಟಿ ಫಾರ್ ಹ್ಯೂಮನ್ ರಿಸೋರ್ಸಸ್ ಮ್ಯಾನೇಜ್‌ಮೆಂಟ್) ಜಾಗತಿಕ ನಾಯಕನಾಗಿದ್ದು ದಿಗ್ಭ್ರಮೆಯುಂಟು ಮಾಡುವ ವರದಿಯನ್ನು ನೀಡಿದೆ.

ಅದರ ಅಧ್ಯಯನದಲ್ಲಿ ೫೦೦ ಕಂಪನಿಗಳಲ್ಲಿ ೫೦ ಅದೃಷ್ಟಶಾಲಿ ಕಂಪನಿಗಳೆಂದು ಅಲ್ಪ ಸಂಖ್ಯಾತರು ಶೇ ೭೬ ಭತ್ಯೆಗಳನ್ನು ಅಧಿಕ ಸಾಧನೆ ಮಾಡಿದ ವ್ಯವಸ್ಥಾಪಕರಿಗೆ ನೀಡಿತ್ತು. ಈ ೫೦ ಕಂಪನಿಗಳು ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಯಾಗಿದ್ದು ಅನೇಕ ಭಾರತೀಯ ವ್ಯವಸ್ಥಾಪಕ/ ಇಂಜಿನಿಯರಿಂಗ್ ಅಭ್ಯರ್ಥಿಗಳು ಕೆಲಸ ಗಿಟ್ಟಿಸಲು ಪ್ರಯತ್ನಿಸುತ್ತಿರುತ್ತಾರೆ. ಅಧ್ಯಯನದ ಪ್ರಕಾರ 'ಶೇ ೬೨ ಜನ ಉದ್ಯೋಗ ಗಿಟ್ಟಿಸಲು ಉದ್ಯೋಗದಲ್ಲಿ ವೈವಿಧ್ಯತೆಯುಳ್ಳ ಸಂಸ್ಥೆಗಳನ್ನೇ ಅಪೇಕ್ಷೆ ಪಟ್ಟಿದ್ದರು.

ಅನೇಕ ಅಮೇರಿಕಾದ ಕಂಪನಿಗಳು ನಿರ್ದಿಷ್ಟ ಗುರಿ - ಉದ್ದೇಶಗಳನ್ನು ಇಟ್ಟು ಅವುಗಳನ್ನು ಸಾಧಿಸುವ ನಿಟ್ಟಿನಲ್ಲಿ ಗಮನಹರಿಸುತ್ತವೆಯೇ ವಿನಃ 'ಮೀಸಲಾತಿ' ಎಂದು ತಲೆ ಕೆಡಿಸಿಕೊಂಡು ಕೂರುವುದಿಲ್ಲ. ಕೊಡ್ಯಾಕ್ ಅಂಥದಕ್ಕೆ ಒಂದು ಉದಾಹರಣೆಯಷ್ಟೆ.

# ಶ್ರೀಮಂತರು ಮತ್ತು ಎಡಪಂಥೀಯರು

ಸಾಮ್ರಾಜ್ಯಶಾಹಿಯ ವಿರುದ್ಧ ತೀವ್ರವಾದ ನಿಲುವುಗಳನ್ನು ವ್ಯಕ್ತಪಡಿಸಿರುವವರಲ್ಲಿ ಪ್ರೊಫೆಸರ್ ರೊಮಿಲಾ ಥಾಪರ್ ಜೀವಂತ ಎಡಪಂಥೀಯ ಚರಿತ್ರೆಗಾರರು. ಅಚ್ಚರಿಯೆಂಬಂತೆ ಅಮೇರಿಕಾದ ಗ್ರಂಥಾಲಯ ೧೭. ೦೪. ೨೦೦೩ ಈ ಕೆಳಗಿನ ಘೋಷಣೆಯನ್ನು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿತ್ತು. ಕಾಂಗ್ರೆಸ್ ಗ್ರಂಥಪಾಲಕ ಜೇಮ್ಸ್ ಹೆಚ್ ಬಿಲ್ಲಿಂಗ್‌ಟನ್ ಈ ಕಾಂಗ್ರೆಸ್ ಲೈಬ್ರರಿಯಲ್ಲಿ ದಕ್ಷಿಣದ ದೇಶಗಳಿಗೆ ಮತ್ತು ಸಂಸ್ಕೃತಿಗಳಿಗೆ ಪ್ರಾತಿನಿಧ್ಯವಾಗಿರುವ ಕ್ಲುಜ್ ಪೀಠಕ್ಕೆ ಮೊದಲ ವ್ಯಕ್ತಿಯಾಗಿ ರೊಮಿಲಾ ಥಾಪರ್‌ರನ್ನು ನೇಮಿಸಿದ್ದ. ಆ ಪ್ರಕಟಣೆ ಮುಂದುವರೆದು, 'ಈ ಕ್ಲುಜ್ ಪೀಠದ ವ್ಯಕ್ತಿಯಾಗಿ ರೊಮಿಲಾ ಥಾಪರ್ ಈ ಕೇಂದ್ರದಲ್ಲಿ ೧೦ ತಿಂಗಳ ಕಾಲ ಇದ್ದು 'ಪುರಾತನ ಭಾರತದಲ್ಲಿ ಚಾರಿತ್ರಿಕ ಪ್ರಜ್ಞೆ' ಎಂಬ ಸಂಶೋಧನೆಯನ್ನು ಕೈಗೊಳ್ಳತಕ್ಕದ್ದು'.

ನಮಗೆ ತಿಳಿದಿರುವಂತೆ ಈ ಕಾಂಗ್ರೆಸ್‌ನ ಗ್ರಂಥಾಲಯ ಅಮೇರಿಕಾಕ್ಕೆ ಬೌದ್ಧಿಕ ಸಂಪನ್ಮೂಲವನ್ನು ಒದಗಿಸುತ್ತದೆ. ಈ ವೆಬ್‌ಸೈಟಿನಲ್ಲಿರುವ ಪ್ರಕಾರ ೨೦೦೦ದಲ್ಲಿ ಸ್ಥಾಪನೆಯಾದ ಜಾನ್.ಡಬ್ಲ್ಯು. ಕ್ಲುಜ್ ಕೇಂದ್ರವು ಜಗತ್ತಿನ ಅತ್ಯುತ್ತಮ ವಿದ್ವಾಂಸರನ್ನು ಒಟ್ಟಿಗೆ ತಂದು, ಲೈಬ್ರರಿಯಲ್ಲಿರುವ ಶ್ರೀಮಂತ ಸಂಪನ್ಮೂಲವನ್ನು ಉಪಯೋಗಿಸಿ ವಾಷಿಂಗ್‌ಟನ್ ಡಿ.ಸಿ.ಯ

ಎಡಪಂಥೀಯ ಬುದ್ಧಿಜೀವಿಗಳು 'ಬಿಳಿ ಗಂಡಸಿನ ಹೊರೆ' ಸಿದ್ಧಾಂತವನ್ನು ತಿರಸ್ಕರಿಸುವ ತಮ್ಮ ನಿರ್ಧಾರಾತ್ಮಕ ಪ್ರಕ್ರಿಯೆಯಲ್ಲಿ 'ಜನಾಂಗವಾದಿ'ಗಳಾಗಿಬಿಟ್ಟಿದ್ದಾರೆ. ಬಿಳಿಯ ವ್ಯಕ್ತಿ ಅಮೇರಿಕಾ/ ಯೂರೋಪಿನವನೆಂದಾಕ್ಷಣ ಆ ವ್ಯಕ್ತಿಯನ್ನು ಸಂದೇಹಿಸಲಾಗುತ್ತದೆ.
ಎಡಪಂಥೀಯರ ಪ್ರಕಾರ ಬಿಳಿಯ ಜನರ ಅಸ್ತಿತ್ವವೇ ಲೂಟಿ ಮಾಡುವುದಕ್ಕೆ. ಈ ಬಿಳಿ ಗಂಡಸ್ಸಿನಿಂದಲೇ ಜಗತ್ತಿನಲ್ಲಿ ಬಡತನ ತಾಂಡವವಾಡುತ್ತಿದೆ.

ಲಂಡನ್‌ನಲ್ಲಿ ನೋಂದಾಯಿಸಿಕೊಂಡಿದ್ದು ಅದರ ಕಾರ್ಯಕಾರಿ ಕಛೇರಿ ದೆಹಲಿಯಲ್ಲಿದ್ದು ಮಿಸ್ ಘೋಷ್ ಅದರ ಮುಖ್ಯಸ್ಥರಾಗಿದ್ದಾರೆ. ಈ ವೆಬ್‌ಸೈಟ್ ಮತ್ತೊಂದು ಕುತೂಹಲಕಾರಿ ಅಕಾಡೆಮಿಕ್ ಚಟುವಟಿಕೆಗಳ ಚಿತ್ರಣವನ್ನು

ಹೊಡೆದು ಸಮೃದ್ಧಿಗೊಂಡವಾಗಿವೆ. ಎಡಪಂಥೀಯ ಬುದ್ಧಿಜೀವಿಗಳಲ್ಲಿ ಅತ್ಯಂತ ಜನಪ್ರಿಯ ಶಿಷ್ಯವೇತನವೆಂದರೆ ರ್‍ಹೊಡ್ಸ್ ಆಗಿದೆ.

ಈತನನ್ನು ಬ್ರಿಟೀಷ್ ಸಾಮ್ರಾಜ್ಯಶಾಹಿಯ ವಕ್ತಾರನೆಂದೇ ಬಿಂಬಿಸಲಾಗಿದ್ದು ದಕ್ಷಿಣ ಆಫ್ರಿಕಾದ ಬ್ರಿಟೀಷ್ ಕಂಪನಿ ಮತ್ತು ಈಸ್ಟ್ ಇಂಡಿಯಾ ಕಂಪನಿಗಳ ನಿರ್ದೇಶಕನಾಗಿದ್ದ. ಈತನೇ ಜಿಂಬಾಬ್ವೆಯನ್ನು ವಸಾಹತುವನ್ನಾಗಿ ಪರಿವರ್ತಿಸಿದ್ದು.

ಈತ ದಕ್ಷಿಣ ಆಫ್ರಿಕಾದ ವಜ್ರ ಭೂಮಿಯಲ್ಲಿ ತನ್ನ ಅದೃಷ್ಟವನ್ನು ಗಳಿಸಿಕೊಂಡದ್ದು ಅಲ್ಲದೆ ಈತ ಕೇಪ್‌ಟೌನ್‌ನಿಂದ ಕೈರೋ ತನಕ ಬ್ರಿಟೀಷ್ ಸಾಮ್ರಾಜ್ಯದ ವ್ಯಾಪ್ತಿಯ ಕನಸನ್ನು ಕಂಡಿದ್ದ. ಆದ್ದರಿಂದ ಈ ರ್‍ಹೊಡ್ಸ್ ಫೆಲೋಶಿಪ್ ಬಂದಿರುವುದು ಲೂಟಿ ಮಾಡಿದ ವಸಾಹತು ಸಂಪತ್ತಾಗಿದ್ದು ಅದನ್ನು ಸಾರ್ವಜನಿಕ ಕ್ರಿಯೆಗಳಿಗೋಸ್ಕರ ಮೀಸಲಿಟ್ಟು ಹೋಗಿದ್ದಾನೆ.

ಈ ಮೇಲೆ ಹೇಳಿರುವ ಉದಾಹರಣೆಗಳು ಕೆಲವು ಮಾತ್ರವಾಗಿದ್ದು ಎಡಪಂಥೀಯ ವಿದ್ವಾಂಸರಿಗೆ ಯಾವುದೇ ಹಣದ ಕೊರತೆ ಇಲ್ಲವೆಂಬುದಕ್ಕೆ ಸಾಕ್ಷಿಯಾಗಿದೆ. ತೆರೆಮರೆಯಲ್ಲಿ ತಮ್ಮ ಪ್ರಾಮಾಣಿಕತೆಯನ್ನು ಉಳಿಸಿಕೊಂಡಿ

ಶಾಸಕರೊಂದಿಗೆ ವಿಚಾರ ವಿನಿಮಯ ನಡೆಸಬೇಕಾಗುತ್ತದೆ. ರೊಮಿಲಾ ಥಾಪರ್ ಏಪ್ರಿಲ್ ೧೭, ೨೦೦೩ರಂದು ಅಮೆರಿಕಾ ಸರ್ಕಾರದ ಮತ್ತು ಅಲ್ಲಿನ ಬೂರ್ಶ್ವಾಗಳ ಪ್ರಾಯೋಜಿತ ಉದ್ಯೋಗವನ್ನು ಸ್ವೀಕರಿಸಿದ್ದರು. ಅತ್ತ ಇರಾಕ್‌ನ ಬಾಗ್ದಾದ್‌ನಲ್ಲಿ ಸದ್ದಾಂ ಪ್ರತಿಮೆಯನ್ನು ಕೆಡವಿ ೮ ದಿನಗಳಾಗಿತ್ತು.

ಇನ್ನೂ ಈ ಕ್ಲುಜ್ ಪೀಠ ! ಜಾನ್ ಡಬ್ಲ್ಯು ಕ್ಲುಜ್‌ನೊಬ್ಬ ಮಾಧ್ಯಮ ಮೊಘಲ್. ಆತ ರೂಪರ್ಟ್ ಮುರ್ಡೋಕ್‌ನೆಂಬುವವನೊಂದಿಗೆ ವಹಿವಾಟನ್ನಿಟ್ಟುಕೊಂಡಿದ್ದ. ಈ ರೂಪರ್ಟ್ ಅಮೇರಿಕಾದ ಭಾರೀ ಶ್ರೀಮಂತ. ಈತ ಒಬ್ಬ ಫಿಲಾಂತ್ರೊಪಿಸ್ಟ್ (ಮಾನವತಾವಾದಿ) ನಾಗಿದ್ದು ಕ್ಲುಜ್ ಪೀಠ ಸ್ಥಾಪಿಸಲು ಗ್ರಂಥಾಲಯಕ್ಕೆ ನಿಧಿ ನೀಡಿದವನಾಗಿದ್ದಾನೆ.

ಈ ಕ್ಲುಜ್ ಪೀಠವು ಅಮೇರಿಕಾದ ಬೂರ್ಜ್ವಾಗಳಿಗೆ ತಾರೆಯಂತೆ ಇದ್ದು ಈ ವರ್ಗವು ಭಾರತವನ್ನು ಸೇರಿಸಿ ಎಲ್ಲಾ ಸಮಾಜಗಳಲ್ಲೂ ಲೂಟಿಯನ್ನು ಮಾಡುವಂಥದ್ದು. ಎಡಪಂಥೀಯ ಅರ್ಥಶಾಸ್ತ್ರಜ್ಞರಾದ ಪ್ರಭಾತ್ ಪಟ್ನಾಯಕ್ ಮತ್ತು ಉತ್ಸಾ ಪಟ್ನಾಯಕ್ ಎಂಬ ದಂಪತಿಗಳು, ಇವರೊಂದಿಗೆ ಜಯತಿ ಘೋಷ್ ಹಾಗೂ ಸಿ.ಪಿ. ಚಂದ್ರಶೇಖರ್ ಯೋಜನಾ ಸಮಿತಿಯಲ್ಲಿ ನೇಮಕಗೊಂಡು ಉಮಾಭಾರತಿಯನ್ನು ಸಹ ನಾಚಿಸುವಂತಹ ಬಿಳಿಯ ಅಮೆರಿಕನ್ ಕನ್ಸಲ್‌ಟೆಂಟ್‌ಗಳಿಗಿಂತ ಅಧಿಕವಾಗಿ ವರ್ತಿಸಿದ್ದರು. ಇವರೆಲ್ಲಾ IDEA (ಅಂತರರಾಷ್ಟ್ರೀಯ ಅಭಿವೃದ್ಧಿ ಅರ್ಥಶಾಸ್ತ್ರಜ್ಞರ ಕೂಟ) ಇದರ ಭಾಗವಾಗಿ ಪ್ರಗತಿಪರ ಅರ್ಥಜ್ಞರೆನಿಸಿಕೊಂಡಿದ್ದಾರೆ.

ಈ IDEA ವನ್ನು ೨೦೦೧ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಸ್ಥಾಪಿಸಲಾಗಿತ್ತು. ಇದಕ್ಕೆ ಫೋರ್ಡ್ ಫೌಂಡೇಶನ್ ಅಗತ್ಯಕ್ಕಿಂತ ಹೆಚ್ಚಿನ ನಿಧಿಯನ್ನು ನೀಡಿತ್ತು. ಈ IDEA ವನ್ನು ಕೊಡುತ್ತದೆ. ೨೦೦೧-೦೩ರ ಅವಧಿಯಲ್ಲಿ ಏಳು ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ಈ IDEA ವು ನಡೆಸಿದ್ದು ಅವುಗಳಲ್ಲಿ ಮೂರು ರಿಯೊದಿಜನೆರೊ ಮತ್ತು ಪೊರ್ಟೊ ಅಲೆಗ್ರೆ ಸ್ಥಳಗಳಲ್ಲಿ ನಡೆದಿದ್ದವು.

ಈ ಜಾಗಗಳು ಖುಷಿ ಪಡಲು ಯೋಗ್ಯವಾದಂಥವು. ವ್ಯಾಪಾರಸ್ಥರು ಅಥವಾ ಅಮೇರಿಕಾ ಅಥವಾ ಬ್ರಿಟೀಷ್‌ಗಳಿಂದ ಹಣ ದೊರಕಿದ್ದು ತಮ್ಮ ಎಲ್ಲಾ ವಾರ್ಷಿಕ ಸಭೆಗಳಿಗೆ ಈ ಎರಡು ನಗರಗಳನ್ನೇ ಬಯಸುತ್ತಾರೆ.

ಮೇಲೆ ಹೇಳಿದ ಪಾಟ್ನಾಯಕ್‌ರು ಮತ್ತು ಮಿಸ್ ಘೋಷ್‌ರು ಆಕ್ಸ್‌ಫರ್ಡ್ - ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳಿಂದ ಶಿಕ್ಷಣ ಪಡೆದವರು. ಈ ವಿಶ್ವವಿದ್ಯಾನಿಲಯಗಳು ಬ್ರಿಟೀಷ್ ಸಾಮ್ರಾಜ್ಯದ ಕೊಳ್ಳೆ ಹೊಡೆದ ಸಂಪತ್ತಿನಿಂದ ಪ್ರಯೋಜನ ಪಡೆದವು. ಎಡಪಂಥೀಯ ಶಬ್ದಕೋಶದಲ್ಲಿ ಬ್ರಿಟೀಷ್ ಕೇಂದ್ರಗಳು ತಮ್ಮ ಮಾಜಿ ವಸಾಹತುಗಳಲ್ಲಿ ಕೊಳ್ಳೆ

ಬ್ರಿಟಿಷರು ವಸಾಹತು ಸ್ಥಾಪಕರೆನ್ನುವುದನ್ನು ತಿರಸ್ಕರಿಸಲಾಗದು. ಹಾಗೆಯೇ ಅಮೇರಿಕಾದವರು ತಮ್ಮ ಉದ್ಯಮಗಳಲ್ಲಿ ಲಾಭಕೋರರೆನ್ನುವುದನ್ನು ಬಚ್ಚಿಡಲಾಗದು. ಇದೇ ರೀತಿಯಲ್ಲಿ ಎಡಪಂಥೀಯರು ಬ್ರಿಟಿಷರನ್ನು ಮತ್ತು ಅಮೆರಿಕಾದವರನ್ನು ಬಡತನಕ್ಕೆ ದೂರುತ್ತಾ, ಮತ್ತೊಂದೆಡೆ ತಮಗಾಗಿ, ತಮ್ಮ ಮಕ್ಕಳು ಮತ್ತು ಕಾಮ್ರೆಡ್‌ಗಳಿಗಾಗಿ ಅಧಿಕವಾದ ಹಣ ಕಬಳಿಸುತ್ತಾರೆ.

ರುವ ಎಡಪಂಥೀಯ ಬುದ್ಧಿಜೀವಿಗಳು ಅಪವಾದವಷ್ಟೆ ಎಂದು ಹೇಳಬೇಕು. ತಮಾಷೆಯೆಂದರೆ ಮೇಲ್ಮುಖ ಚಲನೆಯಲ್ಲಿರುವ ಇಂತಹ ಎಡಪಂಥೀಯ ವಿದ್ವಾಂಸರನ್ನು ಗುರುತಿಸಬೇಕಾದರೆ ಕೆಲವು ಪ್ರತಿಭಟನಾ ರ್‍ಯಾಲಿಗಳು ಅಥವಾ ಈ ಅಮೇರಿಕಾ/ ಬ್ರಿಟೀಷ್ ಫೌಂಡೇಶನ್ ಕಛೇರಿಗಳಲ್ಲಿ ಹುಡುಕಬೇಕಷ್ಟೆ

ಎಡಪಂಥೀಯ ಬುದ್ಧಿಜೀವಿಗಳು 'ಬಿಳಿ ಗಂಡಸಿನ ಹೊರೆ' (White -man's Burden) ಸಿದ್ಧಾಂತವನ್ನು ತಿರಸ್ಕರಿಸುವ ತಮ್ಮ ನಿರ್ಧಾರಾತ್ಮಕ ಪ್ರಕ್ರಿಯೆಯಲ್ಲಿ 'ಜನಾಂಗವಾದಿ'ಗಳಾಗಿಬಿಟ್ಟಿದ್ದಾರೆ. ಬಿಳಿಯ ವ್ಯಕ್ತಿ ಅಮೇರಿಕಾ/ಯೂರೋಪಿನವನೆಂದಾಕ್ಷಣ ಆ ವ್ಯಕ್ತಿಯನ್ನು ಸಂದೇಹಿಸಲಾಗುತ್ತದೆ.

ಎಡಪಂಥೀಯರ ಪ್ರಕಾರ ಬಿಳಿಯ ಜನರ ಅಸ್ತಿತ್ವವೇ ಲೂಟಿ ಮಾಡುವುದಕ್ಕೆ. ಈ ಬಿಳಿ ಗಂಡಸ್ಸಿನಿಂದಲೇ ಜಗತ್ತಿನಲ್ಲಿ ಬಡತನ ತಾಂಡವವಾಡುತ್ತಿದೆ. ಇದು ಜನಾಂಗ ದ್ವೇಷವಲ್ಲವೇ ? ಇದೇ ತರ್ಕವನ್ನು ಆರ್‌ಎಸ್‌ಎಸ್ ಪ್ರಚಾರ ಮಾಡುತ್ತಿಲ್ಲವೇ ? ಇದೊಂದು ಹೊಸ ರೀತಿಯ ವರ್ಣದ್ವೇಷ ಪದ್ಧತಿಯಲ್ಲವೇ ? ದುರಂತವೆಂದರೆ ಇದೂ ಸಹ ವಸೂಲಿ ಮಾಡುವ ಸಾಮ್ರಾಜ್ಯವೇ ?

ಬ್ರಿಟಿಷರು ವಸಾಹತು ಸ್ಥಾಪಕರೆನ್ನುವುದನ್ನು ತಿರಸ್ಕರಿಸಲಾಗದು. ಹಾಗೆಯೇ ಅಮೇರಿಕಾದವರು ತಮ್ಮ ಉದ್ಯಮಗಳಲ್ಲಿ ಲಾಭಕೋರರೆನ್ನುವುದನ್ನು ಬಚ್ಚಿಡಲಾಗದು. ಇದೇ ರೀತಿಯಲ್ಲಿ ಎಡಪಂಥೀಯರು ಬ್ರಿಟಿಷರನ್ನು ಮತ್ತು ಅಮೆರಿಕಾದವರನ್ನು ಬಡತನಕ್ಕೆ ದೂರುತ್ತಾ, ಮತ್ತೊಂದೆಡೆ ತಮಗಾಗಿ, ತಮ್ಮ ಮಕ್ಕಳು ಮತ್ತು ಕಾಮ್ರೆಡ್‌ಗಳಿಗಾಗಿ ಅಧಿಕವಾದ ಹಣ ಕಬಳಿಸುತ್ತಾರೆ. ಇಂಥ ಎಡಪಂಥೀಯ ಅಮೇರಿಕ ವಿರೋಧಿ/ಬ್ರಿಟೀಷ್ ವಿರೋಧಿ ನಿಲುವು ಸ್ವಿಡಿಷ್ ಜಾಗರಣ್ ಮಂಚ್‌ಗೆ ವಿಸ್ತರಿಸುವರೇ ?

೩೮ನೇ ಪುಟಕ್ಕೆ...

# ಸಂಘಟನೆಗಳ ಪ್ರತ್ಯೇಕ ಅಸ್ತಿತ್ವ ಇರಬಾರದು

ಎಪ್ಪತ್ತರ ದಶಕದಲ್ಲಿ ಆರಂಭಗೊಂಡ ಜನಪರ ಚಳವಳಿಯ ಕವಲುಗಳಾದ ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಇತರೇ ಜನಪರ ಚಳವಳಿಗಳು ಹಾಗೂ ವ್ಯಕ್ತಿ-ಶಕ್ತಿಗಳೊಂದಿಗೆ ಜೊತೆಗೂಡಿ ಪರ್ಯಾಯ ರಾಜಕಾರಣವನ್ನು ರೂಪಿಸುವ ಐತಿಹಾಸಿಕ ಪ್ರಯತ್ನವೊಂದಕ್ಕೆ ಮುಂದಾಗಿವೆ. ಸ್ವಾರ್ಥ ಮತ್ತು ಅಧಿಕಾರ ಲಾಲಸೆಯೇ ರಾಜಕಾರಣದ ಜೀವಾಳವಾಗಿರುವ ಪ್ರಸ್ತುತ ಸಂದರ್ಭದಲ್ಲಿ ಪರ್ಯಾಯ ರಾಜಕಾರಣದ ಈ ಪ್ರಯತ್ನ ಜನಪರ ವಿಚಾರಧಾರೆಯುಳ್ಳವರಲ್ಲಿ ಹೊಸ ಸಂಚಲನವನ್ನು ಮೂಡಿಸಿದೆ. ಹಿಂದೆ ಜನಪರ ಚಳವಳಿಗಳಲ್ಲಿ ತೊಡಗಿಸಿಕೊಂಡು ಕಾಲಾನಂತರ ವಿವಿಧ ರಾಜಕೀಯ ಪಕ್ಷಗಳಲ್ಲಿ ಸೇರಿಹೋಗಿದ್ದ ವ್ಯಕ್ತಿಗಳೂ ಈ ಪ್ರಯತ್ನದಿಂದಾಗಿ ಖುಷಿಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ 'ಸಂವಾದ' ನಾಡಿನ ಚಿಂತಕರೊಂದಿಗೆ ಚರ್ಚೆ ನಡೆಸಬೇಕೆಂದು ಇಚ್ಛಿಸಿದೆ. ಅದಕ್ಕಾಗಿ ಈ ಕೆಳಗಿನ ಪ್ರಶ್ನೆಗಳನ್ನು ಆಯ್ದ ಕೆಲವು ಚಿಂತಕರಿಗೆ 'ಸಂವಾದ' ಕಳುಹಿಸಿಕೊಟ್ಟಿತ್ತು. ಬಂದ ಉತ್ತರಗಳನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಮುಂದಿನ ಸಂಚಿಕೆಗಳಲ್ಲಿ ಉಳಿದವುಗಳನ್ನು ಪ್ರಕಟಿಸುತ್ತೇವೆ. ಓದುಗರೂ ಈ ಸಂವಾದದಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ.

## ಪ್ರಶ್ನೆಗಳು

೧. ಜನಪರ ಚಳವಳಿಗಳು (ವಿಶೇಷವಾಗಿ ದಸಂಸ ಮತ್ತು ರೈತಸಂಘ) ಜೊತೆಗೂಡಿ ರೂಪಿಸ ಹೊರಟಿರುವ ಪರ್ಯಾಯ ರಾಜಕಾರಣ ಪ್ರಯತ್ನಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

೨. ಪ್ರಸ್ತುತ ಚಾಲ್ತಿಯಲ್ಲಿರುವ ರಾಜಕಾರಣಕ್ಕೆ ಹೊರತಾದ 'ಪರ್ಯಾಯ ರಾಜಕಾರಣ' ಹೇಗಿರಬೇಕೆಂದು ನೀವು ಬಯಸುತ್ತೀರಿ ?

೩. ಎಂಥ ಶಕ್ತಿಗಳು ಮತ್ತು ವ್ಯಕ್ತಿಗಳು ಒಗ್ಗೂಡಿದರೆ 'ಪರ್ಯಾಯ ರಾಜಕಾರಣ' ರೂಪಿಸಲು ಸಾಧ್ಯ ?

೪. ಜನಪರ ಚಳವಳಿಗಳು - ವ್ಯಕ್ತಿ - ಶಕ್ತಿಗಳು ಒಗ್ಗೂಡಲು ತಾವು ಸೂಚಿಸುವ ಮಾರ್ಗೋಪಾಯಗಳೇನು ?

೫. ಪರ್ಯಾಯ ರಾಜಕೀಯ ಶಕ್ತಿ (ಪಕ್ಷ) ಹೊಂದಬಹುದಾದ ನೀತಿ ಸಂಹಿತೆ ಮತ್ತು ಕಾರ್ಯಸೂಚಿಗಳೇನು ?

○ಪ್ರೊ॥ ರವಿವರ್ಮಕುಮಾರ್
ಹಿರಿಯ ನ್ಯಾಯವಾದಿಗಳು


೧. ಅತ್ಯಂತ ಸ್ವಾಗತಾರ್ಹ ಪ್ರಯತ್ನ ಇದು. ಆದರೆ ಅದನ್ನು ಸಾಧಿಸುವುದು ಬಹಳ ಕಷ್ಟದ ಕೆಲಸ. ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘಗಳು ಇದುವರೆಗೆ ಮಾಡಿರುವ ಹೋರಾಟಗಳಲ್ಲಿ ಐಕ್ಯತೆಯನ್ನು ಸಾಧಿಸಿರುವ ಅಂಶಗಳು ಕಮ್ಮಿ. ಒಟ್ಟಿಗೆ ಬರಬೇಕೆಂದು ತೀರ್ಮಾನ ಮಾಡಿರುವುದು ಸಫಲಗೊಳ್ಳಬೇಕಿದ್ದಲ್ಲಿ ಎರಡೂ ಸಂಘಟನೆಗಳು ಸಮಾಜವಾದದ ವಿಶಾಲ ತಳಹದಿಯ ಮೇಲೆ ಮಾತ್ರ ಸಾಧ್ಯ. ಆದ್ದರಿಂದ ಎರಡೂ ಚಳವಳಿಗಳು ಸಮಗ್ರ ಸಮಾಜದ ಪರಿವರ್ತನೆಗೆ ಕಂಕಣಬದ್ಧರಾಗಬೇಕು. ಟ್ರೇಡ್ ಯೂನಿಯನ್ ಚಳವಳಿಯ ಮಾದರಿ ಬಿಟ್ಟು ಇಡೀ ಸಮಾಜದ ಒಳಿತನ್ನು ವಿಶೇಷವಾಗಿ ದಲಿತರನ್ನು, ಹಿಂದುಳಿದವರನ್ನು, ಅಲ್ಪಸಂಖ್ಯಾತರನ್ನು ಮತ್ತು ಮಹಿಳೆಯರನ್ನು ಗಮನದಲ್ಲಿಟ್ಟುಕೊಂಡು ರೂಪಾಂತರಗೊಳ್ಳಬೇಕು.

೨. ಗುರಿ ಮತ್ತು ಮಾರ್ಗ ಎರಡು ವಿಚಾರಗಳಲ್ಲೂ ಭಿನ್ನವಾಗಿರಬೇಕು. ಸಮಾಜವಾದದ ಸಿದ್ಧಾಂತದ ಮೇಲೆ ಸಾಂಗಿಕ ಹೊಸತನದ ಮೂಲಕ ಬದಲಾವಣೆ ತರಬೇಕು. ರಾಷ್ಟ್ರೀಯ ಪಕ್ಷಗಳನ್ನು ತಿರಸ್ಕರಿಸಬೇಕು. ಹೊಸ ಪಕ್ಷ ಪ್ರತಿಯೊಂದು ಕ್ಷೇತ್ರಮಟ್ಟದ ಸ್ವಾಯತ್ತ ರಾಜಕೀಯ ಪಕ್ಷಗಳ ಒಕ್ಕೂಟವಾಗಬೇಕು. ಪ್ರತಿ ಚುನಾವಣೆಗೂ ಪ್ರಜಾಸಂಖ್ಯೆಗನುಗುಣವಾಗಿ ಮಹಿಳೆಯರಿಗೆ, ದಲಿತರಿಗೆ, ಆದಿವಾಸಿಗಳಿಗೆ, ಹಿಂದುಳಿದ ವರ್ಗಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ಕೊಡಬೇಕು. ಈಗಿರುವ ಚುನಾವಣಾ ಪದ್ಧತಿಯನ್ನು ಸಮಾನ ಪ್ರಾತಿನಿಧ್ಯ ಮತದಾನ ವ್ಯವಸ್ಥೆಗೆ ರೂಪಾಂತರಗೊಳಿಸಲು ಗಂಭೀರವಾಗಿ ಪ್ರಯತ್ನಿಸಬೇಕು. ಪ್ರತಿ ಕ್ಷೇತ್ರದಲ್ಲಿ ಅಭ್ಯರ್ಥಿಯ ಆಯ್ಕೆಯನ್ನು ಪಕ್ಷದ ವರಿಷ್ಠರು ಹೊರಗಿನಿಂದ ಹೇರಲು ಬಿಟ್ಟುಕೊಡದೆ, ಆಯಾ ಕ್ಷೇತ್ರದ ಪಕ್ಷದ ಸಕ್ರಿಯ ಕಾರ್ಯಕರ್ತರ ಮೂಲಕ ಮಾತ್ರ ಅಭ್ಯರ್ಥಿಯ ಆಯ್ಕೆ ಆಗಬೇಕು. ಆಗ ಮಾತ್ರ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಸದೃಢವಾದ ಅಭ್ಯರ್ಥಿಗಳ ಮೂಲಕ ಪರ್ಯಾಯ ರಾಜಕಾರಣ ಸಾಧ್ಯವಾಗುತ್ತದೆ. ಇಲ್ಲದಿದ್ದಲ್ಲಿ ಈಗಿನಂತೆಯೇ ಬಲವಾದ ಕೇಂದ್ರೀಕೃತ ವ್ಯವಸ್ಥೆ ಅಡಿಯಲ್ಲಿ ದುರ್ಬಲ ಅಭ್ಯರ್ಥಿಗಳ ಮೂಲಕ ಇಡೀ ಪಾರ್ಲಿಮೆಂಟರಿ ಪ್ರಜಾತಂತ್ರ ವ್ಯವಸ್ಥೆಗೆ ಅವಹೇಳನಕಾರಿಯಾದ ಪದ್ಧತಿ ಮುಂದುವರಿಯುವುದು.

ಚುನಾವಣೆ ನಡೆದ ನಂತರವೂ ಚುನಾಯಿತ ಅಭ್ಯರ್ಥಿಗಳು ಪಕ್ಷದ ಶಿಸ್ತಿನ ಸಿಪಾಯಿಗಳಾಗಿರುವಂತೆ ನೋಡಿಕೊಳ್ಳಬೇಕು. ಪಕ್ಷದ ಕಛೇರಿಗೆ ಪ್ರತಿದಿನ ಹಾಜರಾಗುವುದು, ಪಕ್ಷದ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಹಾಗೂ ಚುನಾವಣೆಯ ಮೂಲಕ ತಾನು ಗಳಿಸಿದ ಹುದ್ದೆಯಲ್ಲಿ ಬರುವ ವರಮಾನದ ಕನಿಷ್ಠ ಶೇ ೨೫ರಷ್ಟನ್ನು ಪಕ್ಷಕ್ಕೆ ಕೊಡುವುದು. ಪಕ್ಷ ನೀಡಿದ ಆದೇಶಗಳನ್ನು ಸದನದಲ್ಲಿ ಜಾರಿಗೆ ತರುವುದು. ಮತ್ತೆ ಇವುಗಳಿಗೆ ವಿಫಲವಾದುದು ವಿಶೇಷವಾಗಿ ಪಕ್ಷದ ಮತ್ತು ಕ್ಷೇತ್ರದ ನಿರ್ಲಕ್ಷ್ಯ ಮಾಡಿದಲ್ಲಿ ಪಕ್ಷ ಮತ್ತು ಕ್ಷೇತ್ರ ಎರಡರಿಂದಲೂ Right to recall ಪ್ರಯೋಗಕ್ಕೆ ಬದ್ಧರಾಗಿರಬೇಕು.

೩. ರೈತ ಮತ್ತು ದಲಿತ ವರ್ಗಗಳು ಯಶಸ್ವಿ ರಾಜಕಾರಣ ಮಾಡುವಷ್ಟು ಪ್ರಬಲ ಹಿತಾಸಕ್ತಿಗಳು. ಇವೆರಡರ ಜೊತೆಗೆ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು ಸೇರಬೇಕು. ಮಹಿಳೆಯರಿಗೂ ಸೂಕ್ತ ಪ್ರಾತಿನಿಧ್ಯ ಕೊಡಬೇಕು. ವ್ಯಕ್ತಿಗಳ ಪ್ರಶ್ನೆ ಬಂದಾಗ ಕಮ್ಯುನಿಸ್ಟ್ ಪಕ್ಷದ ಮಾದರಿ ಶುರುವಿನಲ್ಲಿ ಉತ್ತಮ ಮಾದರಿ. ಪಕ್ಷದ ಶಿಸ್ತಿಗೆ ಬದ್ಧರಾಗಿರಬೇಕು. ಪೂರ್ಣಾವಧಿ ಕಾರ್ಯಕರ್ತರಾಗಿರಬೇಕು ಮತ್ತು ಸಮಾಜವಾದದಲ್ಲಿ ಸೈದ್ಧಾಂತಿಕವಾಗಿ ಆಳವಾದ ಜ್ಞಾನ ಮತ್ತು ವೈಚಾರಿಕವಾಗಿ ಸ್ಪಷ್ಟತೆ ಇರಬೇಕು.

> ಒಂದು ಶಕ್ತಿಯಾಗಿ ರಾಜಕಾರಣದಲ್ಲಿ ಸಫಲವಾಗಬೇಕೆಂದರೆ ದಲಿತರಿಗೇ ಒಂದು, ರೈತರಿಗೇ ಒಂದು ಪ್ರತ್ಯೇಕ ಸಂಘಟನೆಗಳು ಅಸ್ತಿತ್ವದಲ್ಲಿರಬಾರದು. ಒಂದೊಂದು ವರ್ಗವೂ ಹಲವಾರು ಸಂಘಟನೆಗಳನ್ನು ಹೊಂದಿರುವುದು ರೈತರ ಮತ್ತು ದಲಿತರ ರಾಜಕೀಯ ಶಕ್ತಿಯಾಗಿ ಒಂದು ಪಕ್ಷ ಹೊರಹೊಮ್ಮಲು ಇರುವ ಗಂಭೀರವಾದ ಅಡ್ಡಿ.

೪. ಒಂದು ಶಕ್ತಿಯಾಗಿ ರಾಜಕಾರಣದಲ್ಲಿ ಸಫಲವಾಗಬೇಕೆಂದರೆ ದಲಿತರಿಗೇ ಒಂದು, ರೈತರಿಗೇ ಒಂದು ಪ್ರತ್ಯೇಕ ಸಂಘಟನೆಗಳು ಅಸ್ತಿತ್ವದಲ್ಲಿರಬಾರದು. ಅಂತಹದರಲ್ಲಿ ಈಗ ದಲಿತರು, ರೈತರು ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿಕೊಂಡಿರುವುದೇ ಅಲ್ಲದೆ ಒಂದೊಂದು ವರ್ಗವೂ ಹಲವಾರು ಸಂಘಟನೆಗಳನ್ನು ಹೊಂದಿರುವುದು ರೈತರ ಮತ್ತು ದಲಿತರ ರಾಜಕೀಯ ಶಕ್ತಿಯಾಗಿ ಒಂದು ಪಕ್ಷ ಹೊರಹೊಮ್ಮಲು ಇರುವ ಗಂಭೀರವಾದ ಅಡ್ಡಿ.

ಕಾರ್ಯಕರ್ತರಿಗೆ ತರಬೇತಿ ನೀಡಲು ಹಾಗೂ ಪಕ್ಷದ ಸಿದ್ಧಾಂತ ಮತ್ತು ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಪಕ್ಷದ ಚೌಕಟ್ಟಿಗೆ ಪೂರಕವಾದಂತಹ ಒಂದು ಸಮಿತಿ ಇರಬೇಕು. ಪಕ್ಷ ಮತ್ತು ಸಮಿತಿಯ ಸಂಬಂಧಗಳು ಸ್ಪಷ್ಟವಾದ ತಳಹದಿಯ ಮೇಲೆ ರೂಪಿಸತಕ್ಕದ್ದು. ಸಮಿತಿಯ ಸದಸ್ಯರುಗಳು ರಾಜಕೀಯದಲ್ಲಿ ಮುಳುಗಿದ್ದರೂ ದಿನನಿತ್ಯದ ರಾಜಕೀಯ ಅಧಿಕಾರದಿಂದ ದೂರವುಳಿದು ಸಿದ್ಧಾಂತ ಮತ್ತು ಕಾರ್ಯಕ್ರಮಗಳಿಗೆ ಪೂರ್ಣಾವಧಿ ನೀಡುವಂತವರಾಗಬೇಕು. ಇದಕ್ಕೆ ಬದಲಾಗಿ ಹಲವಾರು ದಲಿತ ಸಂಘರ್ಷ ಸಮಿತಿಗಳು ಮತ್ತು ಹಲವಾರು ರೈತಸಂಘಗಳು

(ಮುಂದಿನ ಪುಟಕ್ಕೆ)

ಚರ್ಚೆ

ಪರ್ಯಾಯ ರಾಜಕಾರಣ

○ಡಾ॥ ಪುರುಷೋತ್ತಮ ಬಿಳಿಮಲೆ
ಸಾಹಿತಿ, ಚಿಂತಕರು

# ಹೊಸ ಸಿದ್ಧಾಂತಗಳ ತಳಹದಿಯ ಮೇಲೆ ಪರ್ಯಾಯ ರಾಜಕಾರಣ ಕಟ್ಟಬೇಕು

೧. ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘಗಳು ಜೊತೆಗೂಡಿ ಪರ್ಯಾಯ ರಾಜಕಾರಣವೊಂದನ್ನು ಪ್ರತೀತಗೊಳಿಸ ಹೊರಟರೆ ಅಂಥ ಪ್ರಯತ್ನವನ್ನು ಯಾರಾದರೂ ಸ್ವಾಗತಿಸಲೇಬೇಕು. ಎಲ್ಲ ಜನಪರ ಚಳವಳಿಗಳೂ ತಣ್ಣಗಾಗಿರುವ ಈ ಹೊತ್ತಿನಲ್ಲಿ ಇಂಥ ಪ್ರಯತ್ನ ಮಾಡುವ ಯಾರೇ ಆದರೂ ಅಭಿನಂದನಾರ್ಹರು. ಇಷ್ಟಿದ್ದರೂ ಇಂಥ ಪ್ರಯತ್ನಗಳು ಕರ್ನಾಟಕ ರಾಜಕೀಯಕ್ಕೆ ಹೊಸ ಆಯಾಮ ನೀಡಿಯಾವು ಎಂದು ನನಗನ್ನಿಸುವುದಿಲ್ಲ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ -

ಅ. ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘದ ತಾತ್ವಿಕ ನೆಲೆಗಳು ಬೇರೆಬೇರೆಯಾಗಿದ್ದು ಇವೆರಡೂ ಹೊಂದಾಣಿಕೆಯಿಂದ ಕೆಲಸ ಮಾಡುವುದು ಕಷ್ಟಸಾಧ್ಯ. ಅಧಿಕಾರ ಹಿಡಿಯುವ ಉದ್ದೇಶದಿಂದ ಸದ್ಯಕ್ಕೆ ಒಟ್ಟಾದರೂ ಅವು ತಮ್ಮೊಳಗಿನ ಆಂತರಿಕ ವೈರುಧ್ಯಗಳಿಂದಾಗಿ ಪರಿಣಾಮಕಾರಿಯಾದದ್ದನ್ನು ಸಾಧಿಸಲು ವಿಫಲವಾಗುತ್ತವೆ.

ಆ. ಇವತ್ತಿನ ಸಂದರ್ಭದಲ್ಲಿ ಕರ್ನಾಟಕದ ರಾಜಕಾರಣವು ಬರೇ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಅದಕ್ಕೊಂದು ರಾಷ್ಟ್ರೀಯ ಆಯಾಮವೂ, ಅಂತಾರಾಷ್ಟ್ರೀಯ ಆಯಾಮವೂ ಇದ್ದು ಅವುಗಳ ಪೂರ್ಣ ತಿಳವಳಿಕೆ ಇಲ್ಲದೆ ಮಾಡುವ ಕೆಲಸಗಳು ಕ್ರಾಂತಿಕಾರಿ ಬದಲಾವಣೆ ತರಲು ಸಾಧ್ಯವಿಲ್ಲ. ನಮ್ಮ ಮಂತ್ರಿಗಳು ನಮ್ಮ ಸದನಗಳಲ್ಲಿ ನಮ್ಮ ಮುಂದೆ ಆಯವ್ಯಯ ಮಂಡನೆ (ಬಜೆಟ್) ಮಾಡುವ ಎಷ್ಟೋ ತಿಂಗಳುಗಳ ಮುಂಚೆಯೇ ವಿಶ್ವಬ್ಯಾಂಕ್ ಬಜೆಟ್ ಹೇಗಿರಬೇಕು ಮತ್ತು ಅದರ ಆದ್ಯತೆಗಳೇನು ಎಂಬುದನ್ನು ತನ್ನದೇ ಆದ ರೀತಿಯಲ್ಲಿ ನಿಯಂತ್ರಿಸಿರುತ್ತದೆ. ಇದನ್ನೆಲ್ಲ ಅರ್ಥ ಮಾಡಿಕೊಂಡು, ಜಾಗತಿಕ ಬೆಳವಣಿಗೆಯ ಅರಿವಿನಲ್ಲಿ ಕರ್ನಾಟಕವನ್ನು ಕಟ್ಟುವ ನಾಯಕನೊಬ್ಬ ಈಗಲೂ ದಸಂಸ ಅಥವಾ ರೈತ ಸಂಘದಲ್ಲಿ ಇದ್ದಾರೆಂದು ನನಗೆ ಅನ್ನಿಸುವುದಿಲ್ಲ.

೨. ಈಗಿರುವ ಚುನಾವಣಾ ರಾಜಕಾರಣವನ್ನು ಒಪ್ಪಿಕೊಂಡು ರಚಿಸಹೊರಡುವ ಪರ್ಯಾಯ ರಾಜಕಾರಣದಲ್ಲಿ ಈಗಲೂ ಹುಳುಕುಗಳಿಲ್ಲದೇ ಇರಲು ಸಾಧ್ಯವಿಲ್ಲ. ಹೀಗಾಗಿ ಯಾವುದಕ್ಕೋ ಪ್ರತಿಕ್ರಿಯಿಸುತ್ತಾ ನಮ್ಮ ನಿಲುವುಗಳನ್ನು ರೂಪಿಸಿಕೊಳ್ಳುವಂತಿಲ್ಲ. ಮೇಲಾಗಿ ಪರ್ಯಾಯ ರಾಜಕಾರಣಕ್ಕೆ ನಾವು ರೂಪಿಸಿಕೊಂಡಿರುವ ಸೈದ್ಧಾಂತಿಕತೆಗೂ, ಆ ಸೈದ್ಧಾಂತಿಕತೆಗೆ ಇರುವ ಇತಿಹಾಸವೂ ಈಗ ಉಪಯುಕ್ತವಲ್ಲ. ಇಂದಿನ ಒತ್ತಡಗಳು ಹಿಂದೆಂದಿಗಿಂತಲೂ ಹೆಚ್ಚು ಜಾಗತಿಕವಾದುದು. ನಮ್ಮನ್ನು ನಿಯಂತ್ರಿಸುವ ಶಕ್ತಿಗಳು ನಮ್ಮ ಮುಂದೆಯೇ ಇದ್ದಿದ್ದರೆ ಅವಕ್ಕೆ ಒದೆಯಬಹುದಾಗಿತ್ತು. ಆದರೆ ನಮ್ಮನ್ನು ಶೋಷಿಸುವ ಶಕ್ತಿಗಳು ನಮ್ಮಂತೆಯೇ ಇದ್ದು ಒದ್ದರೇ ನಮಗೇ ಒದ್ದಂತಾಗಿರುವುದರಿಂದ ಪರಿಸ್ಥಿತಿ ತುಂಬ ಜಟಿಲವಾಗಿದೆ. ಜಾಗತೀಕರಣ - ನವ ವಸಾಹತೀಕರಣಗಳ ಸಂದರ್ಭದಲ್ಲಿ ಕರ್ನಾಟಕದ ಸಮಸ್ಯೆಗಳನ್ನು ವ್ಯಾಪಕವಾದ ಚೌಕಟ್ಟಿನಲ್ಲಿರಿಸಿ, ಚರ್ಚಿಸುವ, ಆ ಮೂಲಕ ಹೊಸ ನಾಡೊಂದನ್ನು ಕಟ್ಟುವ ಕೆಲಸ ಆಗಬೇಕಾಗಿದೆ. ಹೊಸ ಸಿದ್ಧಾಂತಗಳ ತಳಹದಿಯ ಮೇಲೆ ಪರ್ಯಾಯ ರಾಜಕಾರಣವನ್ನು ಕಟ್ಟಬೇಕಾಗಿದೆ.

೩. ಈಗಾಗಲೇ ಸಕ್ರಿಯ ರಾಜಕಾರಣದಲ್ಲಿ ತೊಡಗಿಕೊಂಡವರ ಬಗ್ಗೆ ಅಸಾಧಾರಣ ಅನುಮಾನಗಳಿರುವುದರಿಂದ ಅಂತಹವರನ್ನು ಮುಂದೆ ಇಡದೆ, ಏನನ್ನಾದರೂ ಮಾಡಬಲ್ಲ ಯುವಕರನ್ನು ಮುಂದಿಟ್ಟುಕೊಂಡು ಕೆಲಸ ಮಾಡಬೇಕು. ಜೆ.ಪಿ. ಚಳವಳಿ ಈ ಅರ್ಥದಲ್ಲಿ ನಮಗೆ ಒಂದು ಮಾದರಿ ಆಗಬಹುದು. ಅಧಿಕಾರ ರಾಜಕಾರಣದಲ್ಲಿ ಆಸೆ ಇಡದೇನೇ ರಾಜಕಾರಣ ಮಾಡಿದ ಗಾಂಧಿಯ ಆದರ್ಶ ನಮಗೆ ಬೇಕು. ಹೀಗಾಗಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಧೀಮಂತರು ಅಧಿಕಾರದ ಆಸೆ ಬಿಟ್ಟುಕೊಟ್ಟು ನಾಡಿನ ಬದಲಾವಣೆಗೆ ಶ್ರಮಿಸುವಂಥ ವಾತಾವರಣ ನಿರ್ಮಾಣ ಆಗಬೇಕು. ಆಸೆ ಬುರುಕರ ನಡುವೆ ಇಂಥವರನ್ನು ಎಲ್ಲಿ ಹುಡುಕೋಣ?

೪. 'ಪರ್ಯಾಯ ರಾಜಕಾರಣ' ಎಂಬುದು ಕತ್ತಲೆ ಬೆಳಗಾಗುವುದರೊಳಗೆ ಕೆಲವು ನಾಯಕರು ನಡೆಸುವ ಸಭೆಯಿಂದ ರೂಪುಗೊಳ್ಳದು, ರೂಪುಗೊಳ್ಳಬಾರದು. ಅದು ಹಂತ ಹಂತವಾದ ಹೋರಾಟದಿಂದ ರೂಪುಗೊಳ್ಳಬೇಕಾಗಿದೆ. ಇದಕ್ಕಾಗಿ ದೂರಗಾಮೀ ಪರಿಣಾಮವುಳ್ಳ ಹೋರಾಟಗಳನ್ನು ಸಂಘಟಿಸಬೇಕಾಗಿದೆ. ಬ್ರಿಟಿಷರ ವಿರುದ್ಧ ಗಾಂಧೀಜಿ ಸಂಘಟಿಸಿದ ಹೋರಾಟಗಳ ಸರಮಾಲೆಯನ್ನು ನಾವೆಲ್ಲ ನೆನಪಿಟ್ಟುಕೊಳ್ಳಬೇಕು. ಇಂದಿನ ನಾಯಕರಿಗೆ ತಾಳ್ಮೆಯಿಲ್ಲ, ಇಂದು ಹೋರಾಟ ನಡೆದು, ನಾಳೆ ಅದರ ಪರಿಣಾಮ ಲಭಿಸಿ, ನಾಡಿದ್ದು ನಾನದರ ಲಾಭವನ್ನು ಉಣ್ಣಬೇಕು - ಇದು ಈಗಿನ ಜನರ ಚಿಂತನೆ. ಇದನ್ನು ಬಿಟ್ಟು ನಾಡಿನಾದ್ಯಂತ ಹೋರಾಟಗಳನ್ನು ಸಂಘಟಿಸಿ, ಹೋರಾಡುತ್ತಲೇ ಪರ್ಯಾಯ ರಾಜಕಾರಣವನ್ನು ಪ್ರತೀತಗೊಳಿಸಿಕೊಳ್ಳಬೇಕು. ಪರ್ಯಾಯ ರಾಜಕಾರಣ ಎಂಬುದು ಒಂದು ಸಿದ್ಧ ವಸ್ತುವಲ್ಲ.

೫. ಇದು ಉತ್ತರಿಸಲು ಕಷ್ಟಸಾಧ್ಯವಾದ ಪ್ರಶ್ನೆ. ಇದು ಕಾಲಾಂತರದಲ್ಲಿ ರೂಪುಗೊಳ್ಳಬೇಕಾದ್ದು. ಎಲ್ಲವನ್ನೂ ಮೊದಲೇ ಸಿದ್ಧ ಮಾಡಿಟ್ಟುಕೊಂಡು ಹೊರಟರೆ ಏನೂ ಆಗದು. ಹೀಗಾಗಿ ನಮ್ಮ ಮುಂದಿರುವ ನಿಜವಾದ ಮತ್ತು ಗಂಭೀರವಾದ ಸಮಸ್ಯೆಗಳೇನು ಎಂಬುದನ್ನು ತಿಳಿದುಕೊಂಡು, ಯುವಕರ ಮೂಲಕ ಅದನ್ನು ಪರಿಹರಿಸಲು ಹೋರಾಟವನ್ನು ಸಂಘಟಿಸಿಕೊಂಡು ಮುನ್ನಡೆಯಬೇಕು. ಹೋರಾಟ ಪ್ರಾಮಾಣಿಕ ಆಗಿದ್ದರೆ ಅದು ತನಗೆ ಬೇಕಾದ ನೀತಿಸಂಹಿತೆ ಮತ್ತು ಕಾರ್ಯಸೂಚಿಗಳನ್ನು ತಾನೇ ಗೊತ್ತು ಮಾಡಿಕೊಳ್ಳುತ್ತದೆ. □

# ಪ್ರತ್ಯೇಕ ಅಸ್ತಿತ್ವ ಇರಬಾರದು

(ಹಿಂದಿನ ಪುಟದಿಂದ)

ಅಸ್ತಿತ್ವದಲ್ಲಿದ್ದಲ್ಲಿ ರಾಜಕೀಯ ಪಕ್ಷ ಒಂದೇ ಆಗಿರುತ್ತದೆ ಎಂದು ಹೇಳಲು ಬರಲ್ಲ.

೫. ಸಮಗ್ರ ಗ್ರಾಮೀಣ ಅಭಿವೃದ್ಧಿಯನ್ನು ಗುರಿಯಾಗಿಟ್ಟುಕೊಂಡು ಎಲ್ಲ ಮನೆಗಳಿಗೂ ಕುಡಿಯುವ ನೀರು ಒದಗಿಸುವುದು, ವಯಸ್ಕ ಮಕ್ಕಳೆಲ್ಲರನ್ನೂ ಶಾಲೆಗೆ ಸೇರಿಸುವುದು, ನಿರುದ್ಯೋಗ ನಿರ್ಮೂಲನೆ ಮಾಡುವುದು, ಎಲ್ಲಕ್ಕಿಂತಲೂ ಹೆಚ್ಚಾಗಿ ಜಾತಿ ವಿನಾಶದ ಕಾರ್ಯಕ್ರಮಗಳನ್ನು ಎಲ್ಲ ಹಂತದಲ್ಲೂ ರೂಪಿಸಿ ಜಾರಿಗೊಳಿಸುವುದು. ಉದಾಹರಣೆಗೆ ಅಂತರ್ಜಾತಿ ವಿವಾಹಗಳನ್ನು ಪಕ್ಷದ ಕಾರ್ಯಕರ್ತರಿಗೆ ಕಡ್ಡಾಯ ಮಾಡುವುದು. ಜಾತಿ ಸಂಘಗಳ ಸದಸ್ಯತ್ವ ಹೊಂದಿದವರನ್ನು ಅನರ್ಹಗೊಳಿಸುವುದು, ಜಾತಿ ಸಮ್ಮೇಳನಗಳ ವಿರುದ್ಧ ಪ್ರತಿಭಟನೆ ಮಾಡುವುದು.

**ಪಕ್ಷದ ನೀತಿ**

ಪಕ್ಷವು ತನ್ನ ಸಂವಿಧಾನ ಮತ್ತು ಕಾನೂನಿನ ಸಂಪೂರ್ಣ ಅಡಿಯಾಳಾಗಬೇಕು. ಎಲ್ಲ ಹಂತಗಳಲ್ಲೂ ಕಾನೂನಿನ ಆಡಳಿತವಿರಬೇಕೇ ಹೊರತು ವ್ಯಕ್ತಿಗತ ನಿಲುವುಗಳಿಗೆ ಅವಕಾಶವಿರಬಾರದು. ಪಕ್ಷದ ಎಲ್ಲ ನೀತಿಗಳನ್ನು ಬರವಣಿಗೆಯಲ್ಲಿ ಕ್ರೋಢೀಕರಿಸಿ ಕಾಲಕಾಲಕ್ಕೆ ಪರಿಷ್ಕರಿಸುತ್ತಿರಬೇಕು. ಪಕ್ಷದ ಎಲ್ಲ ಕಾರ್ಯಕ್ರಮಗಳು ಕಾಲಮಿತಿಯನ್ನ ಹೊಂದಿರಬೇಕು. ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತನು, ವಿಶೇಷವಾಗಿ ಪದಾಧಿಕಾರಿಯು ನಿರ್ದಿಷ್ಟವಾದ ಜವಾಬ್ದಾರಿಗಳನ್ನು ಕಾಲಮಿತಿಯಲ್ಲಿ ಪೂರೈಸಬೇಕು. □

೧ ಮತ್ತು ೨. ನಮ್ಮ ಇಂದಿನ ಒಟ್ಟು ರಾಜಕಾರಣದ ಪ್ರಕಾರಗಳನ್ನು ನೋಡುತ್ತಿದ್ದರೆ 'ಜನಪರ'ವಾದ ಪರ್ಯಾಯ ರಾಜಕಾರಣದ ಅವಶ್ಯವಿದೆ. ಸ್ವಾತಂತ್ರ್ಯ ಬಂದು ಐವತ್ತೇಳು ವರ್ಷಗಳಾದರೂ ಸ್ಥಾಪಿತ ರಾಜಕಾರಣಗಳು ದೇಶ-ಸಮಾಜ - ಸಮುದಾಯಗಳ ಬಗೆಗೆ ಕಿಂಚಿತ್ತೂ ಯೋಚಿಸುತ್ತಿಲ್ಲ. ಅಧಿಕಾರಶಾಹಿ ಮತ್ತು ಹಣ ಈ ರಾಜಕಾರಣಗಳ ಕೇಂದ್ರ ನೆಲೆ ಆಗಿರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇಂಥ ಸಂದರ್ಭದಲ್ಲಿ ಕೃಷಿ ಸಮಾಜದ ಪರವಾಗಿ ಸದಾ ದನಿಯೆತ್ತಿ ಹೋರಾಡುತ್ತಿರುವ 'ರೈತಸಂಘ' ಹಾಗೂ ಕೆಳವರ್ಗದವರ ಸಂಬಂಧಿಯ ಚಿಂತನೆ ನಡೆಸುತ್ತಿರುವ 'ದಸಂಸ' -ಇವೆರಡೂ ಒಟ್ಟಿಗೆ ಸೇರಿ 'ಪರ್ಯಾಯ ರಾಜಕಾರಣ' ರೂಪಿಸುವುದು ಅವಶ್ಯ. ಇವುಗಳ ಸ್ವರೂಪ ಹೇಗಿರಬೇಕೆನ್ನುವುದು ಇನ್ನಷ್ಟು ಯೋಚಿಸಬೇಕಾದ ಸಂಗತಿ.

○ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ್
ಸಾಹಿತಿ, ಚಿಂತಕರು

ಚರ್ಚೆ

ಪರ್ಯಾಯ ರಾಜಕಾರಣ

★ ಜಿಲ್ಲೆ - ತಾಲ್ಲೂಕು ಮತ್ತು ಗ್ರಾಮ ಮಟ್ಟದ ಮುಖ್ಯ ವ್ಯಕ್ತಿಗಳನ್ನು ಸೇರಿಸಿ 'ಪರ್ಯಾಯ ರಾಜಕಾರಣ'ದ ನೆಲೆಗಳ ಬಗೆಗೆ ಚರ್ಚಿಸುವುದು ಅಗತ್ಯ. ಆಗ ಸ್ಥಳೀಯ ಸಂಘ-ಸಂಸ್ಥೆಗಳ ನೆರವನ್ನು ಪಡೆಯಬಹುದು.

# ಪ್ರಾದೇಶಿಕ ಪಕ್ಷವಾಗಿ ರೂಪುಗೊಳ್ಳಲಿ

ಇವು ಒಂದು 'ಪಕ್ಷ'ವೆಂಬ ಸಂಕೇತ ಹಿಡಿಯಬೇಕೊ ಅಥವಾ 'ಒಕ್ಕೂಟ' ಎಂಬ ಸಂಕೇತ ಪಡೆಯಬೇಕೊ ಇದನ್ನು ನಾವು ಯೋಚಿಸಬೇಕಾಗಿದೆ. ಆದರೆ 'ಪರ್ಯಾಯ ರಾಜಕಾರಣ' ರೂಪಿಸುವುದು ಮಾತ್ರ ಅಗತ್ಯ.

೩. ಪರ್ಯಾಯ ರಾಜಕಾರಣ ರೂಪಿಸುವಾಗ 'ತಳವರ್ಗ'ದವರ ಹಿತವನ್ನು ಬಯಸುವಂತಿರಬೇಕು. ನಮ್ಮ ರಾಜಕಾರಣದಲ್ಲಿ ತಳವರ್ಗದವರು ಕೇವಲ ವೋಟ್ ಬ್ಯಾಂಕ್ ಆಗಿದ್ದಾರೆಯೇ ಹೊರತು ಅವರನ್ನು ಸಮುದಾಯದ ಕೇಂದ್ರ ಭೂಮಿಕೆಗೆ ತರುವ ಪ್ರಯತ್ನ ಮಾಡಿಲ್ಲ. ದೇಶದ ಅಭಿವೃದ್ಧಿಯನ್ನು ಮುಂದುವರಿದ ರಾಷ್ಟ್ರಗಳ ಅಭಿವೃದ್ಧಿ ಕಲ್ಪನೆಯ ಜತೆ ಸಮಾನಾಂತರವಾಗಿ ರೂಪಿಸುವುದು ತರವಲ್ಲ. ನಮ್ಮ ದೇಶದ ಅಭಿವೃದ್ಧಿ ಪರಿಕಲ್ಪನೆಯನ್ನು 'ಸ್ಥಳೀಯ' ಅಥವಾ ದೇಶೀಯ' ನೆಲೆಯಲ್ಲೇ ನೋಡುವುದು ಸೂಕ್ತ. ಇದಕ್ಕೆ ಸಮಾಜದ 'ಸಮಾನಾವಕಾಶ' ಬೇಕೆಂದು ಅಪೇಕ್ಷಿಸುವವರು ಅಥವಾ ಸ್ಥಳೀಯ ಎನ್‌ಜಿಓಗಳ ಮುಖ್ಯಸ್ಥರು ಸೇರಬೇಕೆನ್ನಿಸುತ್ತದೆ.

ಕರ್ನಾಟಕದ ಸಾಂಸ್ಕೃತಿಕ ರಾಜಕೀಯದ ಬಗೆಗೆ 'ನಿಜದನಿ'ಯನ್ನು ಎತ್ತುತ್ತಿರುವ ವ್ಯಕ್ತಿಗಳನ್ನು ಇದು ಒಳಗೊಳ್ಳಬೇಕು. ಇವರು ಪ್ರಭಾವೀ ರಾಜಕಾರಣಿಯೊ ಮಾಜಿ ರಾಜಕಾರಣಿಯೋ ಮಾಜಿ ಅಧಿಕಾರಿಯೊ ಅಥವಾ ಸಮಾಜದ ಶ್ರೀಮಂತ ವರ್ಗವೊ ಆಗಿರಕೂಡದು. 'ಜನಪರ' ವ್ಯಕ್ತಿ ಮತ್ತು ಶಕ್ತಿಗಳನ್ನು ಜತೆಗೂಡಿಸಿಕೊಳ್ಳಬೇಕಾದದ್ದು ಅವಶ್ಯ.

೪. ರಾಷ್ಟ್ರ ರಾಜಕಾರಣದಲ್ಲಿ ಈಗಾಗಲೇ ಗುರುತಿಸಿಕೊಂಡಿರುವ ರಾಜಕಾರಣಿಗಳನ್ನು ಯಾವುದೇ ಕಾರಣಕ್ಕೂ 'ಪರ್ಯಾಯ ರಾಜಕಾರಣ'ದ ಒಕ್ಕೂಟದಲ್ಲಿ ಸೇರದಂತೆ ಎಚ್ಚರ ವಹಿಸಬೇಕು. ಇದು ಮೊದಲು ಪ್ರಾದೇಶಿಕ ಪಕ್ಷವಾಗಿ ರೂಪುಗೊಳ್ಳಬೇಕು. ಆನಂತರ ಅದು ವಿಸ್ತರಣೆಯನ್ನು ಪಡೆಯಬಹುದು. ವ್ಯಕ್ತಿಗಳು ಒಗ್ಗೂಡಿಸಿಕೊಳ್ಳಲು ತಾಲ್ಲೂಕು, ಗ್ರಾಮಗಳಲ್ಲಿರುವ ಈ ಬಗೆಯ ಆಸಕ್ತರನ್ನು ಗುರುತು ಮಾಡಿಕೊಳ್ಳಬೇಕು. ಗ್ರಾಮಗಳ ಮಟ್ಟದಲ್ಲಿ ಈ ಬಗೆಯ ವ್ಯಕ್ತಿಗಳನ್ನು 'ಪರ್ಯಾಯ ರಾಜಕಾರಣ'ದ ರೂಪುರೇಷೆಯನ್ನು ರೂಪಿಸುವ ನೆವದಲ್ಲಿ ಸಭೆಯನ್ನು ಕರೆದು ಸಂವಾದಿಸಬೇಕು. ಗ್ರಾಮಗಳ ಮಟ್ಟದಲ್ಲಿ ಇದು ಸಾಧ್ಯಗೊಳ್ಳುವುದು ಕಷ್ಟಸಾಧ್ಯ. ಈ ಸಂಗತಿಯನ್ನು ತಾಲ್ಲೂಕು ಮಟ್ಟದಲ್ಲಿ ಸಭೆ ಸೇರಿಸುವುದು ಉಚಿತ. ಈ ವಿಷಯವನ್ನು ಹಂತ ಹಂತವಾಗಿ ಹೀಗೆ ರೂಪಿಸಿಕೊಳ್ಳಬಹುದು.

★ ಜಿಲ್ಲಾ ಮಟ್ಟದಲ್ಲಿ ಪರ್ಯಾಯ ರಾಜಕಾರಣದಲ್ಲಿ ಆಸಕ್ತರಾಗಿರುವವರನ್ನು ಸಂಘಟಿಸಿ - ಚರ್ಚೆ ಮಾಡಿ ವ್ಯಕ್ತಿಗಳನ್ನು ಶಕ್ತಿಗಳನ್ನೂ ಗುರುತಿಸುವುದು ಇದನ್ನು ದಲಿತ ಸಂಘರ್ಷ ಸಮಿತಿ ಮತ್ತು ರೈತಸಂಘ ಇವೆರಡರ ಉನ್ನತ ಸಮಿತಿ ಮಾಡಬೇಕು.

★ ಜಿಲ್ಲಾ ಮಟ್ಟದಲ್ಲಿ ಗುರುತಿಸಲ್ಪಟ್ಟ ವ್ಯಕ್ತಿ - ಶಕ್ತಿಗಳು ಆಯಾಯ ಜಿಲ್ಲೆಯ ತಾಲ್ಲೂಕುಗಳಲ್ಲಿ ಸಂಚರಿಸಿ ತಾಲ್ಲೂಕು ಮಟ್ಟದಲ್ಲಿ ವ್ಯಕ್ತಿ-ಶಕ್ತಿಗಳನ್ನು ಗುರುತಿಸಿಕೊಳ್ಳಬೇಕು.

★ ತಾಲ್ಲೂಕು ಸಮಿತಿಯವರು ಗ್ರಾಮಮಟ್ಟದಲ್ಲಿರುವ ವ್ಯಕ್ತಿ-ಶಕ್ತಿಗಳನ್ನು ಗುರುತಿಸಿಕೊಳ್ಳಬಹುದು.

೫. ಪರ್ಯಾಯ ರಾಜಕಾರಣದ ಪಕ್ಷ ಹೊಂದಬಹುದಾದ ಮುಖ್ಯ ನೀತಿಗಳನ್ನು ಕಾರ್ಯಸೂಚಿಗಳನ್ನು ಹೀಗೆ ಪಟ್ಟಿ ಮಾಡಬಹುದು. ಇವು ಆದ್ಯತಾನುಸಾರವೆಂದು ಪರಿಗಣಿಸುವ ಅಗತ್ಯವಿಲ್ಲ.

★ ದೇಶೀಯತೆಯ ಉಳಿವು ಮುಖ್ಯವಾಗಿರಬೇಕು.

★ ಸ್ಥಳೀಯ ಭಾಷೆ, ಸಂಸ್ಕೃತಿ, ಆಚರಣೆಗಳ ಸಂಗೋಪನ ಆಗಬೇಕು.

★ ತಳವರ್ಗದ ಜನರ ಸ್ಥಾನಮಾನಗಳನ್ನು ಅವರ ವಿಚಾರಗಳನ್ನು ಗೌರವಿಸಬೇಕು.

★ ಹಿಂದುಳಿದ ಹಾಗೂ ಕೆಳಜಾತಿಗಳ ನಡುವೆ ಸಾಮರಸ್ಯಕ್ಕೂ ಸಹಜೀವನಕ್ಕೂ ಒತ್ತುಕೊಡುವ ನೆಲೆಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು.

★ ಜಾಗತೀಕರಣವು ದಲಿತರಿಗೆ ಈಗ ಮಾರಕವಾಗುತ್ತಿದೆ. ಅದು ಆಗದಂತೆ ತಡೆಯೊಡ್ಡುವ ವಿಧಿ-ವಿಧಾನಗಳನ್ನು ಪರ್ಯಾಯವಾಗಿ ರೂಪಿಸಿಕೊಳ್ಳಬೇಕು. ಇದು ಮುಖ್ಯ ನೀತಿ ಆಗಬೇಕು.

★ ಸಮಾನ ಶಿಕ್ಷಣ ನೀತಿ ಜಾರಿಗೆ ತರಬೇಕು. ಕನ್ನಡವನ್ನು ಭಾಷೆಯಾಗಿ ಕಲಿಯಬೇಕು ; ಅದು ಎಲ್ಲರಿಗೂ ಕಡ್ಡಾಯ. ಪ್ರಾಥಮಿಕ ಮಟ್ಟದಿಂದಲೇ ಇಂಗ್ಲಿಷ್-ಕನ್ನಡ ದ್ವಿಭಾಷೆಯನ್ನು ಕಡ್ಡಾಯ ಮಾಡಬೇಕು.

★ ದೇಶೀಯ ತಂತ್ರಜ್ಞಾನಕ್ಕೆ ಹೆಚ್ಚು ಒತ್ತು ಕೊಡಬೇಕು. ಪಾರಂಪರಿಕ ಕುಶಲಕಲೆಗಳನ್ನು ಸಂಪನ್ಮೂಲವಾಗಿ ರೂಪಿಸಬೇಕು.

(೨೭ನೇ ಪುಟಕ್ಕೆ...)





'ಸಂವಾದ' ದೊರೆಯುವ ಸ್ಥಳ

☞ ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
❖ ಎಂಬಿಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು-೫೬೦ ೦೦೧, ☎ : ೨೨೨೦೩೫೮೦
❖ ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೧೩೮೨ ❖ ಸ್ಟೇಷನ್ ರಸ್ತೆ, ಗುಲ್ಬರ್ಗ-೨, ☎ : ೪೨೪೩೦೨
❖ ಕೆ.ಎಸ್.ರಾವ್ ರಸ್ತೆ, ಮಂಗಳೂರು-೧, ☎ : ೨೪೪೧೧೦೬ ❖ ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೮೯೪
☞ ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು - ೫೬೦ ೦೨೦
☞ ಕೆಎಸ್‌ಆರ್‌ಟಿಸಿ ಬುಕ್ ಸ್ಟಾಲ್, ಪ್ಲಾಟ್ ಫಾರಮ್ ನಂ. ೧, ಸ್ಟಾಲ್ ನಂ. ೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು



# ರೈತ ಪ್ಲಸ್ ದಲಿತ ಮೈನಸ್ ಪರಿಸರ = ?



**ಗಾಂಧಿ ಜಯಂತಿಗೆ ಒಂದು ದಿನ ಮುಂಚೆ ರೈತ - ದಲಿತ ಸಂಘಟನೆಗಳ ಒಕ್ಕೂಟದ ಕೇಂದ್ರ ಕಛೇರಿ 'ಅನಿಕೇತನ' ಗಾಂಧಿನಗರದಲ್ಲಿ ಉದ್ಘಾಟನೆಯಾಗಿದೆ. ಇದೊಂದು 'ಐತಿಹಾಸಿಕ ಹೆಜ್ಜೆ' ಎಂದು ಶಿವಮೂರ್ತಿ ಶರಣರು ಹೇಳಿದ್ದಾರೆ. ಅದು ಸತ್ಯ ಸಹ. ಆಶ್ಚರ್ಯದ ಸಂಗತಿ ಎಂದರೆ ಈವರೆಗೂ ನಡೆದ ಈ ಏಕೀಕರಣದ ಚರ್ಚೆ, ಸಂವಾದಗಳಲ್ಲಿ ಯಾರೂ ಪರಿಸರ ಚಳವಳಿಗಳನ್ನು ನಾಮಕಾವಸ್ಥೆಗೂ ಪ್ರಸ್ತಾಪಿಸದೇ ಹೋಗಿದ್ದು?!. ಈ ಹಂತದಲ್ಲಿ ರಾಜ್ಯದ ಸಾಮಾಜಿಕ, ಸಾಂಸ್ಕೃತಿಕ, ಚಾರಿತ್ರಿಕ ಚೌಕಟ್ಟಿನಲ್ಲಿಯೇ ಕೆಲವು ಪ್ರಶ್ನೆಗಳೇಳುತ್ತವೆ.**

○ ಟಿ.ಎಸ್. ವಿವೇಕಾನಂದ
ಪರಿಸರವಾದಿ ಚಿಂತಕರು

ಯಾರೇ ಆಗಲಿ ಹೋಗುವಾಗ ಸುಮ್ಮನೆ ಹೋಗುವುದಿಲ್ಲ. ಕೆಲವು ಸಮಸ್ಯೆಗಳನ್ನೋ, ಸವಾಲುಗಳನ್ನೋ ಬಿಟ್ಟು ಹೋಗುತ್ತಾರೆ. ಏನಿಲ್ಲದಿದ್ದರೂ ಶೂನ್ಯವನ್ನ. ಪ್ರೊ॥ ಎಂಡಿಎನ್ ಈ ಎಲ್ಲವನ್ನೂ ಬಿಟ್ಟು ಹೋಗಿದ್ದಾರೆ. ಅದರಲ್ಲಿ ರೈತನ ಆತ್ಮ ಗೌರವದಿಂದ ಹಿಡಿದು ರಾಜ್ಯದ ರೈತರ ಭವಿಷ್ಯದವರೆಗೆ..., ಇದರೊಟ್ಟಿಗೆ ರಾಜ್ಯದ ಪ್ರಗತಿಪರರಲ್ಲಿ ಅನೇಕ ವರ್ಷಗಳಿಂದ ಜಿಜ್ಞಾಸೆಯಾಗಿ ಕಾಡುತ್ತಿದ್ದ 'ಎಲ್ಲ ಜನಪರ ಚಳವಳಿಗಳ ಏಕೀಕರಣವೂ' ಸೇರಿದೆ.

ಅದು ಹೇಗೋ ಏನೋ ಪ್ರೊ॥ ಎಂ.ಡಿ.ಎನ್‌ರ ಪಾರ್ಥೀವ ಶರೀರದ ಸಮ್ಮುಖದಲ್ಲೇ ಈ ಸಂಗತಿ ಅನೇಕರಿಗೆ ಏಕಕಾಲದಲ್ಲಿ ಹೊಳೆದಿದ್ದು ಸೋಜಿಗಕ್ಕಿಂತ ಹೆಚ್ಚಿನದು. ಅಂದಿನಿಂದಲೇ ಈ ಬಗ್ಗೆ ಚರ್ಚೆಗಳು ಆರಂಭವಾದವು. ಚಕ್ರ ಪ್ರತಿಷ್ಠಾನದ ವತಿಯಿಂದ ಪ್ರೊ॥ ಎಂಡಿಎನ್‌ರ ಸಾವಾದ ಒಂದೇ ವಾರದೊಳಗೆ ನಡೆದ ಶ್ರದ್ಧಾಂಜಲಿ ಸಭೆಯು 'ಸಮಾಜವಾದಿ ಚಳವಳಿಯ ಮುಂದಿನ ಹೆಜ್ಜೆಗಳು' ವಿಷಯದ ಮೇಲೆ ಕೇಂದ್ರೀಕೃತವಾಗಿತ್ತು ಎಂಬುದು ಗಮನಿಸಬೇಕಾದ ಸಂಗತಿ. ಇಲ್ಲಿ ನಡೆದ ಬಹುಪಾಲು ಚರ್ಚೆ, ಸಂವಾದಗಳು ರೈತ ಚಳವಳಿ, ದಲಿತ ಚಳವಳಿ ಹಾಗೂ ಮಹಿಳಾ ಚಳವಳಿಗಳ ಒಗ್ಗೂಡಿಸುವಿಕೆಯನ್ನೇ ಪ್ರಧಾನ ಆಶಯವನ್ನಾಗಿ ಹೊಂದಿದ್ದವು.

ಇದರ ನಂತರ ನಡೆದ ಬಹುಪಾಲು ಎಲ್ಲಾ ಶ್ರದ್ಧಾಂಜಲಿ ಸಭೆಗಳಲ್ಲಿ ಈ ವಿಷಯ ಪ್ರಮುಖವಾಗಿ ಚರ್ಚೆಯಾಗಿದೆ. ಎಲ್ಲಾ ಚಳವಳಿಗಳ ಮುಖಂಡರೂ ಇದರ ಬಗ್ಗೆ ಆಸಕ್ತಿ ತೋರಿಸಿದ್ದರು. ಇದು 'ಜನಮತ' ಸಂಘಟಿಸಿದ್ದ 'ಜನಪರ ಚಳವಳಿಗಳ ಮುನ್ನೋಟ - ವಿಶೇಷ ಚಿಂತನಾ ಸಭೆ' ಹಾಗೂ ಮೈಸೂರಿನಲ್ಲಿ ನಡೆದ ಸಭೆಗಳಲ್ಲಿ ಇದು ರುಜುವಾತಾಗಿತ್ತು. ಇದಕ್ಕೆ ಟೀಕೆ ಟಿಪ್ಪಣಿಗಳೂ ಇವೆ. ಅದನ್ನು ನಂತರ ಚರ್ಚಿಸಬಹುದು.

ಇವೆಲ್ಲದರ ಅಂತಿಮ ಫಲವೆನ್ನುವಂತೆ ಗಾಂಧಿ ಜಯಂತಿಗೆ ಒಂದು ದಿನ ಮುಂಚೆ ರೈತ - ದಲಿತ ಸಂಘಟನೆಗಳ ಒಕ್ಕೂಟದ ಕೇಂದ್ರ ಕಛೇರಿ 'ಅನಿಕೇತನ' ಗಾಂಧಿನಗರದಲ್ಲಿ ಉದ್ಘಾಟನೆಯಾಗಿದೆ. ಇದೊಂದು 'ಐತಿಹಾಸಿಕ ಹೆಜ್ಜೆ' ಎಂದು ಶಿವಮೂರ್ತಿ ಶರಣರು ಹೇಳಿದ್ದಾರೆ. ಅದು ಸತ್ಯ ಸಹ. ಆಶ್ಚರ್ಯದ ಸಂಗತಿ ಎಂದರೆ ಈವರೆಗೂ ನಡೆದ ಈ ಏಕೀಕರಣದ ಚರ್ಚೆ, ಸಂವಾದಗಳಲ್ಲಿ ಯಾರೂ ಪರಿಸರ ಚಳವಳಿಗಳನ್ನು ನಾಮಕಾವಸ್ಥೆಗೂ ಪ್ರಸ್ತಾಪಿಸದೇ ಹೋಗಿದ್ದು?!. ಈ ಹಂತದಲ್ಲಿ ರಾಜ್ಯದ ಸಾಮಾಜಿಕ, ಸಾಂಸ್ಕೃತಿಕ, ಚಾರಿತ್ರಿಕ ಚೌಕಟ್ಟಿನಲ್ಲಿಯೇ ಕೆಲವು ಪ್ರಶ್ನೆಗಳೇಳುತ್ತವೆ, ಮುಖ್ಯವಾಗಿ...,

ಪರಿಸರ ಚಳವಳಿಗಳು ಜನಪರ ಚಳವಳಿಗಳಲ್ಲವೇ ? ಪರಿಸರಕ್ಕೂ ಈಗ ಐಕ್ಯತೆಯ ಮಾತಾಡುತ್ತಿರುವ ಉಳಿದ ಚಳವಳಿಗಳಿಗೂ ಪರಸ್ಪರ ಸಂಬಂಧವಿಲ್ಲವೇ ? ಈವರೆಗೂ ನಡೆದಿರುವ ಪರಿಸರ ಚಳವಳಿಗಳು ಸಾಂಸ್ಕೃತಿಕವಾಗಿ, ಚಾರಿತ್ರಿಕವಾಗಿ ರಾಜ್ಯಕ್ಕೆ ಮುಖ್ಯವಲ್ಲವೇ ? ಈ ಪರಿಸರ ಚಳವಳಿಗಳನ್ನು ಸಂಪೂರ್ಣವಾಗಿ ಜನಪರ ಚಳವಳಿಗಳಿಂದ ಪ್ರತ್ಯೇಕಿಸಿ ನೋಡುತ್ತಿರುವುದರ ಹಿಂದಿರುವ ಕಾರಣಗಳೇನು ? ಈವರೆಗಿನ ಪರಿಸರ ಚಳವಳಿಗಳನ್ನು ಉಳಿದ ಚಳವಳಿಗಳು ಯಾವ ಅರ್ಥದಲ್ಲಿ ಗ್ರಹಿಸಿವೆ ? ರಾಜ್ಯದ ಪ್ರಸ್ತುತ ಸಂದರ್ಭದಲ್ಲಿ ಈ ಪರಿಸರ ಚಳವಳಿಗಳ ಸ್ಥಾನಮಾನವೇನು ? ಪರಿಸರ ಚಳವಳಿಗಳು ಉಳಿದ ಚಳವಳಿಗಳಂತೆಯೇ ರಾಜ್ಯದ, ಜನಸಾಮಾನ್ಯರ ಹಿತಕ್ಕಾಗಿ ಹೋರಾಡಿಲ್ಲವೇ ? ಈ ಮಡಿವಂತಿಕೆ, ದಿವ್ಯ ನಿರ್ಲಕ್ಷ್ಯದ ಮೂಲವೇನು ? ಅಥವಾ ಈ ಪರಿಸರ ಚಳವಳಿಗಳ ವ್ಯಾಪ್ತಿ ವಿಸ್ತಾರಗಳು - ಆಳ ಅಗಲಗಳನ್ನು ದಕ್ಕಿಸಿಕೊಳ್ಳುವಲ್ಲಿ ಉಳಿದ ಚಳವಳಿಗಳು ವಿಫಲವಾಗಿವೆಯೇ ? ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಉಳಿದ ಚಳವಳಿಗಳಿಂದ ಬಯಸುವುದಕ್ಕಿಂತ ಮುಂಚಿತವಾಗಿ ನಮ್ಮ ನಾಡಿನ ಪರಿಸರವಾದವೇ ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳುವುದು ಒಳ್ಳೆಯದು.

'ಯಾವುದೇ ಪ್ರದೇಶದಲ್ಲಿ ಕಾಣುವ ಈ ಪರಿಸರವಾದಿಗಳನ್ನು ನೀವು ತುಂಬಾ ಸುಲಭವಾಗಿ ಗುರುತು ಹಿಡಿಯಬಹುದು. ಹೇಗೆಂದರೆ ತುಂಬಾ ಸಹಜವಾಗಿ ಅವರು ಆಯಾ ಪ್ರದೇಶಗಳ ಅರಿಸ್ಟೋಕ್ರಾಟಿಕ್ ಹಿನ್ನೆಲೆಯವರಾಗಿರುತ್ತಾರೆ.' ಎಂದು ವಿಲಿಯಂ ಟುಕರ್ ಎಂಬ

ಅಮೆರಿಕಾದ ಪತ್ರಕರ್ತ ೧೯೭೭ರಲ್ಲಿಯೇ ಹೇಳಿದ್ದ 'ಪರಿಸರವಾದದಲ್ಲಿ ಆಸಕ್ತಿ ಇರುವ ದೇಶಗಳನ್ನು ಅಥವಾ ಬೆಂಬಲಿಸುವ ವ್ಯಕ್ತಿಗಳನ್ನು ಗಮನಿಸಿದಲ್ಲಿ ನಿಮಗೆ ಕಾಣುವುದು ಪರಿಸರವಾದವು ಮೇಲ್‌ಮಧ್ಯಮವರ್ಗದ ಆಸಕ್ತಿಯಾಗಿದೆ ಎನ್ನುವುದು. ಬಡದೇಶಗಳು ಹಾಗೂ ಬಡಜನರು ಇದರಲ್ಲಿ ಆಸಕ್ತಿ ಹೊಂದಿಲ್ಲ' ಎಂದು ಲೆಸ್ಟರ್ ದಿ. ಥರೋ ಝೀರೊಸಮ್ ಸೊಸೈಟಿ, ೧೯೮೦ ರಲ್ಲಿ ಹೇಳಿತ್ತು.

'ಪರಿಸರ ಕಾರ್ಯನೀತಿಗೆ ಶ್ರೀಮಂತ ದೇಶಗಳಿಂದ ಹಾಗೂ ಶ್ರೀಮಂತರು ಮತ್ತು ಮಧ್ಯಮ ವರ್ಗಗಳಿಂದ ಬೆಂಬಲ ಸಿಗುತ್ತಿರುವುದು ಆಕಸ್ಮಿಕವೇನಲ್ಲ. ಬಡವರು, ದ್ವಿಗುಣಿತಗೊಳ್ಳುತ್ತಿರುವವರು ಹಾಗೂ ನಿರುದ್ಯೋಗಿಗಳು ಹೆಚ್ಚು ಅಭಿವೃದ್ಧಿಯನ್ನು ಬಯಸುತ್ತಾರೆ, ಕಡಿಮೆಯನ್ನಲ್ಲ' ಎಂದು ಎರಿಕ್ ಹಾಬ್ಸ್‌ಬಾಮ್ ೧೯೯೪ರಲ್ಲಿ 'ದಿ ಏಜ್ ಆಫ್ ಎಕ್ಸ್‌ಟ್ರೀಮ್ಸ್'ನಲ್ಲಿ ಹೇಳಿದ್ದರು. ಎರಿಕ್ ಹಾಬ್ಸ್‌ಬಾಮ್‌ನ ಮಾತಿನ ಹಿಂದಿರುವ ತಾತ್ವಿಕತೆ ಪ್ರಶ್ನಾರ್ಹವಾಗಿದೆಯಾದರೂ ಅದು ಧ್ವನಿಸುವ ಅರ್ಥ ನಮ್ಮ ಪರಿಸರವಾದದ ವಿರುದ್ಧವಾಗಿಯೇ ಇದೆ. ಇದನ್ನು ನಂತರ ಚರ್ಚಿಸಬಹುದು.

ಈವರೆಗಿನ ಭಾರತದ ಪರಿಸರ ಚಳವಳಿಗಳ ಮುಂಚೂಣಿಯ ಜನರನ್ನು ನೋಡಿ..., ಇವರೆಲ್ಲಾ ಮೇಲಿನ ಮಾತುಗಳನ್ನು ಸಮರ್ಥಿಸುವುದಕ್ಕಾಗಿಯೇ ಹುಟ್ಟಿದಂತಿದ್ದಾರೆ. ಇಲ್ಲಿ ಪರಿಸರವಾದವೆನ್ನುವುದು ತುಂಬಾ ಸ್ಪಷ್ಟವಾಗಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಮೇಲ್ವರ್ಗರೆನಿಸಿಕೊಂಡ ಜನರ ಹಿಡಿತದಲ್ಲಿಯೇ ಇದೆ. ಒಮ್ಮೆ ಈ ವಿಷಯವನ್ನು ಕುರಿತು ಚರ್ಚಿಸುತ್ತಿದ್ದಾಗ ಹಿಂದುಳಿದ ವರ್ಗಗಳ ನಾಯಕರೊಬ್ಬರು..., ಎಲ್ಲಿ ನಿಮ್ಮ ಪರಿಸರವಾದಿಗಳಲ್ಲಿ, ಚಳವಳಿಗಳ ಮುಂಚೂಣಿ ನಾಯಕರಲ್ಲಿ ಒಬ್ಬನೇ ಒಬ್ಬ ಹಿಂದುಳಿದವನನ್ನು, ದಲಿತನನ್ನು ಅಥವಾ ಮುಸ್ಲೀಂನನ್ನು ತೋರಿಸಿ?! ಎಂದು ಕೇಳಿದರು. ನಾನು ನಿಜವಾಗಿಯೂ ಹುಡುಕಲು ಆರಂಭಿಸಿದ್ದೆ. ಒಬ್ಬನೂ ಕಾಣಲಿಲ್ಲ. ನಾನು ಈವರೆಗೂ ಪರಿಸರವಾದದ ವರ್ಗೀಕರಣಕ್ಕೆ ವರ್ಗಗಳನ್ನು ಮಾತ್ರ ಆಧರಿಸಿದ್ದೆ. ನಾನೆಂದೂ ಹೀಗೆ ಜಾತಿ ಆಧಾರದ ಮೇಲೆ ಪರಿಸರವಾದಿಗಳನ್ನು ವರ್ಗೀಕರಿಸಿರಲಿಲ್ಲ.

ಆದರೆ ಯಾವ ದೇಶದಲ್ಲಿ ಇಂದಿಗೂ ಜಾತಿಯೇ ವ್ಯಕ್ತಿಯೊಬ್ಬನ ನಿಜವಾದ ಅಸ್ತಿತ್ವಕ್ಕೆ 'ಸಾಧಕ' ಹಾಗೂ 'ಬಾಧಕ' ವಾಗಿದೆಯೋ ಅಲ್ಲಿ ನೀವು ಹೇಗೆ ಜಾತಿಯನ್ನು ಬಿಟ್ಟು ಮಾತನ್ನಾಡುತ್ತೀರಿ ಎಂದರು. ತಕ್ಷಣಕ್ಕೆ ಹೌದಲ್ಲಾ! ಎನಿಸಿತು. ಇದೇ ಚರ್ಚೆ ದಲಿತ ಚಳವಳಿಯ ಆದ್ವರ್ಯರುಗಳಲ್ಲಿ ಒಬ್ಬರೊಂದಿಗೆ ನಡೆಯುತ್ತಿದ್ದಾಗ ಅವರು ಹೇಳಿದರು 'ಈ ಪರಿಸರವಾದ ಎಂಬುದೇ ಎಲೈಟ್‌ಕ್ಲಾಸ್ ಸೆನ್ಸಿಟೀವಿಟಿ, ನಾಲೆಡ್ಜ್ ಓರಿಯೆಂಟೆಡ್, ಇದನ್ನು ಅರ್ಥಮಾಡಿಕೊಳ್ಳಲು ಪ್ರತ್ಯೇಕವಾದ ಸಿದ್ಧತೆಯ ಅಗತ್ಯವಿದೆ ಅಥವಾ ಇದೊಂದು ಪ್ರತ್ಯೇಕ ಜ್ಞಾನಶಾಖೆಯಾಗಿದೆ, ಹಾಗಾಗಿ ನಮ್ಮಂಥವರನ್ನು ಇದು ಕೂಡಲೇ ತಟ್ಟುವುದಿಲ್ಲ' ಎಂದರು. ಇದರಲ್ಲಿ ಅನುಮಾನಗಳೇನೂ ಇಲ್ಲ.

ಈವರೆಗೂ ರಾಜ್ಯ/ರಾಷ್ಟ್ರಮಟ್ಟದಲ್ಲಿ ನಡೆದ ಎಲ್ಲಾ ಪರಿಸರ ಚಳವಳಿಗಳೂ ಕಂಡಿರುವ ದಯನೀಯ ಸೋಲನ್ನು, ದುರಂತ ಅಂತ್ಯಗಳನ್ನೂ ಪರಿಶೀಲಿಸಿದರೆ ಇದು ನಿಜವೆನ್ನಿಸುತ್ತದೆ. ಅಲ್ಲದೆ ದಲಿತ, ರೈತ, ಮಹಿಳಾ ಚಳವಳಿಗಳು ಯಾರ ವಿರುದ್ಧ ಹೋರಾಡುತ್ತವೋ ಅವರೇ ಪರಿಸರ ಚಳವಳಿಯ ಮುಂಚೂಣಿಯಲ್ಲಿರುವ ಸತ್ಯವನ್ನೂ ಒಪ್ಪಿಕೊಳ್ಳಬೇಕಾಗುತ್ತದೆ.

ಇದೇ ಹಂತದಲ್ಲಿ ಚಲಾವಣೆಯಲ್ಲಿರುವ ರೈತಸಂಘದ ಇನ್ನೊಂದು ವಾದವನ್ನೂ ನಾವು ಗಮನಿಸಬೇಕು..., 'ಇಂದಿನ ಪರಿಸರವಾದ ಏನೇನನ್ನು ಹೇಳುತ್ತದೋ ಅದನ್ನೆಲ್ಲಾ ರೈತ ಚಳವಳಿ ಈಗಾಗಲೇ ಒಳಗೊಂಡಿದೆ. ಆದರೆ ಅದಕ್ಕಿರುವ ಶೀರ್ಷಿಕೆಗಳು ಬೇರೆ ಬೇರೆ ಅಷ್ಟೇ ! ಎನ್ನುತ್ತಾರೆ. ತಟ್ಟನೆ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ, ಹೈಬ್ರಿಡ್ ಬೀಜ, ರಸಗೊಬ್ಬರ, ಕ್ರಿಮಿನಾಶಕಗಳ ವಿರುದ್ಧದ ಹೋರಾಟ, ಕಂಟಕಿ ಚಿಕನ್, ನೀರಾದಂಥ ದೇಸೀ ಚಳವಳಿಗಳನ್ನು ಅವರು ಉದಾಹರಿಸುತ್ತಾರೆ.

ಇದೇ ಹೊತ್ತಿನಲ್ಲಿ ದಲಿತ ಚಳವಳಿಗಳ ಬಗ್ಗೆ ಡಿ.ಆರ್.ನಾಗರಾಜರ ಕೆಲವು ಅಭಿಪ್ರಾಯಗಳನ್ನು ಇಲ್ಲಿ ಉಲ್ಲೇಖಿಸಬಹುದು..., 'ಇಂದಿನ ದಲಿತ ಚಳವಳಿಯ ವಿಶೇಷ ಲಕ್ಷಣ, ಸಾಂಸ್ಕೃತಿಕ ಎಚ್ಚರ ಮತ್ತು ರಾಚನಿಕ ವಿಸ್ಮೃತಿಯ ರಾಜಕಾರಣಗಳ ನಡುವಣ ಪ್ರಧಾನ ವಿಭಜನೆಯೇ ಆಗಿದೆ. ಇದನ್ನೇ ಬೇರೆ ರೀತಿಯಲ್ಲಿ ಹೇಳಬಹುದಾದರೆ, ಇಂದು ದಲಿತ ಚಳವಳಿ ಸಾಂಸ್ಕೃತಿಕ ಆಕ್ರೋಶದ ಅಭಿವ್ಯಕ್ತಿಯಾಗಿ ತನ್ನನ್ನು ಮಾರ್ಪಡಿಸಿಕೊಂಡಿದೆ' ಎಂದಿದ್ದಾರೆ.

ಆದರೆ ಈ ಸಾಂಸ್ಕೃತಿಕ ಆಕ್ರೋಶ 'ಸಂಪನ್ಮೂಲಗಳ ಮಾಲಿಕತ್ವ ಮತ್ತು ವ್ಯವಸ್ಥಾಪನೆ, ತಂತ್ರಜ್ಞಾನ ಮತ್ತು ಜೀವನ ಶೈಲಿಗಳು ಹಾಗೂ ವಿವಿಧ ಮಟ್ಟದಲ್ಲಿ ಸಾಮಾಜಿಕ ನಾಯಕತ್ವ, ಇಂತಹ ರಾಚನಿಕ ಹಕ್ಕುಗಳ ಸಮಸ್ಯೆಯೊಂದಿಗೆ ದಲಿತ ವಿಮೋಚನೆ ನಿಕಟವಾದ ಸಂಬಂಧವನ್ನು ಹೊಂದಿದೆ ಎಂಬುದನ್ನು ಅದು ವಿಸ್ಮೃತಿಗೆ ತಳ್ಳಿದೆ' ಎಂಬುದನ್ನು ತಳ್ಳಿಹಾಕಲಾಗುವುದಿಲ್ಲ.

ಚರ್ಚೆ

## ಪರ್ಯಾಯ ರಾಜಕಾರಣ

> ಒಂದು ಹಳ್ಳಿಯ ದಲಿತರ ಹಸಿವು, ಆತ್ಮಗೌರವ, ಮೀಸಲಾತಿ ಬಗ್ಗೆ ಮಾತನಾಡುವ ದಲಿತ ಚಳವಳಿ, ಆ ಹಳ್ಳಿಯ ನೈಸರ್ಗಿಕ ಸಂಪನ್ಮೂಲಗಳ ಅಸಮಾನ ಹಂಚಿಕೆಯ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಹಾಗೆಯೇ ಸ್ಥಳೀಯ ಸಂಪನ್ಮೂಲಗಳ ಹಕ್ಕನ್ನು ಹಳ್ಳಿಗಳಿಗೇ ಬಿಟ್ಟುಕೊಡಬೇಕೆನ್ನುವ ರೈತ ಸಂಘ ಈ 'ಸಂಪನ್ಮೂಲಗಳ ಹಂಚಿಕೆಯು ಯಾರ್‍ಯಾರಿಗೆ ಎಷ್ಟೆಷ್ಟು?' ಎಂಬ ಬಗ್ಗೆ ಸ್ಪಷ್ಟವಾಗಿಲ್ಲ. ಹಳ್ಳಿಯ ಉಳಿದ ಸಾರ್ವಜನಿಕ ಸಂಪನ್ಮೂಲಗಳಾದ ಗೋಮಾಳ, ತೋಪು, ಕಾಡು, ಕಾಡಿನ ಉತ್ಪನ್ನಗಳ ಮೇಲಿನ ಹಿಡಿತ ಯಾರಿಗಿರಬೇಕು? ಎಂಬ ಬಗ್ಗೆ ಎರಡೂ ಚಳವಳಿಗಳು ತಲೆಕೆಡಿಸಿಕೊಂಡಿಲ್ಲ. ಈ ಎರಡೂ ಚಳವಳಿಗಳ ಏಕೀಕರಣದ ನಿಜವಾದ ಫಲ ಜನಕ್ಕೆ ದಕ್ಕಬೇಕಾದರೆ ಎರಡೂ ಚಳವಳಿಗಳು ಈ ಪರಿಸರ ಚಳವಳಿಯನ್ನು ಅರಗಿಸಿಕೊಳ್ಳಲೇಬೇಕು.

ಒಂದು ಹಳ್ಳಿಯ ದಲಿತರ ಹಸಿವು, ಆತ್ಮಗೌರವ, ಮೀಸಲಾತಿ ಬಗ್ಗೆ ಮಾತನಾಡುವ ದಲಿತ ಚಳವಳಿ ಆ ಹಳ್ಳಿಯ ನೈಸರ್ಗಿಕ ಸಂಪನ್ಮೂಲಗಳ ಅಸಮಾನ ಹಂಚಿಕೆಯ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. 'ಹಳ್ಳಿಗೆ ಸೇರಿದ ಕಾಡು, ಕಾಡಿನ ಉತ್ಪನ್ನ, ಕೆರೆ, ಗೋಮಾಳ ಹಾಗೂ ಸಾರ್ವಜನಿಕ ಸಂಪನ್ಮೂಲಗಳ ಹಂಚಿಕೆಯಲ್ಲಿ ತನ್ನ ಜನಾಂಗಗಳಿಗಾಗಿರುವ ಅನ್ಯಾಯದ ಬಗ್ಗೆ ದಲಿತ ಚಳವಳಿಯ ಆಲೋಚನಾ ವ್ಯಾಪ್ತಿಯನ್ನು ವಿಸ್ತರಿಸುವುದೇ ಪರಿಸರವಾದ' ಎಂದು ನನ್ನ ಅನಿಸಿಕೆ.

ಹಾಗೆಯೇ ಸ್ಥಳೀಯ ಸಂಪನ್ಮೂಲಗಳ ಹಕ್ಕನ್ನು ಹಳ್ಳಿಗಳಿಗೇ ಬಿಟ್ಟುಕೊಡಬೇಕೆನ್ನುವ ರೈತ ಸಂಘ ಈ 'ಸಂಪನ್ಮೂಲಗಳ ಹಂಚಿಕೆಯು ಯಾರ್‍ಯಾರಿಗೆ ಎಷ್ಟೆಷ್ಟು?' ಎಂಬ ಬಗ್ಗೆ ಸ್ಪಷ್ಟವಾಗಿಲ್ಲ. ಒಂದು ಕೆರೆಯ ಜಲಾಶಯದ ಹಿಂದೆ ಜಮೀನಿರುವ ಎಲ್ಲರೂ ಹಾಗೇ ಹನಿ ಮಳೆ ಬೀಳದಂಥಾ ಕಡೆ ಜಮೀನುಳ್ಳವರೂ ರೈತರಾಗುತ್ತಾರೆ. ಅಪ್ರಜ್ಞಾಪೂರ್ವಕವಾಗಿಯೇ ಕೆರೆ ಹಾಗೂ ಅದರ ಬಹುಪಾಲು ನೀರಿನ ಮೇಲೆ ಕೆರೆಯ ಹಿಂದೆ ಜಮೀನು ಉಳ್ಳವರಿಗೆ ಹೆಚ್ಚಿನ ಹಕ್ಕಿರುತ್ತದೆ ಅಥವಾ ಅವರೇ ಅದರಿಂದ ಗರಿಷ್ಠ ಲಾಭವನ್ನು ಪಡೆಯುವವರಾಗಿರುತ್ತಾರೆ. ಹಾಗಾದರೆ ಕೆರೆಯ ಸಂರಕ್ಷಣೆಯಲ್ಲಿ ಪಾಲುದಾರರಾಗುವ ದಲಿತರ, ಭೂ ರಹಿತರ, ಭೂಮಿ ಇದ್ದೂ ಅದರಿಂದ ನಯಾಪೈಸೆ ಗಳಿಕೆ ಇಲ್ಲದ ಜನರ ಪಾಲೇನು? ಎಷ್ಟು?

ಹೀಗಿದ್ದಾಗ ಹಳ್ಳಿಯ ಉಳಿದ ಸಾರ್ವಜನಿಕ ಸಂಪನ್ಮೂಲಗಳಾದ ಗೋಮಾಳ, ತೋಪು, ಕಾಡು, ಕಾಡಿನ ಉತ್ಪನ್ನಗಳ ಮೇಲಿನ ಹಿಡಿತ ಯಾರಿಗಿರಬೇಕು ? ಎಂಬ ಬಗ್ಗೆ ಎರಡೂ ಚಳವಳಿಗಳು ತಲೆಕೆಡಿಸಿಕೊಂಡಿಲ್ಲ. ಈಗಿನ ವಾಸ್ತವದಂತೆ ಈ ಉಳಿದ ಸಂಪನ್ಮೂಲಗಳ ಮೇಲಿನ ಹಕ್ಕನ್ನೂ ಸರ್ಕಾರ ಕೆರೆಯ ಹಿಂದೆ ಜಮೀನುಳ್ಳವರಿಗೇ ಕೊಡುತ್ತದೆ. ಸರ್ಕಾರ ಕಾಡಿನ ಕಿರು ಉತ್ಪನ್ನಗಳನ್ನು ಹರಾಜು ಹಾಕಿದಾಗ ಅದನ್ನು ಕೊಳ್ಳುವ ಸಾಮರ್ಥ್ಯವಿರುವುದು ಕೆರೆಯ ಹಿಂದೆ ಜಮೀನಿರುವ ಜನಕ್ಕೆ ಮಾತ್ರ. ಇಲ್ಲಿ ಕೆರೆಯ ಹಿಂದಿರುವವರ ಬಗ್ಗೆ ರೈತ ಚಳವಳಿ ಆಸಕ್ತವಾಗಿದ್ದರೆ, ಕೆರೆಯ ಒಳಗಿರುವವರ ಬಗ್ಗೆ ದಲಿತ ಚಳವಳಿ ಆಸಕ್ತವಾಗಿದೆ. ಈ ಇಬ್ಬರ ನಡುವೆ 'ಏರಿಯಂತೆ' ಪರಿಸರವಾದ ನಿಂತಿದೆ. ಈ ಎರಡೂ ಚಳವಳಿಗಳ ಏಕೀಕರಣದ ನಿಜವಾದ ಫಲ ಜನಕ್ಕೆ ದಕ್ಕಬೇಕಾದರೆ ಎರಡೂ ಚಳವಳಿಗಳು ಈ 'ಏರಿಯನ್ನು' ಅರಗಿಸಿಕೊಳ್ಳಲೇಬೇಕು.

ಇಲ್ಲಿ ಒಂದು ವಿಷಯ ಸ್ಪಷ್ಟವಾಗಬೇಕಾಗಿದೆ. 'ಪರಿಸರ' ಎಂದರೆ ಅದು ನಮ್ಮ ಎಲೈಟ್ ತರಗತಿಯ ಪರಿಸರವಾದಿಗಳು ಹೇಳಿರುವಂತೆ ಬರೀ ಪ್ರಾಣಿ ಪಕ್ಷಿ-ಮರಗಿಡಗಳಲ್ಲ. ಇದು ಅವರು ಉದ್ದೇಶಪೂರ್ವಕವಾಗಿಯೇ ಇಳಿಬಿಟ್ಟಿರುವ ವರ್ಣರಂಜಿತ ಪರದೆ. ಇದನ್ನು ಅರ್ಥಮಾಡಿಕೊಳ್ಳಲು ಯಾವ ವಿಶೇಷ ಜ್ಞಾನಶಾಖೆಯ ಅಗತ್ಯವೂ ಇಲ್ಲ. ಅಂಗೈ ಹುಣ್ಣಿಗೆ ಕನ್ನಡಿಯ ಅಗತ್ಯವಿಲ್ಲ. ಆದರೆ ನಮ್ಮ ನಾಡಿನ ಪರಿಸರವಾದ ಈ ಹುಣ್ಣನ್ನು ಕಾರ್ಬನ್ ಡೇಟಿಂಗ್ ಮಾಡಬೇಕು, ಸ್ಕ್ಯಾನ್ ಮಾಡಬೇಕು, ಇದಕ್ಕೆ ಇಂತಿಂಥಾ ರಸಾಯನಿಕಗಳು ಬೇಕು..., ಎಂದೆಲ್ಲಾ ಹೇಳಿ ಬೇಕಂತಲೇ ಈ ಸಂಗತಿಯನ್ನು ಹೀಗೆ ಸಂಕೀರ್ಣಗೊಳಿಸಿದೆ. ಅದಕ್ಕೆ ಪ್ರಜ್ಞಾಪೂರ್ವಕವಾಗಿಯೇ ಅತೀ ವೈಜ್ಞಾನಿಕತೆಯ ಬಣ್ಣ ಹಚ್ಚಲಾಗಿದೆ. ಮೂಲ ಮಾತೃಕೆಯನ್ನು ಮುಚ್ಚಿಟ್ಟು ಬೇಡದ ಸಂಗತಿಗಳನ್ನೆಲ್ಲಾ ಅದರಲ್ಲಿ ತುರುಕಿ ಪರಿಸ್ಥಿತಿಯನ್ನು ಜಟಿಲಗೊಳಿಸಲಾಗಿದೆ.

ಒಂದು ಹಳ್ಳಿಯ ನೀರಿನ ಬಳಕೆಯ ಕ್ರಮದ ಮೂಲಕ ಈ ಮೂರೂ ಚಳವಳಿಗಳ ನಡ್ಡುವಿನ ಪರಸ್ಪರ ಸಂಬಂಧವನ್ನು ವಿಶ್ಲೇಷಿಸುವುದಾದರೆ..., ಒಂದು ಹಳ್ಳಿಯಲ್ಲಿ ಕೆಲವು ಮಂದಿ ಕೊಳವೆ ಬಾವಿಗಳನ್ನು ತೋಡಿಸುತ್ತಾರೆ ಎಂದಿಟ್ಟುಕೊಳ್ಳೋಣ. ಇವರು ರೈತ ಸಂಘದವರಾಗಿರಬಹುದು, ಇಲ್ಲಾ ದಲಿತರಾಗಿರಬಹುದು ಅಥವಾ ದಲಿತ ರೈತನಾಗಿರಬಹುದು. ಅಂತೂ ಇವರಿಗೆ ಕೊಳವೆಬಾವಿ ತೋಡಿಸುವ ಸಾಮರ್ಥ್ಯ ಇದೆ. ಅಥವಾ ಕೊಳವೆ ಬಾವಿ ತೋಡಿಸಲು ಬ್ಯಾಂಕು ಅಥವಾ ಇನ್ನೊಂದು ಹಣಕಾಸು ಸಂಸ್ಥೆಯ ವ್ಯವಸ್ಥೆ ನೀಡುವ ಸಾಲವನ್ನು ಪಡೆಯಲು ಬೇಕಾದ ಅರ್ಹತೆ ಇದೆ ಎಂದಾಯಿತು. ಈ ಅರ್ಹತೆಯಲ್ಲಿ ಮೊದಲನೆಯದು ಕನಿಷ್ಟ ನಾಲ್ಕು-ಐದು ಎಕರೆ ಭೂಮಿ ಇರುವುದು. ಒಬ್ಬಾತ ೪-೫ ಎಕರೆ ಭೂಮಿಯನ್ನು ಹೊಂದಿದ್ದಾನೆಂದರೆ ಅದು ಭಾರತದ ಹಳ್ಳಿಗಳ ಸಂದರ್ಭದಲ್ಲಿ ದೊಡ್ಡ ಆಸ್ತಿಯೇ. ಇದರೊಂದಿಗೆ ಈತನಿಗೆ ಬೋರೂ ಬಂತು, ಅದರಲ್ಲಿ ನೀರೂ ಬಂತು, ನೀರನ್ನು ಆಧರಿಸಿ ವರ್ಷಕ್ಕೆ ಮೂರು ಬೆಳೆಯೂ ಬಂತು. ಸಾಲ ತೀರಿಸಿದನೋ ಬಿಟ್ಟನೋ, ಅಂತೂ ಅವನು ಸ್ಥಿತಿವಂತನಾಗಿದ್ದಂತೂ ನಿಜ.

> 'ಹಳೆಯ ಜಗತ್ತು ಮತ್ತು ಹೊಸ ಸಾಹಸೀ ಜಗತ್ತಿನ ಶಕ್ತಿಗಳ ನಡುವೆ ಹುಟ್ಟುಹಾಕಲಾದ ದಮನಕಾರಿಯಾದ ಮತ್ತು ಅತ್ಯಂತ ಸಂಕೀರ್ಣ ಸ್ವರೂಪದ ವ್ಯವಹಾರ ದಲಿತ ಚಳವಳಿಯ ಗಮನ ಸೆಳೆದಿಲ್ಲ' ಎಂದು ಡಿ.ಆರ್. ಹೇಳಿದ್ದನ್ನು ಈ ನಾಡಿನ ಉಳಿದ ಚಳವಳಿಗಳಿಗೂ ಅನ್ವಯಿಸಬಹುದು. ಈ ಹಿನ್ನೆಲೆಗಳಲ್ಲಿ ಯೋಚಿಸಿದಾಗ ಪರಿಸರ ಚಳವಳಿಗಳನ್ನೇ ಅಸ್ಪೃಶ್ಯತಾಭಾವದಿಂದ ನೋಡುವುದು ಸರಿಯೇ?

ಇಂಥಾ ಹಲವು ಸ್ಥಿತಿವಂತರ ಬೋರುಗಳು ನಿರಂತರವಾಗಿ ಲಕ್ಷಾಂತರ ವರ್ಷಗಳಿಂದ ಶೇಖರಣೆಯಾಗಿದ್ದ ಭೂಗರ್ಭದ ಜಲವನ್ನು ಹೀರುತ್ತಾ ಹೋಗುತ್ತವೆ. ಅದರ ಅಕ್ಕಪಕ್ಕದಲ್ಲಿದ್ದವರ ತೆರೆದ ಬಾವಿಗಳು ಬತ್ತುತ್ತಾ ಹೋಗುತ್ತವೆ. ಇವರಿಗೆ ಬೋರು ಕೊರೆಯುವುದು ಸಾಧ್ಯವಿಲ್ಲ. ಜೊತೆಗೆ ಊರೊಟ್ಟಿನ ಸೇದುವ ಬಾವಿಗಳೂ, ಕುಡಿಯುವ ನೀರಿನ ಮೂಲಗಳೂ ಒಣಗುತ್ತಾ ಹೋಗುತ್ತವೆ. ಊರಿನ ಜನಕ್ಕೆ ಕುಡಿಯುವ ನೀರಿನ ಸಮಸ್ಯೆ ಆರಂಭವಾಗುತ್ತದೆ. ಇದರಲ್ಲಿ ಬಹಳ ಜನ ಈ ಜಲಶೋಷಣೆಯ ಪಾಲುದಾರರಲ್ಲ. ಬಹುಜನರಿಗೆ ಭೂಮಿಯೇ ಇಲ್ಲ.

ಇಲ್ಲಿನ ಮುಖ್ಯ ಪ್ರಶ್ನೆ ಎಂದರೆ ಹಳ್ಳಿಯ ಹತ್ತು ಮಂದಿಯ ಸುಖಕ್ಕಾಗಿ, ಉದ್ಧಾರಕ್ಕಾಗಿ ಆಧುನಿಕ ಪರಿಭಾಷೆಯಲ್ಲಿ ಅಭಿವೃದ್ಧಿಗಾಗಿ ಇಡೀ ಹಳ್ಳಿಯ ಜನ, ಮುಖ್ಯವಾಗಿ ಭೂರಹಿತರಾದವರು ಎದುರಿಸುವ ಪ್ರಾಣಾಂತಿಕವಾದ ನೀರಿನ ಸಮಸ್ಯೆಯನ್ನು ರೈತ ಚಳವಳಿ ಯಾ ದಲಿತ ಚಳವಳಿ ಯಾವ ಆಧಾರದಲ್ಲಿ ಅರ್ಥೈಸುತ್ತದೆ ? ಈ ಜಲವಂಚಿತ ಜನ ಏಕಕಾಲದಲ್ಲಿ ಅತ್ತ ರೈತರೂ ಅಲ್ಲ, ಇತ್ತ ದಲಿತರೂ ಅಲ್ಲ! ಅವರು ಕೇವಲ 'ಬಡ ಜನರು'.

ನಿಜವಾಗಿಯೂ 'ಭಾರತದ ಸಂದರ್ಭದಲ್ಲಿ ಪರಿಸರವಾದವೆಂದರೆ ಹೊಟ್ಟೆ ತುಂಬಿದವರ ಸೂಕ್ಷ್ಮತೆ, ನಿಜ. ಅದೇ ಹೊತ್ತಿನಲ್ಲಿ ಅದು ಸಂಪನ್ಮೂಲಗಳ ಅಸಮಾನ ಹಂಚಿಕೆಯ ಚರಿತ್ರೆ ಹಾಗೂ ವಾಸ್ತವ. ಇದು ಅನ್ಯಾಯಕ್ಕೊಳಗಾದ ಜನರಿಗೆ ಅರ್ಥವಾಗದಂತೆ ಮಾಡಿರುವುದೇ ಇಂದಿನ ಪರಿಸರವಾದ.' ಇದಕ್ಕೆ ಕಾರಣ ಸಹ ನಮ್ಮ ಈವರೆಗಿನ ಚಳವಳಿಗಳೇ! ಅದು ಶ್ರೀಮಂತರ ತೆವಲು;

ಸೂಕ್ಷ್ಮತೆ, ಪ್ರತ್ಯೇಕ ಜ್ಞಾನಶಾಖೆ ಎಂದು ಉಳಿದ ಚಳವಳಿಗಳು ಅದರಿಂದ ದೂರ ಸರಿದಂತೆಲ್ಲಾ ಓದು, ವಿಜ್ಞಾನ, ಸುಲಭ ಗಳಿಕೆಯ ದಾರಿಗಳನ್ನು ಮನಾಪಲಿ ಮಾಡಿಕೊಂಡ ಒಂದು ವರ್ಗ ಆನಂದವಾಗಿ ಅದನ್ನು ಆಕ್ರಮಿಸಿಕೊಳ್ಳುತ್ತಾ ಹೋಯಿತು. ಈ ಮೂಲಕ ದೇಶದ ತೊಂಬತ್ತು ಭಾಗ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಹಿಡಿತ ಕೇವಲ ಶೇಕಡಾ ಇಪ್ಪತ್ತು ಜನರ ಕೈ ಸೇರಲು ಕಾರಣವಾಯಿತು.

ಈ ಇಪ್ಪತ್ತು ಜನ ಸೇರಿ ಮಾಡಿದ ಗಣಿಗಾಗಿ ಆಕ್ರಮಿಸಿಕೊಂಡ ಭೂಮಿಗೆ ಹನ್ನೆರಡಾಣೆ ಪರಿಹಾರ ಹೆಚ್ಚಿಸುವುದರಲ್ಲಿ ರೈತ ಚಳವಳಿ ಆಸಕ್ತಿ ಹೊಂದಿದ್ದರೆ, ಆ ಗಣಿಯ ನೌಕರಿಯ ಮೀಸಲಾತಿಯ ಬಗ್ಗೆ ದಲಿತ ಚಳವಳಿಗಳು ಆಸಕ್ತಿ ಹೊಂದಿವೆ.

ಈ ಯಾವ ಚಳವಳಿಗಳೂ ಆ ಅದಿರು ಸ್ಥಳೀಯ ಸಾರ್ವಜನಿಕ ಸಂಪನ್ಮೂಲವಾಗಿದ್ದು ಈ ಸಂಪನ್ಮೂಲವನ್ನು ನೀವು 'ಕೆಲವು ಜನ ಮಾತ್ರ' ಹೇಗೆ ಅಪಹರಿಸಲು ಸಾಧ್ಯ ? ಇದರಲ್ಲಿ ಇಲ್ಲಿನ ಸಮುದಾಯಗಳ ಪಾಲೆಷ್ಟು? ಇಲ್ಲ ಎಂದರೆ ಏಕೆ ? ಎನ್ನುವ ಪ್ರಶ್ನೆಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ಹೊಂದಿವೆ. ಇಲ್ಲಿ ಪರಿಸರವಾದದ ಪ್ರಸ್ತುತತೆ ಇದೆ.

ಇಲ್ಲಿ 'ಹಳೆಯ ಜಗತ್ತು ಮತ್ತು ಹೊಸ ಸಾಹಸೀ ಜಗತ್ತಿನ ಶಕ್ತಿಗಳ ನಡುವೆ ಹುಟ್ಟುಹಾಕಲಾದ ದಮನಕಾರಿಯಾದ ಮತ್ತು ಅತ್ಯಂತ ಸಂಕೀರ್ಣ ಸ್ವರೂಪದ ವ್ಯವಹಾರ ದಲಿತ ಚಳವಳಿಯ ಗಮನ ಸೆಳೆದಿಲ್ಲ' ಎಂದು ಡಿ.ಆರ್. ಹೇಳಿದ್ದನ್ನು ಈ ನಾಡಿನ ಉಳಿದ ಚಳವಳಿಗಳಿಗೂ ಅನ್ವಯಿಸಬಹುದು. ಈ ಹಿನ್ನೆಲೆಗಳಲ್ಲಿ ಯೋಚಿಸಿದಾಗ ಪರಿಸರ ಚಳವಳಿಗಳನ್ನೇ ಅಸ್ಪೃಶ್ಯತಾ ಭಾವದಿಂದ ನೋಡುವುದು ಸರಿಯೇ? ಈ ಬಗ್ಗೆ ಗಂಭೀರ ಚರ್ಚೆಯ ಅಗತ್ಯವಿದೆ ಎಂದು ಭಾವಿಸುತ್ತೇನೆ. □

# ಪ್ರಾದೇಶಿಕ ಪಕ್ಷವಾಗಿ ರೂಪುಗೊಳ್ಳಲಿ

(೨೪ನೇ ಪುಟದಿಂದ...)

ಇಲ್ಲಿ ನೀತಿ ಮತ್ತು ಕಾರ್ಯಸೂಚಿಗಳು ಬೇರೆಬೇರೆಯಲ್ಲ. ಅವುಗಳು ಒಂದರೊಡನೊಂದು ಬೆರೆತುಕೊಂಡಿರುತ್ತವೆ. ನೀತಿ ಪ್ರಧಾನತೆಯಲ್ಲಿ ವ್ಯಕ್ತಿ ಕುಟುಂಬ ಮತ್ತು ಸಮಾಜದ ಸ್ವಾಸ್ಥ್ಯದ ಬಗೆಗೆ ಸದಾ ಗಮನ ಇರಬೇಕಾದುದು ಅಗತ್ಯ. ನೀತಿಸಂಹಿತೆಗೂ ಕಾರ್ಯಸೂಚಿಗೂ ಪರಸ್ಪರ ಹೊಂದಾಣಿಕೆ ಮತ್ತು ಉದ್ದೇಶಗಳು ಧಿಕ್ಕಿ ಹೊಡೆಯದಂತೆ ನೋಡಿಕೊಳ್ಳಬೇಕ್ಕು. ನೀತಿಗಳನ್ನು ರೂಪಿಸುವಾಗ ಭವಿಷ್ಯತ್ತಿನ ಸಮಾಜದ ಎಚ್ಚರಕ್ಕೂ ಸ್ವಾಸ್ಥ್ಯಕ್ಕೂ ಅಡ್ಡಗೋಡೆಯಾಗದಂತೆ ನೋಡಿಕೊಳ್ಳಬೇಕಾದುದು ಅತ್ಯಗತ್ಯ !

ಪರ್ಯಾಯ ಪಕ್ಷವನ್ನೊ ಒಕ್ಕೂಟವನ್ನೊ ರೂಪಿಸುವಾಗ ಬಹುಮುಖ್ಯವಾಗಿ ಜನಪರವಾದ, ಜನಮುಖಿಯಾದ, ಜನೋದ್ದೇಶಕ್ಕೆ ಅನುಗುಣವಾಗಿಯೇ ಎಲ್ಲಾ ಕಾರ್ಯಕ್ರಮಗಳೂ ಎಲ್ಲ ಕಾರ್ಯಸೂಚಿಗಳೂ ಒಳಗೊಂಡಿರಬೇಕು. ಇದು ಲಿಂಗತಾರತಮ್ಯ, ಜಾತಿ ತಾರತಮ್ಯ, ವರ್ಗ ತಾರತಮ್ಯ ಪ್ರಾದೇಶಿಕ ತಾರತಮ್ಯಗಳಿಂದ ಮುಕ್ತವಾಗಿರುವುದು ಅಗತ್ಯ. □





ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.




ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
ಸಂಪಾದಕರು, ' ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೯೪೩ / ೯೪೪೮೦೪೮೩೦೬



## ವಿಚಾರ ಸಂಕಿರಣ

**ಅಂಬೇಡ್ಕರಿಸಂನ ತಾತ್ವಿಕ ಬುನಾದಿಯ ಮೇಲೇ ಬೆಳೆದ ದಲಿತ ಚಳವಳಿಗಳು ಜೆ.ಪಿ., ಲೋಹಿಯಾರ ವಿಚಾರಗಳನ್ನು ತಮ್ಮದಾಗಿಸಿ ಕೊಂಡಷ್ಟು ಸುಲಭವಾಗಿ ಗಾಂಧೀಜಿಯ ವಿಚಾರ ಗಳನ್ನು ತಮ್ಮದಾಗಿಸಿ ಕೊಳ್ಳಲಿಲ್ಲ. ಆದರೂ, ತಮ್ಮ ಬೆಳವಣಿಗೆಯ ಅತ್ಯಂತ ಪ್ರಮುಖ ಘಟ್ಟಗಳಲ್ಲಿ, ಸಂದಿಗ್ಧದ, ಆತಂಕದ ಕ್ಷಣಗಳಲ್ಲಿ ಗಾಂಧಿ ಯತ್ತ ದೃಷ್ಟಿ ಹಾಯಿಸಿವೆ. ಹಾಗೂ ಇದರ ಬಗ್ಗೆ ದ್ವಂದ್ವ ಗಳಿವೆ ಎಂಬ ಕಾರಣಕ್ಕೆ ಜಾಗತೀಕರಣದಿಂದ ಉಂಟಾಗಿರುವ ಅನೇಕ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪಲ್ಲಟಗಳಿಗೆ ಗಾಂಧಿವಾದವನ್ನು ಒಂದು ಸಿದ್ಧ ಪರ್ಯಾಯವಾಗಿ ಇಡಲಾಗುತ್ತಿದೆ. ಈ ಹಿನ್ನೆಲೆ ಯಲ್ಲಿ ದಲಿತ ಚಳವಳಿ ಮತ್ತು ಗಾಂಧಿ ಚಿಂತನೆಗಳನ್ನು ವಿಶ್ಲೇಷಿಸುವ ಯತ್ನ ಇಲ್ಲಿದೆ.**

○ ಬಿ.ಯು. ಸುಮಾ

# ದಲಿತ ಚಳವಳಿ ಮತ್ತು ಗಾಂಧಿ

೧೯೮೩ರ ಕಾಲ; ಆಗ, ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ 'ಗಾಂಧಿ' ಚಲನಚಿತ್ರವನ್ನು ಬಹಿಷ್ಕರಿಸಿತ್ತು. ಚಲನಚಿತ್ರವನ್ನು ನೋಡಿದ ದೇವನೂರು ಮಹಾದೇವ, 'ಪಂಚಮ'ದಲ್ಲಿ 'ನಾನು ಗಾಂಧಿ ಚಿತ್ರ ನೋಡಿದೆ ಅಥವಾ ಆಕಾಶಕ್ಕೆ ಎರಡು ಗೇಣು ಕಮ್ಮಿ' ಎಂಬ ಲೇಖನ ಬರೆದರು. ದೇವನೂರರು ಚಲನಚಿತ್ರವನ್ನು ನೋಡಿದ್ದು ದಲಿತ ಸಂಘರ್ಷ ಸಮಿತಿಯಲ್ಲಿ ಸಾಕಷ್ಟು ಗೊಂದಲ, ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸಿತ್ತು.

ಈ ಘಟನೆಯನ್ನು ನಾನು ಯಾಕೆ ನೆನಪಿಸಿಕೊಳ್ಳುತ್ತಿದ್ದೇನೆ ಎಂದರೆ, ಅಂಬೇಡ್ಕರಿಸಂನ ತಾತ್ವಿಕ ಬುನಾದಿಯ ಮೇಲೇ ಬೆಳೆದ ದಲಿತ ಚಳವಳಿಗಳು ಜೆ.ಪಿ., ಲೋಹಿಯಾರ ವಿಚಾರಗಳನ್ನು ತಮ್ಮದಾಗಿಸಿ ಕೊಂಡಷ್ಟು ಸುಲಭವಾಗಿ ಗಾಂಧೀಜಿಯ ವಿಚಾರಗಳನ್ನು ತಮ್ಮದಾಗಿಸಿ ಕೊಳ್ಳಲಿಲ್ಲ. ಆದರೂ, ತಮ್ಮ ಬೆಳವಣಿಗೆಯ ಅತ್ಯಂತ ಪ್ರಮುಖ ಘಟ್ಟಗಳಲ್ಲಿ, ತಮ್ಮ ಸಂಧಿಗ್ಧದ, ಆತಂಕದ ಕ್ಷಣಗಳಲ್ಲಿ ಗಾಂಧಿಯತ್ತ ದೃಷ್ಟಿ ಹಾಯಿಸಿವೆ. ಹಾಗೂ ಇದರ ಬಗ್ಗೆ ದ್ವಂದ್ವಗಳಿವೆ ಎಂಬ ಕಾರಣಕ್ಕೆ ಜಾಗತೀಕರಣದಿಂದ ಉಂಟಾಗಿರುವ ಅನೇಕ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪಲ್ಲಟಗಳಿಗೆ ಗಾಂಧಿವಾದವನ್ನು ಒಂದು ಸಿದ್ಧ ಪರ್ಯಾಯವಾಗಿ ಇಡಲಾಗುತ್ತಿದೆ. ಈ ಸಂದರ್ಭದಲ್ಲಿ ಒಂದು ನಿರ್ದಿಷ್ಟ ಹಿನ್ನೆಲೆ ಮತ್ತು ಕಾರಣದಿಂದ ಹುಟ್ಟಿದ ದಲಿತ ಚಳವಳಿಗಳ sphere ನಲ್ಲಿ ಗಾಂಧಿ ಚಿಂತನೆಗಳನ್ನು ವಿಶ್ಲೇಷಿಸುವ ಯತ್ನ ಮಾಡುತ್ತೇನೆ.

ವಿಷಯಕ್ಕೆ ಬರುವುದಕ್ಕಿಂತ ಮುಂಚೆ, 'ದಲಿತ' ಎಂಬ ಪದವನ್ನು ನಾನು ಯಾವ ಅರ್ಥದಲ್ಲಿ ಬಳಸುತ್ತಿದ್ದೇನೆ ಎಂಬುದನ್ನು ಸ್ಪಷ್ಟೀಕರಿಸುತ್ತೇನೆ. ಈ ಪದದ ಬಗ್ಗೆ ಅನೇಕ ರೀತಿಯ ಗೊಂದಲ ಉಂಟಾಗಿರುವುದರಿಂದ, ಇದನ್ನು ಸ್ಪಷ್ಟೀಕರಿಸುವ ಅಗತ್ಯವಿದೆ. 'ದಲಿತ' ಎಂಬುದು ಜಾತಿ ಸೂಚಕವಾಗಿ ಮತ್ತು ವರ್ಗ ಸೂಚಕವಾಗಿ ಬಳಕೆಯಾಗುತ್ತಿರುವ ಪದವಾದರೂ, ಈ ಎರಡೂ ಸೂಚಿತಗಳಾಚೆಗೆ, ದಲಿತ ಎಂದರೆ ಕ್ರಾಂತಿಯ ಸಂಕೇತ; ಒಬ್ಬ ದಲಿತ ಈ ದೇಶದ ಶೋಷಿತ ವ್ಯಕ್ತಿಯನ್ನು ಸಂಕೇತಿಸುತ್ತಾನೆ. ಒಂದು ಸಾಂಸ್ಕೃತಿಕ ಐಡೆಂಟಿಟಿಯನ್ನು ಸಾಧಿಸುವ, ಆ ಮೂಲಕ ಸಾಮಾಜಿಕ ರಚನೆಯಲ್ಲಿ ಒಂದು ಆಮೂಲಾಗ್ರ ಬದಲಾವಣೆಯನ್ನು ತರುವ ಉದ್ದೇಶ ದಲಿತನದು. ಈ ಬದಲಾವಣೆಯ ಬುನಾದಿ ಸಾಮಾಜಿಕ ನ್ಯಾಯವಾಗಿರುತ್ತದೆ. ಆದ್ದರಿಂದಲೇ ಒಬ್ಬ ದಲಿತ ಮಾನವೀಯತೆಗೆ ಆದ್ಯತೆಯನ್ನು ನೀಡುತ್ತಾನೆ. ಗಂಗಾಧರ ಪಂಟವಾಣೆ 'ದಲಿತ' ಎಂಬ ಪದವನ್ನು ಈ ಅರ್ಥದಲ್ಲಿ ಬಳಸುತ್ತಾರೆ. ನಾನೂ ಇದೇ ಅರ್ಥದಲ್ಲಿ ಬಳಸುತ್ತೇನೆ.

★

೭೦ರ ದಶಕದಲ್ಲಿ ಉಂಟಾದ ದಲಿತ್ ಅಪಸರ್ಜ್‌ನಿಂದ ಭಾರತದ ಸಾಮಾಜಿಕ ರಾಜಕಾರಣದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾಯಿತು. ಭಾರತದಲ್ಲಿನ ದಲಿತ ಚಳವಳಿಗಳ ಹೋರಾಟ ದಲ್ಲಿ ಬಹಳ ಮುಖ್ಯವಾದ ಮೂರು ಆಶಯಗಳು ಪ್ರಕಟವಾಗುವುದನ್ನು ಗುರುತಿಸಬಹುದು. ಈ ಆಶಯಗಳ ಹಿನ್ನೆಲೆಯಲ್ಲಿ ನಾನು ಗಾಂಧಿ ಚಿಂತನೆಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡುತ್ತೇನೆ. ದಲಿತ ಚಳವಳಿಗಳು ಅಶುದ್ಧತೆಯ ಪ್ರಶ್ನೆಯನ್ನು, ನೈತಿಕ ಮೌಲ್ಯದ ಪ್ರಶ್ನೆಯನ್ನು ಹಾಗೂ ಭೂಮಿಯ ಪ್ರಶ್ನೆಯನ್ನು ತಮ್ಮ ಕೇಂದ್ರದಲ್ಲಿ ಇಟ್ಟುಕೊಂಡಿದ್ದವು. ಮೊದಲನೆಯದು ಸಾಮಾಜಿಕ ರಚನೆಗೆ ಸಂಬಂಧಿಸಿದ ವಿಷಯವಾದರೆ, ಎರಡನೆಯದು ಸಾಂಸ್ಕೃತಿಕ ರಾಜಕಾರಣಕ್ಕೆ ಸಂಬಂಧಿಸಿದ್ದು. ಕೊನೆಯದು ಆರ್ಥಿಕ ನ್ಯಾಯದ ಪ್ರಶ್ನೆಯನ್ನು ಮುಂದಿಡುತ್ತದೆ.

ನಮಗೆಲ್ಲರಿಗೂ ತಿಳಿದಿರುವಂತೆ ಹಿಂದೂ ವರ್ಣವ್ಯವಸ್ಥೆ ಹಾಗೂ ಅವು ನಿರ್ವಹಿಸಬೇಕಾದ ಕಸುಬಿನ ಆಧಾರದ ಮೇಲೆ ಶುದ್ಧತೆ ಮತ್ತು ಅಶುದ್ಧತೆಯ ಕಲ್ಪನೆ ರೂಪುಗೊಳ್ಳುತ್ತದೆ. ಒಬ್ಬ ವ್ಯಕ್ತಿ ಸ್ಪೃಶ್ಯ ಅಥವ ಅಸ್ಪೃಶ್ಯನಾಗುವುದು ಕೂಡ ಈ ಆಧಾರದಿಂದಲೇ. ಈ ಹೊತ್ತು ಅಸ್ಪೃಶ್ಯತೆ ಎನ್ನುವುದು ದಲಿತರ ಸಮಸ್ಯೆ ಅಲ್ಲ ಎನ್ನುವ ಮಾತುಗಳಿವೆ. ಆದರೆ, ಉತ್ತರಭಾರತದಲ್ಲಿ ಬಹಳಷ್ಟು ದಲಿತ ಸಮುದಾಯಗಳು ಇನ್ನೂ ಈ ಅವಮಾನದಲ್ಲಿ ಬೇಯುತ್ತಿರುವುದು ಒಂದು ನಿಷ್ಠುರ ಸತ್ಯ. ಅನೇಕ ನಿಷಿದ್ಧಗಳ ನಡುವೆಯೇ ದಲಿತರು ಇನ್ನೂ ಬದುಕುತ್ತಿರುವುದರಿಂದ, ನಾನು ಈ ಅಶುದ್ಧತೆಯ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

'ಯಂಗ್ ಇಂಡಿಯಾ' ಮತ್ತು 'ಹರಿಜನ್' ಪತ್ರಿಕೆಯಲ್ಲಿನ ಗಾಂಧೀಜಿಯ ಬರಹಗಳನ್ನು ಓದಿದರೆ, ವರ್ಣವ್ಯವಸ್ಥೆ ಹಾಗೂ ಅದನ್ನು ಅವಲಂಬಿಸಿದ್ದ ಕಸುಬುಗಳ ಬಗ್ಗೆ ಅವರಿಗಿದ್ದ ನಿಲುವುಗಳು ಸ್ಪಷ್ಟವಾಗುತ್ತವೆ. ಗಾಂಧೀಜಿಗೆ ಭಾರತದ ಜಾತಿ ವ್ಯವಸ್ಥೆಯಲ್ಲಿದ್ದ ಮೇಲು ಮತ್ತು ಕೀಳು

ಎನ್ನುವ ವಿಭಜನೆಗಳ ಬಗ್ಗೆ ತೀವ್ರವಾದ ವಿರೋಧವಿತ್ತು. ಆದರೆ, ಕೊನೆಯವರೆಗೂ ಹಿಂದೂ ಸಮಾಜದ ಸಾಂಪ್ರದಾಯಿಕ ಶ್ರಮದ ಬಗ್ಗೆ ಅಪಾರವಾದ ನಂಬಿಕೆಯನ್ನು ಉಳಿಸಿಕೊಂಡಿದ್ದರು.

ಗಾಂಧೀಜಿಯ ದೃಷ್ಟಿಯಲ್ಲಿ ಈ ವ್ಯವಸ್ಥೆ 'ಸಮಾಜದ ಸೌಹಾರ್ದತೆಯನ್ನು ಉಳಿಸಿಕೊಳ್ಳುವ ಹಾಗೂ ವ್ಯಕ್ತಿಗಳ ಆತ್ಮೋದ್ಧಾರಕ್ಕೆ ಕಾರಣವಾಗುವ' ಅಂಶಗಳಾಗಿದ್ದವು. 'ತನ್ನ ಜೀವನಾಧಾರಕ್ಕಾಗಿ, ತನ್ನ ಪೂರ್ವಜರ ಅಧಿಕೃತ ಕಸುಬನ್ನೇ ಒಬ್ಬ ವ್ಯಕ್ತಿ ಅನುಸರಿಸಬೇಕೆಂದು ವರ್ಣ ವ್ಯವಸ್ಥೆ ಹೇಳುತ್ತದೆ. ಆದರೆ, ಎಲ್ಲಾ ಕಸುಬುಗಳಿಗೂ ಸಮಾನವಾದ ಘನತೆ ಇದೆ ಎಂಬ ಅರಿವಿನೊಂದಿಗೆ ಈ ವ್ಯವಸ್ಥೆ ಮುಂದುವರೆಯಬೇಕು. ಈ ಅರ್ಥದಲ್ಲಿ ಒಬ್ಬ ಬ್ರಾಹ್ಮಣನಿಗಿರುವ ಘನತೆಯೇ ಒಬ್ಬ ಜಲಗಾರನಿಗಿರಬೇಕು' ('ಯಂಗ್ ಇಂಡಿಯಾ', ನವೆಂಬರ್ ೧೭, ೧೯೨೭) – ಎಂದು ಹೇಳುವ ಗಾಂಧೀಜಿಗೆ ಸ್ಪಷ್ಟವಾಗಿ ಗೊತ್ತಿತ್ತು –ಹಿಂದೂ ಸಮಾಜ ಶೂದ್ರರನ್ನು ನಡೆಸಿಕೊಳ್ಳುತ್ತಿರುವ ರೀತಿಯು ಅಮಾನವೀಯವಾದುದು ಹಾಗೂ ಅದು ಹಿಂದೂತ್ವಕ್ಕೇ ಗಂಡಾಂತರವನ್ನು ತಂದೊಡ್ಡುವಷ್ಟು ಅಪಾಯಕಾರಿಯಾದುದು ಎಂದು. ('ಯಂಗ್ ಇಂಡಿಯಾ', ಏಪ್ರಿಲ್ ೨೩, ೧೯೨೫)

'ಒಬ್ಬ ಜಲಗಾರ ಜಲಗಾರನಾಗಿ ಉಳಿಯುವುದರ ಮೂಲಕವೇ ತನ್ನ ಬದುಕನ್ನು ಸಾಗಿಸಬೇಕು. ಆದರೆ, ಆ ಕಸುಬಿಗೆ ಒಬ್ಬ ರಾಷ್ಟ್ರಪತಿಗೆ ಇರುವ ಘನತೆ ಇರಬೇಕು' (ಹರಿಜನ್ ಮಾರ್ಚ್ ೬, ೧೯೩೭) ಎಂದು ಹೇಳುವ ಮೂಲಕ ಗಾಂಧೀಜಿ, ಹಿಂದೂ ಜಾತಿ ವ್ಯವಸ್ಥೆಯ ರಚನೆಯಲ್ಲಿರುವ ಕಸುಬನ್ನು ವಿಭಿನ್ನವಾಗಿ ವ್ಯಾಖ್ಯಾನಿಸುವ ಪ್ರಯತ್ನ ಮಾಡುತ್ತಾರೆ. ಸನಾತನ ವ್ಯವಸ್ಥೆಯೊಳಗೆ ಮಾನವೀಯತೆಯನ್ನು ತರುವ ಮಹತ್ವಾಕಾಂಕ್ಷಿ ಪ್ರಯತ್ನ ಅದು.

ಸಾಮಾಜಿಕ ಅಶುದ್ಧತೆಯ ನಿವಾರಣೆಗೆ ಗಾಂಧಿ ಸೂಚಿಸುವ ಈ ಪರಿಹಾರ, ಭಾರತದ ಮಧ್ಯಕಾಲೀನ ಸಾಂಸ್ಕೃತಿಕ ಚರಿತ್ರೆಯಲ್ಲಿ ಆಗಲೇ ಪ್ರಯೋಗಕ್ಕೆ ಒಳಪಟ್ಟಿತ್ತು ಎನ್ನುವುದು ಬಹಳ ಮುಖ್ಯವಾದ ಸಂಗತಿ. ಈ ಪ್ರಯೋಗದಲ್ಲಿ ವರ್ಣವ್ಯವಸ್ಥೆ ಪ್ರತಿಪಾದಿಸುತ್ತಿದ್ದ ಮೌಲ್ಯಗಳು ಸಾರಾಸಗಟಾಗಿ ನಿರಾಕರಣೆಗೆ ಒಳಗಾಗಿದ್ದವು ಎನ್ನುವುದು ಕೂಡ ಅಷ್ಟೇ ಮುಖ್ಯವಾದ ವಿಷಯ. ತಮ್ಮ ಜಾತಿಯ ಅವಮಾನದ ಸಂಕೇತಗಳನ್ನೇ, ಘನತೆಯ ಸ್ವಾಭಿಮಾನದ ಸಂಕೇತವಾಗಿ ಪರಿವರ್ತಿಸಿಕೊಳ್ಳುವ ಮಂಟೇಸ್ವಾಮಿ, ಗಾಂಧಿ ಹೇಳಿದ ಮಾದರಿಯಲ್ಲೇ ಯಜಮಾನ ಸಂಸ್ಕೃತಿಯೊಂದಿಗೆ ಮುಖಾಮುಖಿಯಾದ ಜನಪದ ಮಹಾಕಾವ್ಯದ ನಾಯಕ. ಆದರೆ, ಈ ಮಾದರಿಗಳು ಮಿಥ್ ಆಗಿ ಉಳಿದುಬಿಟ್ಟವೇ ಹೊರತು, ಬದುಕಿನ ವಾಸ್ತವಿಕತೆಯೊಳಗೆ ತಮ್ಮ ಪ್ರಯತ್ನವನ್ನು ಯಶಸ್ವಿಗೊಳಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಗಾಂಧೀಜಿ ಸೂಚಿಸುವ ಪರಿಹಾರದ ಆಳದಲ್ಲಿರುವ ಇನ್ನೊಂದು ವೈರುಧ್ಯ ಏನೆಂದರೆ, ಸಂವಿಧಾನಾತ್ಮಕವಾಗಿ ಜಾತ್ಯಾತೀತತೆಯನ್ನು ಒಪ್ಪಿಕೊಂಡು, ಜಾತಿ ವ್ಯವಸ್ಥೆಗೆ ಮೂಲ ಕಾರಣವಾದ ವರ್ಣ ವ್ಯವಸ್ಥೆಯನ್ನು ಬಳಸಿಕೊಳ್ಳುವುದು ಸಾಧ್ಯವಿಲ್ಲ. ಅವರಲ್ಲಿದ್ದಷ್ಟು ಪರಧರ್ಮ ಸಹಿಷ್ಣತೆ, ಆ ಕಾಲಘಟ್ಟದ ಯಾವ ಜಾತೀಯ ಹಿಂದೂಗೆ ಇರಲಿಲ್ಲ ಎನ್ನುವುದು ನಿಜವಾದರೂ, 'ಹಿಂದ್ ಸ್ವರಾಜ್'ನಲ್ಲಿ ಗಾಂಧಿ ತಳೆಯುವ ನಿಲುವುಗಳು ಸೆಕ್ಯುಲರಿಸಂಗೆ ವಿರುದ್ಧವಾದವು. ವಾಸ್ತವಿಕತೆ ಏನೆಂದರೆ, ಹಿಂದೂ ಸಾಮಾಜಿಕ ಬದುಕಿನ ಎಲ್ಲಾ ರೂಪಗಳಲ್ಲಿ ಜಾತಿ ವ್ಯವಸ್ಥೆಯ ವಿಕೃತಗಳು ಇಂದಿಗೂ ಜೀವಂತವಾಗಿದೆ ಎನ್ನುವುದು. ಹೀಗಾಗಿ ವರ್ಣವ್ಯವಸ್ಥೆಯೊಂದಿಗೇ ಬೆಸೆದುಕೊಂಡಿರುವ ಅಶುದ್ಧತೆಯ ಪ್ರಶ್ನೆಗೆ ಪ್ರಾಯೋಗಿಕವಾಗಿ ಗಾಂಧಿ ತತ್ವದಲ್ಲಿ ಉತ್ತರ ಇಲ್ಲ.

★

ದಲಿತರನ್ನೂ ಒಳಗೊಂಡ ಸವರ್ಣೀಯ ಸಮಾಜದ ಬಗೆಗಿನ ಗಾಂಧಿಯ ಚಿಂತನೆಗಳು ಕೇವಲ ಜಾತಿ ಮತ್ತು ವರ್ಣದ ಮಟ್ಟಕ್ಕೆ ಸೀಮಿತವಾಗುವ ಸಂಗತಿಯಲ್ಲ. ಅದನ್ನು ನೈತಿಕ ಮೌಲ್ಯದ ಮಟ್ಟಕ್ಕೆ ಕೊಂಡೊಯ್ಯುವ ಆಧ್ಯಾತ್ಮಿಕ ಪ್ರಯತ್ನವನ್ನು ಗಾಂಧೀಜಿ ಮಾಡುತ್ತಾರೆ. ಇದು ವ್ಯಕ್ತಿಯ ವ್ಯಕ್ತಿತ್ವದಲ್ಲೇ ಉಂಟಾಗಬೇಕಾದ ಬದಲಾವಣೆಗೆ ಒತ್ತನ್ನು ನೀಡುತ್ತದೆ. ಅದಕ್ಕಾಗಿ ಅವರು ಸವರ್ಣೀಯ ಸಮಾಜದಿಂದ ದೂರ ಸರಿಯುವುದಕ್ಕೂ ಹಿಂಜರಿಯುವುದಿಲ್ಲ. ೧೯೨೦ರ ನಂತರ, ಭಾರತದ ರಾಜಕೀಯ ಸ್ವಾತಂತ್ರ್ಯಕ್ಕಿಂತ ಅಸ್ಪೃಶ್ಯತೆಯ ಪ್ರಶ್ನೆ ಗಾಂಧೀಜಿಗೆ ಬಹಳ ಮುಖ್ಯವಾಯಿತು. ಅದಕ್ಕಾಗಿ ತಾವೇ ಅಸ್ಪೃಶ್ಯರಾಗಿ ಹುಟ್ಟುವ, ಆ ಮೂಲಕ ಆ ಅವಮಾನದ ನೋವನ್ನು ಅನುಭವಿಸುವ ಮಾತನಾಡುತ್ತಾರೆ. ('ಯಂಗ್ ಇಂಡಿಯಾ' ಏಪ್ರಿಲ್ ೨೭, ೧೯೨೧) ಗಾಂಧೀಜಿಯ ಪ್ರಕಾರ, ಇದೆಲ್ಲದರ ಹಿಂದೆ ಇರುವ ತರ್ಕ ಏನೆಂದರೆ, ಒಂದು ಬದುಕಿನ ಕ್ರಮ ಇನ್ನೊಂದು ಬದುಕಿನ ಕ್ರಮದ ಜೊತೆಗೆ ಬೆರೆತಿರುವಂಥದ್ದು; ಆದ್ದರಿಂದ ಅದನ್ನು ಬೇರ್ಪಡಿಸಲು ಸಾಧ್ಯವಿಲ್ಲ ಎಂಬುದು.

ಮತ್ತೊಮ್ಮೆ ಈ ವಿಧಾನದ ಮೂಲಕ ಸಮಾಜದ ಸಾಂಸ್ಕೃತಿಕ ಪುನರ್ರಚನೆಗೆ ಪ್ರಯತ್ನಿಸಿದವರಲ್ಲಿ ಗಾಂಧೀಜಿ ಮೊದಲಿಗರಲ್ಲ. ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲಿ ಶುದ್ಧ ಮಾನವೀಯ ನೆಲೆಯಿಂದ ನೈತಿಕ ಮೌಲ್ಯದ ಈ ಪ್ರಶ್ನೆಯನ್ನು ಮಧ್ಯಕಾಲೀನ ಸಾಮಾಜಿಕ ಚರಿತ್ರೆಯ ಸಂದರ್ಭದಲ್ಲಿ ಅತ್ಯಂತ ತೀವ್ರವಾಗಿ ಬಸವಣ್ಣ ಕೂಡ ಶೋಧಿಸುವ ಪ್ರಯತ್ನ ಮಾಡಿದರು. ಈ ಶತಮಾನದ ಉತ್ತರಾರ್ಧದಲ್ಲಿ ಇದೇ ನೈತಿಕ ಮೌಲ್ಯಗಳ ಶೋಧನೆಯಲ್ಲಿ ತೊಡಗಿದ ಮತ್ತೊಬ್ಬ ವ್ಯಕ್ತಿ ಅಂಬೇಡ್ಕರ್.. ೧೨ನೇ ಶತಮಾನದ ಬಸವಣ್ಣನಿಗೆ ಉಂಟಾದ ನಿರಾಸೆ, ೨೦ನೇ ಶತಮಾನದ ಅಂಬೇಡ್ಕರ್‌ಗೂ ಉಂಟಾದದ್ದು ಕೇವಲ ಆಕಸ್ಮಿಕವಲ್ಲ. ಬದಲಿಗೆ ಹಿಂದೂ ಧರ್ಮದ ಮೌಲ್ಯಗಳಲ್ಲಿರುವ ಕ್ರೌರ್ಯವನ್ನು ಅದು ಸೂಚಿಸುತ್ತದೆ. ಸಾಂಪ್ರದಾಯಿಕ ಹಿಂದೂ ಸಂಸ್ಕೃತಿಯಲ್ಲಿ ಈ ನೈತಿಕ ಪ್ರಜ್ಞೆಯನ್ನು ಎಚ್ಚರಿಸುವುದು ಕೊನೆಗೂ ಸಾಧ್ಯವೇ ಇಲ್ಲ ಎನ್ನುವ ನಿರ್ಧಾರದಿಂದ ಅಂಬೇಡ್ಕರ್ ಬೌದ್ಧ ಧರ್ಮವನ್ನು ಆತುಕೊಂಡಿದ್ದು.

ಭಾರತದ ದಲಿತ ಚಳವಳಿಗೆ ದೊಡ್ಡ ಸವಾಲಾಗಿರುವುದು ಇದೇ ಅಂಶ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ, ಅತ್ಯಂತ ಸಂಕೀರ್ಣವಾದ, ವಿಚಿತ್ರವಾದ, ಭಾರತೀಯ ಸಮಾಜಕ್ಕೆ ವಿಶಿಷ್ಟವಾದ ಒಂದು ಸಾಂಸ್ಕೃತಿಕ ಮನಃಸ್ಥಿತಿ ಇಲ್ಲಿ ಕೆಲಸ ಮಾಡುತ್ತದೆ. ದಲಿತ ಸಮುದಾಯಗಳು ಏಕಕಾಲಕ್ಕೆ ಹಿಂದೂ ಸಮಾಜದ 'ಇನ್‌ಸೈಡರ್' ಕೂಡ ಹೌದು, ಹಾಗೇ 'ಔಟ್‌ಸೈಡರ್' ಕೂಡ ಹೌದು. ವಿಚಿತ್ರ ಎಂದರೆ, ಈ ಎರಡೂ ಸ್ಥಿತಿಗಳು ಇಂದಿಗೂ ಗಟ್ಟಿಯಾಗಿ ಉಳಿದಿರುವ ನೆಲೆಗಳು. ಈ ವೈರುಧ್ಯ, ವಿಪರ್ಯಾಸವನ್ನು ಮೀರುವ ಯಾವ ಪ್ರಯತ್ನವೂ ಯಶಸ್ವಿಯಾಗಿಲ್ಲ. ಗಾಂಧೀಜಿಗೆ ಈ ವೈರುಧ್ಯದ ಅರಿವು ಸ್ಪಷ್ಟವಾಗಿತ್ತು. ಆ ಕಾರಣದಿಂದಲೇ ಅವರು ದಲಿತ ಸಮುದಾಯಗಳು, ಹಿಂದೂ ಸಮಾಜದ 'ಇನ್‌ಸೈಡರ್' ಆಗಿ ಉಳಿಯುವ ಸಾಧ್ಯತೆಗಳನ್ನು ಶೋಧಿಸಿದರು. ಅವರು ಈ ಸಮಸ್ಯೆಗೆ ಕಂಡುಕೊಂಡ ಒಂದೇ ಉತ್ತರ– ಅದು ವ್ಯಕ್ತಿಯ ಆಂತರ್ಯದಲ್ಲೇ ಉಂಟಾಗಬೇಕಾದ ಬದಲಾವಣೆ ಎಂದು. ಕೇವಲ ಇಂಥ ಬದಲಾವಣೆಯಿಂದ ಮಾತ್ರ ಹಿಂದೂ ಸಮಾಜದ ಸಾಂಸ್ಕೃತಿಕ ಪುನರ್ರಚನೆಯನ್ನು ಸಾಧ್ಯವಾಗಿಸುತ್ತದೆ ಎಂದು ಗಾಂಧೀಜಿ ಗಾಢವಾಗಿ ನಂಬಿದ್ದರು. ಅದಕ್ಕೆ ಅವರು ಅಂಬೇಡ್ಕರರ ಮತಾಂತರದ ಬಗ್ಗೆ ತೀವ್ರವಾಗಿ ಆತಂಕಿತರಾಗಿಬಿಟ್ಟರು. ಗಾಂಧೀಜಿಯ ಪ್ರಕಾರ ಮತಾಂತರ ಇದಕ್ಕೆ ಉತ್ತರವಲ್ಲ.

ಅಂಬೇಡ್ಕರರನ್ನು ಅನುಸರಿಸಿ, ಮತಾಂತರದ ಹಾದಿಯನ್ನು ಹಿಡಿದ ಅನೇಕ ದಲಿತರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ಏನಾದರೂ ವ್ಯತ್ಯಾಸವಾಗಿದೆಯೇ ಎಂದು ಯೋಚಿಸಿದರೆ, ಉತ್ತರಿಸಲು ಸ್ವಲ್ಪ ತಡವರಿಸಬೇಕಾಗುತ್ತದೆ. ದಲಿತರು ಯಾವ ಧರ್ಮಗಳಿಗೆ ಮತಾಂತರಗೊಂಡಿದ್ದಾರೋ, ಆಯಾ ಧರ್ಮದಲ್ಲಿ ಅವರು ಮತ್ತೊಮ್ಮೆ ಅಸ್ಪೃಶ್ಯರಾಗಿಯೇ ಉಳಿದಿದ್ದಾರೆ. ಹಿಂದೂ ಸಾಮಾಜಿಕ ಚೌಕಟ್ಟಿನಲ್ಲಿಯೇ ತಮ್ಮ ಅಸ್ತಿತ್ವಕ್ಕೆ ಘನತೆಯನ್ನು ರೂಪಿಸಿಕೊಳ್ಳಬೇಕು ಎಂದು ಗಾಂಧಿ ಹೇಳಿದ್ದು ಈ ದೃಷ್ಟಿಯಿಂದ ಬಹಳ ಮುಖ್ಯವಾದ ಸಂಗತಿ. ಆದರೆ, ಗಾಂಧಿ ಹೇಳಿದ ಸಂಗತಿ ವಾಸ್ತವಿಕವಾಗಿ ಸಾಧ್ಯವಾಗದಿರುವಂಥ ಕ್ರೌರ್ಯ ಹಿಂದೂ ಸಮಾಜದಲ್ಲಿದೆ. ಇದೇ ಸಾಮಾಜಿಕ ಚೌಕಟ್ಟಿನಲ್ಲಿದ್ದುಕೊಂಡು, ತಮ್ಮನ್ನು ಮಾನವೀಯ ನೆಲೆಯಲ್ಲಿ ನಡೆಸಿಕೊಳ್ಳುವ ಸಾಧ್ಯತೆಗಳ ಬಗ್ಗೆ ನಿರಾಶರಾದ ದಲಿತರು, ಮತಾಂತರದ ನಂತರವೂ ನಿರಾಶರಾಗಿ ಉಳಿದಿರುವುದು, ಭಾರತೀಯ ಚರಿತ್ರೆಯ ಅತ್ಯಂತ ನೋವಿನ ಅಧ್ಯಾಯಗಳಲ್ಲೊಂದು.

**ಗಾಂಧೀಜಿಗೆ ಭಾರತದ ಜಾತಿ ವ್ಯವಸ್ಥೆಯಲ್ಲಿದ್ದ ಮೇಲು ಮತ್ತು ಕೀಳು ಎನ್ನುವ ವಿಭಜನೆಗಳ ಬಗ್ಗೆ ತೀವ್ರವಾದ ವಿರೋಧವಿತ್ತು, ಆದರೆ, ಕೊನೆಯವರೆಗೂ ಹಿಂದೂ ಸಮಾಜದ ಸಾಂಪ್ರದಾಯಿಕ ಶ್ರಮದ ಬಗ್ಗೆ ಅಪಾರವಾದ ನಂಬಿಕೆಯನ್ನು ಉಳಿಸಿಕೊಂಡಿದ್ದರು. ಗಾಂಧೀಜಿಯ ದೃಷ್ಟಿಯಲ್ಲಿ ಈ ವ್ಯವಸ್ಥೆ 'ಸಮಾಜದ ಸೌಹಾರ್ದತೆಯನ್ನು ಉಳಿಸಿಕೊಳ್ಳುವ ಹಾಗೂ ವ್ಯಕ್ತಿಗಳ ಆತ್ಮೋದ್ಧಾರಕ್ಕೆ ಕಾರಣವಾಗುವ' ಅಂಶಗಳಾಗಿದ್ದವು. 'ತನ್ನ ಜೀವನಾಧಾರಕ್ಕಾಗಿ, ತನ್ನ ಪೂರ್ವಜರ ಅಧಿಕೃತ ಕಸುಬನ್ನೇ ಒಬ್ಬ ವ್ಯಕ್ತಿ ಅನುಸರಿಸಬೇಕೆಂದು ವರ್ಣ ವ್ಯವಸ್ಥೆ ಹೇಳುತ್ತದೆ. ಆದರೆ, ಎಲ್ಲಾ ಕಸುಬುಗಳಿಗೂ ಸಮಾನವಾದ ಘನತೆ ಎಂಬ ಇದೆ ಎಂಬ ಅರಿವಿನೊಂದಿಗೆ ಈ ವ್ಯವಸ್ಥೆ ಮುಂದುವರೆಯಬೇಕು ಎಂಬುದು ಗಾಂಧೀಜಿ ನಿಲುವಾಗಿತ್ತು. ಸನಾತನ ವ್ಯವಸ್ಥೆಯೊಳಗೆ ಮಾನವೀಯತೆಯನ್ನು ತರುವ ಮಹತ್ವಾಕಾಂಕ್ಷಿ ಪ್ರಯತ್ನ ಅದು.**

ಗಾಂಧಿ ಪ್ರತಿರೋಧದ ಮುಖ್ಯ ಮಾದರಿಗಳಾದ ಅಹಿಂಸೆ ಮತ್ತು ಸತ್ಯಾಗ್ರಹದ ಮೂಲಕ ಹಿಂದೂ ಸಾಮಾಜಿಕ ಮನಃಸ್ಥಿತಿಯಲ್ಲಿ ನೈತಿಕ ಮೌಲ್ಯವನ್ನು ಬಡಿದೆಬ್ಬಿಸುವುದು ಸಾಧ್ಯವೇ ಎಂಬ ಪ್ರಶ್ನೆ ಎದುರಾಗುತ್ತದೆ. ಅಂಬೇಡ್ಕರ್‌ರಂಥ ಶಕ್ತ ನೇತಾರನ ನೇತೃತ್ವದಲ್ಲೇ ಪೂನಾದಲ್ಲಿನ ಪಾರ್ವತಿ ಸತ್ಯಾಗ್ರಹ (೧೯೨೯), ನಾಸಿಕ್ ಸತ್ಯಾಗ್ರಹ (೧೯೩೦) ಫಲಕಾರಿಯಾಗಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಅಷ್ಟೇ ಏಕೆ, ಸ್ವತಃ ಗಾಂಧೀಜಿಯ ★ ವೈಕಂ ಸತ್ಯಾಗ್ರಹ ಕೂಡ ನಿಧಾನವಾಗಿ ಫಲಕೊಟ್ಟಿತು. ಆದರೆ, ಸತ್ಯಾಗ್ರಹದ ಮೂಲಕ ನಡೆದ ಈ ಹೋರಾಟಗಳಿಗೆ ಜಯ ದೊರಕಿದ್ದನ್ನು ಆಗ, ದುಂಡು ಮೇಜಿನ ಸಮ್ಮೇಳನದಲ್ಲಿ ನಡೆಯುತ್ತಿದ್ದ ಮುಖ್ಯ ವಾಗ್ವಾದಗಳ ಹಾಗೂ ಸ್ವತಂತ್ರಪೂರ್ವ ರಾಜಕೀಯ ಚಳವಣಿಗೆಯ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕೇ ಹೊರತು, ಇದನ್ನು ಸಾಮಾಜಿಕ ರಾಜಕಾರಣದ ಆಚೆಗಿರುವ ಒಂದು ಶುದ್ಧ ಸಾಂಸ್ಕೃತಿಕ ವಿಷಯವಾಗಿ ನೋಡುವುದು ಸಾಧ್ಯವಿಲ್ಲ.

★

ಇನ್ನು ದಲಿತ ಚಳವಳಿಯ ಮೂರನೆಯ ಆಶಯ ಅದು ಭೂಮಿಯ ಪ್ರಶ್ನೆ. ಆಂಧ್ರದ ತೆಲಂಗಾಣ ರೈತ ಚಳವಳಿ ಆಗಬಹುದು, ಪಶ್ಚಿಮ ಬಂಗಾಳದ ನಕ್ಸಲೈಟ್ ಹೋರಾಟಗಳು, ಕರ್ನಾಟಕದ ಕನಕಪುರ, ದೊಡ್ಡಬಳ್ಳಾಪುರ, ಆನೇಕಲ್‌ನಲ್ಲಿ ನಡೆದ ಮರವಣಿಗೆಗಳು, ಮೊನ್ನೆ ಕಾರ್ಕಳದಲ್ಲಿನ 'ಎನ್‌ಕೌಂಟರ್' - ಈ ಎಲ್ಲದರ ಕೇಂದ್ರ ಆಶಯ ಭೂಮಿ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ 'ಚೋಮನ ದುಡಿ'ಯಿಂದ ಹಿಡಿದು ಸಿದ್ದಲಿಂಗಯ್ಯನವರ 'ಚೋಮನ ಮಕ್ಕಳ ಹಾಡು' ತನಕ ಭೂಮಿ ಒಂದು ದೊಡ್ಡ ರೂಪಕ. ಆದರೆ, ಅಂತಿಮವಾಗಿ ಚೋಮ ಭೂ ಹೀನನಾಗಿಯೇ ಉಳಿದು ಬಿಡುತ್ತಾನೆ. ಸಿದ್ದಲಿಂಗಯ್ಯನವರ ಕವಿತೆ ಕೂಡ 'ತಾಯಿಯ ನಗಲಿದ ಮಕ್ಕಳು ನಾವು ನೋವನಪ್ಪಿದವರು' ಎಂಬ ಸಾಲು ಪುನರಾವರ್ತನೆಯಾಗುತ್ತದೆ. ಇಲ್ಲಿ 'ತಾಯಿ' ಎಂಬ ಪದವನ್ನು ಭೂಮಿ ಎಂದು ಗ್ರಹಿಸಿಕೊಂಡಾಗ, ಕವಿತೆಯ ಅರ್ಥ ಸಾಧ್ಯತೆಗಳು ಅತ್ಯಂತ ವಿಶಿಷ್ಟವಾಗಿ ವಿಸ್ತಾರಗೊಳ್ಳುತ್ತದೆ.

ಭೂಮಿಯ ಒಡೆತನದ ಪ್ರಶ್ನೆಗೆ ಗಾಂಧಿ 'ಟ್ರಸ್ಟಿಷಿಪ್' ಎನ್ನುವ ಪರಿಕಲ್ಪನೆಯನ್ನು ಕಟ್ಟಿಕೊಡುತ್ತಾರೆ. ಈ ಪರಿಕಲ್ಪನೆಯ ಪ್ರಕಾರ, ದಲಿತರು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕೆ ಮಾತ್ರ ಭೂಮಿಯನ್ನು ಉಪಯೋಗಿಸಿಕೊಳ್ಳಬೇಕೇ ಹೊರತು, ಅದರ ಮೇಲೆ ಒಡೆತನವನ್ನು ಸಾಧಿಸುವುದಕ್ಕಲ್ಲ. ವರ್ಣವ್ಯವಸ್ಥೆಯನ್ನು ಉಳಿಸಿಕೊಳ್ಳುವ ಗಾಂಧಿಯ ಆಶಯ, ದಲಿತರನ್ನು ಭೂಮಿಯ ಒಡೆತನದಿಂದ ವಂಚಿತರನ್ನಾಗಿಯೇ ಉಳಿಸಿಬಿಡುತ್ತದೆ.

★

ದಲಿತ ಚಳವಳಿಗಳ ಮುಖ್ಯ ಆಶಯಗಳನ್ನು ಗಾಂಧಿ ಚಿಂತನೆಯ ನೆಲೆಯಲ್ಲಿ ವಿಶ್ಲೇಷಿಸಿದ ನಂತರ, ದಲಿತ ಚಳವಳಿಗಳು ಆಯ್ಕೆ ಮಾಡಿಕೊಳ್ಳುವ ಹೋರಾಟದ ಸ್ವರೂಪ ಯಾವುದು, ಅಲ್ಲಿ ಗಾಂಧಿ ಚಿಂತನೆಗಳ ಸ್ಥಾನ ಏನು ಎನ್ನುವುದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

ದಲಿತ ಚಳವಳಿಗಳು ಕಾರ್ಯನಿರ್ವಹಿಸುತ್ತಿರುವ ಭೌಗೋಳಿಕ ರಚನೆ ಹಾಗೂ ಆ ರಚನೆಗೆ ಅಗತ್ಯವಾದ ಸಾಮಾಜಿಕ-ಆರ್ಥಿಕ ಅಂಶಗಳನ್ನು ಆಧರಿಸಿ, ದಲಿತ ಚಳವಳಿಗಳ ಹೋರಾಟದ ಸ್ವರೂಪ ಕೂಡ ವೈವಿಧ್ಯತೆಯನ್ನು ಪಡೆದುಕೊಳ್ಳುತ್ತದೆ. ಐಡಿಯಾಲಜಿ ದೃಷ್ಟಿಯಿಂದ ಮಹಾರಾಷ್ಟ್ರದ ದಲಿತ ಚಳವಳಿಗಳು ಮಾರ್ಕ್ಸ್‌ವಾದದ ಜೊತೆಗೆ ಫುಲೆ ಮತ್ತು

> **ದಲಿತ ಚಳವಳಿಯ ಮೂರನೆಯ ಆಶಯ ಭೂಮಿಯ ಪ್ರಶ್ನೆ. ಈ ಭೂಮಿಯ ಒಡೆತನದ ಪ್ರಶ್ನೆಗೆ ಗಾಂಧಿ 'ಟ್ರಸ್ಟಿಷಿಪ್' ಎನ್ನುವ ಪರಿಕಲ್ಪನೆಯನ್ನು ಕಟ್ಟಿಕೊಡುತ್ತಾರೆ. ಈ ಪರಿಕಲ್ಪನೆಯ ಪ್ರಕಾರ, ದಲಿತರು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕೆ ಮಾತ್ರ ಭೂಮಿಯನ್ನು ಉಪಯೋಗಿಸಿಕೊಳ್ಳಬೇಕೇ ಹೊರತು, ಅದರ ಮೇಲೆ ಒಡೆತನವನ್ನು ಸಾಧಿಸುವುದಕ್ಕಲ್ಲ. ವರ್ಣವ್ಯವಸ್ಥೆಯನ್ನು ಉಳಿಸಿಕೊಳ್ಳುವ ಗಾಂಧಿಯ ಆಶಯ, ದಲಿತರನ್ನು ಭೂಮಿಯ ಒಡೆತನದಿಂದ ವಂಚಿತರನ್ನಾಗಿಯೇ ಉಳಿಸಿಬಿಡುತ್ತದೆ.**

ಅಂಬೇಡ್ಕರ್ ವಾದವನ್ನು ಬೆಸೆಯುತ್ತಾರೆ. ಹೋರಾಟಕ್ಕೆ ನಕ್ಸಲೈಟ್ ಮತ್ತು ಮಾವೋಯಿಸಂನಿಂದ ಪ್ರಭಾವಿತವಾದ 'ಮಿಲಿಟೆನ್ಸಿ'ಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಇವರ ಹೋರಾಟ, ಬಂಡವಾಳಶಾಹಿಗಳು ಮತ್ತು ಭೂಮಾಲೀಕರನ್ನು ದೃಷ್ಟಿಯಲ್ಲಿ ಇಟ್ಟುಕೊಂಡಿದ್ದಾಗಿದೆ. ಆಂಧ್ರದಲ್ಲಿ ದಲಿತ ಚಳವಳಿಗಳು ರೂಪುಗೊಂಡದ್ದೇ ಜನನಾಟ್ಯ ಮಂಡಲಿಯ ಸಿದ್ಧಾಂತಗಳೊಂದಿಗೆ. ಫ್ಯೂಡಲಿಸಂನ ವಿರುದ್ಧದ ಇವರ ಹೋರಾಟಕ್ಕೆ ಮಾರ್ಕ್ಸ್, ಮಾವೋ ಮತ್ತು ಅಂಬೇಡ್ಕರರ ಸಿದ್ಧಾಂತಗಳು ನೆರವಿಗೆ ಬರುತ್ತವೆ. ಆಂಧ್ರದ ದಲಿತ ಚಳವಳಿಗಳು ಕೂಡ ಮಿಲಿಟೆನ್ಸಿಗೇ ಹೆಚ್ಚು ಪ್ರಾಧಾನ್ಯತೆಯನ್ನು ನೀಡುತ್ತವೆ. ಇಲ್ಲಿನ ದಲಿತ ಚಳವಳಿಗಳು ಆಗಾಗ ಗಾಂಧಿ ಚಿಂತನೆಗಳತ್ತ ದೃಷ್ಟಿ ಹಾಯಿಸಿರುವುದು ನಿಜವಾದರೂ, ಅಂತಿಮ ಆಯ್ಕೆಯ ಸಂದರ್ಭದಲ್ಲಿ ಗಾಂಧಿ ಚಿಂತನೆಗಳನ್ನು ಕೈ ಬಿಟ್ಟಿವೆ.

ಕರ್ನಾಟಕದಲ್ಲಿ ರೈತ ಸಂಘದ ಸಹಯೋಗದೊಂದಿಗೆ ಪ್ರಾರಂಭವಾದ ದಲಿತ ಸಂಘರ್ಷ ಸಮಿತಿಗೆ ಮಾರ್ಕ್ಸ್‌ವಾದ, ಅಂಬೇಡ್ಕರ್ ಮತ್ತು ಲೋಹಿಯಾರ ಸಮಾಜವಾದ ಕೂಡ ಮುಖ್ಯವಾಗುತ್ತದೆ. ಇಲ್ಲಿನ ದಲಿತ ಚಳವಳಿಯೂ ಗಾಂಧಿ ಚಿಂತನೆಗಳತ್ತ ದೃಷ್ಟಿ ಹಾಯಿಸಿದೆ. ಆದರೆ ಭಾರತದುದ್ದಕ್ಕೂ ನಡೆದ ಚಳವಳಿಗಳ ಹೋರಾಟದ ಸ್ವರೂಪವನ್ನು ಗಮನಿಸಿದಾಗ ಗಾಂಧಿಯ ಪ್ರತಿರೋಧದ ಮಾದರಿಗಳು ಒಂದು ಆದರ್ಶದ ನೆಲೆಯಲ್ಲೇ ನಿಂತುಬಿಡುತ್ತವೆ. ಕಾರಣ, ಅಹಿಂಸೆಯ ಮೂಲ ಬೇರು ತ್ಯಾಗ ಮತ್ತು ಪ್ರೀತಿಯಲ್ಲಿರುವುದು. ದಲಿತರು ಈಗಾಗಲೇ ಸಾಕಷ್ಟು ತ್ಯಾಗ ಮಾಡಿದ್ದರೂ, ಮೇಲುವರ್ಗ ಹಿಂದೂಗಳ ಅಥವಾ ಭೂ ಮಾಲೀಕರ ಪ್ರೀತಿಯನ್ನು ಸಂಪಾದಿಸಿಕೊಳ್ಳುವುದು ಸಾಧ್ಯವಾಗಿಲ್ಲವಾದ್ದರಿಂದ ಅಹಿಂಸೆಯ ವಿಧಾನವನ್ನು ಅನುಮಾನದಿಂದ ನೋಡುತ್ತಾರೆ. ಹಾಗೆಯೇ ಸತ್ಯಾಗ್ರಹದ ಮೂಲ ಸತ್ವ ತಾಳ್ಮೆಯಲ್ಲಿದೆ. ಆದರೆ, ಹೋರಾಟ ಮತ್ತು ಚಳವಳಿಯ ಹಿಂದೆ ರೋಷ ಮತ್ತು ಹಠದ ಮನಃಸ್ಥಿತಿ ಕೆಲಸ ಮಾಡುತ್ತದೆ. ಹೀಗಾಗಿ ಅವರು ಈ ಎರಡೂ ವಿಧಾನವನ್ನು ಪಕ್ಕಕ್ಕಿಟ್ಟು ಅಧಿಕಾರದಲ್ಲಿರುವ ರಾಜಕೀಯ ಪಕ್ಷಗಳ ಮೇಲೆ pressure zones (ಪ್ರೆಷರ್ ಜೋನ್ಸ್) ಆಗಿ ಕೆಲಸ ಮಾಡುವುದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ದಲಿತ ಮಹಿಳೆಯರ ಹೋರಾಟದ ಚಳವಳಿಯ ವಿಷಯಕ್ಕೆ ಬಂದಾಗ ಕೂಡ, ಗಾಂಧಿಯ 'ರಾಮರಾಜ್ಯ'ದ ಕಲ್ಪನೆಯನ್ನು ಅವರು ನಿಷ್ಠುರವಾಗಿ ವಿಮರ್ಶಿಸುತ್ತಾರೆ. ಏಕೆಂದರೆ, ಭೂಮಿಯೊಂದಿಗಿನ ತಮ್ಮ ಭಾವನಾತ್ಮಕವಾದ ಸಂಬಂಧದಿಂದ, ಭೂಮಿ ಕನ್ಯೆ ಸೀತೆ ತಮ್ಮವಳು ಎಂದುಕೊಳ್ಳುವ ಮಹಿಳಾ ಚಳವಳಿಗಾರರಿಗೆ ಗಾಂಧಿಯ ರಾಮ, ಸೀತೆಯನ್ನು ಶೋಷಿಸುವ ವ್ಯಕ್ತಿಯಾಗಿ ಜಡವಾಗುತ್ತಾನೆ. ರಾಮ ಪುರುಷ ಪ್ರಧಾನ್ಯತೆಯನ್ನು ಸಂಕೇತಿಸುವುದರೊಂದಿಗೆ, ಆತ ಪೋಷಿಸಿದ ಮೌಲ್ಯಗಳು ಮಹಿಳೆಗೆ ನ್ಯಾಯವಾಗಿ ದಕ್ಕಬೇಕಾದ ಹಕ್ಕುಗಳನ್ನು ಇಲ್ಲವಾಗಿಸುತ್ತವೆ. ಆದ್ದರಿಂದ, ಅಂಬೇಡ್ಕರ್ ಮತ್ತು ಲೋಹಿಯಾರ ಚಿಂತನೆಗಳಲ್ಲಿ ಅವರು ಪರ್ಯಾಯವನ್ನು ಹುಡುಕುತ್ತಾರೆ.

ಜಾಗತೀಕರಣದಿಂದ ಉಂಟಾಗಿರುವ ಸಾಮಾಜಿಕ ಪಲ್ಲಟಗಳು ದಲಿತ ಚಳವಳಿಗಾರರನ್ನು ಗೊಂದಲದಲ್ಲಿ ಕೆಡವಿದೆ. ಆಧುನಿಕತೆಯನ್ನು ಸ್ವಾಗತಿಸಿದ ದಲಿತರು, ಅದರ ಮುಂದುವರೆದ ರೂಪವಾದ ಜಾಗತೀಕರಣದ ರಾಕ್ಷಸತ್ವ ಉಂಟುಮಾಡುತ್ತಿರುವ ಅನಾಹುತಗಳನ್ನು ಕಂಡು ದಿಕ್ಕೆಟ್ಟಿದ್ದಾರೆ. ಹಿಂಸೆ ಮತ್ತು ಹಸಿವೆಯನ್ನೇ ತನ್ನ ಒಡಲಲ್ಲಿ ಇಟ್ಟುಕೊಂಡಿರುವ ಖಾಸಗೀಕರಣದ ನೀತಿಯಿಂದ ಮುಖ್ಯವಾಹಿನಿಯಲ್ಲಿ ತಮ್ಮನ್ನು ಗುರುತಿಸಿಕೊಳ್ಳುವುದಕ್ಕೆ ನೆರವಾದ ಶಿಕ್ಷಣ ಮತ್ತು ಉದ್ಯೋಗದ ಅವಕಾಶ ಕಡಿಮೆಯಾಗುತ್ತಿದೆ. ಆರ್ಥಿಕ ನೀತಿಯಿಂದ ಉಂಟಾಗಿರುವ ಪರಿಸರದ ಬಿಕ್ಕಟ್ಟುಗಳು ಕೂಡ ನೇರವಾಗಿ ತಮ್ಮ ಬದುಕಿಗೇ ಎರವಾಗುತ್ತಿರುವುದರಿಂದ, ಸದ್ಯಕ್ಕೆ ದಲಿತ ಚಳವಳಿಗಳು ರಾಜಕೀಯವಾಗಿ ಸಬಲವಾಗುವುದರತ್ತ ಗಂಭೀರವಾಗಿ ಯೋಚಿಸುತ್ತಿವೆ.

ಅದಕ್ಕಾಗಿ ಅಂಬೇಡ್ಕರ್, ಲೋಹಿಯಾ ಗಾಂಧಿ ಚಿಂತನೆಗಳ ಜೊತೆಗೆ, ತಮ್ಮ ಬದುಕಿನ ಸಾಂಸ್ಕೃತಿಕ ಚರಿತ್ರೆಯ ಬೇರುಗಳನ್ನು ಹುಡುಕುವುದು ದಲಿತ ಚಳವಳಿಗಾರರಿಗೆ ಈ ಹೊತ್ತಿನ ಜರೂರು ಎನಿಸಿದೆ. ಕಾರಣ, ಜಾತಿ ಧರ್ಮದಂಥ ಕ್ಷುದ್ರ ಲೌಕಿಕತೆಯನ್ನು ಮೀರಿದ, ನೈತಿಕ ಎಚ್ಚರವನ್ನು ಉಂಟುಮಾಡುವ ಆಧ್ಯಾತ್ಮಿಕ ಚಳವಳಿಗಳನ್ನು ರೂಪಿಸುವುದು, ಈಗ ದಲಿತ ಚಳವಳಿಗಳ ಆದ್ಯತೆಯಾಗುತ್ತಿದೆ. ಕಾರಣ, ಎಲ್ಲಾ ರೀತಿಯ ಸಾಂಸ್ಕೃತಿಕ-ರಾಜಕೀಯ ಆಕ್ರಮಣದ ವಿರುದ್ಧ ತಮ್ಮ ಬದುಕನ್ನು ಅರ್ಥಪೂರ್ಣವಾಗಿಸಬಲ್ಲ ಸಾಧ್ಯತೆಗಳನ್ನು ಅವರು ಇಂಥ ತಾತ್ವಿಕತೆಯಲ್ಲಿ ಗುರುತಿಸುತ್ತಿದ್ದಾರೆ.

★

ಮತ್ತೆ ದೇವನೂರರ ವಿಷಯಕ್ಕೆ ಬರುತ್ತೇನೆ. ಗಾಂಧಿ ಸಿನೆಮಾ ನೋಡಿ, ಮೋಹನದಾಸ ಮಹಾತ್ಮನಾಗುವ ಪ್ರಕ್ರಿಯೆಗೆ ದೇವನೂರರು ಹೃತ್ಪೂರ್ವಕವಾಗಿ ತಲೆಬಾಗುತ್ತಾರೆ. ಈ ಚಿಂತನೆಯ ಮುಂದುವರೆದ ಭಾಗ, 'ಸಂಸ್ಕೃತಿ, ಗಾಂಧಿ, ಅಂಬೇಡ್ಕರ್ ಬಗ್ಗೆ ಒಂದಿಷ್ಟು ಎಂಬ ಲೇಖನದಲ್ಲಿ ಹೆಚ್ಚು ಸ್ಪಷ್ಟತೆಯನ್ನು ಪಡೆದುಕೊಳ್ಳುತ್ತದೆ. 'ಗಾಂಧಿ ಸಾಹಿತ್ಯವನ್ನು ದಲಿತನ ಒಡಲಿಗೆ, ಹಿತಾಸಕ್ತಿಗೆ ಎಷ್ಟು ಒಗ್ಗುತ್ತದೋ ಅಷ್ಟನ್ನು ಮಾತ್ರ ಇಟ್ಟುಕೊಂಡರೆ, ಅಲ್ಲಿಂದ ಮತ್ತೆ ಗಾಂಧಿ ಹುಟ್ಟಾನೆ. ಬಹುಶಃ ಇಡೀ ಜಗತ್ತಿನ ಹಿತ ಇದರೊಳಗೇ ಇರಬಹುದು' ಎಂದು ಹೇಳುತ್ತಾರೆ. ದಲಿತ ಚಳವಳಿಗಳು, ಈ ದಿಕ್ಕಿನಲ್ಲಿ ಆಲೋಚಿಸುತ್ತಿರುವಂತೆ ಕಾಣುತ್ತಿದೆ.

(೨೮ ಡಿಸೆಂಬರ್ ೨೦೦೩, ಪ್ರಸಾರಾಂಗ, ಬೆಂ.ವಿ.ವಿ. ಏರ್ಪಡಿಸಿದ್ದ 'ಗಾಂಧಿ ಮತ್ತು ನಂತರ' ವಿಚಾರ ಸಂಕಿರಣದಲ್ಲಿ ನೀಡಿದ ಉಪನ್ಯಾಸ) □

# ಸಿ ಇ ಟಿ ಎಂಬ ಮಾಯಾಜಾಲ

## ವರ್ತಮಾನ

**ಇಂದಿನ ವಿದ್ಯಾರ್ಥಿಗಳು ಬಹುಶಃ 'ಏಳನೆಯ ತರಗತಿಯಿಂದಲೇ ಈ ಸಿಇಟಿ ಕನಸು ಕಾಣಲು ಆರಂಭಿಸುತ್ತಾರೆ. ಈ ವಿಷಯದಲ್ಲಿ ಬಹುಮಟ್ಟಿನ ಗ್ರಾಮೀಣ ವಿದ್ಯಾರ್ಥಿಗಳು ಹೊರಗುಳಿಯಬಹುದು. ಪಟ್ಟಣ - ನಗರ ಪ್ರದೇಶಗಳಲ್ಲಿನ ಬಹು ಪಾಲು ಯುವಕ - ಯುವತಿಯರು, ಪೋಷಕರು ಸಾಫ್ಟ್‌ವೇರ್-ಅಮೇರಿಕಾ ಡಾಲರ್‌ಗಳ ಕನಸು ಕಾಣಲಾರಂಭಿಸುತ್ತಾರೆ. ಈ ಪ್ರಕ್ರಿಯೆಗೆ ಪೂರಕವಾಗಿ ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯೂ ಸಹ ಅದೇ ರೀತಿಯ ಗ್ರಾಹಕ ಸಂಸ್ಕೃತಿಯನ್ನು ಬೆಳೆಸುತ್ತಿದೆ. ಭಾಷೆ, ನೆಲ, ಸಂಸ್ಕೃತಿ, ಕಲೆ, ಎಲ್ಲವನ್ನು ಪಾಶ್ಚಿಮಾತ್ಯ ದೃಷ್ಟಿಕೋನದಿಂದ ನೋಡುವ ಮಧ್ಯಮ - ಮೇಲ್ವರ್ಗದ ಜನತೆ ತಮ್ಮ ಮಕ್ಕಳನ್ನು ಜಾಗತೀಕರಣದ ಸುಳಿಯಲ್ಲಿ ಸುಲಭವಾಗಿ ಸಿಲುಕಿಸುತ್ತಿದ್ದಾರೆ.**

○ ನಾ. ದಿವಾಕರ

ಯಾವುದೇ ಒಂದು ಉದ್ವೇಗ ಭರಿತ ಸನ್ನಿವೇಶಕ್ಕೆ ಕೂಡಲೇ ಸ್ಪಂದಿಸುವುದು ಮಾನವ ಸಹಜ ಗುಣ. ವಿಶೇಷವಾಗಿ ಭಾರತೀಯರು ಅಂತಹ ಸಂದರ್ಭಗಳನ್ನು ಹೆಚ್ಚಾಗಿ ಬಯಸುತ್ತಾರೆ. ರಾಜ್ಯೋತ್ಸವ, ಊರ ಹಬ್ಬ ಕ್ರಿಕೆಟ್ ಸರಣಿ ಹೀಗೆ ಉದ್ವೇಗ ಪೂರಿತ ಸಂದರ್ಭಗಳಿಗಾಗಿ ಜನತೆ ಹಾತೊರೆಯುತ್ತಿರುತ್ತಾರೆ. ಈ ಪಟ್ಟಿಗೆ ಇತ್ತೀಚಿನ ವರ್ಷಗಳಲ್ಲಿ ಸೇರ್ಪಡೆಯಾಗಿರುವುದು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಎಂಬ ಪೆಡಂಭೂತ.

ಇಂದಿನ ವಿದ್ಯಾರ್ಥಿಗಳು ಬಹುಶಃ 'ಏಳನೆಯ ತರಗತಿಯಿಂದಲೇ ಈ ಸಿಇಟಿ ಕನಸು ಕಾಣಲಾರಂಭಿಸುತ್ತಾರೆ. ಈ ವಿಷಯದಲ್ಲಿ ಬಹುಮಟ್ಟಿನ ಗ್ರಾಮೀಣ ವಿದ್ಯಾರ್ಥಿಗಳು ಹೊರಗುಳಿಯಬಹುದು. ಪಟ್ಟಣ - ನಗರ ಪ್ರದೇಶಗಳಲ್ಲಿನ ಬಹುಪಾಲು ಯುವಕ - ಯುವತಿಯರಿಗೆ ಸಾಫ್ಟ್‌ವೇರ್‌ನ ಪಿಡುಗು ಹರೆಯದಲ್ಲೇ ಅಂಟಿಕೊಂಡುಬಿಡುತ್ತದೆ. ಪೋಷಕರೂ ಸಹ ಈ ಬೆಳವಣಿಗೆಗೆ ಪ್ರತ್ಯಕ್ಷವಾಗಿ ಕಾರಣವಾಗಿರುತ್ತಾರೆ. ಮಗುವನ್ನು ತೊಟ್ಟಿಲಿಗೆ ಹಾಕುವ ಮೊದಲೇ ತಂದೆ-ತಾಯಿಯರು ಸಾಫ್ಟ್‌ವೇರ್ - ಅಮೇರಿಕಾ ಡಾಲರ್‌ಗಳ ಕನಸು ಕಾಣಲಾರಂಭಿಸುತ್ತಾರೆ. ಈ ಪಿಡುಗು ಮಧ್ಯಮವರ್ಗದವರನ್ನು ಆವರಿಸಿರುವುದು ವಿಷಾದನೀಯವಾದರೂ ಸತ್ಯ. ಈ ಪ್ರಕ್ರಿಯೆಗೆ ಪೂರಕವಾಗಿ ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯೂ ಸಹ ಅದೇ ರೀತಿಯ ಗ್ರಾಹಕ ಸಂಸ್ಕೃತಿಯನ್ನು ಬೆಳೆಸುತ್ತಿದೆ. ಭಾಷೆ, ನೆಲ, ಸಂಸ್ಕೃತಿ, ಕಲೆ, ಎಲ್ಲವನ್ನು ಪಾಶ್ಚಿಮಾತ್ಯ ದೃಷ್ಟಿಕೋನದಿಂದ ನೋಡುವ ಮಧ್ಯಮ - ಮೇಲ್ವರ್ಗದ ಜನತೆ ತಮ್ಮ ಮಕ್ಕಳನ್ನು ಜಾಗತೀಕರಣದ ಸುಳಿಯಲ್ಲಿ ಸುಲಭವಾಗಿ ಸಿಲುಕಿಸುತ್ತಿದ್ದಾರೆ.

ಕಳೆದ ೨೫ ವರ್ಷಗಳ ಭಾರತೀಯ ಆಡಳಿತ ವೈಖರಿಯನ್ನು ಅವಲೋಕಿಸಿದರೆ, ಎಲ್ಲಿಯೂ ಶೈಕ್ಷಣಿಕ ಸುಧಾರಣೆಗಳು ಕಂಡು ಬರುವುದಿಲ್ಲ. ಬದಲಾಗಿ ಸಾಕಷ್ಟು ಯೋಜನೆಗಳು, ಘೋಷಣೆಗಳು ಕಂಡುಬರುತ್ತವೆ. ಪ್ರತಿಯೊಂದು ಸರ್ಕಾರವೂ ತನ್ನದೇ ಆದ ಶಿಕ್ಷಣ ನೀತಿಯನ್ನು ಅನುಸರಿಸುತ್ತದೆ. ಈ ನೀತಿಗಳಿಗೆ ಸಿದ್ಧಾಂತದ ಮೆರುಗು ನೀಡಲಾಗುತ್ತದೆ. ರಾಷ್ಟ್ರದ ಶಿಕ್ಷಣ ನೀತಿಯ ರೂಪುರೇಷೆಗಳನ್ನು ನಿರ್ಧರಿಸಬೇಕಾದ ಎನ್‌ಸಿಇಆರ್‌ಟಿಯಂತಹ ಸಂಸ್ಥೆಗಳು ಹೆಚ್ಚಾಗಿ ರಾಜಕಾರಣಗಳಿಂದ ತುಂಬಿದ್ದು ಅಲ್ಲಿ ಶೈಕ್ಷಣಿಕ ವಿಚಾರಗಳಿಗಿಂತಲೂ ಸೈದ್ಧಾಂತಿಕ - ರಾಜಕೀಯ ವಿಚಾರಗಳೇ ಮುಖ್ಯವಾಗಿರುತ್ತವೆ.

ಆಳುವ ಪಕ್ಷಗಳು ತಮ್ಮ ಪಕ್ಷದ ಸಿದ್ಧಾಂತಗಳಿಗನುಗುಣವಾಗಿ ಪಠ್ಯಪುಸ್ತಕಗಳನ್ನು ಬದಲಾಯಿಸುತ್ತಾರೆ. ಇತಿಹಾಸವನ್ನು ಹಲವಾರು ಬಾರಿ ತಿರುಚಲಾಗುತ್ತದೆ. ಈ ಗಲಿಬಿಲಿಯಲ್ಲಿ ಸತ್ಯಾಂಶ ಮರೆಯಾಗಿ, ಭಾವನೆಗಳು ಪ್ರಮುಖ ಸ್ಥಾನ ಪಡೆಯುತ್ತದೆ. ಈ ನಿಟ್ಟಿನಲ್ಲಿ ಎನ್‌ಡಿಎ ಸರ್ಕಾರದ ಆಡಳಿತಾವಧಿಯಲ್ಲಿ ಮುರಳಿ ಮನೋಹರ ಜೋಷಿಯವರು ಒಂದು ಹೊಸ ಪರಂಪರೆಯನ್ನೇ ಆರಂಭಿಸಿದ್ದಾರೆಂದರೆ ತಪ್ಪಾಗಲಾರದು.

ಈ ಎಲ್ಲಾ ಗೋಜಲು ಗೊಂದಲಗಳ ನಡುವೆ ಬಲಿಪಶುವಾಗಿರುವುದು ದೇಶದ ಶಿಕ್ಷಣ ವ್ಯವಸ್ಥೆ ಅದರಲ್ಲೂ ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಮತ್ತು ವೃತ್ತಿಪರ - ಉನ್ನತ ಶಿಕ್ಷಣ ವ್ಯವಸ್ಥೆ. ದೇಶದ ಸಂವಿಧಾನದಲ್ಲಿ ನಿರ್ದೇಶಕರ ತತ್ವಗಳಲ್ಲಿ ೧೪ ವರ್ಷದವರೆಗಿನ ಪ್ರತಿಯೊಬ್ಬ ಮಗುವಿಗೂ ಸರ್ಕಾರ ಉಚಿತ ಶಿಕ್ಷಣ ನೀಡಬೇಕೆಂದು ಹೇಳಲಾಗಿದೆ. ಇದೇ ನಿರ್ದೇಶಕ ತತ್ವಗಳಲ್ಲಿ ಹೇಳಲಾಗಿರುವ ಸಮಾನ ನಾಗರಿಕ ಸಂಹಿತೆ ಮುಂತಾದ ವಿಷಯಗಳ ಬಗ್ಗೆ ದೇಶವ್ಯಾಪಿ ಆಂದೋಲನ ನಡೆಸುವ ಪಕ್ಷ - ಸಂಘಟನೆಗಳು, ಮೂಲಭೂತ ಶಿಕ್ಷಣ ವ್ಯವಸ್ಥೆಯ ಬಗ್ಗೆ ಚಕಾರವೆತ್ತುವುದಿಲ್ಲ. ಇಂದು ದೇಶದ ಶೇ. ೩೦ ರಷ್ಟು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ, ಗ್ರಾಮೀಣ ಪ್ರದೇಶದಲ್ಲಿ ಶೇ ೬೦ ಕ್ಕಿಂತಲೂ ಹೆಚ್ಚು ಮಕ್ಕಳು ೩-೪ನೆಯ ತರಗತಿಯ ನಂತರ ಶಾಲೆಯಿಂದ ಹೊರನಡೆದಿರುತ್ತಾರೆ.

ಬಡತನ, ದಾರಿದ್ರ್ಯ, ಅನಕ್ಷರತೆ, ನಿರುದ್ಯೋಗ, ಮೂಢನಂಬಿಕೆಗಳು ತಾಂಡವವಾಡುತ್ತಿರುವ ಸಮಾಜದಲ್ಲಿ ಈ ಬೆಳವಣಿಗೆ ಅಚ್ಚರಿ

ಮೂಡಿಸಬೇಕಿಲ್ಲ. ಎರಡು ಹೊತ್ತು ಕೂಳಿಗೂ ಗತಿಯಿಲ್ಲದವರು ಶಾಲೆಗೆ ಹೋಗಿ ಅಕ್ಷರ ಕಲಿಯಬೇಕೆಂದು ಅಪೇಕ್ಷಿಸುವುದೂ ಕೇವಲ ಭ್ರಮೆಯಾಗುತ್ತದೆ. ಪ್ರತಿಯೊಂದು ಮಗುವನ್ನೂ ದುಡಿದು ಸಂಪಾದಿಸುವ ಯಂತ್ರಗಳಂತೆ ಪರಿಗಣಿಸುವ ಅವಶ್ಯಕತೆ ಬಡ ಜನತೆಯಲ್ಲಿರುತ್ತದೆ. ವಿದ್ಯೆ ಅಥವಾ ಜ್ಞಾನವು ಜನ್ಮದಿಂದಲೇ ಉದ್ಭವಿಸುತ್ತದೆ ಎಂದು ಪ್ರತಿಪಾದಿಸುವ ಸಮಾಜದಲ್ಲಿ ಬಡಜನತೆಯ ಈ ಪರಿಸ್ಥಿತಿ ಗಣನೆಗೆ ಬರುವುದಿಲ್ಲ.

ಸರ್ವರಿಗೂ ಸಮನಾದ ಶಿಕ್ಷಣ ಎಂದು ಘೋಷಣೆ ಹೊರಡಿಸುವ ಸರ್ಕಾರವೇ, ರಾಜ್ಯ ಮಟ್ಟದಲ್ಲಿ ಒಂದು ಹಂತದ ಪಠ್ಯಕ್ರಮ ಅನುಸರಿಸಿದರೆ ಕೇಂದ್ರೀಯ ಶಾಲೆಗಳಲ್ಲಿ ಸಿಬಿಎಸ್‌ಇ, ಐಸಿಎಸ್‌ಸಿ ಮುಂತಾದ ಪಠ್ಯಕ್ರಮಗಳನ್ನು ಅನುಸರಿಸುತ್ತದೆ. ಕೇವಲ ನಗರ - ದೊಡ್ಡ ಪಟ್ಟಣಗಳಲ್ಲಿ ಕೇಂದ್ರಿತವಾಗಿರುವ ಈ ಕೇಂದ್ರೀಯ ಶಾಲೆಗಳು ಮತ್ತು ವ್ಯಾಲಿ ಶಾಲೆಗಳಲ್ಲಿ ಓದುವ ಮಕ್ಕಳು ಬಹುತೇಕವಾಗಿ ಮೇಲ್ವರ್ಗದಿಂದ ಬಂದವರಾಗಿದ್ದು ಉನ್ನತ ಮಟ್ಟದ ಜ್ಞಾನಾರ್ಜನೆ ಹೊಂದಿರುತ್ತಾರೆ. ಈ ಶಾಲೆಗಳಲ್ಲಿನ ಆಧೋರಚನೆಗಳೂ ಉತ್ತಮವಾಗಿರುತ್ತವೆ. ಮತ್ತು ಶಿಕ್ಷಕರೂ ಪ್ರತಿಭಾವಂತರಾಗಿರುತ್ತಾರೆ. ಆದರೆ ಇನ್ನೊಂದೆಡೆ ಸರ್ಕಾರೀ ಶಾಲೆಗಳಲ್ಲಿ ಇದೇ ಸವಲತ್ತು ಸೌಕರ್ಯಗಳನ್ನು ಒದಗಿಸಲು ಸರ್ಕಾರ ಹಿಂಜರಿಯುತ್ತದೆ. ಸ್ವತಂತ್ರ ಭಾರತಕ್ಕೆ ೫೫ ವರ್ಷಗಳಾದರೂ ಇಂದಿಗೂ ಸರ್ಕಾರೀ ಶಾಲೆಗಳಲ್ಲಿ ಕಪ್ಪು ಹಲಗೆಗಳಿರುವುದಿಲ್ಲ ಪ್ರಯೋಗಾಲಯಗಳಿರುವುದಿಲ್ಲ ಇನ್ನು ಶೌಚಾಲಯ ಮುಂತಾದ ಸೌಕರ್ಯಗಳ ಬಗ್ಗೆ ಹೇಳುವಂತೆಯೇ ಇಲ್ಲ. ಹಲವಾರು ಶಾಲೆಗಳಲ್ಲಿ ಮಕ್ಕಳು ಮರದ ಕೆಳಗೆ ಕೂತು ಪಾಠ ಕೇಳುವ ಸಂಗತಿಗಳೂ ಇದೆ. ಬಹುತೇಕ ಶಾಲೆಗಳಲ್ಲಿ ಒಂದೇ ಕೊಠಡಿಯಲ್ಲಿ ಮೂರು ನಾಲ್ಕು ತರಗತಿಗಳನ್ನು ನಡೆಸುವ ಸಂಗತಿಯೂ ಇದೆ. ಈ ಲಕ್ಷಣಗಳೂ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ ಎಂಬುದಂತೂ ಸ್ಪಷ್ಟವಾಗಿದೆ.

ದೇಶದ ಮೂಲ ಅಡಿಪಾಯವಾಗಬೇಕಾದ ಪ್ರಾಥಮಿಕ ಶಿಕ್ಷಣಕ್ಕೆ ಯಾವುದೇ ಸರ್ಕಾರವೂ ಗಮನಹರಿಸುತ್ತಿಲ್ಲ, ವೈಜ್ಞಾನಿಕ ಶಿಕ್ಷಣ ನೀಡುವ ಬಗ್ಗೆ ಯೋಚಿಸುತ್ತಿಲ್ಲ. ಬದಲಾಗಿ ತಮ್ಮ ರಾಜಕೀಯ ಲಾಭಕ್ಕಾಗಿ ಪಕ್ಷಗಳು ಇತಿಹಾಸವನ್ನು ಕೆದಕುತ್ತಾ ವಿದ್ಯಾರ್ಥಿಗಳ ಮನದಲ್ಲಿ ಗೊಂದಲ ಉಂಟು ಮಾಡುತ್ತಿವೆ. 'ಇರುವುದೆಲ್ಲವ ಬಿಟ್ಟು ಇಲ್ಲದರ ಹಿಂದೆ ನಡೆವುದೇ ಜೀವನ' ಎಂದು ಅಡಿಗರು ಹೇಳುವಂತೆ ೨೧ನೆಯ ಶತಮಾನದ ಆಧುನಿಕತೆಗೆ ಪೂರಕವಾದ ಶಿಕ್ಷಣ ನೀಡದೆ ಸರ್ಕಾರಗಳು ವಿದ್ಯಾರ್ಥಿಗಳನ್ನು ಹಿಮ್ಮುಖವಾಗಿ ಕೊಂಡೊಯ್ಯುತ್ತಿವೆ.

ಪ್ರಾಥಮಿಕ ಶಿಕ್ಷಣದ ಅವಸ್ಥೆ ಹೀಗಾದರೆ ಉನ್ನತ ಶಿಕ್ಷಣದ ಅವಸ್ಥೆ ಇನ್ನೂ ಹದಗೆಟ್ಟಿದೆ ಎಂದರೆ ತಪ್ಪಾಗಲಾರದು. ಇತ್ತೀಚಿನ ವರ್ಷಗಳಲ್ಲಿನ ಪರೀಕ್ಷಾ ಫಲಿತಾಂಶಗಳನ್ನು ಅವಲೋಕಿಸಿದಾಗ ಪ್ರಮುಖವಾಗಿ ಕಂಡುಬರುವ ಸಂಗತಿಯೆಂದರೆ ವಿದ್ಯಾರ್ಥಿಗಳು ಹತ್ತನೇ ತರಗತಿ - ಪಿಯುಸಿ ಪರೀಕ್ಷೆಗಳಲ್ಲಿ ಪಡೆಯುವ ಅಂಕಗಳನ್ನು ೮೦ರ ದಶಕದ ವರೆಗೂ ಶೇ ೮೦ರಷ್ಟು ಅಂಕ ಗಳಿಸುವುದೇ ಒಂದು ಅದ್ಭುತ ಸಾಹಸವಾಗಿತ್ತು. ಆದರೆ ಈಗ ಪ್ರತಿಭಾವಂತರೆನಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಕನಿಷ್ಠ ಶೇ ೯೦ ರಷ್ಟು ಅಂಕಗಳಿಸುವುದು ಅನಿವಾರ್ಯವಾಗಿದೆ. ಹಲವಾರು ಶಾಲಾ ಕಾಲೇಜುಗಳಲ್ಲಿ ಶೇ ೯೦ಕ್ಕಿಂತಲೂ ಕಡಿಮೆ ಅಂಕ ಗಳಿಸದಿದ್ದಲ್ಲಿ ಪ್ರವೇಶವೇ

ಶಿಕ್ಷಣದ ಖಾಸಗೀಕರಣ, ಉನ್ನತ ಶಿಕ್ಷಣದಲ್ಲಿ ವ್ಯಾಪಾರೀಕರಣ ಕಾರ್ಪೊರೇಟ್ ಶಕ್ತಿಗಳ ಕೈವಾಡ, ಇವೆಲ್ಲಾ ಸಾಮ್ರಾಜ್ಯಶಾಹಿ ದೇಶಗಳ ಆದೇಶದ ಮೇರೆಗೆ, ವಿಶ್ವಬ್ಯಾಂಕ್, ವಿಶ್ವ ವಾಣಿಜ್ಯ ಸಂಸ್ಥೆಗಳು ಮಂಡಿಸುವ ನೀತಿಗಳು. ತಮ್ಮ ದೇಶಗಳಲ್ಲಿ, ಅಮೆರಿಕಾ ಯೂರೋಪ್, ಜರ್ಮನಿಗಳಲ್ಲಿ ಸಾರ್ವತ್ರಿಕ ಶಿಕ್ಷಣವನ್ನು ಸರ್ಕಾರವೇ ನಡೆಸುವುದಾದರೂ, ಈ ಸಾಮ್ರಾಜ್ಯಶಾಹಿಗಳು ಭಾರತದಂತಹ ದೇಶಗಳಲ್ಲಿ ಶಿಕ್ಷಣ ಕ್ಷೇತ್ರದ ಸಂಪೂರ್ಣ ಖಾಸಗೀಕರಣ ಬಯಸುತ್ತದೆ. ಏಕೆಂದರೆ ಇಲ್ಲಿನ ಮೆದುಳಿನ ಅವಶ್ಯಕತೆ ಅವರಿಗೆ ಹೆಚ್ಚಾಗಿದೆ. ಹಾಗಾಗಿಯೇ ಕೇಂದ್ರ ರಾಜ್ಯ ಸರ್ಕಾರಗಳು ಆಯವ್ಯಯ ಪತ್ರದಲ್ಲಿ ಶಿಕ್ಷಣಕ್ಕಾಗಿ ಶೇ ೬ಕ್ಕಿಂತಲೂ ಹೆಚ್ಚು ಹಣ ಮೀಸಲಿಡುವುದಿಲ್ಲ. ಕೆಲವೇ ವ್ಯಕ್ತಿಗಳು ನಡೆಸುವ ವಿದ್ಯಾ ಸಂಸ್ಥೆಗಳನ್ನು ಡೀಮಡ್ ವಿಶ್ವವಿದ್ಯಾಲಯಗಳೆಂದು ಸರ್ಕಾರ ಅನುಮತಿ ನೀಡುತ್ತದೆ. ಈ ಬಹುತೇಕರ ಸಂಸ್ಥೆಗಳು ಮಂತ್ರಿಗಳ, ಶಾಸಕರ, ಸಂಸದರ ಅಥವಾ ಉದ್ಯಮಿಗಳ ವ್ಯಾಪಾರಿಗಳ ಹಿಡಿತದಲ್ಲಿರುತ್ತವೆ. ಅಥವಾ ಧಾರ್ಮಿಕ ಸಂಸ್ಥೆಗಳ ಆಡಳಿತದಲ್ಲಿರುತ್ತದೆ.

ಸಿಗುವುದಿಲ್ಲ. ಆದರೆ ಡೊನೇಷನ್ ನೀಡಿದ ಕೂಡಲೇ ಪ್ರತಿಭೆ ಮೌನವಾಗಿ ಹಿಂದೆ ಸರಿಯುತ್ತದೆ.

ಐತಿಹಾಸಿಕವಾಗಿ ನೋಡಿದರೆ ನಳಂದ ವಿಶ್ವವಿದ್ಯಾಲಯ ದಿಂದ ಶಾಂತಿನಿಕೇತನದವರೆಗೆ ಶಿಕ್ಷಣಕ್ಕಾಗಿ ವಿದ್ಯಾ ಸಂಸ್ಥೆಗಳು ಮುಡಿಪಾಗಿರುತ್ತಿದ್ದ ದೇಶದಲ್ಲಿ ಇಂದು ಶಿಕ್ಷಣ ಒಂದು ವ್ಯಾಪಾರಿ ವಸ್ತುವಾಗಿದೆ. ಶಾಲೆಯ - ಕಾಲೇಜಿನ ಶೈಕ್ಷಣಿಕ ಮಟ್ಟ - ಅರ್ಹತೆಗಿಂತಲೂ ಹೆಚ್ಚಾಗಿ ವಿದ್ಯಾಸಂಸ್ಥೆಯ ಪೋಷಕರ ಘನತೆಯನ್ನವಲಂಬಿಸಿ ಡೊನೇಷನ್ ನಿರ್ಧರಿಸಲಾಗುತ್ತದೆ. ಈ ವ್ಯಾಪಾರ ವಹಿವಾಟಿಗೆ ಪ್ರತಿಭೆ - ಶೇ ೯೦ರಷ್ಟು ಅಂಕಗಳು ಇವೆಲ್ಲವೂ ಬೆಳ್ಳಿ ಪರದೆಗಳಾಗಿ ಬಿಡುತ್ತದೆ.

ಈ ಒಂದು ಪ್ರಕ್ರಿಯೆಗೆ ವಿದ್ಯಾರ್ಥಿಗಳೂ ಪೋಷಕರೂ ಬಹುಮಟ್ಟಿಗೆ ಕಾರಣಕರ್ತರಾಗಿದ್ದಾರೆ. ಮಕ್ಕಳು ಎಲ್ಲಾ ಪಠ್ಯವಿಷಯಗಳಲ್ಲೂ ನೂರಕ್ಕೆ ನೂರು ಅಂಕ ಗಳಿಸುವುದು ಪ್ರತಿಯೊಬ್ಬ ತಂದೆ ತಾಯಿಯರ ಹಂಬಲವಾಗಿರುತ್ತದೆ. ಹಾಗಾಗಿಯೇ ೮ನೆಯ ತರಗತಿಯಿಂದಲೆ ಮಕ್ಕಳ ಮೇಲೆ ಅಸಾಧ್ಯವಾದ ಹೊರೆ ಉಂಟಾಗಿರುತ್ತದೆ. ಕಥೆ ಕವನ ಕಾದಂಬರಿ ಅಥವಾ ಯಾವುದೇ ಸಾಹಿತ್ಯ ಓದುವುದಾಗಲೀ, ಕ್ರೀಡೆ - ಕಲೆಗಳಲ್ಲಿ ಪಾಲ್ಗೊಳ್ಳುವುದಾಗಲೀ, ಸಾಮಾಜಿಕ ಸಮಾರಂಭಗಳಲ್ಲಿ ಭಾಗವಹಿಸುವುದಾಗಲೀ ಇಂದಿನ ವಿದ್ಯಾರ್ಥಿಗಳಿಗೆ ಆಸಕ್ತಿಯೇ ಇರುವುದಿಲ್ಲ. ರೋಬೋಟು ಗಳಂತೆ ೮ನೆ ತರಗತಿಯಲ್ಲಿ ಪಠ್ಯಪುಸ್ತಕಗಳಲ್ಲಿ ಮುಳುಗಿದರೆ ಸಿಇಟಿ ಪರೀಕ್ಷೆ ಮುಗಿಯುವವರೆಗೂ ಅವರ ಪ್ರಪಂಚ ಕೇವಲ ಅಷ್ಟಕ್ಕೆ ಮೀಸಲಾಗಿರುತ್ತದೆ.

ಒಂದೆಡೆ ಹೆಚ್ಚು ಅಂಕ ಗಳಿಸುವ ಮೂಲಕ ಪ್ರತಿಭಾವಂತರೆನಿಸಿಕೊಂಡರೂ, ಇನ್ನೊಂದೆಡೆ ಸೃಜನಶೀಲತೆ ನಾಶವಾಗಿರುತ್ತದೆ. ಸಾಂಸ್ಕೃತಿಕ ನೆಲೆಗಳು ನಾಶವಾಗಿರುತ್ತದೆ. ನೈತಿಕ ಮೌಲ್ಯಗಳು ಹಿಮ್ಮೆಟ್ಟಿರುತ್ತವೆ. ಡಾಲರ್ ಕನಸು ಕಾಣುತ್ತಾ ಅಮೆರಿಕದ ಕಲ್ಪನೆಯಲ್ಲಿ ಮುಳುಗಿ, ಸಾಫ್ಟ್‌ವೇರ್ ಕೂಲಿಗಳಾಗಿ ಬಿಡುತ್ತಾರೆ. ಈ ಲಕ್ಷಣಗಳನ್ನು ಸರ್ವರಿಗೂ ಅನ್ವಯಿಸಲಾಗುವುದಿಲ್ಲವಾದರೂ, ಬಹುತೇಕ ನಗರ-ಪಟ್ಟಣವಾಸಿ ಮಧ್ಯಮ ವರ್ಗ ಈ ಪ್ರಕ್ರಿಯೆಗೆ ಬಲಿಯಾಗಿದೆ.

ಸಾಮಾಜಿಕ ದೃಷ್ಟಿಕೋನದಿಂದ ನೋಡಿದಾಗ ಇಲ್ಲಿ ಇತರ ಸಮಸ್ಯೆಗಳನ್ನು ಗುರುತಿಸಬಹುದು. ಭಾರತೀಯ ಮೇಲ್ವರ್ಗದ ಸಮಾಜದಲ್ಲಿ, ಧರ್ಮಾತೀತವಾಗಿ, ವರದಕ್ಷಿಣೆ ಒಂದು ಅಂಟುರೋಗದಂತೆ ಹಬ್ಬುತ್ತಿದೆ. ಹಾಗಾಗಿ ಉನ್ನತ ವ್ಯಾಸಂಗ ಮಾಡುವುದೂ ವರದಕ್ಷಿಣೆ ಅಥವಾ ವರಾನ್ವೇಷಣೆಗೆ ಪರಿಕರಗಳಾಗಿಬಿಡುತ್ತದೆ. ಗಂಡು ಮಕ್ಕಳಿದ್ದರೆ ವರದಕ್ಷಿಣೆ ಹೆಚ್ಚು ಬರುತ್ತೆ ಎಂಬ ಆಶಯ ಪೋಷಕರಿಗಿದ್ದರೆ, ಹೆಣ್ಣು ಮಕ್ಕಳ ಪೋಷಕರಿಗೆ ವರಾನ್ವೇಷಣೆಗೆ ಸುಲಭವಾಗುವುದೆಂಬ ಆಸೆಯಿರುತ್ತದೆ. ಆಂಧ್ರ, ತಮಿಳುನಾಡು, ಕೆಲವು ಉತ್ತರ ರಾಜ್ಯಗಳಲ್ಲಿ ಉನ್ನತ ವ್ಯಾಸಂಗದ ಪ್ರತಿಯೊಂದು ಪದವಿಗೂ ಒಂದು ವರದಕ್ಷಿಣೆಯ ದರ ನಿಗದಿಪಡಿಸಲಾಗಿದೆ. ಕರ್ನಾಟಕದಲ್ಲೂ ಈ ಪಿಡುಗು ಬಹಳಷ್ಟು ವ್ಯಾಪಿಸಿದೆ.

ಈ ಬೆಳವಣಿಗೆಗೆ ಕಾರಣ ನಮ್ಮ ದೇಶದ ಶಿಕ್ಷಣ ವ್ಯವಸ್ಥೆ ನಿರ್ಮಿಸುತ್ತಿರುವ ನೈತಿಕ ಮೌಲ್ಯಗಳು, ಕೆಲವೊಮ್ಮೆ ಈ ಮೌಲ್ಯಗಳೇ ದೇಶದ ಭೌತಿಕ ಅಭಿವೃದ್ಧಿಗೆ ಅಡ್ಡಗೋಡೆ ಗಳಾಗಿಬಿಡುತ್ತವೆ. ಡಾಲರ್ ಪ್ರೇಮದಿಂದ ಇರುವ ಮಕ್ಕಳನ್ನೆಲ್ಲಾ ವಿದೇಶಕ್ಕೆ ಕಳಿಸಿ ಇಲ್ಲಿ ಕೊರಗುವ ಪೋಷಕರು ಸಾಕಷ್ಟಿದ್ದಾರೆ. ಸಾಮ್ರಾಜ್ಯಶಾಹಿ ದೇಶಗಳು ತೃತೀಯ ವಿಶ್ವದ ದೇಶಗಳಿಂದ ಈ ರೀತಿಯ ಬೆಳವಣಿಗೆಯನ್ನೇ ಬಯಸುತ್ತದೆ.

ಶಿಕ್ಷಣದ ಖಾಸಗೀಕರಣ, ಉನ್ನತ ಶಿಕ್ಷಣದಲ್ಲಿ ವ್ಯಾಪಾರೀಕರಣ ಕಾರ್ಪೊರೇಟ್ ಶಕ್ತಿಗಳ ಕೈವಾಡ, ಇವೆಲ್ಲಾ ಸಾಮ್ರಾಜ್ಯಶಾಹಿ ದೇಶಗಳ ಆದೇಶದ ಮೇರೆಗೆ ವಿಶ್ವಬ್ಯಾಂಕ್, ವಿಶ್ವ ವಾಣಿಜ್ಯ ಸಂಸ್ಥೆಗಳು ಮಂಡಿಸುವ ನೀತಿಗಳು, ತಮ್ಮ ದೇಶಗಳಲ್ಲಿ, ಅಮೆರಿಕಾ ಯೂರೋಪ್, ಜರ್ಮನಿಗಳಲ್ಲಿ ಸಾರ್ವತ್ರಿಕ ಶಿಕ್ಷಣವನ್ನು ಸರ್ಕಾರವೇ ನಡೆಸುವುದಾದರೂ, ಈ ಸಾಮ್ರಾಜ್ಯಶಾಹಿಗಳು ಭಾರತದಂತಹ ದೇಶಗಳಲ್ಲಿ ಶಿಕ್ಷಣ ಕ್ಷೇತ್ರದ ಸಂಪೂರ್ಣ ಖಾಸಗೀಕರಣ ಬಯಸುತ್ತದೆ. ಏಕೆಂದರೆ ಇಲ್ಲಿನ ಮೆದುಳಿನ ಅವಶ್ಯಕತೆ ಅವರಿಗೆ ಹೆಚ್ಚಾಗಿದೆ. ಹಾಗಾಗಿಯೇ ಕೇಂದ್ರ ರಾಜ್ಯ ಸರ್ಕಾರಗಳು ಆಯವ್ಯಯ ಪತ್ರದಲ್ಲಿ ಶಿಕ್ಷಣಕ್ಕಾಗಿ ಶೇ ೬ಕ್ಕಿಂತಲೂ ಹೆಚ್ಚು ಹಣ ಮೀಸಲಿಡುವುದಿಲ್ಲ.

ಕೆಲವೇ ವ್ಯಕ್ತಿಗಳು ನಡೆಸುವ ವಿದ್ಯಾ ಸಂಸ್ಥೆಗಳನ್ನು ಡೀಮಡ್ ವಿಶ್ವವಿದ್ಯಾಲಯಗಳೆಂದು ಸರ್ಕಾರ ಅನುಮತಿ ನೀಡುತ್ತದೆ. ಈ ಬಹುತೇಕರ ಸಂಸ್ಥೆಗಳು ಮಂತ್ರಿಗಳ, ಶಾಸಕರ, ಸಂಸದರ ಅಥವಾ ಉದ್ಯಮಿಗಳ ವ್ಯಾಪಾರಿಗಳ ಹಿಡಿತ ದಲ್ಲಿರುತ್ತವೆ. ಅಥವಾ ಧಾರ್ಮಿಕ ಸಂಸ್ಥೆಗಳ ಆಡಳಿತದಲ್ಲಿ ರುತ್ತದೆ. ಇಂಜಿನಿಯರಿಂಗ್ - ಮೆಡಿಕಲ್ - ಡೆಂಟಲ್ - ನರ್ಸಿಂಗ್ - ಫಾರ್ಮಸಿ ಕಾಲೇಜುಗಳು ಈ ಪಟ್ಟಭದ್ರ ಹಿತಾಸಕ್ತಿಗಳ ಸ್ಥಿರಾಸ್ತಿಗಳಾಗಿಬಿಟ್ಟಿವೆ. ಡೊನೇಷನ್ ಆಗಲೀ, ಕ್ಯಾಪಿಟೇಷನ್ ಶುಲ್ಕವಾಗಲೀ ವಿದ್ಯಾ ಶುಲ್ಕವಾಗಲೀ ಇವರು

ನಿರ್ಧರಿಸಿದ್ದೆ ಅಂತಿಮ ಎನ್ನುವ ರೀತಿ ಈ ಸಂಸ್ಥೆಗಳು ನಡೆದುಕೊಳ್ಳುತ್ತವೆ. ತಮ್ಮ ಈ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲೆಂದೇ ಕರ್ನಾಟಕದಲ್ಲಿ ಕಾಮೆಡ್ ಕೆ ಎಂಬ ಸಂಘಟನೆ ಹುಟ್ಟಿಕೊಂಡಿದೆ.

ಮೆಡಿಕಲ್ ಇಂಜಿನಿಯರಿಂಗ್ ಡೆಂಟಲ್ ಕಾಲೇಜುಗಳ ಒಕ್ಕೂಟ ಕಾಮೆಡ್ ಕೆ ಒಂದು ರೀತಿಯಲ್ಲಿ ಕಾಮೆಟ್ (ಧೂಮಕೇತು) ಆಗಿಬಿಟ್ಟಿದೆ. ಈ ಒಕ್ಕೂಟವನ್ನು ಪ್ರತಿನಿಧಿಸುವ ಜನನಾಯಕರುಗಳು ಸರ್ಕಾರವನ್ನು ಮಾತ್ರವಲ್ಲ, ನ್ಯಾಯಾಲಯಗಳನ್ನು ತಮ್ಮ ಹಿಡಿತದಲ್ಲಿರಿಸಿಕೊಂಡಿದ್ದಾರೆಂದರೆ ತಪ್ಪಾಗಲಾರದು. ಕಳೆದ ವರ್ಷ ದೇಶದ ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ಪರೋಕ್ಷವಾಗಿ ಬೆಂಬಲಿಸಿತ್ತು. ಹಣಬಲ ಇದ್ದವರು, ಶುಲ್ಕ ಪಾವತಿಸುವ ಸಾಮರ್ಥ್ಯವಿದ್ದವರು ಕ್ಯಾಪಿಟೇಷನ್ ನೀಡಿ ಓದುವುದರಲ್ಲಿ ತಪ್ಪೇನಿಲ್ಲ ಎನ್ನುವ ರೀತಿಯಲ್ಲಿ ನ್ಯಾಯಾಲಯ ತೀರ್ಪು ನೀಡಿತ್ತು. ಆದರೆ ವಾಸ್ತವಿಕವಾಗಿ ಹಣಬಲವಿದ್ದವರು ಮಾತ್ರ ವೃತ್ತಿಪರ ಶಿಕ್ಷಣ ಮಾಡಬಹುದಾದ ಪರಿಸ್ಥಿತಿ ಇಂದು ಎದುರಾಗಿದೆ.

ವೃತ್ತಿಪರ ಶಿಕ್ಷಣದ ಸೀಟು ಹಂಚಿಕೆಯಲ್ಲೂ ಸಹ ತಮ್ಮ ಖಾಸಗಿ ಸಂಸ್ಥೆಗಳಿಗೆ ಹೆಚ್ಚು ಪಾಲು ನೀಡಬೇಕೆಂದು ಆಗ್ರಹಿಸುತ್ತಿರುವ ಕಾಮೆಡ್ ಕೆ, ನ್ಯಾಯಾಲಯವು ಮಂಡಿಸಿರುವ ಇಂಜಿನಿಯರಿಂಗ್ ಕ್ಷೇತ್ರದ ೭೫ : ೨೫ ಅನುಪಾತ ಮತ್ತು ಮೆಡಿಕಲ್ ಕ್ಷೇತ್ರದ ೬೦:೪೦ ಅನುಪಾತವನ್ನು ವಿರೋಧಿಸುತ್ತಿದೆ. ತಮ್ಮ ವಿದ್ಯಾಸಂಸ್ಥೆಗಳಲ್ಲಿ ವಿದ್ಯಾರ್ಜನೆಗೆ ಅವಶ್ಯವಾದ ಪರಿಕರಗಳನ್ನು ಅಧೋರಚನೆಗಳನ್ನು ಒದಗಿಸದಿದ್ದರೂ, ಹೆಚ್ಚು ಶುಲ್ಕ ವಿಧಿಸುವಲ್ಲಿ ಕಾಮೆಡ್ ಕೆ ಸದಸ್ಯರು ಮುಂದಾಗಿರುತಾರೆ. ಇವರ ತಾಳಕ್ಕೆ ತಕ್ಕಂತೆ ಸರ್ಕಾರವೂ ಕುಣಿಯುತ್ತಿದೆ. ಕಾಮೆಡ್ ಕೆಯೊಂದಿಗೆ ಚರ್ಚೆ ನಡೆಸುತ್ತೇವೆ ಎಂದು ಹೇಳುವ ಸರ್ಕಾರಕ್ಕೆ ಅಲ್ಲಿರುವವರೆಲ್ಲರೂ ಇದೇ ಸರ್ಕಾರದಲ್ಲಿ ಶಾಸಕರೂ, ಮಂತ್ರಿಗಳೋ ಆಗಿರುವರೆಂಬ ಸತ್ಯ ತಿಳಿದಿರುವುದಿಲ್ಲವೇ ? ಅಥವಾ ಜನತೆಗೆ ಈ ಅಂಶ ತಿಳಿದಿಲ್ಲ ಎಂಬ ಭ್ರಮೆಯಲ್ಲಿ ಸರ್ಕಾರ ಇರುವುದೋ ? ಇವರ ಜಗಳ ವಿವಾದದಿಂದ

**ಕಳೆದ ಐದಾರು ವರ್ಷಗಳ ಅವಧಿಯಲ್ಲಿ ರೈತರ ಆತ್ಮಹತ್ಯೆಗೆ ಹೆಸರಾಗಿದ್ದ ಕರ್ನಾಟಕ ಈಗ ವಿದ್ಯಾರ್ಥಿಗಳ ಆತ್ಮಹತ್ಯೆಗೆ ಪ್ರಸಿದ್ಧಿಯಾಗಿದೆ. ಸಿಇಟಿ ಪ್ರವೇಶ ಪರೀಕ್ಷೆ ಮುಗಿದ ನಂತರ ಎರಡು ಮೂರು ತಿಂಗಳ ಅವಧಿಯಲ್ಲಿ ೮ ಮಂದಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿದ್ಯಾರ್ಥಿಗಳ ಈ ಕ್ರಮದ ಸತ್ಯಾ ಸತ್ಯತೆಗಳು ಸರಿ - ತಪ್ಪುಗಳು ಏನೇ ಇರಲಿ, ಈ ದುರಂತಕ್ಕೆ ಕಾರಣ ಕಾಮೆಡ್ ಕೆ ಮತ್ತು ರಾಜ್ಯ ಸರ್ಕಾರ. ಈ ಮೊದಲೇ ಹೇಳಿದಂತೆ ವೃತ್ತಿಪರ ಶಿಕ್ಷಣಕ್ಕೆ ಜೋತು ಬಿದ್ದಿರುವ ಪೋಷಕರೂ ವಿದ್ಯಾರ್ಥಿಗಳ ಈ ದುರಂತಗಳಿಗೆ ಕಾರಣೀಭೂತರಾಗುತ್ತಾರೆ.**

ಇಂದು ಅನಿಶ್ಚಿತತೆ ಎದುರಿಸುತ್ತಿರುವ ವಿದ್ಯಾರ್ಥಿಗಳ ಬವಣೆಯನ್ನು ಕೇಳುವವರೇ ಇಲ್ಲವಾಗಿದ್ದಾರೆ.

ಕಳೆದ ಐದಾರು ವರ್ಷಗಳ ಅವಧಿಯಲ್ಲಿ ರೈತರ ಆತ್ಮಹತ್ಯೆಗೆ ಹೆಸರಾಗಿದ್ದ ಕರ್ನಾಟಕ ಈಗ ವಿದ್ಯಾರ್ಥಿಗಳ ಆತ್ಮಹತ್ಯೆಗೆ ಪ್ರಸಿದ್ಧಿಯಾಗಿದೆ. ಸಿಇಟಿ ಪ್ರವೇಶ ಪರೀಕ್ಷೆ ಮುಗಿದ ನಂತರ ಎರಡು ಮೂರು ತಿಂಗಳ ಅವಧಿಯಲ್ಲಿ ೮ ಮಂದಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿದ್ಯಾರ್ಥಿಗಳ ಈ ಕ್ರಮದ ಸತ್ಯಾ ಸತ್ಯತೆಗಳು ಸರಿ - ತಪ್ಪುಗಳು ಏನೇ ಇರಲಿ, ಈ ದುರಂತಕ್ಕೆ ಕಾರಣ ಕಾಮೆಡ್ ಕೆ ಮತ್ತು ರಾಜ್ಯ ಸರ್ಕಾರ. ಹೊರ ರಾಜ್ಯಗಳಿಂದ ಬಂದ ವಿದ್ಯಾರ್ಥಿಗಳೂ, ಕರ್ನಾಟಕದಲ್ಲೇ ದೂರದ ಜಿಲ್ಲೆಗಳಿಂದ ಬಂದ ವಿದ್ಯಾರ್ಥಿಗಳು ತಿಂಗಳುಗಟ್ಟಲೆ ಬೆಂಗಳೂರಿನಲ್ಲಿ ತಂಗಿ, ಸಿಇಟಿಗಾಗಿ ಬಾಗಿಲು ಕಾಯುವುದು ಊಹಿಸಲಸಾಧ್ಯವಾದ ಮಾತು. ಈ ಮೊದಲೇ ಹೇಳಿದಂತೆ ವೃತ್ತಿಪರ ಶಿಕ್ಷಣಕ್ಕೆ ಜೋತು ಬಿದ್ದಿರುವ ಪೋಷಕರೂ ವಿದ್ಯಾರ್ಥಿಗಳ ಈ ದುರಂತಗಳಿಗೆ ಕಾರಣೀಭೂತರಾಗುತ್ತಾರೆ.

ಶಿಕ್ಷಣ ಕ್ಷೇತ್ರದಲ್ಲಿ ಮೆಡಿಕಲ್ ಇಂಜಿನಿಯರಿಂಗ್ ಡೆಂಟಲ್ ಹೊರತಾಗಿ ಬೇರೆ ಕ್ಷೇತ್ರಗಳೇ ಇಲ್ಲ ಎಂಬ ರೀತಿಯಲ್ಲಿ ವರ್ತಿಸುವ ಈ ಪೋಷಕರಿಗೆ ತಮ್ಮ ಮಕ್ಕಳ ಜ್ಞಾನಾರ್ಜನೆಗಿಂತಲೂ ಧನಾರ್ಜನೆ ಮುಖ್ಯ ಉದ್ದೇಶವಾಗಿರುತ್ತದೆ. ನನ್ನ ಮಗ/ಮಗಳು ಅಮೇರಿಕಾದಲ್ಲಿದ್ದಾರೆ ಎಂದು ಹೇಳಿಕೊಳ್ಳುವುದೇ ಸಾಮಾಜಿಕ ಘನತೆಯ ಸಂಕೇತವಾಗಿದೆ. ಮೊಬೈಲ್ ಫೋನುಗಳಂತೆ ಬಿಇ, ಎಂಬಿಬಿಎಸ್, ಸಾಫ್ಟ್‌ವೇರ್‌ಗಳೂ ಸಹ ಆಧುನಿಕ ಸಮಾಜದ ಘನತೆಯ ಸಾಧನಗಳಾಗಿವೆ. ಕೆಲವೊಮ್ಮೆ ಹಲವಾರು ಸಂದರ್ಭಗಳಲ್ಲಿ ಮಕ್ಕಳು ತಮ್ಮ ವೈಯಕ್ತಿಕ ಆಸಕ್ತಿಗಳನ್ನು ಹತ್ತಿಕ್ಕಿ ಪೋಷಕರ ಬಲವಂತದಿಂದ ವೃತ್ತಿಪರ ಶಿಕ್ಷಣ ಕೊಡುವುದುಂಟು. ಹದಿಹರೆಯದವರ ವಯಸ್ಸಿನಲ್ಲಿ ಯಾವುದೇ ಒಂದು ನಿರ್ದಿಷ್ಟ ಗುರಿ ಅಥವಾ ಧ್ಯೇಯದ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದಾಗ, ಅದು ಈಡೇರದಿದ್ದಲ್ಲಿ ಆತ್ಮಹತ್ಯೆ ಸುಗಮವಾದ ಮಾರ್ಗವಾಗುತ್ತದೆ. ಬಹುಶಃ ಸಮಾಜ ಶಾಸ್ತ್ರಜ್ಞರು ಈ ಅಂಶವನ್ನು ಕುರಿತಂತೆ ಹೆಚ್ಚು ಬೆಳಕು ಚೆಲ್ಲಬಹುದೆಂದು ತೋರುತ್ತದೆ.

ಈ ಎಲ್ಲಾ ದುರಂತಗಳಿಗೆ ಕಾರಣವೆಂದರೆ ಜಾಗತೀಕರಣ ಪ್ರಕ್ರಿಯೆ. ಶಿಕ್ಷಣದ ಖಾಸಗೀಕರಣ ಉನ್ನತ ಶಿಕ್ಷಣದ ವ್ಯಾಪಾರೀಕರಣದಿಂದ ದೇಶದಲ್ಲಿ ಒಂದೆಡೆ ಪ್ರತಿಭೆ, ಸೃಜನಶೀಲತೆ ನಾಶವಾಗುತ್ತಿದ್ದರೆ ಇನ್ನೊಂದೆಡೆ ಪ್ರತಿಭಾ ಪಲಾಯನವೂ ಹೆಚ್ಚಾಗುತ್ತಿದೆ. ಇಂದು ಅಮೇರಿಕಾದಲ್ಲಿ ಇರುವ ಪ್ರತಿಭಾವಂತ ಸಾಫ್ಟ್‌ವೇರ್ ತಂತ್ರಜ್ಞರಲ್ಲಿ ಶೇ ೬೦ಕ್ಕಿಂತಲೂ ಹೆಚ್ಚು ಭಾರತೀಯರೇ ಇದ್ದಾರೆ. ಈ ಭಾರತೀ ಪುತ್ರರಿಗೆ ಪುತ್ರಿಯರಿಗೆ ದೇಶಾಭಿಮಾನದ ಹೊನಲು ಉಕ್ಕಿ ಹರಿಯುವುದಾದರೂ, ಇಲ್ಲಿನ ಸರ್ಕಾರಿ ಸೌಲಭ್ಯಗಳಿಂದ ಓದಿ ವಿದ್ಯಾವಂತರಾಗಿ ವಿದ್ಯಾಭ್ಯಾಸ ಮುಗಿದ ಕೂಡಲೇ ಸಾಗರದಾಚೆ ಹಾರಿಬಿಡುತ್ತಾರೆ. ಎಲ್ಲಾ ಡಾಲರ್‌ಗಾಗಿ ಎಂದು ಹೇಳಬೇಕಾಗಿಲ್ಲ.

ಭಾರತದಲ್ಲಿ ಪ್ರತಿಭೆಗೆ ಅವಕಾಶವಿಲ್ಲ ಎನ್ನುವುದು ಒಂದು ಕುಂಟು ನೆಪವಾಗಿಬಿಡುತ್ತದೆ. ಪ್ರತಿಭೆ ಅವಕಾಶಗಳಿಗಿಂತಲೂ ಆದಾಯ ಮುಖ್ಯ ಎನ್ನುವ ಅಂಶ ಅಗೋಚರವಾಗಿ ಕಾರ್ಯನಿರ್ವಹಿಸುತ್ತದೆ. ಈ ಬೆಳವಣಿಗೆಗಳ ಪರಿಣಾಮವಾಗಿ ಕನಿಷ್ಠ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಉನ್ನತ ವ್ಯಾಸಂಗದ ಹಲವಾರು ಕ್ಷೇತ್ರಗಳಲ್ಲಿ ಅಧ್ಯಾಪಕರೆ ಇಲ್ಲವಾಗಿದ್ದಾರೆ. ಗಣಿತ, ವಿಜ್ಞಾನ, ಭೌತ ವಿಜ್ಞಾನ ಮುಂತಾದ ವಿಷಯಗಳಿಗೆ ಅಧ್ಯಾಪಕರ ಕೊರತೆ ಎದ್ದು ಕಾಣುತ್ತಿದೆ. ಎಂಎಸ್‌ಸಿ, ಎಂ ಕಾಂ ಮ್ಯಾನೇಜ್‌ಮೆಂಟ್ ಕೋರ್ಸುಗಳನ್ನು ಓದುವವರ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿದೆ. ರಾಷ್ಟ್ರಮಟ್ಟದಲ್ಲೂ ಇದೇ ಪ್ರಕ್ರಿಯೆ ಕಾಣಬಹುದಾಗಿದೆ.

೬೦ ರ ದಶಕದ ನಂತರ ಭಾರತದಲ್ಲಿ ಅಂತರರಾಷ್ಟ್ರೀಯ ಮಟ್ಟದ ವಿಜ್ಞಾನಿಗಳಾಗಲೀ, ಗಣಿತ ತಜ್ಞರಾಗಲೀ ಉಗಮವಾಗಿಲ್ಲ ಎಂಬ ಅಂಶ ಇಲ್ಲಿ ಗಮನಿಸಬಹುದು. ಸಿ.ವಿ. ರಾಮನ್, ರಾಮಾನುಜಂ, ಮಹಾಲಾನಾಬಿಸ್‌ರಂತಹ ವಿಶ್ವವಿಖ್ಯಾತರನ್ನು ಹೊಂದಿದ್ದ ದೇಶ ಇಂದು ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಸರಿಸುವಂತಹ ವ್ಯಕ್ತಿಗಳನ್ನೇ ಹೊಂದಿಲ್ಲವೆಂದಲ್ಲಿ ಅವರ ಹಿಂದೆ ಶಿಕ್ಷಣದ ಖಾಸಗೀಕರಣ ಪ್ರಕ್ರಿಯೆ ಸ್ಪಷ್ಟವಾಗಿ ಕಂಡುಬರುತ್ತದೆ. ಪಠ್ಯ ಪುಸ್ತಕದಲ್ಲಿರುವುದನ್ನೇ ಪರೀಕ್ಷೆಯಲ್ಲಿ ಹಾಳೆಯ ಮೇಲೆ ಭಟ್ಟಿ ಇಳಿಸಿ ಅಂಕಗಳಿಸುವುದೇ ಪ್ರತಿಭೆಯ ಸಂಕೇತವಾಗಿರುವುದರಿಂದ ಆಲೋಚನಾ ಶಕ್ತಿಯನ್ನು ಬಯಸುವ ಕ್ಷೇತ್ರದಲ್ಲಿ ನಮ್ಮ ದೇಶದ ಸಾಧನೆ ಹಿಂದೆ ಸಾಗುತ್ತಿದೆ.

ಸಾಫ್ಟ್‌ವೇರ್ ಕಡಲಲ್ಲಿ ಮುಳುಗಿರುವ ಯುವ ಜನತೆ, ಸೃಜನಶೀಲತೆ, ಕ್ರಿಯಾಶೀಲತೆ, ಯೋಚನಾ ಶಕ್ತಿಯನ್ನು ಕಳೆದುಕೊಂಡು ಕೂಪಮಂಡೂಕಗಳಾಗುತ್ತಿದ್ದಾರೆ. ಸಿಇಟಿ, ಕಾಮೆಡ್ ಕೆ, ಸಾಫ್ಟ್‌ವೇರ್‌ಗಳು ಒತ್ತಟ್ಟಿಗಿರಲಿ, ಈ ಬೆಳವಣಿಗೆಗಳಿಂದ ನಷ್ಟವಾಗುತ್ತಿರುವುದು ದೇಶದ ಯುವ ಶಕ್ತಿಗೆ ಮತ್ತು ಭವಿಷ್ಯಕ್ಕೆ ಎಂದು ಸ್ಪಷ್ಟವಾಗಿ ಹೇಳಬಹುದು. ದೇಶದ ಭವಿಷ್ಯವನ್ನು ರಕ್ಷಿಸಬೇಕಾದ ಆಳುವ ವರ್ಗಗಳೇ ಭವಿಷ್ಯಕ್ಕೆ ಮಾರಕವಾಗುತ್ತಿರುವುದು ದುರದೃಷ್ಟಕರ. □

---

೧

ಲಕ್ಷ್ಮಿಯ ಪೂಜಿಸಿ ಧನವ ಸಂಪಾದಿಸುವೆನೆಂಬರು
ಗಣಪತಿಯ ಪ್ರಾರ್ಥಿಸಿ ವಿಘ್ನವ ನಿವಾರಿಸುವೆನೆಂಬರು
ಸರಸ್ವತಿಯ ಧ್ಯಾನಿಸಿ ಜ್ಞಾನವ ಪಡೆವೆನೆಂಬರು
ಮರಳ ಹಿಂಡಿ ಎಣ್ಣೆಯ ತೆಗೆವೆನೆಂಬ
ಮೂಢರ ಕಂಡು ವ್ಯಥಿತನಾದೆನಯ್ಯ
ಬಸವಪ್ರಿಯ ಮುರುಘರಾಜೇಂದ್ರ ಪ್ರಭುವೆ
ಧನ ಸಂಪಾದನೆ ಅಧ್ಯಯನದಿಂದಲ್ಲದೆ ಕರಗತವಾಗದು
ವಿಘ್ನ ನಿವಾರಣೆ ಎಚ್ಚರದಿಂದಲ್ಲದೆ ಆಗದು ಕಾಣಾ !

೨

ರಾಕ್ಷಸರು, ಭಕ್ಷಕರು ಬೇರಿಲ್ಲ ಕಾಣಿರಣ್ಣಾ
ಮದ್ಯಪಾನವೆ ರಾಕ್ಷಸ, ಧೂಮಪಾನವೆ ಭಕ್ಷಕ
ಭೂತ ಪ್ರೇತಗಳು ಬೇರಿಲ್ಲ ಕಾಣಿರಣ್ಣಾ
ವರದಕ್ಷಿಣೆಯೆ ಭೂತ, ಜೂಜಾಟವೇ ಪ್ರೇತ
ಬಸವಪ್ರಿಯ ಮುರುಘರಾಜೇಂದ್ರ ಪ್ರಭುವೆ
ವಿಕಾಸವಿದ್ದಲ್ಲಿ ಸ್ವರ್ಗ, ವಿಕಾರವಿದ್ದಲ್ಲಿ ನರಕ

○ ಶಿವಮೂರ್ತಿ ಶರಣರು

# ವಚನಕಾರರೇಕೆ ದೇವಾಲಯ ವಿರೋಧಿಗಳು ?

## ಒಳಗನ್ನೋಟ

ದೇವಾಲಯ ಪ್ರವೇಶದಂಥ ಭೌತಿಕ ಕ್ರಮಗಳಿಗಿಂತ ದೇವಾಲಯ ನಿರಾಕರಣೆಯಂತಹ ವೈಚಾರಿಕ ಕ್ರಮಗಳು ಅರ್ಥಪೂರ್ಣ ಹಾಗೂ ಕಾರ್ಯ ಸಾಧ್ಯ ಎಂಬುದನ್ನು ಶರಣರು ಗ್ರಹಿಸಿದ್ದರು. ಹಾಗೂ ಯಾವತ್ತೂ ಸರಳತೆಯನ್ನು ಒಪ್ಪದೆ ವೈಭವ, ಅದ್ದೂರಿತನವನ್ನು ಮೈಗೂಡಿಸಿಕೊಂಡ ದೇವಾಲಯಗಳಿಗೆ ಅದರಿಂದ ಹೊರಬರುವುದು ಕೂಡಾ ಅಸಾಧ್ಯವಾಗಿತ್ತು. ಅಂತೆಯೇ ಯಾವಾಗ ಅವನ್ನು ಸರಿಪಡಿಸುವುದು ಅಸಾಧ್ಯದ ಸಂಗತಿಯಾಗಿ ತೋರಿತೋ ಆಗ ಅದನ್ನು ಧಿಕ್ಕರಿಸುವುದೇ ಉಚಿತ ಮಾರ್ಗವೆಂದು ಶರಣರಿಗೆ ತೋರಿರಬೇಕು. ಅಂತೆಯೇ ಅವರು ದೇವಾಲಯವನ್ನು ಧಿಕ್ಕರಿಸಿದರು; ಅಲ್ಲಿನ ದೇವರನ್ನಷ್ಟೇ ಸ್ವೀಕರಿಸಿದರು.

○ ಡಾ॥ ಬಿ. ಶರಣಪ್ಪ ಸತ್ಯಂಪೇಟೆ

ವಚನಕಾರರು ಅಪೂರ್ವ ಕನಸುಗಾರರು. ಆ ಕನಸುಗಾರಿಕೆಯೇ ಹನ್ನೆರಡನೇ ಶತಮಾನಕ್ಕೊಂದು ಮನ್ವಂತರದ ಪಟ್ಟವನ್ನು ದಕ್ಕಿಸಿಕೊಟ್ಟಿತು. ಕಾಲ ಯಾವತ್ತೂ ಹಿಮ್ಮುಖವಾಗಿ ಸಾಗುವುದಿಲ್ಲ; ಅದು ಊರ್ಧ್ವಮುಖಿಯಾಗಿ ಇಲ್ಲವೆ ಮೇಲ್ಮುಖಿಯಾಗಿ ಸಾಗುತ್ತಿರುತ್ತದೆ. ಕನಸುಳ್ಳವರು ಮಾತ್ರ ಹೊಸತನದ ಹುಡುಕಾಟಕ್ಕೆ, ಹೊಸ ಅನ್ವೇಷಣೆಗೆ ತಹತಹಿಸುತ್ತಿರುತ್ತಾರೆ. ಅಂತೆಯೇ ಕಾಲ ಸಾಮಾಜಿಕ ಸಂಚಲನೆಯನ್ನು ಇಂಥ ಕನಸುಗಾರರಿಂದ ಸಾಧ್ಯವಾಗಿಸಿಕೊಳ್ಳುತ್ತದೆ. ಸಂಪ್ರದಾಯಶೀಲ ಸಮಾಜವೊಂದು ಇದನ್ನು ಪವಾಡವೆಂದೋ ಕಾಲನ ಮಹಿಮೆಯೆಂದೋ ಬಗೆದು ತನ್ನ ಜಡಮನಸ್ಸುಗಳನ್ನು ಸ್ವಲ್ಪ ಹದಗೊಳಿಸಿಕೊಳ್ಳಲು ಹವಣಿಸುತ್ತದೆ. ಹನ್ನೆರಡನೇ ಶತಮಾನದಲ್ಲಿ ಆದದ್ದು ಇದೇ.

ಹಾಗೆ ನೋಡಿದರೆ ವಚನಕಾರರದು ಪವಾಡ ಸದೃಶ ಬದುಕೇ ಹೌದು. ಯಾಕೆಂದರೆ ದೇವರು-ಧರ್ಮಗಳ ವಿಷಯದಲ್ಲಿ ಯಜಮಾನ ಸಂಸ್ಕೃತಿಯ ಮೌಲ್ಯಗಳನ್ನು ಪ್ರಶ್ನಿಸುವುದಂತಿರಲಿ. ಆ ಕುರಿತು ಮಾತಾಡುವುದೇ ಅಪರಾಧ ; ಹಾಗೆ ಆಲೋಚಿಸುವುದೇ ಅನಾಚಾರ. ಇದು ಆ ಕಾಲದ ಸಮಾಜೋಧಾರ್ಮಿಕ ಪರಿಸ್ಥಿತಿ. ಇಂಥ ಜಡಸಂಸ್ಕೃತಿಯ ಸಮಾಜವೊಂದರಲ್ಲಿ ಹೊಸ ಆಲೋಚನೆಗಳನ್ನು ಅರುಹುವುದು ಸಾಮಾನ್ಯ ಸಂಗತಿಯೇನಲ್ಲ. ಅದು ನಿಜಕ್ಕೂ ಒಂದು ಅಗ್ನಿದಿವ್ಯವೇ ಅಹುದು. ಅದನ್ನು ಗೆದ್ದು ಬಂದವರು ಶರಣರು.

ಧರ್ಮ- ಯಾವ ಕಾಲಕ್ಕೂ - ಸಾಮಾಜಿಕ ನಿಯಂತ್ರಣದ ಪ್ರಭಾವೀ ಮಾಧ್ಯಮ. ಅದರಲ್ಲೂ ಹನ್ನೆರಡನೇ ಶತಮಾನದಂಥ ಭಕ್ತಿಯುಗದಲ್ಲಿ ಧರ್ಮ ಅತ್ಯಂತ ಪರಿಣಾಮಕಾರಿ ಮಾಧ್ಯಮವಾದದ್ದು ತೀರಾ ಸಹಜವೇ ಆಗಿದೆ. ಹೀಗಾಗಿ ಸಾಮಾಜಿಕ ಸುಧಾರಣೆ ಇತ್ಯಾದಿ ಕಾರಣಗಳಿಗಾಗಿ ಧರ್ಮವನ್ನು ಮಾಧ್ಯಮವನ್ನಾಗಿಸಿಕೊಳ್ಳುವುದು ಆ ಕಾಲದ ಅಗತ್ಯವಾಗಿದ್ದಂತೆ ತೋರುತ್ತದೆ. ಮೇಲಾಗಿ ಧರ್ಮ ಹಾಗೂ ಸಮಾಜಗಳೆರಡೂ ಗಂಡಭೇರುಂಡದಂತೆ, ಹೊಕ್ಕುಳ ಬಳ್ಳಿಯಂತೆ ಒಂದನ್ನು ಬಿಟ್ಟು ಮತ್ತೊಂದು ಇರಲಾರವು. ಎಂದೇ ಹನ್ನೆರಡನೇ ಶತಮಾನದಲ್ಲಿ ಸಾಮಾಜಿಕ ಸುಧಾರಣೆ ಸಾಧ್ಯವಾಗುವುದು ಧರ್ಮದ ಮುಖೇನವೇ. ಸೂಕ್ಷ್ಮದೃಷ್ಟಿಯುಳ್ಳ ಶರಣರಿಗೆ ಇದನ್ನು ಅರ್ಥೈಸಿಕೊಳ್ಳುವುದು ಕಷ್ಟಕರವೇನೂ ಆಗಲಿಲ್ಲ. ಅಂತೇ ಸಮಾಜೋ-ಧಾರ್ಮಿಕ ಆಂದೋಲನಕ್ಕೆ ಅಣಿಯಾಗುತ್ತಿದ್ದ ಅವರಿಗೆ 'ಧರ್ಮವನ್ನೂ' ನಿಕಶಕ್ಕೊಡ್ಡುವುದು ಅಂದಿನ ಜರೂರಿಯಾಗಿರುವಂತೆ ಕಾಣುತ್ತದೆ.

ಈಗ್ಗೆ ಸಾವಿರ ವರ್ಷಗಳಷ್ಟು ಹಳೆಯದಾದ ಸ್ಥಾವರ ಸಾಮಾಜಿಕ ಸನ್ನಿವೇಶವೊಂದರಲ್ಲಿ ಚಳವಳಿ ಆರಂಭಿಸಬೇಕಾಗಿರುವ ಶರಣರು ಸಹಜವಾಗಿಯೇ ಅನೇಕ ಅಗ್ನಿದಿವ್ಯಗಳನ್ನು, ನೂರೆಂಟು ಸವಾಲುಗಳನ್ನು ಎದುರಿಸಬೇಕಾಯಿತು. ಹೊಸದನ್ನು ಸ್ಥಾಪಿಸುವಾಗ ಸಹಜವಾಗಿಯೇ ಹಳೆಯದು ಪ್ರತಿಭಟಿಸುತ್ತದೆ. ಹಳೆಯ ಸಮಾಜ ಹೊಸ ದೃಷ್ಟಿಕೋನವುಳ್ಳವರನ್ನು ಒಂದು ಬಗೆಯ ಅನುಮಾನ, ಆತಂಕ ಹಾಗೂ ತನ್ನತನ ತಪ್ಪಿಹೋಗುತ್ತದೆಯಲ್ಲ ಎಂಬ ಪಟ್ಟಭದ್ರ ಹಿತಾಸಕ್ತಿ ಇತ್ಯಾದಿ ನೆಲೆಗಳಿಂದ ನೋಡುವುದರಿಂದ ಸಂಘರ್ಷ ಸಹಜವಾದದ್ದೇ.

ವಿದ್ವಾಂಸರೆಲ್ಲ ಗ್ರಹಿಸಿರುವಂತೆ ವಚನಕಾರರು ಹೊಸ ಮನ್ವಂತರದ ಹರಿಕಾರರೇನೋ ನಿಜ. ಆದರೆ ಅಂಥ ಮನ್ವಂತರಕ್ಕಾಗಿ ತಮ್ಮ ಸಂಘಟಿತ ಶಕ್ತಿಯನ್ನು 'ಹಿಂಸೆ'ಗಾಗಿ ಬಳಸಿಕೊಂಡವರಲ್ಲ. ಅದು ಅವರ ಸೈದ್ಧಾಂತಿಕ ನಿಲುವೂ ಆಗಿರಲಿಲ್ಲ; ಅಷ್ಟೇಕೆ ಅದವರ ಮನೋಭೂಮಿಕೆಗೂ ಒಗ್ಗುತ್ತಿರಲಿಲ್ಲ. ಅಂತೆಯೇ 'ದಯವೇ ಧರ್ಮದ ಮೂಲ' ಎಂಬುದನ್ನು ಚಳವಳಿಯ ತಾತ್ವಿಕ ಆಶಯವನ್ನಾಗಿಸಿಕೊಂಡಿದ್ದ ವಚನಕಾರರಿಗೆ ಅಹಿಂಸೆಯ ಮೂಲಕವೇ ಸಾಮಾಜಿಕ ಪರಿವರ್ತನೆ ಬೇಕಾಗಿತ್ತು.

ಅಪೂರ್ವ ದೂರಾಲೋಚನೆಯುಳ್ಳ ವಚನಕಾರರಿಗೆ ರಕ್ತಪಾತದಿಂದ ಸಂಭವಿಸುವ ಕ್ರಾಂತಿ-ರಕ್ತಬೀಜಾಸುರರನ್ನು ಸೃಷ್ಟಿಸುತ್ತ ಯುದ್ಧ ಹಿಂಸೆ ಇತ್ಯಾದಿಗಳಿಗೆ ಇಂಬು ನೀಡುತ್ತಾ ಬದುಕನ್ನು ಯಾವತ್ತೂ ಕುರುಕ್ಷೇತ್ರವಾಗಿಸುತ್ತದೆ ಎಂಬುದನ್ನು ಗ್ರಹಿಸಿಕೊಳ್ಳುವುದು ಕಷ್ಟಸಾಧ್ಯವೇನೂ ಆಗಲಿಲ್ಲ. ಇದನ್ನು ಆಧುನಿಕ ಭಾರತದ ದಾರ್ಶನಿಕ ಮಹಾತ್ಮ ಗಾಂಧೀಜಿ ಸರಿಯಾಗಿಯೇ ಗ್ರಹಿಸಿ ವಿಶ್ವದಲ್ಲಿಯೇ ವಿಶಿಷ್ಟವೆನ್ನಲಾದ ಅಹಿಂಸಾ ಚಳವಳಿಯ ಮೂಲಕ ಸ್ವಾತಂತ್ರ್ಯ ಸಂಪಾದಿಸಿಕೊಟ್ಟರು.

ದಾರ್ಶನಿಕರಿಗೆ ಈ ಬಗೆಯ ಒಳ ಎಚ್ಚರ, ಸೂಕ್ಷ್ಮ ನೋಟ ಇರಬೇಕಾದದ್ದೇ. ಅಂತೆಯೇ ದಾರ್ಶನಿಕ ಮಹಾತ್ಮರಾದ ಶರಣರಿಗೆ ಇದೆಲ್ಲವೂ ಇದ್ದದ್ದು ಅಸಹಜವೇನೂ ಅಲ್ಲ.

ಹಿಂಸೆಯ ನೇತ್ಯಾತ್ಮಕ ನೆಲೆಗಳನ್ನು, ಪಾರ್ಶ್ವ ಪರಿಣಾಮಗಳನ್ನು ಬಲ್ಲ ವಚನಕಾರರು ಇದಕ್ಕೆ ವೈರುಧ್ಯ ಮೂಲದ ಅಹಿಂಸೆಯನ್ನು ಚಳವಳಿಯ ಅಸ್ತ್ರವನ್ನಾಗಿಸಿ ಕೊಂಡದ್ದು ಯೋಗ್ಯವೂ ಔಚಿತ್ಯಪೂರ್ಣವೂ ಆಗಿದೆ. ವಚನಕಾರರದು ಪ್ರಜಾಸತ್ತೀಯ ಮನಸ್ಸು. ಜನಸತ್ತೆಯ ಸ್ಥಾಪನೆ ಅವರ ಅನನ್ಯ ಆಲೋಚನೆಯಾಗಿದ್ದು ಭಾರತಕ್ಕೆ ಕೊಟ್ಟ ಅಪೂರ್ವ ಕೊಡುಗೆಯೇ ಸರಿ. ಅಂತೆಯೇ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ- ಈ ಮೂರು ವಚನಕಾರರ ಕನಸಿನ ಸಮಾಜದ ಅಸ್ತಿವಾರಗಳಾದದ್ದು ಸಹಜವೇ ಆಗಿದೆ. ಹಾಗಾದರೆ ಇದನ್ನು ಸಾಧಿಸುವುದು ಹೇಗೆ? ವಿಷಯ ಅಂದು ಕೊಂಡಷ್ಟು ಸುಲಭವಾಗಿರಲಿಲ್ಲ. ಅದೂ ಆ ದಿನಮಾನದ ರಾಜಶಾಹಿ, ಪುರೋಹಿತಶಾಹಿಗಳ ಆಕ್ಟೋಪಸ್ ಹಿಡಿತದಲ್ಲಿದ್ದ ಸಾಮಾಜಿಕ ಸನ್ನಿವೇಶವೊಂದರಲ್ಲಿ ಕಾರ್ಯಾಚರಣೆ ಇನ್ನೂ ಕಷ್ಟಸಾಧ್ಯವಾಗಿತ್ತು.

ಸಮಾಜ ದಾರ್ಶನಿಕರು ಗ್ರಹಿಸಿರುವಂತೆ ದೇವಾಲಯ ಗಳು ಅಸಮಾನತೆಗೆ, ಪಾರತಂತ್ರ್ಯಕ್ಕೆ ಪರ್ಯಾಯ ಹೆಸರುಗಳು. ದೇವಾಲಯಗಳು ಯಾಕೆ ಅಸಮಾನತೆಗೆ ಮತ್ತೊಂದು ಹೆಸರು ಎಂದರೆ : ಅವು ಸ್ತ್ರೀಯರಿಗೆ ಪ್ರವೇಶ ನಿರಾಕರಿಸಿದ್ದವು; ಜತೆಗೆ - ಅವರನ್ನು - ಆಧ್ಯಾತ್ಮಿಕ ಹಕ್ಕಿನಿಂದ ವಂಚಿತರನ್ನಾಗಿ ಮಾಡಿದ್ದವು. ಯಾವತ್ತಾದರೂ ಸ್ತ್ರೀ ದೇವಾಲಯದ ಅರ್ಚಕ ಹುದ್ದೆಯಂಥ ಪ್ರತಿಷ್ಠಿತ ಭೂಮಿಕೆ ಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಳೇ, ಆಧ್ಯಾತ್ಮಿಕತೆಯಲ್ಲಿ ಪುರುಷನಷ್ಟೇ ಸಮಪಾಲು ಅನುಭವಿಸಿದಳೇ ಎಂಬ ಪ್ರಶ್ನೆಗೆ ಇಂದಿಗೂ ಇತಿಹಾಸ ದಿವ್ಯ ಮೌನ ವಹಿಸುತ್ತದೆ.

ದೇವಾಲಯದ ಮತ್ತೊಂದು ಮಗ್ಗಲು ಇನ್ನೂ ಭಯಾನಕವಾಗಿದೆ. ಕೆಳಗಿನ ಸ್ತರದ ಸ್ತ್ರೀಯರನ್ನು - ದೇವರ ಹೆಸರಿನಲ್ಲಿ - ದೇವದಾಸಿಯರನ್ನಾಗಿಸಿದ್ದು. ಆಕೆ ತನ್ನ ಪಾತಿವ್ರತ್ಯಕ್ಕೆ ತಿಲಾಂಜಲಿ ಇಡುವುದರ ಹಿಂದೆ ದೇವಾಲಯದ ಕೆಟ್ಟ ಪಾತ್ರವೂ ಇದೆಯೆನ್ನುವುದು ಸ್ಫಟಿಕದಷ್ಟೇ ಸ್ಪಷ್ಟ ಸೂರ್ಯನಷ್ಟೇ ಸತ್ಯ. ಅಂದ ಮೇಲೆ ದೇವಾಲಯಗಳು ಎಂತು ಪೂಜನೀಯ?

ಈ ಸಮಾಜ ಹುಟ್ಟಿದಂದಿನಿಂದಲೂ ಶೂದ್ರವರ್ಣ ದವರಿಗೆ ಈ ದೇವಾಲಯ ಪ್ರವೇಶ ನಿಷಿದ್ಧ. ಧಾರ್ಮಿಕ ಹಕ್ಕು ಕೇವಲ ಮೇಲ್ವರ್ಗದವರ ಸ್ವತ್ತು. ಅಂತೆಯೇ ಕೆಳವರ್ಗ ದವರು ಆಧ್ಯಾತ್ಮಿಕ ಹಕ್ಕಿನಿಂದ ದೂರ ತಳ್ಳಲ್ಪಟ್ಟು ಅಸ್ಪೃಶ್ಯತೆ, ಅವಮಾನ, ನೋವು, ತಲ್ಲಣಗಳನ್ನಷ್ಟೇ ಅನುಭವಿಸ ಬೇಕಾಯಿತು. ಸಮಾಜದ ಬಹುಮುಖ್ಯವಾಹಿನಿಯೊಂದು ಹೀಗೆ ಆಧ್ಯಾತ್ಮಿಕ ಹಕ್ಕಿನಿಂದ ವಂಚಿತವಾದ ಕರಾಳ ಚರಿತ್ರೆ ಪ್ರಾಯಶಃ ಭಾರತವನ್ನು ಹೊರತುಪಡಿಸಿ ವಿಶ್ವದ ಯಾವ ಮೂಲೆಯಲ್ಲೂ ಸಿಗಲಿಕ್ಕಿಲ್ಲ.

ಇದರಿಂದ ಸಹಜವಾಗಿಯೇ ಸ್ತ್ರೀಯರು, ಶೂದ್ರರು, ಕೆಳವರ್ಗದವರು ಸಮಾನತೆಯಿಂದ ವಂಚಿಸಲ್ಪಟ್ಟರು. ಯಾವಾಗ ದೇವಾಲಯಗಳು ಕೆಳವರ್ಗದವರಿಗೆ ಪ್ರವೇಶ ನಿರಾಕರಿಸಿದವೋ ಆವಾಗಿನಿಂದಲೇ ಧಾರ್ಮಿಕ ಸ್ವಾತಂತ್ರ್ಯ ತಪ್ಪಿ ಹೋಯಿತು. ಕೆಳವರ್ಗದವರಿಗೆ ದೈವೀ ಸಾನ್ನಿಧ್ಯವನ್ನು ನಿರಾಕರಿಸಿದ ಮೇಲ್ವರ್ಗ ಅದಕ್ಕೆ ಪೂರಕವಾಗಿ ಅವರನ್ನು ಅತ್ಯಂತ ಅಸಹ್ಯ ದೃಷ್ಟಿಕೋನದಿಂದ ನೋಡತೊಡಗಿತು. ಆಗಲೇ ಭ್ರಾತೃತ್ವ ಪತನಗೊಂಡಿತು.

ಈ ಮೂರನ್ನು ಪಡೆಯಲೆಂದೇ ಚಳವಳಿ ಹೂಡಿದವರು ಶರಣರು. ಸ್ತ್ರೀಯರಿಗಾಗಿ ಅಥವಾ ಅಸ್ಪೃಶ್ಯರಿಗಾಗಿ ದೇವಾಲಯ ಪ್ರವೇಶದಂಥ ಚಳವಳಿಗಳನ್ನು ಶರಣರು ಯಾಕೆ ಮಾಡಲಿಲ್ಲ ಎಂದು ಇವೊತ್ತು ಪ್ರಶ್ನಿಸುವುದು ತರ್ಕಬದ್ಧವೇ. ಆಧುನಿಕ ಭಾರತದ ಸುಧಾರಣಾವಾದಿಗಳಾದ ಮಹಾತ್ಮಗಾಂಧಿ, ಪೆರಿಯಾರ, ನಾರಾಯಣಗುರು ಮುಂತಾ ದವರು 'ದೇವಾಲಯ ಪ್ರವೇಶ'ದ ಹಕ್ಕಿಗಾಗಿ ಹೋರಾಡಿದ ದಿನಮಾನಗಳಲ್ಲಿ ಬದುಕಿದ ನಮಗೆ ಈ ಪ್ರಶ್ನೆ ಸಹಜವೇ. ಆದರೆ ಹನ್ನೆರಡನೇ ಶತಮಾನ ಈ ದಿನಮಾನಗಳಷ್ಟು ಸರಳ ವಾಗಿರಲಿಲ್ಲ; ಈಗಿನಷ್ಟು ತೆರೆದ ಮನಸ್ಸೂ ಹೊಂದಿರಲಿಲ್ಲ. ಒಂದು ಪಕ್ಷ ಗಾಂಧಿ, ಪೆರಿಯಾರ್ ಮುಂತಾದವರು ಹಿಡಿದ ಹೆಜ್ಜೆಯಲ್ಲೇ ಬಸವ ಮೊದಲಾದವರು ಸಾಗಿದ್ದರೆ ಏನಾಗಬಹುದಿತ್ತು? ಊಹಿಸಿಕೊಳ್ಳುವುದು ಕೂಡಾ ಕಷ್ಟ ಸಾಧ್ಯವಾಗುತ್ತಿದೆ! ಹಾಗೊಂದು ವೇಳೆ ಬಸವಾದಿಗಳು ಹೆಜ್ಜೆಯಿಟ್ಟಿದ್ದರೆ ವಚನಚಳವಳಿಯ ಅಂತಿಮ ಘಟ್ಟದಲ್ಲಾದದ್ದೇ ಆರಂಭಿಕ ದೆಸೆಯಲ್ಲಿ ಆಗುತ್ತಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ. ಹರಳಯ್ಯ-ಮಧುವರಸರ ಎಳೆಹೂಟೆ, ಬಿಜ್ಜಳನ ಕೊಲೆ, ಶರಣರ ಕಾಲ್ತೆಗೆತ ಇತ್ಯಾದಿಯನ್ನು ಮನದಂದರೆ 'ದೇವಾಲಯ ಪ್ರವೇಶ' ಚಳವಳಿ ಖಂಡಿತವಾಗಿಯೂ ಇಂಥದ್ದೇ ಇನ್ನೊಂದು ಅನಾಹುತಕ್ಕೆ ಕಾರಣವಾಗುತ್ತಿತ್ತು. ಈ ಬಗ್ಗೆ ಸಂಶಯವೇ ಬೇಡ.

ಆ ಕಾಲದ ನಾಡಿಮಿಡಿತವನ್ನು ಚೆನ್ನಾಗಿ ಬಲ್ಲ ಶರಣರು ಈ ಕಾರಣಕ್ಕಾಗಿಯೇ ದೇವಾಲಯ ಪ್ರವೇಶ ಆಂದೋಲನಕ್ಕೆ ಅಣಿಯಾಗಲಿಲ್ಲವೆಂದು ತೋರುತ್ತದೆ. ಆದ್ದರಿಂದ ಸಂಘರ್ಷ, ರಕ್ತಪಾತಕ್ಕೆ ಗ್ರಾಸವಾಗಬಹುದಾದ ದೇವಾಲಯ ಪ್ರವೇಶ ಚಳವಳಿಯನ್ನು ಕೈಬಿಟ್ಟು ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆ, ಅಸ್ವಾತಂತ್ರ್ಯ, ಅನ್ಯಾಯ ಇತ್ಯಾದಿಗೆ ಆಡುಂಬೊಲವಾಗಿದ್ದ ದೇವಾಲಯವನ್ನೇ ಧಿಕ್ಕರಿಸಿದರೆ ಹೇಗೆ ಎಂಬ ಜಿಜ್ಞಾಸೆಯೊಂದು ವಚನಕಾರರನ್ನು ತೀವ್ರವಾಗಿ ಕಾಡಿದಂತೆ ಕಾಣುತ್ತದೆ. ಅಂತೆಯೇ ವಚನಚಳವಳಿಯ ಮುಂಚೂಣಿ ನಾಯಕರಾದ ಬಸವಣ್ಣನವರೂ ಸೇರಿದಂತೆ ಆ ಚಳವಳಿಯೊಂದಿಗೆ ಆಗಂತುಕ ಸಂಬಂಧ ಹೊಂದಿದ್ದ ಅಲ್ಲಮನಲ್ಲೂ ಈ ಪ್ರಶ್ನೆಗಳು ತೀವ್ರವಾಗಿ ಜಿಜ್ಞಾಸೆಗೆ ಈಡಾಗಿವೆ. ಅಂತೆಯೇ ಅಲ್ಲಮ -

> **ಸಮಾಜ ದಾರ್ಶನಿಕರು ಗ್ರಹಿಸಿರುವಂತೆ ದೇವಾಲಯಗಳು ಅಸಮಾನತೆಗೆ, ಪಾರತಂತ್ರ್ಯಕ್ಕೆ ಪರ್ಯಾಯ ಹೆಸರುಗಳು. ಉದಾಹರಣೆಗೆ ದೇವಾಲಯಗಳು ಸ್ತ್ರೀಯರಿಗೆ ಪ್ರವೇಶ ನಿರಾಕರಿಸಿದ್ದವು; ಜತೆಗೆ - ಅವರನ್ನು - ಆಧ್ಯಾತ್ಮಿಕ ಹಕ್ಕಿನಿಂದ ವಂಚಿತರನ್ನಾಗಿ ಮಾಡಿದ್ದವು. ದೇವಾಲಯದ ಮತ್ತೊಂದು ಮಗ್ಗಲು ಇನ್ನೂ ಭಯಾನಕವಾಗಿದೆ. ಕೆಳಗಿನ ಸ್ತರದ ಸ್ತ್ರೀಯರನ್ನು - ದೇವರ ಹೆಸರಿನಲ್ಲಿ - ದೇವದಾಸಿಯರನ್ನಾಗಿಸಿದ್ದು. ಆಕೆ ತನ್ನ ಪಾತಿವ್ರತ್ಯಕ್ಕೆ ತಿಲಾಂಜಲಿ ಇಡುವುದರ ಹಿಂದೆ ದೇವಾಲಯದ ಕೆಟ್ಟ ಪಾತ್ರವೂ ಇದೆಯೆನ್ನುವುದು ಸ್ಫಟಿಕದಷ್ಟೇ ಸ್ಪಷ್ಟ ಸೂರ್ಯನಷ್ಟೇ ಸತ್ಯ. ಅಂದ ಮೇಲೆ ದೇವಾಲಯಗಳು ಎಂತು ಪೂಜನೀಯ?**

**'ದೇಹದೊಳಗೆ ದೇವಾಲಯವಿದ್ದು**
**ಮತ್ತೆ ಬೇರೆ ದೇಗುಲವೇಕಯ್ಯಾ?**
**ಎರಡಕ್ಕೆ ಹೇಳಲಿಲ್ಲಯ್ಯಾ**
**ಗುಹೇಶ್ವರಾ ನೀನು ಕಲ್ಲಾದಡೆ ನಾನು ಏನಪ್ಪೆನು?'**
ಎಂದು ನುಡಿದರೆ, ಬಸವ -
**'ಉಳ್ಳವರು ಶಿವಾಲಯ ಮಾಡಿದರು,**
**ನಾನೇನು ಮಾಡುವೆ ಬಡವನಯ್ಯ.**
**ಎನ್ನ ಕಾಲೇ ಕಂಬ, ದೇಹವೇ ದೇಗುಲ,**
**ಶಿರ ಹೊನ್ನ ಕಳಶವಯ್ಯಾ,**
**ಕೂಡಲಸಂಗಮದೇವಾ ಕೇಳಯ್ಯಾ,**
**ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ'**
ಎಂದು ಅಭಿವ್ಯಕ್ತಿಸುತ್ತಾನೆ.

ಈ ಎರಡೂ ವಚನಗಳ ರಚನಾ ವಿನ್ಯಾಸ ಬೇರೆಯಾದರೂ ಆಶಯ ಒಂದೇ. ಎಣ್ಣೆ ಬೇರೆ, ಬತ್ತಿ ಬೇರೆ - ಬೆಳಕು ಒಂದೇ. ದೇವಾಲಯದ ನಿರಾಕರಣೆ ಹಾಗೂ ದೇಹದೊಳಗಣ ದೇವರ ಸ್ವೀಕರಣೆಯೇ ಆ ಆಶಯ; ಬೆಳಕು ಎರಡೂ ಆಗಿದೆ.

ಕ್ರಾಂತಿಯೆಂದರೆ ವ್ಯವಸ್ಥೆಯ ಬದಲಾವಣೆ. ಆ ವ್ಯವಸ್ಥೆ ಬದಲಾಗಬೇಕಾದರೆ ಜನತೆ ಬದಲಾಗಬೇಕು. ಜನ ಬದಲಾಗಬೇಕಾದರೆ ಮನಸ್ಸಿನ ಆಲೋಚನಾ ಪಾತಳಿ ಮಾರ್ಪಾಡಾಗಬೇಕು. ಮಾನಸಿಕ ಬದಲಾವಣೆಯಿಲ್ಲದೆಯೇ ಮಾಡುವ, ಸಂಭವಿಸುವ ಯಾವುದೇ ಕ್ರಾಂತಿ ಅರ್ಥಹೀನ. ಆ ಕುರಿತಾದ ಪ್ರಯತ್ನ ಹೊಳೆಯಲ್ಲಿನ ಹೋಮ ಅಷ್ಟೇ. ಶರಣರು ಮಾಡಿದ್ದು ಇದನ್ನೇ. ದೇವಾಲಯ ಪ್ರವೇಶದಂಥ ಭೌತಿಕ ಕ್ರಮಗಳಿಗಿಂತ ದೇವಾಲಯ ನಿರಾಕರಣೆಯಂತಹ ವೈಚಾರಿಕ ಕ್ರಮಗಳು ಅರ್ಥಪೂರ್ಣ ಹಾಗೂ ಕಾರ್ಯ ಸಾಧ್ಯ ಎಂಬುದನ್ನು ಶರಣರು ಸರಿಯಾಗಿಯೇ ಗ್ರಹಿಸಿದ್ದರು. ಅಂತೆಯೇ ಅವರು ದೇವಾಯವನ್ನು ನಿರಾಕರಿಸಿದರು.

ಮತ್ತೊಂದು ಮುಖ್ಯವಾದ ಸಂಗತಿಯೆಂದರೆ ಈ ದೇವಾಲಯಗಳು ಯಾವತ್ತೂ ಸರಳತೆಯನ್ನು ಒಪ್ಪದೆ ಇರುವುದು. ಹೀಗಾಗಿ ವೈಭವ, ಅದ್ದೂರಿತನವನ್ನು ಮೈಗೂಡಿಸಿಕೊಂಡ ದೇವಾಲಯಗಳಿಗೆ ಅದರಿಂದ ಹೊರ ಬರುವುದು ಕೂಡಾ ಅಸಾಧ್ಯವಾಗಿತ್ತು. ಅಂತೆಯೇ ಯಾವಾಗ ಅವನ್ನು ಸರಿಪಡಿಸುವುದು ಅಸಾಧ್ಯದ ಸಂಗತಿಯಾಗಿ ತೋರಿತೋ ಆಗಲೇ ಸುಧಾರಣಸಾಧ್ಯವಾದ ದೇವಾಲಯ ವನ್ನು ಧಿಕ್ಕರಿಸುವುದೇ ಉಚಿತಮಾರ್ಗವೆಂದು ಶರಣರಿಗೆ ತೋರಿರಬೇಕು. ಅಂತೆಯೇ ಅವರು ದೇವಾಲಯವನ್ನು ಧಿಕ್ಕರಿಸಿದರು; ಅಲ್ಲಿನ ದೇವರನ್ನಷ್ಟೇ ಸ್ವೀಕರಿಸಿದರು.

ಶರಣರು ತಿರಸ್ಕರಿಸಿದುದು ದೇವಾಲಯವನ್ನ; ಆದರೆ ದೇವರನ್ನಲ್ಲ. ಎಂದೇ ಮೂಲಭೂತವಾಗಿ ಆಸ್ತಿಕರಾಗಿದ್ದ ಶರಣರು ದೇವಾಲಯದಲ್ಲಿ ನೆಲೆಗೊಂಡಿದ್ದ ದೇವರನ್ನು ದೇಹಕ್ಕೆ ವರ್ಗಾಯಿಸಿದರು. ಇದೊಂದೇ ಅವರಿಗೆ ಉಳಿದಿರುವ ಮಾರ್ಗವಾಗಿತ್ತೆಂದು ತೋರುತ್ತದೆ. ಈ ಬದಲಾವಣೆಯಿಂದಾಗಿ ಪೂಜೆ - ಪುನಸ್ಕಾರಗಳ ವಿಧಾನ ಸರಳಗೊಂಡಿತು. ಜತೆಗೆ ಬಡವ - ಬಲ್ಲಿದರಾದಿಯಾಗಿ ಎಲ್ಲರ ಪೂಜಾ ವಿಧಾನವೂ ಏಕತ್ರವಾಯಿತು.

ದೇವಾಲಯಗಳಲ್ಲಿ ಯಾವತ್ತೂ ಶ್ರೀಮಂತನ ಪೂಜೆಗೇ ಅಗ್ರತಾಂಬೂಲ; ಬಡವನದೋ ಕಾಲಕಸ, ನಗಣ್ಯ. ಇಂಥ ವರ್ಗ ತಾರತಮ್ಯ ಸಹಜವಾಗಿಯೇ ಶ್ರೀಮಂತರಲ್ಲಿ ಅಹಂಕಾರವನ್ನು, ಬಡವರಲ್ಲಿ ಕೀಳರಿಮೆಯನ್ನು ಸೃಷ್ಟಿಸಿತ್ತು. ಯಾವಾಗ ದೇವರು ದೇವಾಲಯದಿಂದ ದೇಹಕ್ಕೆ ವರ್ಗಾವಣೆಗೊಂಡನೋ ಆವಾಗ್ಗಿನಿಂದಲೇ ಈ ತಾರತಮ್ಯ ತಪ್ಪಿಹೋಯಿತು; ಅಸ್ಪೃಶ್ಯತೆ ನೆಲ ಕಚ್ಚಿತ್ತು; ಜಾತೀಯತೆ ಹೆಳಹೆಸರಿಲ್ಲದಾಯಿತು ; ಸಾಮಾಜಿಕ ಬದುಕು ತರತಮ ರಹಿತವಾಯಿತು. ಸಹಜವಾಗಿಯೇ ಸರ್ವರ ಸಾಮಾಜಿಕ ಜೀವನ ಸರ್ವಾದರಣೀಯವಾಯಿತು. ಶರಣರು ಸಾಧಿಸಿದ್ದು ಇದನ್ನ. ಈ ಅರ್ಥದಲ್ಲಿ ಅವರದು ಅನನ್ಯ ಕ್ರಾಂತಿ.

ದೇವಾಲಯ ಕುರಿತಾದ ಶರಣರ ವಿರೋಧ ಕೇವಲ ತಾತ್ವಿಕ ನೆಲೆಗೆ ಸಂಬಂಧಿಸಿದೆ. ದೇವಾಲಯಗಳು ಭೌತಿಕ ಕಟ್ಟಡಗಳಾಗಿರುವುದರಿಂದ ಸಹಜವಾಗಿಯೇ ಅವು ವಿನಾಶಿ ಸ್ವರೂಪದವುಗಳು. ಆದ್ದರಿಂದಷ್ಟೇ ಅವನ್ನು ಶರಣರು ನಿರಾಕರಿಸಿದರೆಂದು ವಾದಿಸುವುದು ಬಾಲಿಶತನವಾಗುತ್ತದೆ. 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂಬ ವಚನದ ಸಾಲನ್ನು ಪ್ರಸ್ತಾಪಿಸುತ್ತಾ ದೇವಾಲಯಗಳು ಸ್ಥಾವರವೆಂದು, ಚೈತನ್ಯಶೀಲವಾಗಿರುವ ದೇಹ ಜಂಗಮವೆಂದೂ (ಜಂಗಮ ವೆಂದರೂ ಚಲನಶೀಲತೆಯೇ) ವಾದಿಸಲವಕಾಶವಿದೆ. ಅಷ್ಟೇಕೆ ವಾದ - ವಿವಾದಗಳೂ ನಡೆದಿವೆ.

ಹಾಗೆ ನೋಡಿದರೆ ದೇಹವೂ ಒಂದು ದಿನ ಬಿದ್ದು ಹೋಗುವಂಥದ್ದು. ಜೀವವಿರುವ ತನಕ ದೇಹವೇನೋ ಚೈತನ್ಯಶೀಲ. ಪ್ರಾಣಹೋದ ಮೇಲೆ ದೇಹವೂ ಜಡವೇ. ಈ ಅರ್ಥದಲ್ಲಿ ದೇಹವೂ ಸ್ಥಾವರವೇ ಆಗುತ್ತದೆ. ಹೀಗಾಗಿ ವಚನಕಾರರ 'ಸ್ಥಾವರ-ಜಂಗಮ' ತಾತ್ವಿಕತೆಯೇ ಪ್ರಶ್ನಾರ್ಹ ವಾಗುತ್ತದೆ. ಆದರೆ ಸಮಸ್ಯೆ ಇದಲ್ಲ, ಸಮಾಧಾನವೂ ಇದಲ್ಲ.

ದೇವಾಲಯ ಎಲ್ಲಿಯವರೆಗೆ ಜಡ ಆಲೋಚನೆಗಳಿಗೆ ಆಶ್ರಯ ನೀಡುವುದೋ ಅಲ್ಲಿಯವರೆಗೆ ಅದು ಜಡವೇ, ಸ್ಥಾವರವೇ. ಅಂದರೆ ಸವರ್ಣೀಯರು ಶ್ರೇಷ್ಠ ಅವರ್ಣೀಯರು ಕನಿಷ್ಠ; ಪುರುಷ ಶ್ರೇಷ್ಠ ಸ್ತ್ರೀ ಕನಿಷ್ಠ; ಬಲ್ಲಿದ ಶ್ರೇಷ್ಠ ಬಡವ ಕನಿಷ್ಠ ಎಂಬಿತ್ಯಾದಿಯಾದ ತರತಮ ಭಾವಗಳೇ ಜಡ ಆಲೋಚನೆಗಳು. ಈ ಅರ್ಥದಲ್ಲಿ ಅವು ಸ್ಥಾವರ ಸ್ವರೂಪಿಗಳು. ಸರ್ವರೂ ಸಮಾನರು, ಸರ್ವರೂ ಸ್ವಾತಂತ್ರ್ಯಕ್ಕೆ ಅರ್ಹರು, ಸರ್ವರೂ ಭ್ರಾತೃತ್ವದ ಹಕ್ಕುಳವರು ಇತ್ಯಾದಿ ಆಲೋಚನೆಗಳೇ ಚಲನಶೀಲ ಗುಣವುಳ್ಳವು. ಇವು ಆಚರಣೆಗೆ ಬರುವುದು ದೇಹದೊಳಗಣ ಮನಸ್ಸು ಚಲನಶೀಲವಾಗಿ ಕ್ರಿಯಾಶೀಲಗೊಂಡಾಗಲೇ. ಅಂತೆಯೇ ದೇಹ ಭೌತಿಕವಾಗಿ ಅಷ್ಟೇಕೆ ಮಾನಸಿಕವಾಗಿಯೂ ಚಲನಶೀಲ ಗುಣ ಪಡೆದಿದೆ. ಈ ಅರ್ಥದಲ್ಲಿ ದೇಹ ಜಂಗಮ.

ಇತಿಹಾಸವನ್ನು ಬಲ್ಲ ನಮಗೆ ವರ್ಗ - ವರ್ಣ - ಲಿಂಗ ತಾರತಮ್ಯದಂಥ ಜಡ ಆಲೋಚನೆಗಳು ಅಳಿವು ಕಾಣುತ್ತಿವೆ. ವರ್ಣ ಸಮಾನೆ - ವರ್ಗ ಸಮಾನತೆ - ಲಿಂಗ ಸಮಾನತೆ ಮೊದಲ್ಗೊಂಡು ಸ್ವಾತಂತ್ರ್ಯ, ಭ್ರಾತೃತ್ವದಂಥ ಪರಿಕಲ್ಪನೆಗಳು ಜಗತ್ತಿನಾದ್ಯಂತ ಜನಪ್ರಿಯವಾಗುತ್ತಿವೆ. ಚಲನಶೀಲ ಗುಣವುಳ್ಳ ಇವು ನಿಜಕ್ಕೂ ಜಂಗಮ. ಅಂತೆಯೇ ಇವಕ್ಕೆ ಅಳಿವು ಇಲ್ಲ. ಆದ್ದರಿಂದ ದೇವಾಲಯ ನಿರಾಕರಣೆಯ ಸಂದರ್ಭದಲ್ಲಿ ಬಳಸಲಾಗುತ್ತಿರುವ 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂಬ ಪರಿಕಲ್ಪನೆಯನ್ನು ತಾತ್ವಿಕನೆಲೆಯಲ್ಲಿ ಗ್ರಹಿಸಿಕೊಳ್ಳುವುದು, ಆ ಹಿನ್ನೆಲೆಯಲ್ಲಿ ವಚನ ಚಳವಳಿಯನ್ನು ಅರಿಯಲು ಯತ್ನಿಸುವುದು ಇಂದಿನ ಜರೂರಿಯಾಗಿದೆ. □

# ಹೆಣ್ಣು - ಧರ್ಮ - ದಾರಿ



ಕುಟ್ಟು - ಬೀಸೂವ ಕಲ್ಲುಗಳ ಮುಂದೆ
ಅತ್ತು ಕರೆದುದು ಸಾಕು ॥

ಅತ್ತೆ - ಮಾವಗಂಜಿ ಸುತ್ತೇಳು ನೆರೆಗಂಜಿ
ಮತ್ತ ನಲ್ಲನ ದನಿಗಂಜಿ ನಡೆದುದು
ಸಾಕವ್ವ ಸಾಕಿನ್ನು ಎದ್ದೇಳು ತಂಗಿ.

'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿಗರೀಯಸಿ'
ಎಂದವರ ಜುಟ್ಟ ಹಿಡಿದು ಕೇಳೋಣ
ಜನನಿಗೆ ಭೂಮಿ ಎಲ್ಲಿ ?
ತವರೂರು ಯಾಕೆ ಜಾಲೀಯ ಮರವಾತು ?
ಗಂಡನ ಮನೆಯೇಕೆ ಮಾಸ್ತಿ ಯ ಕಲ್ಲಾತು ?

ತಾಯಾಗಿ - ತಂಗ್ಯಾಗಿ ಸತಿಯಾಗಿ - ಸೊಸೆಯಾಗಿ
ಮ್ಯಾಲ ಮಗಳಾಗಿ ಜೀವ ಸವೆಸಿದ್ದು ಮರೆತು
ಲಕ್ಷ್ಮಣ ರೇಖೆ ಕೊರೆದು ಬೇಲಿಯ ಜಡಿದರು.

ತ್ಯಾಗಕ್ಕೆ ನಾವು ಭೋಗಕ್ಕೆ ಅವರು
ಐವರು ಹಂಚಿಕೊಂಡು ನಮ್ಮ
ಪತಿವ್ರತೆ ಎಂದು ಅಪಹಾಸ್ಯ ಮಾಡಿದರು.
ಸತ್ತ ಗಂಡನೊಂದಿಗೆ ಜೀವಂತ ಸುಟ್ಟರೆ
ಮಹಾಸತಿ ಎಂದು ಸ್ವರ್ಗವ ತೋರಿದರು.

ಉಸಿರಾಡಲು ನಾವು ಗಾಳಿಯು ಬೇಕೆಂದು
ಬೀದಿಗೆ ಬಂದರೆ ಹಾದರಗಿತ್ತೆಂದು ಪಟ್ಟವ ಕಟ್ಟಿದರು.
ಸೂಳ್ಯಾಗಿ ಸೇವೆ ಮಾಡಲು ಬಿಟ್ಟರು
ದೇವದಾಸಿ ಎಂದು ಮೀಸಲಾಗಿಟ್ಟರು
ಇಷ್ಟೆಲ್ಲ ಸಹಿಸಿ ನಗುನಗುತ ಇದ್ದರೆ
ದೇವತೆ ಎಂದು ಕೊಂದುಬಿಟ್ಟರು ತಾಯಿ
ಎದ್ದೇಳು ಸಾಕಿನ್ನು,

ನೀ ಹೇಳವ್ವಾ ತಂಗಿ ಈ ಒಂದೊಂದು
ಅವತಾರಗಳು ಅವರಿಗಿದ್ದಾವೇನು ?

ಮನುಷ್ಯರಿಲ್ಲದ ನಾಡಲ್ಲಿ
ಕುಟ್ಟು - ಬೀಸೂವ ಕಲ್ಲುಗಳ ಮುಂದೆ
ನಾವು ಪಟ್ಟ ಪಾಡುಗಳೆಲ್ಲ ಹಾಡಾಗಿ ಹರಿದುದು ಕೇಳಿ
ಇಂದು,
ಗರತಿಯ ಮೌಲ್ಯಗಳೆಂದು
ಮೆರೆಸುತಿರುವರು ತಾಯಿ ಎದ್ದೇಳು.

ಬುದ್ಧ - ಬಸವರ ನಾಡಲ್ಲಿ
ಹಾದರ - ಪಾತಿವ್ರತ್ಯದ ಒಗಟ
ಬಿಡಿಸಿಟ್ಟರು ನಮ್ಮ ಪೆರಿಯಾರರು
ಅರಿವಿನ ದಾರಿ ತೋರಿದರು ಫುಲೆ
ಸಮಾನತೆಯ ಶಾಸನ ಬರೆದಾರು
ನಮ್ಮ ಬಾಬಾ ಸಾಹೇಬರು.

ಏಳವ್ವಾ ತಂಗಿ ಸ್ವಾಭಿಮಾನದಿ ನಾವು
ಸಮತೆಯ ಬೆಳಕಲ್ಲಿ ನಡೆಯೋಣ ಇನ್ನು.

○ ಡಾ॥ ಅನಸೂಯ ಕಾಂಬಳೆ




# ಹೊಸ ಪುಸ್ತಕ

## ದಾದಾಗಿರಿಯ ದಿನಗಳು

**ಲೇ. ಶ್ರೀಧರ್**

ಬೆಲೆ: ರೂ. ೧೫೦/-

ಬೆಂಗಳೂರಿನ ಭೂಗತ ಜಗತ್ತಿನಲ್ಲಿ ಒಬ್ಬರಾಗಿ ಅದರ ಒಳಹೊರಗನ್ನು ಆಪ್ತವಾಗಿ ಬಿಚ್ಚಿಡುವ ಪ್ರಯತ್ನ ಇದು.

'ಬರಹ ನನ್ನ ಹಾದಿಯನ್ನು ಬದಲಿಸ ತೊಡಗಿತು' ಎನ್ನುವ ಲೇಖಕ ಸತ್ಯ ನಿಷ್ಠವಾಗಿ ಇಲ್ಲಿನ ಪ್ರತಿಯೊಂದು ವಿವರಗಳನ್ನು ಓದುಗರೊಂದಿಗೆ ಹಂಚಿಕೊಂಡಿರುವ ರೀತಿ ಅನನ್ಯವಾಗಿದೆ.

ಆತ್ಮ ಚರಿತ್ರೆಯಂತಿರುವ ಈ ಕೃತಿ ಅದನ್ನು ಮೀರಿದ ಉತ್ತಮ ಸಾಹಿತ್ಯ ಕೃತಿಯಾಗಿಯೂ ಯಶಸ್ವಿಯಾಗಿದೆ.

**ಪ್ರಕಾಶಕರು:**
ಅಗ್ನಿ ಪ್ರಕಾಶನ, ಬೆಂಗಳೂರು.

## ಕಪ್ಪು ಹಕ್ಕಿಯ ಬೆಳಕಿನ ಹಾಡು

**ಲೇ. ಎಂ. ಆರ್. ಕಮಲ**

ಬೆಲೆ: ರೂ. ೭೫/-

ಗುಲಾಮ ಪದ್ಧತಿಯ ವಿರುದ್ಧ ಸೆಣಸಿದ ಕಪ್ಪು ಮಹಿಳೆಯರ ಆತ್ಮಕಥೆಗಳನ್ನು, ಗುಲಾಮಗಿರಿಯ ಇತಿಹಾಸವನ್ನು, ಅಂದಿನ ರಾಜಕೀಯ ಸನ್ನಿವೇಶಗಳನ್ನು ಅನಾವರಣಗೊಳಿಸುವ ಕೃತಿ ಇದು.

ಕವಿ ಎಂ. ಆರ್. ಕಮಲ ಅವರು ಈ ಇವುಗಳನ್ನು ಕನ್ನಡಿಸಿದ್ದಾರೆ. ಇಲ್ಲಿ ಕನ್ನಡಿಸಲಾಗಿರುವ ಎಲ್ಲಾ ಆತ್ಮಕಥೆಗಳು ಹೆಣ್ಣುಮಕ್ಕಳದು ಅನ್ನುವುದು ಈ ಪುಸ್ತಕದ ಮಹತ್ವವನ್ನು ಇನ್ನಷ್ಟು ಹೆಚ್ಚಿಸಿದೆ.

**ಪ್ರಕಾಶಕರು:** ನಂ. ೪೦೫, 'ಉಮಾಶಂಕರ', ೧ನೇ ಎನ್ ಬ್ಲಾಕ್, ೧೯ನೇ 'ಜಿ' ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು-೫೬೦೦೧೦




## ಬೆಳಗಿನ ಬೆರಗು

**ಲೇ. ಜಿ.ಎನ್. ಮಲ್ಲಿಕಾರ್ಜುನ**

ಬೆಲೆ: ರೂ. ೭೫/-

'ಬೆಳಗಿನ ಬೆರಗು' ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ಅಭಿವೃದ್ಧಿ ಸಾಹಿತ್ಯದ ಬಗೆಗಿನ ಲೇಖನಗಳನ್ನು ಒಳಗೊಂಡ ಕೃತಿ.

ಜಿ.ಎನ್. ಮಲ್ಲಿಕಾರ್ಜುನರು ಕಳೆದ ಆರೇಳು ವರ್ಷಗಳಲ್ಲಿ ವಿವಿಧ ಪತ್ರಿಕೆಗಳಲ್ಲಿ, ಸಂಚಿಕೆಗಳಲ್ಲಿ ಪ್ರಕಟಿತವಾದ ಲೇಖನಗಳನ್ನು ಒಳಗೊಂಡಂತೆ ವಿವಿಧ ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿಚಾರಗಳನ್ನು ಸಂಗ್ರಹಿಸಿ ಲೇಖನಗಳ ರೂಪ ಕೊಟ್ಟಿದ್ದಾರೆ. ಈ ಲೇಖನಗಳನ್ನು ಹೊಸ ಪ್ರಸ್ತುತತೆಯ ನೆಲೆಯಲ್ಲಿ ಓದಬಹುದಾಗಿದೆ.

**ಪ್ರಕಾಶಕರು:** ಲೋಹಿಯಾ ಪ್ರಕಾಶನ, ಬಳ್ಳಾರಿ.

## ಕುವೆಂಪು ಕಾದಂಬರಿ ಎರಡು ಅಧ್ಯಯನಗಳು

**ಲೇ. ಟಿ.ಪಿ. ಅಶೋಕ**

ಬೆಲೆ: ರೂ. ೫೫/-

ಕುವೆಂಪು ಅವರ ಕಾದಂಬರಿಗಳ ದಟ್ಟಲೋಕದೊಳಕ್ಕೆ ನಮ್ಮನ್ನು ಕೊಂಡೊಯ್ಯುವ ಟಿ.ಪಿ. ಅಶೋಕ ಅವರ ಈ ವಿಮರ್ಶಾಕೃತಿಯು ಆ ಕಾದಂಬರಿಗಳ ಸೂಕ್ಷ್ಮ ವಿವರಗಳನ್ನು ನಮಗೆ ಪರಿಚಯಿಸಿ, ಆ ಮೂಲಕ ಕುವೆಂಪು ಕಾಣ್ಕೆಯ ಒಳಗೇ ಇರುವ ವೈಶಿಷ್ಟ್ಯ ವೈವಿಧ್ಯಗಳನ್ನು ತೆರೆಸಿಕೊಡುತ್ತದೆ.
ಓದುಗ-ವಿದ್ವದ್ವಿಮರ್ಶಕರಿಬ್ಬರಿಗೂ ಉಪಯುಕ್ತವೆನಿಸುವಂತೆ ಚರ್ಚಿಸುವ ಸಮರ್ಥ ವಿಮರ್ಶೆ ಇಲ್ಲಿದೆ.

**ಪ್ರಕಾಶಕರು:** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಶಿವಮೊಗ್ಗ - ೫೭೭ ೪೧೭.




## ಎದೆಗಾರಿಕೆ

**ಲೇ. ಶ್ರೀಧರ್**

ಬೆಲೆ: ರೂ. ೫೦/-

ಕಥೆ ವಾಸ್ತವಕ್ಕೆ ದೂರ. ಆದರೆ ವಾಸ್ತವವೇ ಕಥೆಯ ರೂಪ ಪಡೆದಾಗ ಅದರ ಖದರ್ರೇ ಬೇರೆ. ಅಂತಹ ಈ 'ಎದೆಗಾರಿಕೆ' ಭೂಗತ ಜಗತ್ತಿನ ಪಾತಕಿಗಳ ಅಂತರಾಳದಲ್ಲೂ ಹುದುಗಿರುವಂತಹ ಸಾಮಾನ್ಯ ಮನುಷ್ಯತ್ವವನ್ನು ಬಿಂಬಿಸುತ್ತದೆ. ಪಾತಕದ ಘಟನೆಯೇ ಇದರ ಕಥಾ ವಸ್ತು. ಕೊಲೆ ಮಾಡಲಿರುವವ ಹಾಗೂ ಕೊಲೆಯಾಗಲಿರುವವ ಇಬ್ಬರೂ ಮುಖಾಮುಖಿ ಕುಳಿತು ಒಬ್ಬರಿಗೊಬ್ಬರು ಬೆರೆತು ಸಂಭಾಷಿಸುವ ಮನೋಜ್ಞ ಚಿತ್ರಣವನ್ನು ಲೇಖಕರು ಕಟ್ಟಿಕೊಟ್ಟಿದ್ದಾರೆ.

**ಪ್ರಕಾಶಕರು:** ಅಗ್ನಿ ಪ್ರಕಾಶನ, ಬೆಂಗಳೂರು.

## ತೇಜಸ್ವಿ ಕಥನ

**ಲೇ. ಟಿ.ಪಿ. ಅಶೋಕ**

ಬೆಲೆ: ರೂ. ೮೦/-

ಕನ್ನಡದ ಪ್ರಮುಖ ಗದ್ಯ ಬರಹಗಾರರಾದ ಪೂರ್ಣ ಚಂದ್ರ ತೇಜಸ್ವಿ ಅವರ ಕಥೆ, ಕಾದಂಬರಿ, ಪ್ರಬಂಧ, ಪ್ರವಾಸಕಥನ ಮೊದಲಾದ ಬರಹಗಳನ್ನು ಒಟ್ಟಾಗಿ ಇಟ್ಟುಕೊಂಡು ತೇಜಸ್ವಿಯವರ ಕೃತಿಗಳ ಹಿಂದಿರುವ ದರ್ಶನ ಯಾವ ಬಗೆಯದು? ಎಂಬುದನ್ನು ಈ ಕೃತಿಯಲ್ಲಿ ಚರ್ಚಿಸಲಾಗಿದೆ.

ಲೇಖಕರು ತೇಜಸ್ವಿಯವರ ಬರಹಗಳಲ್ಲಿ ಕಾಣಸಿಗುವ ಬೌದ್ಧಿಕ ಲಹರಿಯಂಥ ಮಾರ್ಗವೊಂದನ್ನು ಬಳಸಿಕೊಂಡು ಆ ಮೂಲಕ ತೇಜಸ್ವಿ ಜಗತ್ತಿನ ಭೂಪಟವೊಂದನ್ನು ಆವಿಷ್ಕರಿಸಲು ಯತ್ನಿಸಿದ್ದಾರೆ.

**ಪ್ರಕಾಶಕರು:** ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಶಿವಮೊಗ್ಗ - ೫೭೭ ೪೧೭.

...೨೧ನೇ ಪುಟದಿಂದ

ಎರಡು ದಶಕಗಳ ಹಿಂದೆ, ಉತ್ತರ ಪ್ರದೇಶದ ರಾಜಕೀಯ ರಂಗದಲ್ಲಿ ಬಿಎಸ್‌ಪಿಯನ್ನು ಒಂದು ಅನಿಷ್ಟ ಸಂಗತಿಯಾಗಿ ನೋಡಲಾಗುತ್ತಿತ್ತು. ಆ ನಂತರದಲ್ಲಿ ಪಕ್ಷದ ನಾಮನಿರ್ದೇಶಕರು ಕೆಲವೇ ನೂರು ಮತಗಳನ್ನು ಪಡೆಯುತ್ತಿದ್ದರು. ಇಂದು ಬಿಎಸ್‌ಪಿಯು ರಾಜ್ಯದಲ್ಲಿ ಪ್ರಮುಖ ಪಾತ್ರವಹಿಸಿದೆ. ಕಾಂಗ್ರೆಸ್ ಭಾರತದ ಹಳೆಯದಾದ ಮತ್ತು ಅತ್ಯಂತ ದೊಡ್ಡದಾದ ರಾಜಕೀಯ ಪಕ್ಷ, ಇನ್ನೊಂದೆಡೆ, ಬಿಎಸ್‌ಪಿಯು ಬೆಳೆಯುತ್ತಿರುವ ದಿನಗಳಲ್ಲೇ ಅದೇ ರೀತಿಯ ಘನತೆಯನ್ನು ಗಳಿಸುತ್ತಿದೆ. ಒಂದೊಮ್ಮೆ ಯುಪಿಯ ರಾಜಕೀಯವನ್ನೇ ಕಿತ್ತುಕೊಂಡ ಎಡಪಕ್ಷವು ಇಂದು ಅದೇ ಘನತೆಯನ್ನು ಕಳೆದುಕೊಂಡಿದೆ. ಇದರ ನಾಮ ನಿರ್ದೇಶಕರಿಗೆ ಕೆಲವು ನೂರು ಮತಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಆದರೂ, ಯುಪಿಯ ಚುನಾವಣೆಗಳಲ್ಲಿ ಕಾಂಗ್ರೆಸ್ ಅಥವಾ ಎಡಪಕ್ಷವು ಸ್ಪರ್ಧಿಸುವುದನ್ನು ನಿಲ್ಲಿಸಬೇಕೆಂಬುದನ್ನು ಯೋಚಿಸುತ್ತಿಲ್ಲ.

**ದಲಿತ್ ಡೈರಿ**

ಬಿಎಸ್‌ಪಿ ನಾಯಕಿ ಮಾಯಾವತಿ

# ಸವಾಲುಗಳು ದ್ವಿಗುಣಗೊಳ್ಳುತ್ತಿವೆ

ದಶಕದ ಹಿಂದೆ, ಮರಾಠ ಸಮಾಜವು, ಮರಾಠ ಪ್ರಾಧಾನ್ಯತೆಯನ್ನು ಕಳೆದುಕೊಳ್ಳುವುದರತ್ತ ಸಾಗಿತ್ತು. ಆದರೆ 'ಬಲಿಪಶು' ಗುಂಪುಗಳು ಮರಾಠ ಪ್ರಾಧಾನ್ಯತೆಯನ್ನು ಪುನಃ ಸ್ಥಾಪನೆ ಮಾಡುವವರಾರು ಎಂಬುದನ್ನು ಇನ್ನೂ ನಿರ್ಧರಿಸಿಲ್ಲ. ಉದಾಹರಣೆಗೆ ಶಿವಸೇನೆಯು ಮರಾಠ-ಕುಣಬಿ ಜಾತಿ ಸಮುದಾಯವನ್ನು ಇಬ್ಭಾಗ ಮಾಡಲು ಪ್ರಯತ್ನಿಸುತ್ತಿದೆ. ಎಲ್ಲ ಕುಣಬಿಗಳು ಮರಾಠರೆ, ಆದರೆ ಎಲ್ಲ ಮರಾಠರು ಕುಣಬಿಗಳಲ್ಲ. ಚಾರಿತ್ರಿಕವಾಗಿ ಕುಣಬಿಗಳು ಮಾತ್ರ ಇದ್ದರಲ್ಲದೆ, ಮರಾಠರಲ್ಲಿ ನಿಜಾಮ್ ಮತ್ತು ಮೊಘಲರು ಮತ್ತು ನಂತರ ಬ್ರಿಟಿಷರ ಕೈಕೆಳಗೆ, ೯೬ ಕುಲಗಳು, ಹಿಂದಿನ ರಾಜರು, ಜಾಗೀರುದಾರರು ಮತ್ತು ಮುಖ್ಯಸ್ಥರನ್ನು ಮರಾಠರೆಂದು ಗುರುತಿಸಲಾಯಿತು. ಕುಣಬಿಗಳು ಸಾಮಾಜಿಕ - ಆರ್ಥಿಕ ದೃಷ್ಟಿಯಲ್ಲಿ ಒಂದು ಸಣ್ಣ ರೈತ ಸಮುದಾಯವಾಗಿಯೇ ಉಳಿದುಕೊಂಡರು. ಮಾನಸಿಕ ನೆಲೆಯಲ್ಲಿ ಮರಾಠತನವನ್ನು ಪಡೆದುಕೊಂಡವರು. ಕಾಂಗ್ರೆಸ್ ಅವರಿಗೆ ಸೇರಿದ್ದು.

ಕೆಲವು ವರ್ಷಗಳಿಂದ ಶಿವಸೇನೆಯು ಮರಾಠ - ಕುಣಬಿ ಜಾತಿ ಸಮೂಹವನ್ನು 'ಮರಾಠರು' ಮತ್ತು 'ಕುಣಬಿಗಳು' ಎಂಬುದಾಗಿ ವಿಭಾಗಿಸಲು ಅಪೇಕ್ಷಿಸಿತು. ಈ ಪ್ರಕ್ರಿಯೆಯಲ್ಲಿ ಕುಣಬಿಗಳ ನೈಜ ಮರಾಠತನವನ್ನು ಒಪ್ಪಿಕೊಂಡಿದೆ.

ಶಿವಸೇನೆಯು ಹರಡಿದ ಸಾಮಾಜಿಕ ವಿಧಾನವು ಶಿವಾಜಿಯ ಪೂರ್ವಾರ್ಜಿತ ಆಸ್ತಿಯ ಕಾನೂನು ಬಾಹಿರ ಹಕ್ಕುದಾರನಾಗಿದೆ. ಈ ಕಾನೂನು ಬಾಹಿರ ಹಕ್ಕುದಾರರು ಶಿವಾಜಿ ಘನೋದ್ದೇಶಕ್ಕೆ ದ್ರೋಹ ಬಗೆದರು. ಶಿವಸೇನೆಯ ಚಿಲ್ಲರೆ ಕೆಲಸ ಶುರುವಾಗಿದೆ. ಬ್ರಾಹ್ಮಣ - ಬನಿಯಾಗಳ ತೇಪೆ ಹಚ್ಚುವಿಕೆಯಿಂದ ಬಿಜೆಪಿ ಬಂದಿದೆ.

ದಲಿತ ಚಳವಳಿಯ ತಾಯ್ನಾಡಿನಲ್ಲೇ ದಲಿತರು ತಾವಾಗಿಯೇ ಅಥವಾ ಆರ್‌ಪಿಐ ಮೂಲಕ ಕಾಂಗ್ರೆಸ್‌ನೊಂದಿಗಿದ್ದಾರೆ. ಕಾಂಗ್ರೆಸನ್ನು ಬ್ರಾಹ್ಮಣ ವಿರೋಧಿ ವೇದಿಕೆ ಯಾಗಿ ನೋಡುತ್ತಿದ್ದಾರೆ ದಲಿತರು. ಸಾಮಾಜಿಕ ವಾಸ್ತವತೆ ಏನೇ ಇದ್ದರೂ ಮರಾಠರು ದಲಿತರ ಪೀಡಕರು, ನಿಧಾನವಾಗಿ ಬ್ರಾಹ್ಮಣ ವಿರೋಧಿ ಅಲೆಯು

> ಮಹಾರಾಷ್ಟ್ರದಲ್ಲಿ ಕಾಂಗ್ರೆಸ್-ಎನ್‌ಸಿಪಿಗಳು ಮರಾಠ ಪ್ರಾಧಾನ್ಯತೆಯ ಮೇಲೆ ತನ್ನ ರಾಜಕೀಯ ಅಸ್ತಿತ್ವದ ನೆಲೆಯನ್ನೊಂದಿದೆ. ಕೂಡಲೇ ಇದು ಶಿವಸೇನೆ - ಬಿಜೆಪಿ ಮೈತ್ರಿಕೂಟಕ್ಕೆ ಸಹಾಯ ಮಾಡುತ್ತದೆ. ಬಿಎಸ್‌ಪಿ ತನ್ನ ಸ್ವಂತ ಬಲದಿಂದ ರಾಜ್ಯದಲ್ಲಿ ಸರ್ಕಾರ ರಚಿಸಲು ಸಾಧ್ಯವಿಲ್ಲ. ಆದರೆ ಅರ್ಧ ದಶಕದೊಳಗೆ ಇದು ಮಹಾರಾಷ್ಟ್ರದ ರಾಜಕೀಯವನ್ನು ಈಗಿನ ದ್ವಿತೀಯ ಶಕ್ತಿಯಿಂದ ತೃತೀಯ ಶಕ್ತಿಗಳಿಗೆ ಪರಿವರ್ತಿಸುತ್ತದೆ. ದಲಿತ ರಾಜಕೀಯ ಪಕ್ಷವೊಂದು, ಭಾರತೀಯ ಸಮಾಜವು ಕ್ರಾಂತಿಕಾರಕ ಪರಿವರ್ತನೆಯನ್ನು ಆಯ್ಕೆ ಮಾಡಿಕೊಂಡಾಗ ಮಾತ್ರ ತನ್ನ ದಾರಿ ಕಂಡುಕೊಳ್ಳಲು ಸಾಧ್ಯ. ಅಥವಾ ಅದರ ಗೈರುಹಾಜರಿಯಲ್ಲಿ ಸಮಾಜವು ದಬ್ಬಾಳಿಕೆಯೆಡೆಗೆ ಸಾಗುತ್ತದೆ. ಮರಾಠ ಪ್ರಾಧಾನ್ಯತೆಯನ್ನು ಅಂತ್ಯಗೊಳಿಸಲು ಆರಂಭಿಸುವ ಪ್ರಕ್ರಿಯೆಯನ್ನು ತೀವ್ರಗೊಳಿಸುವಲ್ಲಿ ಬಿಎಸ್‌ಪಿಯು ಪಾಲುದಾರನಾಗುತ್ತಿದೆ. ಮರಾಠ ಸಮಾಜಕ್ಕೆ ಬಿಎಸ್‌ಪಿಯಿಂದ ಕ್ರಿಯಾತ್ಮಕವಾದ ದಲಿತ ಪಕ್ಷದ ಅವಶ್ಯಕತೆಯಿದೆ.

ಕಡಿಮೆಯಾಯಿತು. ದಲಿತರು ಮರಾಠ ಪ್ರಾಧಾನ್ಯತೆಯನ್ನು ಕೈಗೆತ್ತಿಕೊಳ್ಳುವ ಗದ್ದಲ ಶುರುವಾಯಿತು. ಕಾಂಗ್ರೆಸ್-ಎನ್‌ಸಿಪಿಯಲ್ಲಿ ಆರ್‌ಪಿಐಯ ವಿವಿಧ ಪಕ್ಷಗಳಿಗಿಂತ ಚೆನ್ನಾಗಿ ಇದನ್ನು ಅರ್ಥೈಸಿಕೊಂಡಿದೆ.

ಕಾಂಗ್ರೆಸ್ - ಎನ್‌ಸಿಪಿಯ ದಲಿತ ಮುಖ್ಯಮಂತ್ರಿಯ ಆಯ್ಕೆಯು ಈ ವಾಸ್ತವತೆಯನ್ನು ಪ್ರತಿಬಿಂಬಿಸುತ್ತದೆ. ಮಂತ್ರಾಲಯದ ಮರಾಠರನ್ನು ದೂರಮಾಡುವ ಕಾಂಗ್ರೆಸ್-ಎನ್‌ಸಿಪಿ ತಂತ್ರವು ಶಿವಸೇನೆ - ಬಿಜೆಪಿಯ ಮರಾಠ ವಿರೋಧಿ ಚಲನೆಯನ್ನು ಠುಸ್(ತೂತು) ಮಾಡಿತು.

ಶಿಂಧೆಯನ್ನು ಮುಖ್ಯಮಂತ್ರಿಯನ್ನಾಗಿಸುವ ಮೂಲಕ ದಲಿತರನ್ನು ಅಲ್ಲೇ ಉಳಿಸಿಕೊಳ್ಳಲಾಯಿತು. ಶಿಂಧೆಯನ್ನು ದಲಿತ ಅನನ್ಯತೆಯನ್ನ ಕಡೆಗಣಿಸಲಾಗಿದೆ ಎಂಬುದನ್ನು ಕಾಂಗ್ರೆಸ್- ಎನ್‌ಸಿಪಿಗಳು ಅರಿತುಕೊಂಡಿಲ್ಲ. ಅಲ್ಲದೆ ಈತ ರಾಜ್ಯದ ಪ್ರಧಾನವಾಹಿನಿಯ ದಲಿತ ಸಮುದಾಯಕ್ಕೆ ಸೇರಿದವನಲ್ಲ. ಇಡೀ ಆತನ ರಾಜಕೀಯ ಜೀವನದಲ್ಲೇ ಯಾವುದೇ ದಲಿತ ಅಜೆಂಡಾದ ಬೆನ್ನು ಹತ್ತಿಲ್ಲ. ಎಲ್ಲ ರೀತಿಯ ದಲಿತ ಚಳವಳಿಗಳಿಂದಲೂ ಕಣ್ಣಿಗೆ ಕಾಣುವಷ್ಟು ಮಟ್ಟದ ಅಂತರವನ್ನು ಇಟ್ಟುಕೊಂಡಿದ್ದರು. ಇದನ್ನು ಅರಿತು ಇನ್ನಾದರೂ ಆರ್‌ಪಿಐ ಕಾಂಗ್ರೆಸ್ - ಎನ್‌ಸಿಪಿಯಿಂದ ಹೊರಬರಬೇಕಿದೆ. ಆಗಲೇ ದಲಿತ ಪರವಾದ ಕಾಳಜಿ ಸಾಧ್ಯ.

ಬಿಎಸ್‌ಪಿಯು ಕೇಂದ್ರ ಪಾತ್ರ ವಹಿಸಿದ ಅಖಿಲಭಾರತ ದಲಿತ ಚಳವಳಿಯ ಸಂದರ್ಭದಲ್ಲಿ ಮರಾಠಿ-ದಲಿತ ಚಳವಳಿಯು ತನ್ನ ಪಾತ್ರವನ್ನು ಶೋಧಿಸಲು ಆರಂಭಿಸಿದೆ. ಇಂಥ ಸಾಮಾಜಿಕ-ರಾಜಕೀಯ ಸಂದರ್ಭದಲ್ಲಿ ಬಿಎಸ್‌ಪಿಯ ಪಾತ್ರವನ್ನು ನೋಡಬೇಕು. ಮಹಾರಾಷ್ಟ್ರದ ತಳಮಳಗೊಂಡ, ಆಕಾಂಕ್ಷಿತ ದಲಿತ ಸಮುದಾಯವು 'ಮರಾಠಿ ದಲಿತ ಚಳವಳಿ' ಗೂಡಿನಿಂದ ಹೊರಬರಲು ತವಕಿಸುತ್ತಿದೆ. ಬಿಎಸ್‌ಪಿಗೆ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಲು ಒಂದು ಚಿನ್ನದಂಥ ಅವಕಾಶ ಸಿಕ್ಕಿದೆ. ಕುಣಬಿಯೇತರ ಓಬಿಸಿಗಳನ್ನು ಕಾಂಗ್ರೆಸ್-ಎನ್‌ಸಿಪಿ ಮೈತ್ರಿಯಿಂದ ಆಕರ್ಷಿಸಲು ರೂಪಿಸಲಾಗಿದೆ ಮತ್ತು ಮರಾಠ ಕುಣಬಿಯ ವಿರುದ್ಧ ದಲಿತರನ್ನು ತಟಸ್ಥರನ್ನಾಗಿಸುವ ಮೂಲಕ ಅವರ ಮತಗಳನ್ನು ಮರಳಿ ಪಡೆಯುವುದು ಮುಖ್ಯ.

ಫಲಿತಾಂಶವನ್ನು ಪರಿಗಣಿಸದೆ, ಬಿಎಸ್‌ಪಿಯು ಮಹಾರಾಷ್ಟ್ರದಲ್ಲಿ ನೆಲೆಯೂರಬೇಕು. ಅದು ಕೆಲವು ಸ್ಥಾನಗಳನ್ನು ಪಡೆದರೆ, ಆವರ್ತ ಪರಿಣಾಮವುಂಟಾಗುವುದು. 'ಬಿಎಸ್‌ಪಿ ಟಿಕೆಟಿನ ಮೇಲೆ ಜಯ ಪಡೆದರೆ ಇದು ಸಾಧ್ಯವಾಗುತ್ತದೆ' ಪ್ರಧಾನವಾಹಿನಿ ಪಕ್ಷಗಳಲ್ಲಿ ಸ್ಥಾನ ಪಡೆಯದ, ತಮ್ಮದೇ ಸಮುದಾಯವನ್ನು ಹೊಂದಿರುವ ನಾಯಕರು ಪ್ರತೀ ರಾಜ್ಯದಲ್ಲಿದ್ದಾರೆ. ಅನೇಕ ನಾಯಕರು ತಮ್ಮ ಸ್ವಂತ ಬಲದೊಂದಿಗೆ ಶೇ ೧೫ರ ಸಂಪೂರ್ಣವಾದ ಸಾಮಾಜಿಕ ಬಲದಿಂದ ಬಿಎಸ್‌ಪಿ ಟಿಕೆಟ್‌ನಿಂದ ಚುನಾವಣೆಗಳನ್ನು ಗೆಲ್ಲುತ್ತಾರೆ. ಇದರಿಂದ ಏನೂ ತೊಂದರೆಯಿಲ್ಲ. ಆದರೆ ಕಾಂಗ್ರೆಸ್-ಎನ್‌ಸಿಪಿಗಳು ಮರಾಠ ಪ್ರಾಧಾನ್ಯತೆಯ ಮೇಲೆ ತನ್ನ ರಾಜಕೀಯ ಅಸ್ತಿತ್ವದ ನೆಲೆಯನ್ನೊಂದಿದೆ. ಕೂಡಲೇ ಇದು ಶಿವಸೇನೆ - ಬಿಜೆಪಿ ಮೈತ್ರಿಕೂಟಕ್ಕೆ ಸಹಾಯ ಮಾಡುತ್ತದೆ.

ಬಿಎಸ್‌ಪಿ ತನ್ನ ಸ್ವಂತ ಬಲದಿಂದ ರಾಜ್ಯದಲ್ಲಿ ಸರ್ಕಾರ ರಚಿಸಲು ಸಾಧ್ಯವಿಲ್ಲ. ಆದರೆ ಅರ್ಧ ದಶಕದೊಳಗೆ ಇದು ಮಹಾರಾಷ್ಟ್ರದ ರಾಜಕೀಯವನ್ನು ಈಗಿನ ದ್ವಿತೀಯ

...೪೦ ನೇ ಪುಟಕ್ಕೆ

# ಮೆಕಾಲೆಯ ನಡವಳಿಗಳು

೧೮೧೩ರಲ್ಲಿ ಬ್ರಿಟಿಷ್ ಸಂಸತ್ತು 'ಸಾಹಿತ್ಯದ ಪುನರುಜ್ಜೀವನ ಮತ್ತು ಬೆಳವಣಿಗೆಗಾಗಿ ಮತ್ತು ಭಾರತದ ವಿದ್ಯಾವಂತ ಸ್ಥಳೀಯರನ್ನು ಉತ್ತೇಜಿಸುವುದಕ್ಕಾಗಿ ಮತ್ತು ಬ್ರಿಟಿಷ್ ಸಂಸ್ಥಾನದ ನಿವಾಸಿಗಳಿಗೆ ವೈಜ್ಞಾನಿಕ ಜ್ಞಾನವನ್ನು ಪ್ರಾರಂಭಿಸುವುಕ್ಕೆ ಮತ್ತು ಬೆಳೆಸುವುದಕ್ಕಾಗಿ ವಾರ್ಷಿಕವಾಗಿ ೧ ಲಕ್ಷ ರೂಪಾಯಿಯನ್ನು ಮೀಸಲಿರಿಸಬೇಕೆಂದು ಈಸ್ಟ್ ಇಂಡಿಯಾ ಕಂಪನಿಗೆ ಆದೇಶಿಸಿತು. ಉತ್ತೇಜಿಸಬೇಕಾದ ಶಿಕ್ಷಣ ವಿಧಾನ ಹಾಗೂ ಶಿಕ್ಷಣ ಮಾಧ್ಯಮ ಇವುಗಳ ಮೇರೆಗೆ ಕಂಪನಿಯ ಅಧಿಕಾರಿಗಳಲ್ಲಿ ಎರಡು ಗುಂಪು ಉಂಟಾಯಿತು. ಓರಿಯಂಟಲ್ (ಪೌರಸ್ತ್ಯ) ಗುಂಪು ಅಸ್ತಿತ್ವದಲ್ಲಿರುವ ಭಾರತೀಯ ಸ್ಥಳೀಯ ಶಿಕ್ಷಣ ಪದ್ಧತಿಯು ಶ್ರೇಷ್ಠವಾದದ್ದು ಶಿಕ್ಷಣ ಮಾಧ್ಯಮ ಸಂಸ್ಕೃತ ಅಥವಾ ಪರ್ಷಿಯನ್ ಇರಬೇಕೆಂದು ಒತ್ತಾಯಿಸಿದರು. ಲಾರ್ಡ್ ಮೆಕಾಲೆಯ ಮುಖಂಡತ್ವದ ಆಂಗ್ಲ ಗುಂಪು, ಭಾರತಕ್ಕೆ ಯೂರೋಪಿಯನ್ ಶಿಕ್ಷಣ ಪದ್ಧತಿಯನ್ನು ಅಳವಡಿಸಬೇಕೆಂದು, ಇಂಗ್ಲಿಷ್ ಶಿಕ್ಷಣ ಮಾಧ್ಯಮವಾಗಿರಬೇಕೆಂದು ಬಲವಾಗಿ ವಾದಿಸಿತು.

ಆಗಿನ ಗವರ್ನರ್ ಜನರಲ್‌ನಾದ ಬೆಂಟಿಂಕನು ಸ್ವಲ್ಪ ಮಾರ್ಪಾಡಿನೊಂದಿಗೆ ೧೮೩೫ರ ಮಾರ್ಚ್ ೭ ರಂದು ಮೆಕಾಲೆಯ ವಾದವನ್ನು ಅನುಮೋದಿಸಿದನು. ಇಲ್ಲಿ ಮೆಕಾಲೆಯ ಹೊಸ ಯುಗಾರಂಭದ ನಡವಳಿಗಳಿಂದ ಉದ್ಧರಿಸಿದ ಭಾಗಗಳನ್ನು ನೀಡಲಾಗಿದೆ. ಇದರಲ್ಲಿ ಭಾರತೀಯ ಆಧುನಿಕತೆಯ ಜನಕನು ದೇಶೀಯ ಹಿಂದೂ/ಮುಸ್ಲಿಂ ಶಿಕ್ಷಣ ಪದ್ಧತಿಯನ್ನು ಮುಂದುವರಿಸಿದುದರ ವಿರುದ್ಧ ಮಾಡಿದ ಎಲ್ಲ ವಾದಗಳನ್ನು ಬಳಸಿದ್ದಾನೆ. 'ಭಾರತದ ಈ ಭಾಗದ ಸ್ಥಳೀಯರು ಸಾಮಾನ್ಯವಾಗಿ ಮಾತನಾಡುವ ಭಾಷೆಯಲ್ಲಿ ಸಾಹಿತ್ಯ ಅಥವಾ ವೈಜ್ಞಾನಿಕ ಮಾಹಿತಿಯನ್ನು ಹೊಂದಿಲ್ಲ. ಅಲ್ಲದೆ ಇತರ ದಿಕ್ಕಿನಿಂದ ಅವರನ್ನು ಸಮೃದ್ಧರನ್ನಾಗಿಸುವವರೆಗೆ ಅವರು ಬಡವರಾಗಿ ಮತ್ತು ಅನಾಗರಿಕರಾಗಿರುತ್ತಾರೆ....'

'ನಾನು ಮಹತ್ವದ ಅರೆಬಿಕ್ ಮತ್ತು ಸಂಸ್ಕೃತ ಗ್ರಂಥಗಳನ್ನು ಓದಿದ್ದೇನೆ... ಪೌರಸ್ತ್ಯವಾದಿಗಳು ತಮ್ಮ ಮೌಲ್ಯಮಾಪನಕ್ಕೆ ಪೌರಸ್ತ್ಯ ಚಿಂತನೆಯನ್ನು ಅನುಸರಿಸುವುದಕ್ಕೆ ನಾನು ಸಂಪೂರ್ಣ ಒಪ್ಪುತ್ತೇನೆ. ಭಾರತದ ಮತ್ತು ಅರೇಬಿಯಾದ ಸಮಗ್ರ ಸ್ಥಳೀಯ ಸಾಹಿತ್ಯಕ್ಕಿಂತ ಬೆಲೆಬಾಳುವ ಯುರೋಪಿಯನ್ ಸಾಹಿತ್ಯವನ್ನು ನಿರಾಕರಿಸಲು ಕಾರಣವೇನೆಂದು ನನಗೆ ಗೊತ್ತಾಗುತ್ತಿಲ್ಲ.'

'ನಾನು ಹೇಳುವುದು ಅತಿಶಯೋಕ್ತಿಯಿಂದ ಕೂಡಿಲ್ಲ ಎಂಬ ನಂಬಿಕೆ ನನಗಿದೆ. ಎಲ್ಲ ಲಿಖಿತ ಪುಸ್ತಕಗಳಿಂದ ಸಂಗ್ರಹಿಸಿದ ಚಾರಿತ್ರಿಕ ಮಾಹಿತಿಯು ಇಂಗ್ಲೆಂಡಿನ ಪ್ರಾಥಮಿಕ ಶಾಲೆಗಳಲ್ಲಿ ಬಳಸಿದ ಹೆಚ್ಚಿನ ನಿಕೃಷ್ಟ ಸಾರಾಂಶಗಳಲ್ಲಿ ಕಂಡುಬರಬಹುದು.'

'ನಾನು ಉಲ್ಲೇಖಿಸುವ ಮೊದಲ ಉದಾಹರಣೆಯೆಂದರೆ ಹದಿನೈದನೇ ಶತಮಾನದ ಕೊನೆಯಲ್ಲಿ ಮತ್ತು ಹದಿನಾರನೇ ಶತಮಾನದ ಆರಂಭದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳ ಪೈಕಿ ಪ್ರಮುಖ ಪುನರುಜ್ಜೀವನವಾಗಿದೆ. ಆ ಕಾಲದ ಪ್ರಯೋಜನಕಾರಿ ಓದು ಪ್ರಾಚೀನ ಗ್ರೀಕ್ ಮತ್ತು ರೋಮನ್ ಬರಹಗಳಲ್ಲೇ ಇತ್ತು. ಸಾರ್ವಜನಿಕ ಶಿಕ್ಷಣ ಸಮಿತಿಯಾಗಿ ನಮ್ಮ ಪೂರ್ವಜರ ಕಾರ್ಯನಿರ್ವಹಣೆಯು ಇದುವರೆಗೂ ಹಾಗೇ ಇತ್ತು; ಅವರು ಸಿಸೆರೊ ಮತ್ತು ಟಾಸಿಟಸ್ ಭಾಷೆಯನ್ನು ನಿರಾಕರಿಸಿದ್ದಾರೆಯೇ ? ನಮ್ಮ ದ್ವೀಪದ ಹಳೆಯ ಭಾಷೆಗಳಿಗೆ ಅವರ ಗಮನವನ್ನು ಸೀಮಿತಗೊಳಿಸಿದರೇ? ಇಂದು ಇಂಗ್ಲೆಂಡ್ ಏನಾಗಿದೆಯೋ ಅದಕ್ಕೆ ಅವರು ವಿಶ್ವವಿದ್ಯಾನಿಲಯಗಳಲ್ಲಿ ಏನನ್ನು ಪ್ರಕಟಿಸದೆ/ಕಲಿಸದೆ ಕೇವಲ ಆಂಗ್ಲೋ-ಸಾಕ್ಸನ್ ಮತ್ತು ನಾರ್ಮನ್-ಫ್ರೆಂಚ್‌ನ ರಮ್ಯತೆಯನ್ನು ಮಾತ್ರ ಮಾಡಿದರೆ ? ಹೇಗೆ ಗ್ರೀಕ್ ಮತ್ತು ಲ್ಯಾಟಿನ್ ಸಮಕಾಲೀನ ಮೂರ್ ಮತ್ತು ಅಸ್ಕಾಂಗೆ ಮಾಡಿತ್ತೊ ಹಾಗೆಯೇ ನಮ್ಮ ಭಾಷೆ ಭಾರತೀಯ ಜನಕ್ಕೂ ಮುಖ್ಯವಾದುದು.'

'ಇದು ದೇಶೀಯ ಜನರ ಸಹಕಾರ ಪಡೆಯಲು ಎಂದು ಹೇಳಲಾಗುತ್ತಿದೆ. ಸಂಸ್ಕೃತ ಮತ್ತು ಅರೇಬಿಕ್ ಕಲಿಸುವ ಮೂಲಕ ಮಾತ್ರ ಇದನ್ನು ಸಾಧಿಸಬಹುದು ಎನ್ನುವುದಕ್ಕೆ ಗ್ಯಾರಂಟಿ ಏನೂ ಇಲ್ಲ.'

'ಸ್ಥಳೀಯರ ಸಹಕಾರ ಗಳಿಸುವಲ್ಲಿ ಎಲ್ಲಾ ಪ್ರಯತ್ನಗಳು ವಿಫಲಗೊಂಡಿರುವುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ಎದುರಿಗಿವೆ. ಆದ್ದರಿಂದ ಅವರ ಬೌದ್ಧಿಕ ಆರೋಗ್ಯವನ್ನು ಬದಿಗೊತ್ತಿ ಅವರ ಬೌದ್ಧಿಕ ಅಭಿರುಚಿಯನ್ನು ಪರಿಗಣಿಸುವುದು ಕೆಟ್ಟ ಪರಿಣಾಮ ಬೀರುತ್ತದೆ.'

'ಅವರು ತಪ್ಪು ಧರ್ಮದಲ್ಲಿದ್ದಾರೆಂದು ತಿಳಿದು ಅವರಿಗೆ ತಪ್ಪು ಚರಿತ್ರೆ, ತಪ್ಪು ಖಗೋಳಶಾಸ್ತ್ರ ತಪ್ಪು ಔಷಧಿಯನ್ನು ಕಲಿಸಲಾಗದು... ನಾವು ಹಾಗೇನಾದರೂ ವರ್ತಿಸಿದ್ದೇವೆಂದು ತರ್ಕಿಸಿದ್ದಲ್ಲಿ ರಾಜ್ಯದ ಆದಾಯವನ್ನು ಕತ್ತೆಯನ್ನು ಮುಟ್ಟಿದ ಮೇಲೆ ಶುದ್ಧಗೊಳಿಸಲು ತಮ್ಮ ಯೌವನವನ್ನು ವೇಸ್ಟ್ ಮಾಡುತ್ತಿರುವವರಿಗೆ ನೀಡಲಾಗದು. ಅಥವಾ ಮೇಕೆಯನ್ನು ಕೊಂದ ಪಾಪವನ್ನು ವೇದಗಳ ಪಠಿಸುವುದರಿಂದ ಪರಿಹರಿಸಲಾದೀತೇ ?'

'ಮಿತಿಯಲ್ಲಿರುವ ಸಂಪನ್ಮೂಲಗಳಿಂದ ಜನರಿಗೆ ಶಿಕ್ಷಣ ನೀಡಲು ನಮ್ಮಿಂದ ಸಾಧ್ಯವಿಲ್ಲ. ವರ್ತಮಾನದಲ್ಲಿ ನಾವು ಮಾಡಬಹುದಾದ ಅತ್ಯುತ್ತಮ ಕೆಲಸವೆಂದರೆ ನಾವು ಆಳುತ್ತಿರುವ ಮಿಲಿಯಗಟ್ಟಳೆ ಜನ ಮತ್ತು ನಮ್ಮ ನಡುವೆ ಕೊಂಡಿಯಾಗುವಂತೆ ಅನುವಾದಕ ವರ್ಗವೊಂದನ್ನು ಸೃಷ್ಟಿಸಬೇಕಷ್ಟೆ

ಈ ವರ್ಗ ತನ್ನ ಬಣ್ಣ ಮತ್ತು ರಕ್ತದಲ್ಲಿ ಭಾರತೀಯವಾಗಿದ್ದು ಅಭಿರುಚಿಯಲ್ಲಿ ನೀತಿಯಲ್ಲಿ ಮತ್ತು ಬುದ್ಧಿಯಲ್ಲಿ ಇಂಗ್ಲಿಷ್‌ನಂತಿರಬೇಕು. ಈ ವರ್ಗಕ್ಕೆ ಸ್ಥಳೀಯ ಭಾಷೆಗಳನ್ನು ತಿದ್ದಲು ಬಿಡಬೇಕು. ಹೀಗೆ ಅವರು ತಮ್ಮ ದೇಶೀ ಭಾಷೆಗಳ ಮೂಲಕ ಪಾಶ್ಚಾತ್ಯ ವಿಜ್ಞಾನವನ್ನು ಕಲಿತು, ಈ ದೊಡ್ಡ ಜನಸಂಖ್ಯೆಗೆ ಜ್ಞಾನವನ್ನು ನೀಡಬೇಕು.'

'ನಾನು ಕೂಡಲೇ ಅರೇಬಿಕ್ ಮತ್ತು ಸಂಸ್ಕೃತ ಗ್ರಂಥಗಳ ಪ್ರಕಟಣೆಯನ್ನು ನಿಲ್ಲಿಸಿ, ಕಲ್ಕತ್ತಾದಲ್ಲಿರುವ ಮಾದ್ರಸ ಮತ್ತು ಸಂಸ್ಕೃತ ಕಾಲೇಜನ್ನು ಮುಚ್ಚಿಬಿಡಲು ಇಚ್ಛಿಸುತ್ತೇನೆ'

'ಸಾರ್ವಜನಿಕ ಹಣವನ್ನು ಇಂಥ ಖಾಲಿ ಪಠ್ಯಗಳನ್ನು ಪ್ರಕಟಿಸುವ ಮೂಲಕ ದುಂದು ವೆಚ್ಚ ಮಾಡುವ ಮಂಡಲಿ ನಾವಾಗುತ್ತೇವೆ. ಅಸಂಗತ ಚರಿತ್ರೆ, ಅಸಂಗತ ಅತೀತ ಭೌತಶಾಸ್ತ್ರ ಅಸಂಗತ ಭೌತವಿಜ್ಞಾನ, ಅಸಂಗತ ದೈವಶಾಸ್ತ್ರವನ್ನು ಉತ್ತೇಜಿಸಲು ನಾವು ಪ್ರೋತ್ಸಾಹಿಸಿದಂತಾಗುತ್ತದೆ.'

'ಭಾರತದ ಈ ಭಾಗದ ಸ್ಥಳೀಯರು ಸಾಮಾನ್ಯವಾಗಿ ಮಾತನಾಡುವ ಭಾಷೆಯಲ್ಲಿ ಸಾಹಿತ್ಯ ಅಥವಾ ವೈಜ್ಞಾನಿಕ ಮಾಹಿತಿಯನ್ನು ಹೊಂದಿಲ್ಲ. ಅಲ್ಲದೆ ಇತರ ದಿಕ್ಕಿನಿಂದ ಅವರನ್ನು ಸಮೃದ್ಧರನ್ನಾಗಿಸುವವರೆಗೆ ಅವರು ಬಡವರಾಗಿ ಮತ್ತು ಅನಾಗರಿಕರಾಗಿರುತ್ತಾರೆ....'
'ನಾನು ಮಹತ್ವದ ಅರೆಬಿಕ್ ಮತ್ತು ಸಂಸ್ಕೃತ ಗ್ರಂಥಗಳನ್ನು ಓದಿದ್ದೇನೆ... ಪೌರಸ್ತ್ಯವಾದಿಗಳು ತಮ್ಮ ಮೌಲ್ಯಮಾಪನಕ್ಕೆ ಪೌರಸ್ತ್ಯ ಚಿಂತನೆಯನ್ನು ಅನುಸರಿಸುವುದಕ್ಕೆ ನಾನು ಸಂಪೂರ್ಣ ಒಪ್ಪುತ್ತೇನೆ. ಭಾರತದ ಮತ್ತು ಅರೇಬಿಯಾದ ಸಮಗ್ರ ಸ್ಥಳೀಯ ಸಾಹಿತ್ಯಕ್ಕಿಂತ ಬೆಲೆಬಾಳುವ ಯುರೋಪಿಯನ್ ಸಾಹಿತ್ಯವನ್ನು ನಿರಾಕರಿಸಲು ಕಾರಣವೇನೆಂದು ನನಗೆ ಗೊತ್ತಾಗುತ್ತಿಲ್ಲ.'

## ಸುಡುತೇನೆ ನಾನು

ಸುಡು ಸುಡು ಸುಡುತೇನೆ ನಾನು
ಕಾರಣವು ಯಾರು ?

ಕೈ ತಾಗದೆ ಕಣ್ ಕಾಣದೆ
ಒಳಗೊಳಗೆ ಹೊತ್ತಿ ಉರಿದು
ಜ್ವಾಲೆ ತನ್ನುದ್ದ ನಾಲಗೆ ಚಾಚಿ
ಬಿಸಿ ತಾಕಿ, ಸುತ್ತೆಲ್ಲ ತಲೆ ಹಾಕಿ

ಹೂಗಳ ಚೆಂದ ನಾಶವಾಗಿ
ನಿಂತ ನೆಲವೇ ಶಾಖವಾಗಿ
ತಂಪೆರೆವ ಚಂದ್ರನೂ ಕೆಂಡವಾಗಿ
ಒಡಲಿನೊಳಗೇ ಬೆಂಕಿಯಾಗಿ

ಸುಟ್ಟು ಉರಿವುದೋ ಗಾಳಿಗೆ
ನೀರೆಲ್ಲಿರುವುದೋ ಬಾಳಿಗೆ ?

○ ಬಂದಗದ್ದೆ ರಾಧಾಕೃಷ್ಣ

ದಲಿತ್ ಡೈರಿ

# ಮೊದಲಿನ ಗಾಂಧಿ

ಮಹಾತ್ಮಾ ಗಾಂಧಿಯು ಭಾರತದ ಸ್ವಾತಂತ್ರ್ಯ ಹೋರಾಟವನ್ನು ಪ್ರತಿನಿಧಿಸಿದರೆ ಲಾರ್ಡ್ ಮೆಕಾಲೆಯು ಮೊದಲಿನ ಗಾಂಧಿಯಾಗಿ ಜೀವಿತರಾಗುತ್ತಾರೆ.

ಭಾರತದವರಾಗಿ ಗಾಂಧೀಜಿ ಭಾರತದ ಸ್ವಾತಂತ್ರ್ಯ ಚಳವಳಿಯನ್ನು ಮುನ್ನಡೆಸುವುದು ಸ್ವಾಭಾವಿಕ. ಆದರೆ ಭಾರತೀಯ ಚರಿತ್ರೆಕಾರರು ಭಾರತವನ್ನು ಸ್ವತಂತ್ರ ರಾಷ್ಟ್ರವಾಗಿ ರೂಪಿಸಿದ ಇಂಗ್ಲಿಷ್ ಜನರಿಂದ ದಿಗ್ಭ್ರಮೆಗೊಂಡರು. ಅಸತ್ಯದ ಪರವಾಗಿ ಭಯಾನಕ ಪೂರ್ವಗ್ರಹ ಪ್ರದರ್ಶಿಸಿದರು.

ಜುಲೈ ೧೦, ೧೮೩೩ರಂದು ಭಾರತವು ೧೮೫೮ರಲ್ಲಿ ಬ್ರಿಟಿಷ್ ಸಾಮ್ರಾಜ್ಯದ ವಸಾಹತು ಆಗುವುದಕ್ಕೆ ೨೫ ವರ್ಷಗಳಿಗೆ ಮುಂಚೆ ಲಾರ್ಡ್ ಮೆಕಾಲೆಯು ಬ್ರಿಟಿಷ್ ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಸಿದ್ಧ ಭಾಷಣ ಮಾಡಿದ. ಬ್ರಿಟಿಷ್ ಸಂಸತ್ತು ಮೆಕಾಲೆಯು ಅಧ್ಯಕ್ಷನಾಗಿದ್ದ ಭಾರತಕ್ಕೆ ಮೊದಲ ಕಾನೂನು ಆಯೋಗವನ್ನು ರೂಪಿಸುವ ಮಸೂದೆಯ ಬಗ್ಗೆ ಚರ್ಚಿಸಿತು. ಮತ್ತು ಭಾರತ ದಂಡ ಸಂಹಿತೆಯ ಕರಡನ್ನು ರಚಿಸಿತು. ಈ ದಾಖಲೆಯನ್ನು ಚರಿತ್ರೆಕಾರರು ಸಾರ್ವಜನಿಕಗೊಳಿಸಲಿಲ್ಲ.

**ಉಲ್ಲೇಖಗಳು :**

'ಒಂದು ಸ್ವಾರ್ಥಪರ ಸಂಗತಿಯೆಂದು ಕಾಣ ಬಹುದಾದರೂ ನಮಗೆ ಅನುಕೂಲಕರವಾದುದೆಂದರೆ ಭಾರತೀಯರಿಗೆ ಒಳ್ಳೆಯ ಆಡಳಿತ ಒದಗಿಸಿ, ಸ್ವತಂತ್ರರಾಗಿರುವಂತೆ ಮಾಡುವುದು ಅವರು ದುರಾಡಳಿತ ಮತ್ತು ಅಧೀನತೆಗೆ ಒಳಗಾಗುವುದು ಏನೂ ಪ್ರಯೋಜನಕಾರಿಯಾದುದಲ್ಲ. ನಮ್ಮ ಬಟ್ಟೆಯನ್ನು ಧರಿಸಿ, ನಮಗೆ ಅಡುಗೆ ಮಾಡುವವರಾಗಿದ್ದು ಇಂಗ್ಲಿಷ್ ಕಲೆಕ್ಟರ್ ಮತ್ತು ಮ್ಯಾಜಿಸ್ಟ್ರೇಟರಿಗೆ ಸಲಾಂ ಮಾಡುತ್ತಾ ಅವರದ್ದೇ ರಾಜರಿಂದ ಆಳ್ವಿಕೆಗೆ ಒಳಗಾಗುವುದು, ಅವರು ದಡ್ಡರಾಗಿ ಉಳಿಯುವುದು, ಇಂಗ್ಲಿಷ್ ಪದಾರ್ಥಗಳನ್ನು ಕೊಳ್ಳದೆ ಬಡವರಾಗಿರುವುದು ನಮಗೆ ಏನೂ ಪ್ರಯೋಜನವಿಲ್ಲ. ನಾಗರೀಕ ಜನರೊಡನೆ ವ್ಯಾಪಾರ ಮಾಡುವುದು ನಮಗೆ ಶಾಶ್ವತವಾದ ಲಾಭ ಒದಗಿಸುತ್ತದೆಯೇ ಹೊರತು ಅನಾಗರಿಕರನ್ನು ಆಳುವುದರಿಂದ ಅಲ್ಲ'.

'ಭಾರತವನ್ನು ಪರಾವಲಂಬಿಯಾಗಿ ಉಳಿಯಲು ಬಿಡುವುದರಿಂದ ಅದು ನಿರುಪಯುಕ್ತ ಸಂಗತಿಯಾಗುತ್ತದೆಯಲ್ಲದೆ ಅತ್ಯಂತ ದುಬಾರಿ ಪರಾವಲಂಬಿತವೆನಿಸಿಬಿಟ್ಟು ೧೦೦ ಮಿಲಿಯ ಜನರನ್ನು ನಮ್ಮ ಗ್ರಾಹಕರನ್ನಾಗಿ ಉಳಿಯುವಂತೆ ಮಾಡಿ ಗುಲಾಮರನ್ನಾಗಿಸುವ ತಂತ್ರದ ಜ್ಞಾನವು ನಿಷ್ಪ್ರಯೋಜಕವಾದುದು.'

'ಆದರ ಬೆಳವಣಿಗೆ ಮತ್ತು ಅದರ ನಾಶವನ್ನು ನಿಯಂತ್ರಿಸುವ ನಿಯಮಗಳು ಇನ್ನೂ ನಮಗೆ ಅಪರಿಚಿತವಾಗಿಯೇ ಇವೆ. ನಮ್ಮ ವ್ಯವಸ್ಥೆಯಡಿ ಭಾರತದ ಸಾರ್ವಜನಿಕ ಮನಸ್ಸು ವಿಸ್ತಾರವಾಗಿ ಬೆಳೆದು ಆ ವ್ಯವಸ್ಥೆಯನ್ನೇ ಮೀರಿ ನಿಲ್ಲಬಹುದು. ನಮ್ಮ ಒಳ್ಳೆಯ ಆಡಳಿತದಿಂದಾಗಿ ನಮ್ಮ ಅಧೀನದ ಜನರನ್ನು ಶಿಕ್ಷಿತರನ್ನಾಗಿ ಮಾಡುವ ಮೂಲಕ ಅವರಲ್ಲಿ ಉತ್ತಮ ಆಡಳಿತಕ್ಕಾಗಿ ಸಾಮರ್ಥ್ಯವನ್ನು ವೃದ್ಧಿ ಪಡಿಸಿದಂತಾಗುತ್ತದೆ. ಅವರನ್ನು ಯೂರೋಪಿನ ಜ್ಞಾನದ ಮೂಲಕ ಶಿಕ್ಷಿತರನ್ನಾಗಿಸುವುದರ ಮೂಲಕ ಭವಿಷ್ಯದಲ್ಲಿ ಅವರು ಯೂರೋಪಿನ ಸಂಸ್ಥೆಗಳನ್ನು ಬಯಸುವವರಾಗುತ್ತಾರೆ. ಅಂತಹ ದಿನ ಎಂದಾದರು ಬರಬಹುದೇ ಎಂಬುದು ನನಗೆ ಗೊತ್ತಿಲ್ಲ ಆದರೂ ಅದ್ದನ್ನು ನಾನು ತಪ್ಪಿಸುವ ಅಥವಾ ಮುರಿಯುವ ಪ್ರಯತ್ನವನ್ನಂತೂ ಮಾಡುವುದಿಲ್ಲ ಅದು ಯಾವಾಗಾದರೂ ಬರಲಿ, ಅಂತಹ ದಿನ ಇಂಗ್ಲಿಷ್ ಚರಿತ್ರೆಗೆ ಹೆಮ್ಮೆಯ ದಿನವಾಗುತ್ತದೆ.'

'ಯದ್ವಾತದ್ವಾ ಗಡಿಪಾರು ಮಾಡುವ ಅಧಿಕಾರವನ್ನು ಹಿಂತೆಗೆದುಕೊಳ್ಳಲಾಗಿದೆ. ನಾವು ಸ್ಥಳೀಯರನ್ನು ಭಾರತಕ್ಕೆ ಬರುವ ಪ್ರತಿಯೊಬ್ಬ ದಗಾಕೋರನ ದಬ್ಬಾಳಿಕೆಗೆ ಹೇಗೆ ತೆರೆಯುತ್ತೇವೆಯೋ ಹಾಗೆಯೇ ಪ್ರತಿಯೊಬ್ಬ ಯೂರೋಪಿಯನ್ನನೂ ಸಹ ಹಿಂದೂಗಳನ್ನು ನಿಯಂತ್ರಿಸುವ ಕಾನೂನಿ ನಡಿಯೇ ತರಬೇಕಾಗುತ್ತದೆ.

> 'ಒಂದು ಸ್ವಾರ್ಥಪರ ಸಂಗತಿಯೆಂದು ಕಾಣ ಬಹುದಾದರೂ ನಮಗೆ ಅನುಕೂಲಕರ ವಾದುದೆಂದರೆ ಭಾರತೀಯರಿಗೆ ಒಳ್ಳೆಯ ಆಡಳಿತ ಒದಗಿಸಿ, ಸ್ವತಂತ್ರರಾಗಿರುವಂತೆ ಮಾಡುವುದು. ಅವರು ದುರಾಡಳಿತ ಮತ್ತು ಅಧೀನತೆಗೆ ಒಳಗಾಗುವುದು ಏನೂ ಪ್ರಯೋಜನಕಾರಿ ಯಾದುದಲ್ಲ. ನಮ್ಮ ಬಟ್ಟೆಯನ್ನು ಧರಿಸಿ, ನಮಗೆ ಅಡುಗೆ ಮಾಡುವವರಾಗಿದ್ದು ಇಂಗ್ಲಿಷ್ ಕಲೆಕ್ಟರ್ ಮತ್ತು ಮ್ಯಾಜಿಸ್ಟ್ರೇಟರಿಗೆ ಸಲಾಂ ಮಾಡುತ್ತಾ ಅವರದ್ದೇ ರಾಜರಿಂದ ಆಳ್ವಿಕೆಗೆ ಒಳಗಾಗುವುದು, ಅವರು ದಡ್ಡರಾಗಿ ಉಳಿಯುವುದು, ಇಂಗ್ಲಿಷ್ ಪದಾರ್ಥಗಳನ್ನು ಕೊಳ್ಳದೆ ಬಡವರಾಗಿರುವುದು ನಮಗೆ ಏನೂ ಪ್ರಯೋಜನವಿಲ್ಲ. ನಾಗರೀಕ ಜನರೊಡನೆ ವ್ಯಾಪಾರ ಮಾಡುವುದು ನಮಗೆ ಶಾಶ್ವತವಾದ ಲಾಭ ಒದಗಿಸುತ್ತದೆಯೇ ಹೊರತು ಅನಾಗರಿಕರನ್ನು ಆಳುವುದರಿಂದ ಅಲ್ಲ'.
>
> – ಲಾರ್ಡ್ ಮೆಕಾಲೆ

'ನನಗಿಂತ ಅಧಿಕವಾಗಿ ರಾಜಕೀಯ ಸ್ವಾತಂತ್ರ್ಯವನ್ನು ಬಯಸುವ ವ್ಯಕ್ತಿ ಇನ್ನೊಬ್ಬರಿಲ್ಲ. ಆದರೆ ಬಹುಸಂಖ್ಯಾತ ಜನರಿಗೆ ಇಲ್ಲದ ಸ್ವಾತಂತ್ರ್ಯದ ಮಧ್ಯೆ ಕೆಲವೇ ವ್ಯಕ್ತಿಗಳು ಖುಷಿಪಡುವ ಸ್ವಾತಂತ್ರ್ಯವನ್ನು ಸ್ವಾತಂತ್ರ್ಯ ಎಂದು ಕರೆಯಲಾಗದು. ಅದು ದಬ್ಬಾಳಿಕೆಯಾಗುತ್ತದೆ. ವೆಸ್ಟ್ ಇಂಡೀಸ್‌ನಲ್ಲಿ ಇರುವಂತಹ ನ್ಯಾಯಾಧಿಕಾರ ಹಾಗೂ ಶಾಸನ ಸಭೆಗಳು ಗುಲಾಮರನ್ನು ಮತ್ತಷ್ಟು ದುಃಸ್ಥಿತಿಗೆ ತಳ್ಳಿದೆ ಎಂಬುದರಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ.'

'ಅಥವಾ ಭಾರತಕ್ಕೆ ಹೋಗುವುದೆಂದರೆ ಒಂದು ಕಠಿಣ ಕಾನೂನು ನೀತಿಗಿಂತ ಒಂದು ಮೃದುವಾದ ಶಿಕ್ಷಾ ಕಾನೂನು ಉತ್ತಮವೆಂದು ನನಗನ್ನಿಸುತ್ತದೆ. ನಿಜವಾಗಿಯೂ ಅತ್ಯಂತ ದಮನಕಾರಿ ವ್ಯವಸ್ಥೆಯಲ್ಲಿ ಬ್ರಾಹ್ಮಣರಿಗೆ ಒಂದು ಮೃದು ಶಿಕ್ಷಾ ಕಾನೂನಿದ್ದು ಅವರು ಸೃಷ್ಟಿಕರ್ತನ ತಲೆಯಿಂದ ಉದಯಿಸಿದ್ದಾರೆಂಬುದಾಗಿದ್ದು ಶೂದ್ರರಿಗೆ ಅತ್ಯಂತ ಕಠಿಣ ಕಾನೂನಿರುವುದು ಸೃಷ್ಟಿಕರ್ತನ ಪಾದದಿಂದ ಉದಯಿಸಿದರೆನ್ನುವುದು ಸಮರ್ಥಿಸಲಾಗುವುದಿಲ್ಲ.'

'ಭಾರತವು ಈಗಾಗಲೇ ಜಾತಿಯ ಅನಿಷ್ಟದಿಂದ ಸಾಕಷ್ಟು ನರಳಿದೆ, ಅಲ್ಲದೆ ಅದರ ಪೂರ್ವಗ್ರಹವು ಅದನ್ನು ಮತ್ತಷ್ಟು ವಿಘಟನೆಗೆ ಒಳಪಡಿಸಿದೆ. ಆದ್ದರಿಂದ ಈ ದೇಶಕ್ಕೆ ಹೊಸ ಜಾತಿಯನ್ನು ಸೇರಿಸಿ ಹೊಸ ಬ್ರಾಹ್ಮಣ ಸಂತತಿಯನ್ನು ಹುಟ್ಟು ಹಾಕಿರುವುದೆಂದರೆ ಸ್ಥಳೀಯ ಜನರನ್ನು ಪಾರ್ಸಿಗಳೆಂದು ಪರಿಗಣಿಸಿದಂತಾಗುತ್ತದೆ. ದೇವರು ಇದನ್ನು ಮಾಡದಂತಾಗಲಿ.'

**ಸ್ಥಳೀಯ ಭಾರತೀಯರು ಉನ್ನತ ಹುದ್ದೆಗಳನ್ನು ಹೊಂದಬಹುದೇ?**

'ಸ್ಥಳೀಯ ಭಾರತೀಯರು ಉನ್ನತ ನಾಗರಿಕ ಮತ್ತು ಮಿಲಿಟರಿ ಸೇವೆಗಳಿಗೆ ಅರ್ಹತೆಯನ್ನು ಇನ್ನೂ ಗಳಿಸಿರುವ ಕಾಲ ಬಂದಿಲ್ಲವೆಂದು ನಮಗೆ ಹೇಳಲಾಗುತ್ತಿದೆ. ಈ ಸ್ಥಿತಿಯಲ್ಲಿ ನಾವು ಅಧಿಕಾರವನ್ನು ಹಿಡಿದಿದ್ದೇವೆಂದು ಹೇಳಲಾಗುತ್ತಿದೆ. ಅಲ್ಲದೆ ತಮ್ಮ ಅಧೀನದಲ್ಲಿರುವವರಿಗೆ ಅಗತ್ಯವಿರುವ ಎಲ್ಲಾ ಅನುಕೂಲವನ್ನು ನೀಡಬಹುದಾಗಿದೆ ಎಂದು ಹೇಳಲಾಗುತ್ತಿದೆ. ಖಂಡಿತವಾಗಿಯೂ ಇಲ್ಲ. ನಮ್ಮ ಅಧಿಕಾರದಲ್ಲಿ ಅಂತದ್ದೇನಾದರೂ ಇದೆಯಾ ? ಇಲ್ಲ. ಆದರೆ ನಾವೇನಾದರೂ ಅವರಿಗೆ ನೀಡಬಹುದಾಗಿದ್ದರೆ ನಮ್ಮ ದುಷ್ಟ ದಬ್ಬಾಳಿಕೆಯನ್ನಲ್ಲದೆ ಬೇರೇನೂ ಅಲ್ಲ. ಈ ತರ್ಕದ ಹಿನ್ನೆಲೆಯಲ್ಲಿ ಉತ್ತಮ ನೀತಿ ಮತ್ತು ಉತ್ತಮ ಕಾನೂನು ಎನ್ನುವುದು ಅನರ್ಥವಾಗಿರುವುದರಿಂದ ನಾನಿದನ್ನು ಪ್ರತಿಭಟಿಸುತ್ತೇನೆ.'

**ಸಮಾನತೆಯ ಮೇಲೆ....**

'ನನ್ನ ವಿವೇಕವೆಂದರೆ ನಮ್ಮ ಭಾರತ ಸಾಮ್ರಾಜ್ಯದಲ್ಲಿ ಯಾವ ಸ್ಥಳೀಯ ವ್ಯಕ್ತಿಯಾದರೂ ಸರಿ, ಆತನ ಬಣ್ಣ, ಆತನ ವಂಶ, ಅಥವಾ ಧರ್ಮದಿಂದ ಉನ್ನತ ಸ್ಥಾನಕ್ಕೆ ಅರ್ಹನಲ್ಲ ಎನ್ನುವುದು ಸರಿಯಲ್ಲ.'

'ಈ ಉತ್ತಮ ನೀತಿಗೆ ನಾನು ಬದ್ಧ.' □

## ಸವಾಲುಗಳು ದ್ವಿಗುಣಗೊಳ್ಳುತ್ತಿವೆ

...೩೮ನೇ ಪುಟದಿಂದ

ಶಕ್ತಿಯಿಂದ ತೃತೀಯ ಶಕ್ತಿಗಳಿಗೆ ಪರಿವರ್ತಿಸುತ್ತದೆ. ದಲಿತ ರಾಜಕೀಯ ಪಕ್ಷವೊಂದು, ಭಾರತೀಯ ಸಮಾಜವು ಕ್ರಾಂತಿ ಕಾರಕ ಪರಿವರ್ತನೆಯನ್ನು ಆಯ್ಕೆ ಮಾಡಿಕೊಂಡಾಗ ಮಾತ್ರ ತನ್ನ ದಾರಿ ಕಂಡುಕೊಳ್ಳಲು ಸಾಧ್ಯ. ಅಥವಾ ಅದರ ಗೈರು ಹಾಜರಿಯಲ್ಲಿ ಸಮಾಜವು ದಬ್ಬಾಳಿಕೆಯೆಡೆಗೆ ಸಾಗುತ್ತದೆ. ಮರಾಠ ಪ್ರಾಧಾನ್ಯತೆಯನ್ನು ಅಂತ್ಯಗೊಳಿಸಲು ಆರಂಭಿಸುವ ಪ್ರಕ್ರಿಯೆಯನ್ನು ತೀವ್ರಗೊಳಿಸುವಲ್ಲಿ ಬಿಎಸ್‌ಪಿಯು ಪಾಲುದಾರನಾಗುತ್ತಿದೆ. ಮರಾಠ ಸಮಾಜಕ್ಕೆ ಬಿಎಸ್‌ಪಿಯಿಂದ ಕ್ರಿಯಾತ್ಮಕವಾದ ದಲಿತ ಪಕ್ಷದ ಅವಶ್ಯಕತೆಯಿದೆ. □

## ಕೃಷಿಯ ಬೀಡು ಜ್ಞಾನಸಿರಿಯ ಗೂಡು, ಮಾಹಿತಿಯ ಜಾಡು ಅದುವೇ ಕನ್ನಡ ನಾಡು

# ೪೯ನೇ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಸೌರಭ ಎಲ್ಲೆಡೆ ಸೂಸಲು ಅಹರ್ನಿಶಿ ದುಡಿದ ಎಲ್ಲ ಸಾಹಿತಿ ಕವಿ, ಕಲಾವಿದ, ಬರಹಗಾರ ಚೇತನಗಳಿಗೆ ನಾಡಿನ ಜನತೆಯ ಗೌರವ ನಮನ.

## ಸಾಂಸ್ಕೃತಿಕ ಪರಂಪರೆಯ ಪೋಷಣೆ

★ ಸಮಗ್ರ ವಚನ ಸಾಹಿತ್ಯವನ್ನು ಪುಸ್ತಕ, ಸಿ.ಡಿ.ಯಲ್ಲಿ ಅಳವಡಿಸಲಾಗುವುದು. ೧,೦೦೦ ವಚನ ಗೀತೆಗಳನ್ನು ಸಂಗೀತಕ್ಕೆ ಅಳವಡಿಸಿ ಸಿ.ಡಿ. ರೂಪದಲ್ಲಿ ತರಲಾಗುವುದು. ಎಲ್ಲಾ ಕಲೆಗಳನ್ನು ಒಂದೇ ಸೂರಿನಡಿ ತರುವ ಕಲಾಗ್ರಾಮ ಯೋಜನೆ

★ ರಾಷ್ಟ್ರಕವಿ ಕುವೆಂಪು ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಅನುಷ್ಠಾನಗೊಂಡಿರುವ ಕೆಲವು ಯೋಜನೆಗಳು ೧. ದಿನಾಂಕ ೨೯. ೧೨. ೨೦೦೩ ರಿಂದ ದಿನಾಂಕ ೨೮. ೧೨. ೨೦೦೪ ರವರೆಗಿನ ಅವಧಿಯನ್ನು ವಿಶ್ವಮಾನವ ವರ್ಷ ಎಂದು ಘೋಷಿಸಲಾಗಿದೆ. ೨. ಜಯಭಾರತ ಜನನಿಯ ತನುಜಾತೆ ಗೀತೆಯನ್ನು ನಾಡಗೀತೆಯಾಗಿ ಘೋಷಿಸಲಾಗಿದೆ. ೩. ಶ್ರೀ ರಾಮಾಯಣ ದರ್ಶನಂ ಕೃತಿಯ ಇಂಗ್ಲಿಷ್ ಭಾಷಾಂತರವನ್ನು ಪ್ರಕಟಿಸಲಾಗಿದೆ. ೪. ಕುವೆಂಪು ಅವರ ಭಾವಚಿತ್ರವಿರುವ ಅಂಚೆ ಕವರುಗಳನ್ನು ಬಿಡುಗಡೆ ಮಾಡಲಾಗಿದೆ.

★ ದಿನಾಂಕ ೨೩. ೧೦. ೨೦೦೪ ರಂದು ಚಿತ್ರಕಲಾ ಪರಿಷತ್‌ನಲ್ಲಿ ಡಾ|| ರೋರಿಕ್ ಶತಮಾನೋತ್ಸವದ ಉದ್ಘಾಟನಾ ಸಮಾರಂಭವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಸಂರಕ್ಷಿತ ರೋರಿಕ್ ನಿವಾಸವನ್ನು ಸಾರ್ವಜನಿಕ ವೀಕ್ಷಣೆಗೆ ತೆರೆಯಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಲಾಕೃತಿಗಳ ಪ್ರದರ್ಶನ ಹಾಗೂ ಕಲಾ ಶಿಬಿರಗಳು. **ಸಾಂಸ್ಕೃತಿಕ ಡೈರೆಕ್ಟರಿ:** ರಾಜ್ಯಾದ್ಯಂತ ಎಲ್ಲಾ ಜಾನಪದ ಮತ್ತು ಇತರ ಕಲಾವಿದರ ಮಾಹಿತಿ ಕಂಪ್ಯೂಟರ್‌ನಲ್ಲಿ ಅಳವಡಿಕೆ (ಪ್ರಾಚ್ಯವಸ್ತುಗಳ ಡೈರೆಕ್ಟರಿ ಮೂಲಕ ರಾಜ್ಯದ ಮೂರು ಸಾವಿರಕ್ಕೂ ಹೆಚ್ಚು ಐತಿಹಾಸಿಕ ಸ್ಮಾರಕಗಳು ಹಾಗೂ ಎಲ್ಲಾ ವಸ್ತು ಸಂಗ್ರಹಾಲಯಗಳ ಬಗ್ಗೆ ಮಾಹಿತಿ ಹಾಗೂ ಭಾವಚಿತ್ರಗಳು ಕಂಪ್ಯೂಟರ್‌ನಲ್ಲಿ ಅಳವಡಿಕೆ)

★ ಯುವಜನರಲ್ಲಿ ನಾಡಿನ ಸಂಸ್ಕೃತಿಯ ಬಗ್ಗೆ ಒಲವು ಹಾಗೂ ಹೆಮ್ಮೆ ಮೂಡಿಸಲು ರಾಷ್ಟ್ರೀಯ ಸೇವಾ ಯೋಜನೆಯ ಒಂದು ಲಕ್ಷ ವಿದ್ಯಾರ್ಥಿಗಳನ್ನು ಸ್ಮಾರಕಗಳ ರಕ್ಷಣೆಯಲ್ಲಿ ತೊಡಗಿಸುವಿಕೆ.

**ಕನ್ನಡಕ್ಕೆ ಹೆಚ್ಚಿನ ಒತ್ತಾಸೆ**

★ ೧ ರಿಂದ ೧೦ನೇ ತರಗತಿಯವರೆಗಿನ ಕನ್ನಡ ಮಾಧ್ಯಮದಲ್ಲಿ ವ್ಯಾಸಾಂಗ ಮಾಡಿದ ವಿದ್ಯಾರ್ಥಿಗಳಿಗೆ ಬಿ.ಇ., ಎಂ.ಬಿ.ಬಿ.ಎಸ್., ಮತ್ತು ಬಿ.ಡಿ.ಎಸ್., ಕೋರ್ಸ್‌ಗಳ ಪ್ರವೇಶದಲ್ಲಿ ಶೇ ೫ ರಷ್ಟು ಸಮಾನಾಂತರ ಒಳಮೀಸಲಾತಿ.

★ ವೃತ್ತಿ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಇತರೆ ಕೋರ್ಸುಗಳಿಗೂ ಶೇ ೫ ರಷ್ಟು ಸಮಾನಾಂತರ ಮೀಸಲಾತಿಯ ವಿಸ್ತರಣೆ.

★ ೧ ರಿಂದ ೧೦ನೇ ತರಗತಿಯವರೆಗಿನ ಕನ್ನಡ ಮಾಧ್ಯಮದಲ್ಲಿ ವ್ಯಾಸಾಂಗ ಮಾಡಿದ ವಿದ್ಯಾರ್ಥಿಗಳಿಗೆ ಸರಕಾರಿ ಉದ್ಯೋಗಗಳಲ್ಲಿ ಶೇ ೫ ರಷ್ಟು ಸಮಾನಾಂತರ ಒಳ ಮೀಸಲಾತಿ.

★ ತಾಂತ್ರಿಕ ಮತ್ತು ವೈದ್ಯಕೀಯ ಪದವಿಕೋರ್ಸುಗಳ ಮೊದಲ ವರ್ಷದಲ್ಲಿ ಒಂದು ಪಠ್ಯ ವಿಷಯವಾಗಿ ಕನ್ನಡದ ಅಳವಡಿಕೆ.

★ ಎಲ್ಲಾ ಮಹಾನಗರ ಪಾಲಿಕೆಗಳಲ್ಲಿ ಕನ್ನಡೀಕರಣಕ್ಕಾಗಿ ಐದು ಅಂಶಗಳ ಸೂಚನೆಯ ಅನುಷ್ಠಾನ.

★ ಪದವಿಪೂರ್ವ ತರಗತಿಯಲ್ಲಿ ಐಚ್ಛಿಕ ಕನ್ನಡ ವಿಷಯ ಪ್ರಾರಂಭ.

**ಸುವರ್ಣ ಕರ್ನಾಟಕದ ವರ್ಷ : ೨೦೦೬-೦೭**

**ಕರ್ನಾಟಕ ವಾರ್ತೆ**

## ವಿವೇಕಾನಂದರ ವಿಚಾರಗಳು

**ಅನುವಂಶಿಕವಾಗಿ ಬಂದ ಗುಣಗಳ ಪ್ರಕಾರ ಬ್ರಾಹ್ಮಣನಿಗೆ ಹೊಲೆಯನಿಗಿಂತ ಹೆಚ್ಚು ವಿದ್ಯಾಭ್ಯಾಸಕ್ಕೆ ಯೋಗ್ಯತೆ ಇದ್ದರೆ ಹೊಲೆಯನ ವಿದ್ಯಾಭ್ಯಾಸಕ್ಕೆ ಎಲ್ಲ ಹಣವನ್ನೂ ಖರ್ಚು ಮಾಡಿ, ಬ್ರಾಹ್ಮಣನಿಗೆ ಖರ್ಚು ಮಾಡಬೇಡಿ. ದುರ್ಬಲರಿಗೆ ಕೊಡಿ. ಅಲ್ಲಿ ನಿಮ್ಮ ದಾನವೆಲ್ಲಾ ಬೇಕಾಗಿದೆ. ಬ್ರಾಹ್ಮಣ ಹೆಚ್ಚು ಬುದ್ಧಿವಂತನಾಗಿದ್ದರೆ ಹೆಚ್ಚು ಸಹಾಯವಿಲ್ಲದೆ ಬುದ್ಧಿವಂತನಾಗಬಲ್ಲ. ಉಳಿದವರು ಬುದ್ಧಿವಂತರಾಗಿಲ್ಲದೆ ಇದ್ದರೆ ಅವರಿಗೇ ಶಿಕ್ಷಣ ಮತ್ತು ಗುರುಗಳೆಲ್ಲ ಮೀಸಲಾಗಿರಲಿ. ಭರತಖಂಡದಲ್ಲಿ ದಬ್ಬಾಳಿಕೆಗೆ ತುತ್ತಾದ ಈ ನಿರ್ಭಾಗ್ಯರು ತಮ್ಮ ನಿಜ ಸ್ವರೂಪವನ್ನು ಕೇಳಿ ತಿಳಿದುಕೊಳ್ಳಬೇಕಾಗಿದೆ.**

ಸಂಗ್ರಹ:
**ಜ.ಹೊ. ನಾರಾಯಣಸ್ವಾಮಿ**

# ಶೂನ್ಯದಿಂದ ಏನಾದರೂ ಬರುವುದೇ?

**ಚಂ**ಡಾಲನಿಗೆ ವಿದ್ಯಾಭ್ಯಾಸದ ಆವಶ್ಯಕತೆ ಇರುವಷ್ಟು ಬ್ರಾಹ್ಮಣನಿಗೆ ಇಲ್ಲ. ಬ್ರಾಹ್ಮಣನ ಮಗನಿಗೆ ಒಬ್ಬ ಉಪಾಧ್ಯಾಯನು ಬೇಕಾದರೆ ಚಂಡಾಲನ ಮಗನಿಗೆ ಹತ್ತು ಉಪಾಧ್ಯಾಯರು ಬೇಕು. ಜನನಾರಭ್ಯ ಪ್ರಕೃತಿಯು ಯಾರಿಗೆ ಸೂಕ್ಷ್ಮ ಬುದ್ಧಿಯನ್ನು ಕೊಟ್ಟಿಲ್ಲವೋ, ಅಂತಹವರಿಗೆ ಹೆಚ್ಚು ಸಹಾಯವನ್ನು ಒದಗಿಸಿಕೊಡಬೇಕು.

ನಮ್ಮ ದುಃಖಕ್ಕೆ, ನಮ್ಮ ಅವನತಿಗೆ ನಾವೇ ಕಾರಣಕರ್ತರು. ನಮ್ಮ ಅದೃಷ್ಟಕ್ಕೆ ನಾವೇ ಹೊಣೆ. ನಮ್ಮ ಶ್ರೀಮಂತಕುಲೀನ ವಂಶಸ್ಥರು ಜನಸಾಮಾನ್ಯರನ್ನು ತುಳಿಯುತ್ತಾ ಹೋದರು. ಅವರು ನಿರಾಶರಾಗಿ ಈ ಕೋಟಲೆಯಲ್ಲಿ ತಾವು ಮನುಷ್ಯರೆಂಬುದನ್ನು ಮರೆತರು. ಹಲವು ಶತಮಾನಗಳಿಂದ ಅವರು ಕಟ್ಟಿಗೆ ಒಡೆಯುವ, ನೀರೆಳೆಯುವ ಶ್ರಮ ಜೀವಿಗಳಾಗಿರುವರು. ಈಗ ಅವರು ಹುಟ್ಟು ಗುಲಾಮರು, ತಮ್ಮ ಕೆಲಸವೇ ಜೀತಮಾಡುವುದು ಎಂಬ ದೃಢನಂಬಿಕೆ ಇಂದು ಅವರಲ್ಲಿ ಬಂದುಹೋಗಿದೆ.

ನಾವು ಈಗ ಎಷ್ಟೇ ವಿದ್ಯಾವಂತರಾಗಿದ್ದರೂ ಆ ಶ್ರಮಜೀವಿಗಳಿಗೆ ಒಂದು ಒಳ್ಳೆಯ ಮಾತನ್ನು ಆಡಿದೆವೆ ? ಆ ಬಡವರನ್ನು ಮೇಲೆತ್ತುವ ಕೆಲಸಕ್ಕೆ ಕೈಹಾಕುವುದಿಲ್ಲ. ಇದು ಮಾತ್ರವಲ್ಲ, ಪಾಶ್ಚಾತ್ಯರಿಂದ ಬಂದ ಅನುವಂಶಿಕತೆ ಮುಂತಾದ ನಿರರ್ಥಕ ಸಿದ್ಧಾಂತಗಳ ಸಹಾಯದಿಂದ ರಾಕ್ಷಸೀಯ ಸಿದ್ಧಾಂತಗಳನ್ನು ತಯಾರು ಮಾಡುತ್ತಿರುವೆವು. ದೀನರನ್ನು ಮತ್ತೂ ಹೆಚ್ಚಾಗಿ ಪೀಡಿಸುವುದಕ್ಕೆ ಇದು... ಹೇ ಬ್ರಾಹ್ಮಣರೇ, ಅನುವಂಶಿಕವಾಗಿ ಬಂದ ಗುಣಗಳ ಪ್ರಕಾರ ಬ್ರಾಹ್ಮಣನಿಗೆ ಹೊಲೆಯನಿಗಿಂತ ಹೆಚ್ಚು ವಿದ್ಯಾಭ್ಯಾಸಕ್ಕೆ ಯೋಗ್ಯತೆ ಇದ್ದರೆ ಹೊಲೆಯನ ವಿದ್ಯಾಭ್ಯಾಸಕ್ಕೆ ಎಲ್ಲ ಹಣವನ್ನೂ ಖರ್ಚುಮಾಡಿ, ಬ್ರಾಹ್ಮಣನಿಗೆ ಖರ್ಚುಮಾಡಬೇಡಿ. ದುರ್ಬಲರಿಗೆ ಕೊಡಿ. ಅಲ್ಲಿ ನಿಮ್ಮ ದಾನವೆಲ್ಲಾ ಬೇಕಾಗಿದೆ. ಬ್ರಾಹ್ಮಣ ಹೆಚ್ಚು ಬುದ್ಧಿವಂತನಾಗಿದ್ದರೆ ಹೆಚ್ಚು ಸಹಾಯವಿಲ್ಲದೆ ಬುದ್ಧಿವಂತನಾಗಬಲ್ಲ. ಉಳಿದವರು ಬುದ್ಧಿವಂತರಾಗಿಲ್ಲದೆ ಇದ್ದರೆ ಅವರಿಗೇ ಶಿಕ್ಷಣ ಮತ್ತು ಗುರುಗಳೆಲ್ಲ ಮೀಸಲಾಗಿರಲಿ. ನಾನು ಅರಿತುಕೊಂಡಿರುವಂತೆ ಇದೇ ನ್ಯಾಯ. ಇದೇ ವಿವೇಕ. ಭರತಖಂಡದಲ್ಲಿ ದಬ್ಬಾಳಿಕೆಗೆ ತುತ್ತಾದ ಈ ನಿರ್ಭಾಗ್ಯರು ತಮ್ಮ ನಿಜ ಸ್ವರೂಪವನ್ನು ಕೇಳಿ ತಿಳಿದುಕೊಳ್ಳಬೇಕಾಗಿದೆ. ಪ್ರತಿಯೊಬ್ಬ ಸ್ತ್ರೀ ಪುರುಷ ಮತ್ತು ಮಗು ಜಾತಿ-ಕುಲ-ಗೋತ್ರಗಳ ಭೇದವಿಲ್ಲದೆ ದುರ್ಬಲರು, ಬಲಾಢ್ಯರು ಎಂಬ ಭೇದಭಾವವಿಲ್ಲದೆ, ಸಬಲ-ದುರ್ಬಲರ ಹಿಂದೆ, ಉಚ್ಚ-ನೀಚರ ಹಿಂದೆ ಪ್ರತಿಯೊಬ್ಬರಲ್ಲಿಯೂ ಅನಂತಾತ್ಮನಿರುವನು ಎಂದು ಕಲಿತುಕೊಳ್ಳಲಿ... ನಿಜವಾಗಿಯೂ ಯಾರೂ ದುರ್ಬಲರಲ್ಲ, ಆತ್ಮ ಅನಂತ, ಸರ್ವಶಕ್ತ, ಸರ್ವಜ್ಞ... ಎದ್ದು ನಿಲ್ಲಿ. ಎಲ್ಲರೂ ಒಳ್ಳೆಯ ಮಹಾನುಭಾವರಾಗುವುದಕ್ಕೆ ಅನಂತ ಅವಕಾಶವಿದೆ.

ಏಳಿಗೆ

'ದೇವರು ಎಂಬ ಹಳೆಯ ಪದವನ್ನೇಕೆ ಉಪಯೋಗಿಸುತ್ತೀರಿ ?' ಎಂದು ಅನೇಕ ವೇಳೆ ನನ್ನನ್ನು ಕೇಳಿರುವರು. ಏಕೆಂದರೆ ಇದು ನಮ್ಮ ಕೆಲಸಕ್ಕೆ ಶ್ರೇಷ್ಠ ಪದ. ಅದಕ್ಕಿಂತ ಉತ್ತಮ ಪದ ನಿಮಗೆ ದೊರಕಲಾರದು. ಮಾನವ ಕೋಟಿಯ ಆಕಾಂಕ್ಷೆ, ಭರವಸೆ, ಸಂತೋಷ-ಇವುಗಳೆಲ್ಲಾ ಆ ಒಂದು ಪದದಲ್ಲಿ ನೆಲಸಿವೆ. ಈಗ ಬದಲಾಯಿಸುವುದಕ್ಕೆ ಸಾಧ್ಯವೇ ಇಲ್ಲ. ಇದರ ಅರ್ಥ ತಿಳಿದುಕೊಂಡು ಅದನ್ನು ಸಾಕ್ಷಾತ್ಕಾರ ಮಾಡಿಕೊಂಡವರು ಈ ಪದವನ್ನು ಮೊದಲು ಸೃಷ್ಟಿಸಿದರು. ಈ ಪದಗಳು ಸಮಾಜದಲ್ಲಿ ಪ್ರಚಾರವಾದ ಮೇಲೆ, ಅಜ್ಞಾನಿಗಳು ಈ ಪದಗಳನ್ನು ಬಳಸಿದರು. ಇದರ ಪರಿಣಾಮವಾಗಿಯೆ ಅದರ ಅರ್ಥಮಹಿಮೆ ಮಾಯವಾಗಿದೆ.

ಅನಾದಿಕಾಲದಿಂದಲೂ 'ದೇವರು' ಎಂಬ ಪದವನ್ನು ಉಪಯೋಗಿಸುತ್ತಿರುವರು. ವಿಶ್ವಚೈತನ್ಯದ ಭಾವನೆ ಪವಿತ್ರವಾದುದು, ಮಹಿಮಾನ್ವಿತವಾದುದು, ಎಲ್ಲವೂ ದೇವರು ಎಂಬ ಪದದೊಂದಿಗೆ ಸಂಬಂಧ ಪಡೆದಿದೆ. ಕೆಲವು ಮೂರ್ಖರು ಆ ಪದದಿಂದ ಪ್ರಯೋಜನವಿಲ್ಲವೆಂದರೆ ನೀವು ಅದನ್ನು ಆಚೆಗೆ ಎಸೆಯಬೇಕೆ ? ಇನ್ನೊಬ್ಬ ಬಂದು ನನ್ನ ಪದ ತೆಗೆದುಕೊಳ್ಳಿ ಎನ್ನುವನು. ಹೀಗೆ ಕೆಲಸಕ್ಕೆ ಬಾರದ ಪದಗಳಿಗೆ ಒಂದು ಅಂತ್ಯವೇ ಇರುವುದಿಲ್ಲ. ಹಳೆಯ ಪದವನ್ನೇ ಉಪಯೋಗಿಸಿ, ಆದರೆ ಅದನ್ನು ಸರಿಯಾದ ಅರ್ಥದಲ್ಲಿ ಉಪಯೋಗಿಸಿ. ಅದನ್ನು ಆವರಿಸಿರುವ ಮೂಢನಂಬಿಕೆಯನ್ನು ತೊರೆಯಿರಿ. ಈ ಪುರಾತನ ಪವಿತ್ರಪದದ ಅರ್ಥವನ್ನು ಪೂರ್ಣ ತಿಳಿಯಿರಿ. ಸಾಂಬಂಧಿಕ ನಿಯಮ ಶಕ್ತಿ (power of the laws of association) ನಿಮಗೆ ಅರಿವಾದರೆ ಈ 'ದೇವರು' ಎಂಬ ಪದ ಅನಂತ ಭವ್ಯ ಸಾಮರ್ಥ್ಯ ಭಾವಗಳೊಂದಿಗೆ ಮಾನಸಿಕ ಸಂಬಂಧವನ್ನು ಪಡೆದಿರುವುದು ಗೊತ್ತಾಗುವುದು...

ಅತಿ ಶ್ರೇಷ್ಠವಾದುದೆಲ್ಲ ಭವ್ಯವಾದುದೆಲ್ಲ ನ್ಯಾಯಸಮ್ಮತವಾದುದೆಲ್ಲ ಮಾನವರಲ್ಲಿ ಪ್ರೀತಿಗೆ ಯೋಗ್ಯವಾದುದೆಲ್ಲ ಮಹತ್ವಪೂರ್ಣವಾದುದೆಲ್ಲ ವೈಭವಯುಕ್ತವಾದುದೆಲ್ಲ 'ದೇವರು' ಎಂಬ ಪದದೊಂದಿಗೆ ಮಾನಸಿಕ ಸಂಬಂಧವನ್ನು ಪಡೆದಿರುವುದು... ಅವನೇ ಸೂರ್ಯ ನಕ್ಷತ್ರಗಳಂತೆ ರಾರಾಜಿಸುತ್ತಿರುವನು. ಅವನೇ ಭೂಮಿ, ಸಾಗರ, ಬೀಳುವ ಮಳೆ, ಉಸಿರಾಡುವ ಗಾಳಿ ಎಲ್ಲ ಅವನೆ. ಅತಿ ಕ್ಷುದ್ರ ಜೀವಾಣುವಿನಲ್ಲಿ ಅವಿಕಸಿತನಾಗಿರುವವನು ಅವನು.

ದೇವರನ್ನು ಸ್ವಲ್ಪ ಗಾಳಿ ಕೊಡು, ಮಳೆ ಕೊಡು, ತೋಟದಲ್ಲಿ ಹಣ್ಣು ಬೆಳೆಯುವಂತೆ ಮಾಡು ಎಂದು ಮುಂತಾಗಿ ಪ್ರಾರ್ಥಿಸುವುದು ಅಸ್ವಾಭಾವಿಕ. ದೇವರಲ್ಲಿ ಇದನ್ನು ಪ್ರಾರ್ಥಿಸುವುದು ಮೌಢ್ಯ... 'ನನ್ನ ತಲೆನೋವು ಗುಣವಾಗಲಿ' ಮುಂತಾದ ಕೋರಿಕೆಗಳನ್ನು ಪ್ರಾರ್ಥಿಸುವುದಕ್ಕೆ ಅರ್ಥವಿಲ್ಲ. ಭಗವಂತನನ್ನು ಇದಕ್ಕಾಗಿ ಬೇಡಕೂಡದು... ಗಂಗಾನದಿಯ ತೀರದಲ್ಲಿ ಕುಳಿತು ನೀರಿಗಾಗಿ ಒಂದು ಸಣ್ಣ ಬಾವಿಯನ್ನು ತೋಡುವವನು, ವಜ್ರದ ಗಣಿಯ ಸಮೀಪದಲ್ಲಿ ಕುಳಿತು ಗಾಜಿನ ಚೂರಿಗಾಗಿ ಅಲೆಯುವವನು ಮೂಢ.

ಸೃಷ್ಟಿ ಎಂದರೆ ಶೂನ್ಯದಿಂದ ಏನಾದರೂ ಬರುವುದೆ ? ಇದನ್ನು ಸರಿಯಾಗಿ ವಿಭಜನೆ ಮಾಡಿದರೆ ಶೂನ್ಯದಿಂದ ಏನಾದರೂ ಬರುವುದು ಎನ್ನುವುದು ಅವಿವೇಕ. ಹಳೆಯ ವಸ್ತುಗಳನ್ನು ಬೇಕಾದರೆ ಹೊಸದಾಗಿ ಮಾಡಬಹುದು. ಆದರೆ ಪ್ರಪಂಚಕ್ಕೆ ಹೊಸದಾಗಿ ಏನನ್ನೂ ಸೇರಿಸುವುದಕ್ಕೆ ಆಗುವುದಿಲ್ಲ.

ಸತ್ಯದ ಹಾದಿಯಲ್ಲಿ ಅತ್ಯಂತ ಅಡಚಣೆಯಾಗುವುವು ಪವಾಡಗಳು ಎಂದು ನಾನು ತಿಳಿದಿರುವೆ. ಬುದ್ಧನ ಶಿಷ್ಯ ಬುದ್ಧನಿಗೆ ಒಬ್ಬ ಅಂತಹ ಪವಾಡ ಮಾಡಿದ ಬಗ್ಗೆ ಹೇಳಿದಾಗ ಬುದ್ಧ ಒಂದು ಭಿಕ್ಷಾಪಾತ್ರೆಯನ್ನು ಅದನ್ನು ಮುಟ್ಟದಂತೆ ಪವಾಡದ ರೀತಿ ತೆಗೆದುಕೊಂಡು ಆತನಿಗೆ ತೋರಿಸಿ ಅದನ್ನು ತನ್ನ ಕಾಲಿನಿಂದ ತುಳಿದು ಚೂರು ಚೂರು ಮಾಡಿ 'ಪವಾಡದಲ್ಲಿ ನಂಬಿಕೆ ಇಡಬೇಡಿ. ಬದಲಿಗೆ ನಿತ್ಯಸತ್ಯವಾದ ನಿಯಮಗಳನ್ನು ಕುರಿತು ಆಲೋಚಿಸಿ' ಎಂದು ಅವರಿಗೆ ಹೇಳಿದ. ತಮ್ಮನ್ನು ಸುರಕ್ಷಿತವಾಗಿ ಕರೆದೊಯ್ಯುವ ತಮ್ಮ ಹೃದಯದಲ್ಲಿ ಸುಪ್ತವಾಗಿರುವ ಅಂತಃಶಕ್ತಿಯ ಬಗ್ಗೆ ಅವರಿಗೆ ತಿಳಿಯ ಹೇಳಿದ ಪವಾಡಗಳು ಅತ್ಯಂತ ಅಡಚಣೆಗಳು. ನಾವು ಅವನ್ನು ನಾಶಪಡಿಸಬೇಕು.

ಪ್ರಪಂಚದಲ್ಲೆಲ್ಲಾ 'ಉತ್ತಮರಾಗಿ' 'ಉತ್ತಮರಾಗಿ' 'ಉತ್ತಮರಾಗಿ' ಎಂಬ ಬೋಧನೆಯನ್ನು ನಾವು ಕೇಳಿರುವೆವು. 'ಕದಿಯಬೇಡ' 'ಸುಳ್ಳನ್ನು ಹೇಳಬೇಡ' ಎಂಬುದನ್ನು ಕೇಳದೇ ಇರುವ ಮಗುವು ಪ್ರಪಂಚದಲ್ಲೇ ಇಲ್ಲವೆನ್ನಬಹುದು. ಆದರೆ ಇವನ್ನು ಹೇಗೆ ಸಾಧಿಸಬೇಕೆಂಬುದನ್ನು ಯಾರೂ ಹೇಳುವುದಿಲ್ಲ. ಮಾತಿನಿಂದ ಅವರಿಗೆ ಸಹಾಯವಾಗ

ಲಾರದು. ಅವನು ಏತಕ್ಕೆ ಒಬ್ಬ ಕಳ್ಳನಾಗಬಾರದು? ಕದಿಯದೇ ಇರುವುದು ಹೇಗೆ? ಎಂಬುದನ್ನು ನಾವು ಅವನಿಗೆ ಕಲಿಸುವುದಿಲ್ಲ. ಸುಮ್ಮನೆ ಆ ಮಗುವಿಗೆ ಕದಿಯಬೇಡ ಎಂದು ಹೇಳುವೆವು. ಆ ಮಗುವಿಗೆ ತನ್ನ ಮನಸ್ಸನ್ನು ನಿಗ್ರಹಿಸುವುದು ಹೇಗೆ ಎಂಬುದನ್ನು ಕಲಿಸಿದಾಗ ಮಾತ್ರ ನಿಜವಾಗಿ ಸಹಾಯ ಮಾಡುತ್ತೇವೆ.

ಪ್ರತಿಯೊಂದು ಆತ್ಮನಲ್ಲಿಯೂ ಪವಿತ್ರತೆ ಅಡಗಿರುವುದು. ಈ ಗುಪ್ತಗಾಮಿನಿಯಾದ ಪವಿತ್ರತೆಯನ್ನು ಬಾಹ್ಯ ಮತ್ತು ಆಂತರಿಕ ಪ್ರಕೃತಿಯ ನಿಗ್ರಹದಿಂದ ವ್ಯಕ್ತಪಡಿಸುವುದೇ ಜೀವನದ ಗುರಿ... ಇದೇ ಧರ್ಮದ ಸರ್ವಸ್ವ. ಸಿದ್ಧಾಂತ, ನಂಬಿಕೆ, ಬಾಹ್ಯಾಚಾರ, ಪವಿತ್ರ ಗ್ರಂಥ, ದೇವಸ್ಥಾನ, ವಿಗ್ರಹ – ಇವೆಲ್ಲಾ ಗೌಣ.

ಎಲ್ಲಾ ಮೂಢನಂಬಿಕೆಗಳನ್ನೂ ಧ್ವಂಸಮಾಡಿ. ಗುರುಗಳಾಗಲೀ, ಧರ್ಮಗ್ರಂಥಗಳಾಗಲಿ ದೇವರುಗಳಾಗಲೀ ಇಲ್ಲ. ಈ ಎಲ್ಲವೂ ನೆಲೆ ಇಲ್ಲದವು. ಅವತಾರ ಪುರುಷರನ್ನೂ ಪ್ರವಾದಿಗಳನ್ನು ಧ್ವಂಸಮಾಡಿ. ನಾನೇ ಪರಮ ಪುರುಷೋತ್ತಮ. ತತ್ವಜ್ಞಾನಿಗಳೇ ಎದ್ದು ನಿಲ್ಲಿ, ಭಯ ಬೇಡ. ದೇವರನ್ನು ಕುರಿತ, ಮೂಢನಂಬಿಕೆಗಳನ್ನು ಕುರಿತ ಮಾತು ಬೇಡ! ಸತ್ಯಕ್ಕೇ ಜಯ, ಇದು ನಿಜ. ನಾನು ಅನಂತ. ಎಲ್ಲಾ ಮೂಢನಂಬಿಕೆಗಳೂ ಹುರುಳಿಲ್ಲದ ಕಲ್ಪನೆಗಳು.

ಒಂದು ಆದರ್ಶವನ್ನು ತೆಗೆದುಕೊಳ್ಳಿ. ಅದನ್ನು ನಿಮ್ಮ ಜೀವನದಲ್ಲಿ ಅಭ್ಯಾಸಮಾಡಿ. ನಿಮ್ಮ ಕನಸು ನನಸಿನಲ್ಲಿ ಅದೇ ಹರಿದಾಡಲಿ. ಆ ಒಂದು ಆದರ್ಶಕ್ಕಾಗಿ ನಿಮ್ಮ ಬಾಳನ್ನೆಲ್ಲ ಸವೆಸಿ. ಮಿದುಳು, ಮಾಂಸಖಂಡಗಳು, ನರಗಳು ಮತ್ತು ನಿಮ್ಮ ದೇಹದ ಪ್ರತಿಯೊಂದು ಭಾಗವೂ ಕೂಡ ಆ ಭಾವದಿಂದ ತುಂಬಿ ತುಳುಕಾಡಲಿ. ಉಳಿದ ಆಲೋಚನೆಗಳನ್ನೆಲ್ಲಾ ಅವುಗಳ ಪಾಡಿಗೆ ಬಿಡಿ. ಜಯ ಪಡೆಯುವುದಕ್ಕೆ ಇದೊಂದೇ ದಾರಿ. ಮಹಾ ಆಧ್ಯಾತ್ಮಿಕ ವೀರರು ಆಗುವ ರೀತಿಯೆ ಇದು. ಉಳಿದವರು ಕೇವಲ ಮಾತನಾಡುವ ಯಂತ್ರಗಳು. ನಾವು ನಿಜವಾಗಿ ಮುಕ್ತರಾಗಬೇಕಾದರೆ ಮತ್ತು ಇತರರನ್ನು ಬಂಧಮುಕ್ತರನ್ನಾಗಿ ಮಾಡಬೇಕಾದರೆ ನಾವು ಇನ್ನೂ ಆಳಕ್ಕೆ ಹೋಗಬೇಕು.

**ಹೆಣ್ಣು**

ಅದೇಕೆ ಈ ದೇಶದಲ್ಲಿ ಸ್ತ್ರೀ ಪುರುಷರಲ್ಲಿ ಇಷ್ಟೊಂದು ಭೇದವಿದೆಯೋ ದೇವರೇ ಬಲ್ಲ.. ಸ್ಮೃತಿ ಮುಂತಾದುವುಗಳನ್ನು ಬರೆಯುವುದು. ಕಠಿಣವಾದ ನಿಯಮಗಳಿಂದ ಅವರನ್ನು ಬಂಧನಕ್ಕೀಡುಮಾಡುವುದು. ಗಂಡಸರು ಹೆಂಗಸರನ್ನು ಕೇವಲ ಮಕ್ಕಳನ್ನು ಹೆರುವ ಯಂತ್ರವನ್ನಾಗಿ ಮಾರ್ಪಡಿಸಿದ್ದಾರೆ.

ದೇಶ ಅವನತಿಯಲ್ಲಿದ್ದಾಗ ಈ ಪುರೋಹಿತ ವರ್ಗದವರು ಇತರ ಜಾತಿಯವರು ವೇದಗಳನ್ನೋದಲು ಅನರ್ಹರೆಂದು ತೀರ್ಮಾನಿಸಿದಾಗಲೇ ಹೆಂಗಸರ ಹಕ್ಕು ಬಾಧ್ಯತೆಯನ್ನು ಕಿತ್ತುಕೊಂಡರು. ಇಲ್ಲದಿದ್ದಲ್ಲಿ ವೇದ ಉಪನಿಷತ್ತುಗಳ ಕಾಲದಲ್ಲಿ ಮೈತ್ರೇಯೀ, ಗಾರ್ಗಿ ಮತ್ತು ಇತರ ಸ್ಮೃತಿ ಪುಣ್ಯರಾದ ವ್ಯಕ್ತಿಗಳು ಬ್ರಹ್ಮಜ್ಞಾನದ ವಿಚಾರ ಚರ್ಚಿಸುತ್ತಿದ್ದುದರಿಂದ ಋಷಿಗಳ ಸ್ಥಾನವನ್ನು ಕೂಡ ಆಕ್ರಮಿಸಿದ್ದಾರೆ. ಯಾವಾಗ ಅಂತಹ ಆದರ್ಶ ಮಹಿಳೆಯರು ಆಧ್ಯಾತ್ಮಿಕ ಜ್ಞಾನಕ್ಕೆ ಯೋಗ್ಯರಾಗಿರುವರೋ ಆಗ ಅದೇ ಹಕ್ಕುಬಾಧ್ಯತೆಗಳನ್ನು ಆಧುನಿಕ ಯುಗದ ಮಹಿಳೆಯರಿಗೆ ಏಕೆ ಕೊಡಬಾರದು? ಯಾವ ದೇಶ ಅಥವಾ ಜನಾಂಗ ಸ್ತ್ರೀಯರಿಗೆ ಗೌರವ ಕೊಟ್ಟಿಲ್ಲವೋ ಅದು ಖಂಡಿತವಾಗಿಯೂ ಕೀರ್ತಿ ಪಡೆದಿಲ್ಲ; ಮುಂದೆ ಪಡೆಯುವುದೂ ಇಲ್ಲ... ಎಲ್ಲಿ ಹೆಂಗಸರಿಗೆ ತಕ್ಕ ಗೌರವವಿಲ್ಲವೋ ಎಲ್ಲಿ ಅವರು ದುಃಖಿಗಳೋ ಆ ದೇಶ ಅಥವಾ ಜನಾಂಗ ಖಂಡಿತವಾಗಿಯೂ ಏಳಿಗೆಗೆ ಬರುವುದಿಲ್ಲ.

ಸಮಾಜದ ನಿಯಮಗಳು ಎಂತಹ ಸ್ಥಿತಿಗೆ ನಮ್ಮ ದೇಶದ ಹೆಂಗಸರನ್ನು ಇಳಿಸಿವೆ, ಎಷ್ಟರಮಟ್ಟಿಗೆ ಅವರನ್ನು ಜೀವಶವಗಳನ್ನಾಗಿ, ಜಡರನ್ನಾಕವಾಗಿ ಮಾಡಿವೆ ಎಂಬುದನ್ನು ನೀನು ಪಾಶ್ಚಾತ್ಯ ದೇಶಗಳಿಗೆ ಹೋದರೆ ಗೊತ್ತಾಗುವುದು. ಅವರ ಇಂತಹ ಶೋಚನೀಯ ಅವಸ್ಥೆಗೆ ನೀವೇ (ಸಂವಾದೇ ಬ್ರಾಹ್ಮಣ) ಕಾರಣ. ಅವರನ್ನು ಪುನಃ ಮೇಲೆತ್ತುವುದು ನಿಮ್ಮನ್ನೇ ಅವಲಂಬಿಸಿದೆ. ಆದ್ದರಿಂದಲೇ ನಾವು ಹೇಳುವುದು-ಕಾರ್ಯತತ್ಪರರಾಗಿ. ವೇದ ಮುಂತಾದುವುಗಳನ್ನು ಗಿಣಿಪಾಠಮಾಡುವುದರಿಂದ ಏನಾಗುವುದು? ಅನೇಕ ಶತಮಾನಗಳ ಕಿರುಕುಳದ ಪರಿಣಾಮವಾಗಿ ದುಃಖಾತ್ಮರ, ಪತಿತರ, ದೀನರ ಗೋಳು ಭರತಖಂಡವನ್ನೆಲ್ಲಾ ಆವರಿಸಿದ್ದರೂ, ಆ ಸುಖಜೀವಿಗಳ ಸ್ವರ್ಣಸ್ವಪ್ನ ಭಂಗವಾಗಿಲ್ಲ. ಅನೇಕ ಶತಮಾನಗಳಿಂದಲೂ ಕೊಟ್ಟ ದೈಹಿಕ, ಮಾನಸಿಕ, ನೈತಿಕ ಕಿರುಕುಳಗಳಿಂದ ದೇವರ ಪ್ರತಿಬಿಂಬದಂತೆ ಇದ್ದ ಮಾನವರನ್ನು ಹೊರೆ ಹೊರುವ ಮೃಗಕ್ಕೆ ಸಮಾನ ಮಾಡಿರುವರು. ಜಗನ್ಮಯಿ ಸಾದೃಶ್ಯರಾದ ಸ್ತ್ರೀಯರನ್ನು ಮಕ್ಕಳನ್ನು ಹೆರುವ ದಾಸಿಯರನ್ನಾಗಿ ಮಾಡಿರುವರು.

ಪುರಾತನ ಕಲೆಗಳನ್ನು ಬಳಕೆಗೆ ತರಬೇಕು. ನಿಮ್ಮ ಹುಡುಗಿಯರಿಗೆ ಹಣ್ಣಿನಿಂದ ರಸಾಯನ, ಮೊರಬ್ಬ (ಹಣ್ಣುಗಳನ್ನು ಪಾಕದಲ್ಲಿ ಹಾಕಿ ಮಾಡಿದ ಒಂದು ಬಗೆಯ ಖಾದ್ಯ) ಮುಂತಾದುವನ್ನು ಮಾಡುವುದನ್ನು ಕಲಿಸಿ. ರುಚಿರುಚಿಯಾಗಿ ಅಡಿಗೆ ಮಾಡುವುದು, ಹೊಲಿಯುವುದು, ಚಿತ್ರ ಬರೆಯುವುದು, ಫೋಟೋ ತೆಗೆಯುವುದು, ಕಸೂತಿ, ನಕಾಸೆ, ಮುಂತಾದುವನ್ನು ಕಲಿಸಿ. ಸಮಯ ಇದ್ದರೆ ತಮ್ಮ ಜೀವನೋಪಾಯಕ್ಕೆ ಸಂಪಾದಿಸಿಕೊಳ್ಳುವಂತಹ ಯಾವುದಾದರೂ ಕೆಲಸವನ್ನು ಅರಿತುಕೊಳ್ಳಲಿ.

'ನ ಗೃಹಂ ಗೃಹಮುಚ್ಚತೆ ಗೃಹಿಣೀ ಗೃಹಮುಚ್ಚತೆ' ಗೃಹವನ್ನು ಮಾಡುವುದು ಕಟ್ಟಡವಲ್ಲ, ಅದನ್ನು ಮಾಡುವವಳು ಗೃಹಿಣಿ ಎಂದು ಸ್ಮೃತಿಕಾರರೊಬ್ಬರು ಹೇಳುವರು. ಇದು ಎಷ್ಟು ನಿಜ! ಬಿಸಿಲು ಮಳೆ ಚಳಿಯಿಂದ ನಮ್ಮನ್ನು ಸಂರಕ್ಷಿಸಲ್ಪಡುವ ಮೇಲ್ಛಾವಣಿಯನ್ನು, ಅದನ್ನು ಹೊತ್ತಿರುವ ಕಂಬಗಳಿಂದ (ಅವು ಅತ್ಯುತ್ತಮ ಕಾರಿಂತಿಯನ್ ಕಂಬಗಳಾಗಲಿ) ಅಳೆಯಲಾಗುವುದಿಲ್ಲ. ಆದರೆ ಅದಕ್ಕೆ ನಿಜವಾಗಿಯೂ ಕೇಂದ್ರವಾದ ಆಧ್ಯಾತ್ಮಿಕ ಸ್ತಂಭದಂತಿರುವ ಮನೆಯ ರಕ್ಷಕಳಾದ ಸ್ತ್ರೀ ಸ್ಥಾನದಿಂದ ಇದನ್ನು ಅಳೆಯಬೇಕು. ಈ ದೃಷ್ಟಿಯಿಂದ ಇದನ್ನು ಅಳೆದರೆ, ಅಮೆರಿಕಾ ಗೃಹವನ್ನು ಪ್ರಪಂಚದ ಮತ್ತಾವ ಗೃಹದೊಂದಿಗೆ ತುಲನೆಮಾಡಿ ನೋಡಿದರೂ ಅದಕ್ಕಿಂತ ಕೀಳಲ್ಲ.

ಅಮೆರಿಕಾ ಗೃಹಿಣಿಯರ ವಿಚಾರವಾಗಿ ನಾನು ಎಷ್ಟೋ ಕತೆಗಳನ್ನು ಕೇಳಿರುವೆನು. ಅವರು ಸ್ವತಂತ್ರರು. ಸ್ವೇಚ್ಛೆಯಾಗಿರುವರು. ತಮ್ಮ ಸ್ವಾತಂತ್ರ್ಯದ ಹುಚ್ಚು ಕುಣಿತದಲ್ಲಿ ಗಾಂಭೀರ್ಯವನ್ನು ತ್ಯಜಿಸಿ ಮನೆಯ ಶಾಂತಿ ಸೌಹಾರ್ದವನ್ನು ಅವರು ಹಾಳು ಮಾಡಿರುವರು, ಇತ್ಯಾದಿ. ಒಂದು ವರ್ಷ ಅಮೆರಿಕಾದ ಮತ್ತು ಅಲ್ಲಿಯ ನಾರಿಯರ ಅನುಭವವಾದ ಮೇಲೆ ಇಂತಹ ಸಮಾಚಾರಗಳು ಸುಳ್ಳು ಎನ್ನುವುದು ನನಗೆ ಗೊತ್ತಿದೆ! ಅಮೆರಿಕಾ ನಾರಿಯರೇ! ನನ್ನ ಕೃತಜ್ಞತೆಯನ್ನು ತೋರಿಸುವುದಕ್ಕೆ ನೂರು ಜನ್ಮಗಳು ಸಾಲವು. ನಿಮಗೆ ನನ್ನ ಕೃತಜ್ಞತೆಯನ್ನು ವಿವರಿಸುವುದಕ್ಕೆ ಸಾಕಾದಷ್ಟು ಶಬ್ದ ಭಂಡಾರ ನನ್ನಲ್ಲಿ ಇಲ್ಲ... ಹಿಂದೂಸಾಗರವೇ ಮಸಿಯಾದರೆ, ಹಿಮಾಲಯದ ಅತ್ಯುನ್ನತ ಶಿಖರವೇ ಲೇಖನಿಯಾದರೆ, ಭೂಗೋಳವೇ ಕಾಗದವಾದರೆ, ಕಾಲವೇ ಬರಹಗಾರನಾದರೂ ನನ್ನ ಕೃತಜ್ಞತೆಯನ್ನು ವಿವರಿಸಲಾರೆ.

ಇಲ್ಲಿಯ ಜನರು ಚತುರರು, ಸಾಹಸಪರರು, ಅಬ್ಬ! ಎಷ್ಟು ಶಕ್ತಿ! ಎಷ್ಟು ಕಾರ್ಯೋನ್ಮುಖರು! ಎಂತಹ ಪುರುಷತ್ವ. ಇವರದು... ಹೆಂಗಸರನ್ನು ಬಹಳ ಗೌರವದಿಂದ ಕಾಣುವರು. ಅವರ ಜೀವನದಲ್ಲಿ ಬಹಳ ಮುಖ್ಯ ಕರ್ತವ್ಯವನ್ನು ಅವರು ವಹಿಸುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಇಂತಹ ಒಂದು ಪೂಜ್ಯಭಾವ ತನ್ನ ಚರಮಾವಸ್ಥೆಯನ್ನು ಮುಟ್ಟಿದೆ ಇಲ್ಲಿ. ...ಈ ದೇಶದ ಹೆಂಗಸರನ್ನು ನೋಡಿ ನಾನು ಸ್ತಂಭೀಭೂತನಾಗಿದ್ದೇನೆ. ನನ್ನನ್ನು ಕೇವಲ ಹುಡುಗನೆಂದು ತಿಳಿದು ಅಂಗಡಿ ಮುಂತಾದುವುಗಳಿಗೆ ಕರೆದುಕೊಂಡು ಹೋಗುತ್ತಾರೆ. ಅವರು ಎಲ್ಲಾ ತರಹ ಕೆಲಸಗಳನ್ನು ಮಾಡುತ್ತಾರೆ. ಅವರು ಮಾಡುವ ಕೆಲಸದ ಹದಿನಾರನೆ ಒಂದು ಪಾಲನ್ನು ಕೂಡ ನಾನು ಮಾಡಲಾರೆ.

ಜಗತ್ತಿನ ಯಾವ ಎಡೆಯಲ್ಲೂ ಸ್ತ್ರೀಯರು ಇಲ್ಲಿನಂತೆ ಇಲ್ಲ. ಎಷ್ಟು ಸರಳಹೃದಯರು! ಎಷ್ಟು ಸ್ವತಂತ್ರರು! ಎಷ್ಟು ಆತ್ಮಾವಲಂಬಿಗಳು! ಎಷ್ಟು ದಯಾಳುಗಳು! ಈ ದೇಶದ ಜೀವಾಳ ಸ್ತ್ರೀಯರೇ! ವಿದ್ಯೆ, ಬುದ್ಧಿ ಎಲ್ಲವೂ ಇವರದೆ.

ಸದ್ಗೃಹಸ್ಥರ ಮನೆಯಲ್ಲಿ ದೇವಿಯರು ನೆಲೆಸಿರುತ್ತಾರೆ ಎಂಬುದು ನಿಜವಾಗಿ ಸತ್ಯ. ಹಿಮದಷ್ಟು ಶುಭ್ರವಾಗಿ, ಕಳಂಕ ಹೀನರಾದ ಸಾವಿರಾರು ಜನ ನಾರಿಯರನ್ನು ನಾನು ಇಲ್ಲಿ (ಅಮೆರಿಕಾದಲ್ಲಿ) ನೋಡಿರುವೆನು. ಅಬ್ಬ! ಅವರು ಎಷ್ಟು ಸ್ವತಂತ್ರರಾಗಿರುವರು. ಸಮಾಜದ ಮತ್ತು ಪೌರನೀತಿಯ ಜೀವನವನ್ನು ನೋಡಿಕೊಳ್ಳುವವರು ಸ್ತ್ರೀಯರೇ. ಆದರೆ ನಮ್ಮ ದೇಶದಲ್ಲಿ ಅವರು ಸುರಕ್ಷಿತವಾಗಿ ದಾರಿಯಲ್ಲಿ ಕೂಡ ನಡೆಯಲು ಅವಕಾಶವಿಲ್ಲ. ನಿಮ್ಮ ಹೆಂಗಸರ ಸ್ಥಿತಿಯನ್ನು ಉತ್ತಮಗೊಳಿಸಬಲ್ಲಿರಾ ? ಅನಂತರ ನಿಮ್ಮ ಅಭಿವೃದ್ಧಿಗೆ ದಾರಿಯಿದೆ. ಹಾಗಿಲ್ಲದೆ ಇದ್ದರೆ ಈಗ ಇರುವಂತೆ ಎಂದೆಂದಿಗೂ ಹೀನಸ್ಥಿತಿಯಲ್ಲಿ ನರಳಬೇಕಾಗುವುದು. ಪಾಶ್ಚಾತ್ಯ ಸ್ವಭಾವದಲ್ಲಿರುವ ಒಂದು ಒಳ್ಳೆಯ ಗುಣವೇ ಸ್ತ್ರೀಯರನ್ನು ಗೌರವದಿಂದ ನೋಡುವುದು ಮತ್ತು ಅವರನ್ನು ವಿನಯದಿಂದ ಕಾಣುವುದು. □

**ಯಾವ ದೇಶ ಅಥವಾ ಜನಾಂಗ ಸ್ತ್ರೀಯರಿಗೆ ಗೌರವ ಕೊಟ್ಟಿಲ್ಲವೋ ಅದು ಖಂಡಿತವಾಗಿಯೂ ಕೀರ್ತಿ ಪಡೆದಿಲ್ಲ; ಮುಂದೆ ಪಡೆಯುವುದೂ ಇಲ್ಲ... ಎಲ್ಲಿ ಹೆಂಗಸರಿಗೆ ತಕ್ಕ ಗೌರವವಿಲ್ಲವೋ ಎಲ್ಲಿ ಅವರು ದುಃಖಿಗಳೋ ಆ ದೇಶ ಅಥವಾ ಜನಾಂಗ ಖಂಡಿತವಾಗಿಯೂ ಏಳಿಗೆಗೆ ಬರುವುದಿಲ್ಲ. ಸಮಾಜದ ನಿಯಮಗಳು ಎಂತಹ ಸ್ಥಿತಿಗೆ ನಮ್ಮ ದೇಶದ ಹೆಂಗಸರನ್ನು ಇಳಿಸಿವೆ, ಎಷ್ಟರಮಟ್ಟಿಗೆ ಅವರನ್ನು ಜೀವಶವಗಳನ್ನಾಗಿ, ಜಡರನ್ನಾಕವಾಗಿ ಮಾಡಿವೆ ಎಂಬುದನ್ನು ನೀನು ಪಾಶ್ಚಾತ್ಯ ದೇಶಗಳಿಗೆ ಹೋದರೆ ಗೊತ್ತಾಗುವುದು.**













# ಸಂವಾದ

## ವಾರ್ಷಿಕ ವಿಶೇಷಾಂಕ

## ಜನವರಿಯಲ್ಲಿ ನಿಮ್ಮ ಕೈಗೆ

ಸಹೃದಯರೆ,

ನಿಮ್ಮೆಲ್ಲರ ಪ್ರೀತಿ-ಅಭಿಮಾನ ಮತ್ತು ಸಹಕಾರದಿಂದಾಗಿ ತನ್ನೆಲ್ಲಾ ಇತಿ-ಮಿತಿಗಳನ್ನು ಮೀರಿಯೂ ತಪ್ಪದೇ ತಮ್ಮ ಜತೆ ಸಂವಾದಿಸುತ್ತಿರುವ 'ಸಂವಾದ' ಮಾಸ ಪತ್ರಿಕೆಗೆ ಇದು ಮೂರನೇ ವರ್ಷದ ಹುಟ್ಟುಹಬ್ಬ, ಈ ಸಂಭ್ರಮದ ನೆನಪಿನಲ್ಲಿ 'ಸಂವಾದ' ವಿಶೇಷಾಂಕವಾಗಿ ಹೊರಬರುತ್ತಿದೆ.

ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳು, ಮರೆಯಾಗುತ್ತಿರುವ ಜೀವನಕ್ರಮಗಳು, ತಲ್ಲಣಗೊಳ್ಳುತ್ತಿರುವ ಸಿದ್ಧಾಂತಗಳು, ಖಾಸಗೀಕರಣಗೊಂಡು ವ್ಯಕ್ತಿಸ್ವಾಮ್ಯಕ್ಕೆ ಒಳಪಡುತ್ತಿರುವ ಉದ್ಯಮಗಳು, ಅನುಕೂಲ ಸಿಂಧುಗಳಾಗುತ್ತಿರುವ ದಲಿತರು ಮತ್ತು ಶೂದ್ರರ ಮನಸ್ಸಿನಲ್ಲಿ ನಡೆಯುತ್ತಿರುವ ಚೌಕಾಸಿಗಳು, ಬಿಕ್ಕಟ್ಟಿಗೆ ಒಳಗಾಗುತ್ತಿರುವ ಬಹುಸಂಸ್ಕೃತಿಯ ಜತೆಗೆ ಈ ನಾಡಿನ ರೈತರು, ಕೃಷಿ ಕಾರ್ಮಿಕರು, ವಿದ್ಯಾರ್ಥಿ ಯುವಜನರು, ಮಹಿಳೆಯರು, ಸಂಘ-ಸಂಸ್ಥೆಗಳು ಹಾಗೂ ಉದ್ಯೋಗಸ್ಥರು ಎದುರಿಸುತ್ತಿರುವ ಹೊಸ ಪರಿಕಲ್ಪನೆಗಳ ಸವಾಲುಗಳನ್ನು ಕುರಿತ ಲೇಖನಗಳು 'ವಿಶೇಷಾಂಕ'ದಲ್ಲಿ ಇವೆ.

ಖ್ಯಾತ ಲೇಖಕರ ಕಥೆ, ಕವನ, ಸಂದರ್ಶನ, ವಿಶ್ಲೇಷಣೆಗಳನ್ನು ಒಳಗೊಂಡ 'ಸಂವಾದ ವಿಶೇಷಾಂಕ'ವನ್ನು ನಿಮ್ಮದಾಗಿಸಿಕೊಳ್ಳಿ.

## ನಿಮ್ಮ ಪ್ರತಿಗಳಿಗಾಗಿ
## ಇಂದೇ ಬರೆಯಿರಿ

ಸಂಪಾದಕರು, ಸಂವಾದ ಮಾಸಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧









* * * * *